ಸದನವು ಮಧ್ಯಾಹ್ನ 12–30 ಗಂಟೆಗೆ ಸಮಾವೇಶಗೊಂಡಿತು.
(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಮಾನ್ಯ ಮುಖ್ಯ ಮಂತ್ರಿಯವರಿಂದ 2013–14ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುವುದು.

(ಈ ಹಂತದಲ್ಲಿ ಬಿಜೆಪಿ ಸದಸ್ಯರಾದ ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡರವರು ಸದನದ ಬಾವಿಗೆ ಬಂದು ಕಾವೇರಿ ನೀರಿನ ಬಗ್ಗೆ ಮಾತನಾಡುತ್ತಾ ತಾವು ತಂದಿದ್ದ water bottle ನಲ್ಲಿನ ನೀರನ್ನು ತಮ್ಮ ತಲೆಯ ಮೇಲೆ ಸುರಿದುಕೊಂಡರು)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, 2013–14ನೇ ಸಾಲಿನ ಆಯವ್ಯಯವನ್ನು ಮಂಡಿಸಲು ಹರ್ಷಿಸುತ್ತೇನೆ. ಮೊದಲಿಗೆ ಭಾಗ–1. ಈಗ ನಾನು ಆಯವ್ಯಯ ಭಾಷಣದ ಮೊದಲನೆ ಭಾಗವಾದಂಥ **"ಕೃಷಿ ಆಯವ್ಯಯ'**ವನ್ನು ಮಂಡಿಸುತ್ತಿದ್ದೇನೆ.

(ಈ ಹಂತದಲ್ಲಿ ಬಿಜೆಪಿ ಸದಸ್ಯರಾದ ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡರವರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ);–
ಮಾನ್ಯ ಸಭಾಧ್ಯಕ್ಷರೆ,

1. 2013–14ನೇ ಸಾಲಿನ ಆಯವ್ಯಯನ್ನು ಮಂಡಿಸಲು ಹರ್ಷಿಸುತ್ತೇನೆ.

ಭಾಗ–1

ಕೃಷಿ

1. ಈಗ ನಾನು ಆಯವ್ಯಯ ಭಾಷಣದ ಮೊದಲನೇ ಭಾಗವಾದ ಕೃಷಿ ಆಯವ್ಯಯವನ್ನು ಮಂಡಿಸುತ್ತಿದ್ದೇನೆ. ಇದು ನಮ್ಮ ಸರ್ಕಾರ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಪರಿಚಯಿಸಿ, ಸತತವಾಗಿ 3ನೇ ಬಾರಿಗೆ ಮಂಡಿಸಲಾಗುತ್ತಿರುವ ಕೃಷಿ ಆಯವ್ಯಯ. ಅತ್ಯಂತ ಸಂತೋಷದ ಸಂಗತಿಯೆಂದರೆ, ಕಳೆದ ಎರಡು ವರ್ಷಗಳಲ್ಲಿ ಮಂಡಿಸಿದ ಕೃಷಿ ಆಯವ್ಯಯಕ್ಕೆ ದೇಶದಾದ್ಯಂತ ಮೆಚ್ಚುಗೆ ವ್ಯಕ್ತವಾಗಿದ್ದು, ಹಲವಾರು

ರಾಜ್ಯಗಳು ಈ ಬಗ್ಗೆ ವಿಶೇಷ ಆಸಕ್ತಿ ವ್ಯಕ್ತಪಡಿಸಿವೆ. ಆ ರಾಜ್ಯಗಳ ಕೃಷಿ ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟು ಈ ಬಗ್ಗೆ ವಿಶೇಷ ಚರ್ಚೆಗಳನ್ನು ಮಾಡಿದ್ದು, ಅವರ ರಾಜ್ಯಗಳಲ್ಲಿ ಕೂಡ ಕೃಷಿ ಆಯವ್ಯಯವನ್ನು ಮಂಡಿಸಲು ಪ್ರಯತ್ನಿಸುತ್ತಿದ್ದಾರೆ. ಈ ದಿಕ್ಕಿನಲ್ಲಿ ಕರ್ನಾಟಕ ರಾಜ್ಯವು ಒಂದು ನೂತನ ಪ್ರವೃತ್ತಿಯನ್ನು ಪ್ರಾರಂಭಿಸಿರುವುದು ನಮ್ಮ ಸರ್ಕಾರದ ಹಿರಿಮೆ ಆಗಿದೆ. ಹಲವಾರು ಪರಿಣಿತ ಸಂಸ್ಥೆಗಳು ನಮ್ಮ ರಾಜ್ಯದ ಅಭಿವೃದ್ಧಿ ಹಾದಿಯಲ್ಲಿ ಕೈಜೋಡಿಸಲು ಮುಂದಾಗಿದ್ದು, ವಿಶೇಷ ಯೋಜನೆಗಳನ್ನು ರೂಪಿಸಲು ಆಸಕ್ತಿ ತೋರಿಸಿವೆ.

2. 2011–12ನೇ ಸಾಲಿನಲ್ಲಿ ಮಂಡಿಸಲಾದ ಮೊಟ್ಟ ಮೊದಲ ಕೃಷಿ ಮುಂಗಡ ಪತ್ರ 17,857 ಕೋಟಿ ರೂ. ಗಾತ್ರದ್ದಾಗಿತ್ತು. 2012–13ನೇ ಸಾಲಿನಲ್ಲಿ ಈ ಗಾತ್ರವನ್ನು 19,660 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿತ್ತು. 2013–14ನೇ ಕೃಷಿ ಮುಂಗಡ ಪತ್ರದ ಗಾತ್ರ 22,310 ಕೋಟಿ ರೂ.ಗಳಾಗಿವೆ. ಕೃಷಿ ಮತ್ತು ಕೃಷಿಕ ನಮ್ಮ ಸರ್ಕಾರದ ಅತ್ಯಾದ್ಯತೆಯ ಕ್ಷೇತ್ರಗಳಾಗಿದ್ದು ಪ್ರತ್ಯೇಕ ಕೃಷಿ ಆಯವ್ಯಯದಿಂದ ಕೃಷಿ ಕ್ಷೇತ್ರದ ಸಮಗ್ರಾಭಿವೃದ್ಧಿಗೆ ಅನುಕೂಲ–ವಾಗಿರುವುದು ಸರ್ವವೇದ್ಯ. ಆ ವಿವರಗಳನ್ನು ಮುಂದಿನ ಕಂಡಿಕೆಗಳಲ್ಲಿ ನಮೂದಿಸಲಿದ್ದೇನೆ.

3. ಕೃಷಿ ಕ್ಷೇತ್ರವನ್ನು ಸಮಗ್ರವಾಗಿ ಬಲಪಡಿಸಲು ರೈತನ ಭೂಮಿಗೆ ಅಗತ್ಯವಾದ ನೀರು ಮತ್ತು ಗೊಬ್ಬರಗಳನ್ನೊದಗಿಸಿ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಿಸಿಕೊಡಲು ಪೂರಕವಾದ ಮಾರುಕಟ್ಟೆ ಸೌಲಭ್ಯಗಳನ್ನು ಪೂರೈಸಲು ನಮ್ಮ ಸರ್ಕಾರ ಬದ್ಧವಾಗಿದೆ.

ಕಳೆದ ಸಾಲಿನ ಹಿನ್ನೋಟ

4. **ಅಸಾಧಾರಣ ಬರಗಾಲ:** ನಮ್ಮ ರಾಜ್ಯವು ಕಳೆದೆರಡು ವರ್ಷಗಳಿಂದ ಅಸಾಧಾರಣ ಪ್ರಕೃತಿ ವಿಕೋಪಗಳನ್ನು ಎದುರಿಸುತ್ತಿದೆ. ಒಂದು ಕಡೆ ನೆರೆ ಹಾವಳಿಯಾದರೆ, ಮತ್ತೊಂದು ಕಡೆ ತೀವ್ರ ಬರಗಾಲದ ಅನುಭವ. 2012ರ ಜನವರಿ 1 ರಿಂದ ಡಿಸೆಂಬರ್ 31ರ ಅವಧಿಯಲ್ಲಿ ರಾಜ್ಯದ ವಾಡಿಕೆ ಮಳೆ ಪ್ರಮಾಣದಲ್ಲಿ ಶೇ. 25 ರಷ್ಟು ಕೊರತೆ ಕಂಡುಬಂದಿದೆ. ಈ ಮಳೆಯ

ಪ್ರಮಾಣದ ಕೊರತೆಯಿಂದ ಬೆಳೆಗಳಿಗೆ ತೇವಾಂಶ ಕಡಿಮೆಯಾಗಿ 38.9 ಲಕ್ಷ ಎಕರೆ ವಿಸ್ತೀರ್ಣದಲ್ಲಿ ಬೆಳೆಹಾನಿ ಮೊತ್ತ 5,273 ಕೋಟಿ ರೂ.ಗಳೆಂದು ಅಂದಾಜಿಸಲಾಯಿತು. ಇದನ್ನು ಪರಾಮರ್ಶಿಸಿ, 2012-13ನೇ ಸಾಲಿನಲ್ಲಿ ಹೊಸದಾಗಿ 34 ತಾಲ್ಲೂಕುಗಳನ್ನು ಸೇರಿಸಿ ಒಟ್ಟು 157 ತಾಲ್ಲೂಕುಗಳನ್ನು ಬರಗಾಲ ಪೀಡಿತ ಎಂದು ಘೋಷಿಸಲಾಯಿತು.

5. ಬರಗಾಲ ಪರಿಹಾರಕ್ಕೆ ತಾಲ್ಲೂಕು ಮಟ್ಟದಲ್ಲಿ ಸ್ಥಾಪನೆಯಾದ ನಿಯಂತ್ರಣ ಕೊಠಡಿಗಳನ್ನು ಚುರುಕುಗೊಳಿಸಿ, ದೂರು ಸ್ವೀಕೃತಿಯಾದ 24 ಗಂಟೆಯೊಳಗೆ ಸ್ಪಂದಿಸಿ, ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲಾಯಿತು. ಜೊತೆಗೆ, ವಿದ್ಯುತ್ ವ್ಯತ್ಯಯವುಂಟಾದಾಗ ಡೀಸಲ್ ಜನರೇಟರ್‌ಗಳನ್ನು ಪೂರೈಸಲಾಯಿತು. ರಾಜ್ಯದ ಒಟ್ಟಾರೆ 3,524 ಸಣ್ಣ ನೀರಾವರಿ ಕೆರೆಗಳ ಪೈಕಿ ಮಳೆ ಕೊರತೆಯಿಂದ 28 ಕೆರೆಗಳು ಮಾತ್ರ ಪೂರ್ತಿ ತುಂಬಿದ್ದು, 844 ಕೆರೆಗಳಲ್ಲಿ ನೀರಿನ ಶೇಖರಣೆ ಕೇವಲ ಶೇ. 30 ರಷ್ಟಾಗಿದ್ದು, 2,249 ಕೆರೆಗಳಲ್ಲಿ ನೀರು ತುಂಬಿರುವುದಿಲ್ಲ.

ಅಲ್ಲದೆ ಈ ಕೆಳಕಂಡ ಉಪಕ್ರಮಗಳನ್ನು ಸಹ ತೆಗೆದುಕೊಳ್ಳಲಾಯಿತು

- 207 ಗ್ರಾಮಗಳಿಗೆ ಮತ್ತು 201 ಪಟ್ಟಣ/ನಗರ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಯಿತು.
- ಅವಶ್ಯವಿದ್ದೆಡೆ 244 ಗೋಶಾಲೆಗಳನ್ನು ಸ್ಥಾಪಿಸಿ 1.8 ಲಕ್ಷ ಜಾನುವಾರುಗಳನ್ನು ರಕ್ಷಿಸಲಾಗಿದೆ.
- ಎಸ್. ಡಿ. ಆರ್.ಎಫ್. ನಿಧಿಯಿಂದ 2011-12ನೇ ಸಾಲಿಗೆ 182 ಕೋಟಿ ರೂ. ಹಾಗೂ 2012-13ನೇ ಸಾಲಿನಲ್ಲಿ ಕುಡಿಯುವ ನೀರು, ವಿದ್ಯುದ್ದೀಕರಣ ಹಾಗೂ ಜಾನುವಾರು ಸಂರಕ್ಷಣೆಗೆ 359.40 ಕೋಟಿ ರೂ. ಮತ್ತು ಕೃಷಿ ಬೆಳೆ ಹಾನಿಗೆ ಬೀಜ, ಗೊಬ್ಬರ ಹಾಗೂ ಇತರೆ ಸಹಾಯಧನ ವಿತರಿಸಲು 232 ಕೋಟಿ ರೂ. ಸೇರಿದಂತೆ, ಒಟ್ಟು 591.40 ಕೋಟಿ ರೂ. ಬಿಡುಗಡೆ ಮಾಡಲಾಯಿತು. ಹಾಗಾಗಿ, ಅನುದಾನದ ಕೊರತೆ ಯಾವ ಜಿಲ್ಲೆಯಲ್ಲೂ ಉದ್ಭವಿಸಿಲ್ಲ.

- ಬರಗಾಲ ಪೀಡಿತ 157 ತಾಲ್ಲೂಕುಗಳಲ್ಲಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಒಟ್ಟು 2.55 ಲಕ್ಷ ಕಾಮಗಾರಿಗಳನ್ನು ಕೈಗೊಳ್ಳಲಾಯಿತು. ಈ ಮೂಲಕ 50.62 ಲಕ್ಷ ಜನರಿಗೆ ಉದ್ಯೋಗ ಪತ್ರ ನೀಡಿ, 2.13 ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಯಿತು. ಇದಕ್ಕಾಗಿ ಒಟ್ಟು 1,078 ಕೋಟಿ ರೂ. ಖರ್ಚು ಮಾಡಲಾಗಿದೆ.
- ರಾಜ್ಯದಲ್ಲಿನ ಬರ ಪರಿಸ್ಥಿತಿಯಿಂದಾಗಿ 2011–12ರ ಮುಂಗಾರು ಋತುವಿಗೆ 2,606 ಕೋಟಿ ರೂ.ಗಳ ಆರ್ಥಿಕ ಸಹಾಯ ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ನಮ್ಮ ರಾಜ್ಯಕ್ಕೆ ದೊರೆತಿದ್ದು 70 ಕೋಟಿ ರೂ. 2011–12ರ ಹಿಂಗಾರು ಋತುವಿಗೆ 3,609 ಕೋಟಿ ರೂ. ಆರ್ಥಿಕ ಸಹಾಯ ಕೋರಿದಾಗ ಕೇಂದ್ರ ಸರ್ಕಾರ 282 ಕೋಟಿ ರೂ. ಬಿಡುಗಡೆ ಮಾಡಿದೆ.

6. ರಾಜ್ಯದ ಬರ ಪರಿಸ್ಥಿತಿಯನ್ನು ಅವಲೋಕಿಸಲು ಕೇಂದ್ರ ಕೃಷಿ ಮಂತ್ರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳು 2ನೇ ಆಗಸ್ಟ್ 2012ರಂದು ರಾಜ್ಯಕ್ಕೆ ಭೇಟಿ ನೀಡಿದಾಗ, 2012–13ನೇ ಸಾಲಿನ ಮುಂಗಾರು ಋತುವಿನಲ್ಲಿ ಬರ–ಪರಿಸ್ಥಿತಿಯಿಂದಾದ ಹಾನಿಗೆ ಕೇಂದ್ರ ಸರ್ಕಾರಕ್ಕೆ 11,489 ಕೋಟಿ ರೂ. ಗಳಿಗೆ ಮನವಿ ಸಲ್ಲಿಸಲಾಯಿತು. ಆ ನಂತರ, ಕೇಂದ್ರ ಸರ್ಕಾರದ ಅಧ್ಯಯನ ತಂಡವು 21–25 ರ ಆಗಸ್ಟ್ 2012ರ ಅವಧಿಯಲ್ಲಿ ರಾಜ್ಯದ ಕೆಲವು ಬರ–ಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಿ, ವರದಿ ತಯಾರಿಸಿದ್ದು, ಅದರ ಆಧಾರದ ಮೇರೆಗೆ ಕೇಂದ್ರದ ನೆರವನ್ನು ನಿರೀಕ್ಷಿಸಲಾಗಿದೆ.

7. ರಾಜ್ಯದ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ, 2012–13ನೇ ಸಾಲಿಗೆ ರೈತರು 1ನೇ ಆಗಸ್ಟ್ 2011 ರಿಂದ 25ನೇ ಜುಲೈ 2012 ರವರೆಗೆ ಸಹಕಾರಿ ಸಂಸ್ಥೆಗಳಿಂದ ಪಡೆದ ಬೆಳೆ ಸಾಲ ಗರಿಷ್ಠ ರೂ. 25 ಸಾವಿರ ಬಡ್ಡಿ ಸಹಿತ ಸಾಲವನ್ನು ಮನ್ನಾ ಮಾಡಲು ನಮ್ಮ ರಾಜ್ಯ ಸರ್ಕಾರ ತೀರ್ಮಾನಿಸಿತು. ಇದರಿಂದ ಸರ್ಕಾರದ ಮೇಲೆ 3.630 ಕೋಟಿ ರೂ. ಹೊರೆ ಬಿದ್ದಿದೆ.

8. ಇಂತಹ ಬರಗಾಲದ ಪರಿಸ್ಥಿತಿಯಲ್ಲೂ ಕೂಡ ನಮ್ಮ ಸರ್ಕಾರ ಮಾಡಿದ ಅಪಾರ ಪರಿಶ್ರಮದಿಂದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜನಜೀವನ ಸುಗಮವಾಗಿ ನಡೆಸಲು ಸಾಧ್ಯವಾಯಿತು.

ಸಾಧನೆಗಳು

ಮಾನ್ಯ ಸಭಾಧ್ಯಕ್ಷರೆ,

9. ಈ ಶಾಸನ ಸಭೆಯ ಸದಸ್ಯರ ಜೊತೆ ರಾಜ್ಯದ ರೈತರ ಸಹಕಾರ ಮತ್ತು ಪ್ರೋತ್ಸಾಹದಿಂದ ನಮ್ಮ ಸರ್ಕಾರ ಕಳೆದ ನಾಲ್ಕುವರೆ ವರ್ಷಗಳಲ್ಲಿ ಕೃಷಿ ಮತ್ತು ಕೃಷಿಯೇತರ ವಲಯಗಳಲ್ಲಿ ಬಹಳಷ್ಟು ಪ್ರಗತಿಯನ್ನು ಸಾಧಿಸಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಕೃಷಿ

- **ಪ್ರತ್ಯೇಕ ಕೃಷಿ ಆಯವ್ಯಯ ಮಂಡನೆ:** ಕರ್ನಾಟಕ ರಾಜ್ಯ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ, 2011–12ನೇ ಸಾಲಿನ ಕೃಷಿ ಆಯವ್ಯಯದ ಅನುಷ್ಠಾನಕ್ಕೆ ಒಟ್ಟು 17,857 ಕೋಟಿ ರೂ. ಮತ್ತು 2012–13ನೇ ಸಾಲಿನಲ್ಲಿ 19,660 ಕೋಟಿ ರೂ. ಅನುದಾನವನ್ನು ಒದಗಿಸಿದೆ.
- **ಭೂಚೇತನ** : ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ ವಿನ್ಯಾಸಗೊಳಿಸಿ, ಇಕ್ರಿಸ್ಯಾಟ್ ಸಂಸ್ಥೆಯ ಸಹಭಾಗಿತ್ವದಲ್ಲಿ 2009–10ನೇ ಸಾಲಿನಿಂದ ಅನುಷ್ಠಾನಗೊಳಿಸಿದ ಭೂಚೇತನ ಯೋಜನೆಯು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಪಾರ ಮೆಚ್ಚುಗೆ ಗಳಿಸಿದೆ. ಈ ಯೋಜನೆಯ ಯಶಸ್ಸನ್ನು ಆಧರಿಸಿ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳು ಕರ್ನಾಟಕ ಮಾದರಿಯನ್ನು ಅನುಷ್ಠಾನಗೊಳಿಸುತ್ತಿವೆ. 2012–13ರ ಸಾಲಿನಲ್ಲಿ ಈ ಯೋಜನೆಯಡಿ ಒಟ್ಟು 164 ಲಕ್ಷ ಎಕರೆ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, 12,501 ರೈತರ ಅನುವುಗಾರರು ಹಾಗೂ 9,794 ಮುಂದಾಳು ರೈತರ ಸೇವೆಯ ಬಳಕೆಯಿಂದ 1.36 ಲಕ್ಷ ಟನ್ ಪರಿಕರಗಳ ಪೂರೈಕೆಯಾಗಿದೆ. ಈ ಎಲ್ಲಾ ಪ್ರಯತ್ನಗಳಿಂದ 16 ಬೆಳೆಗಳಲ್ಲಿ ಶೇ. 21ರಿಂದ 43ರಷ್ಟು ಹೆಚ್ಚಿನ ಇಳುವರಿ ಸಾಧಿಸಲಾಗಿದೆ.

- **ಬಿತ್ತನೆ ಬೀಜ ವಿತರಣೆ:** ರಾಜ್ಯದಲ್ಲಿ ರೈತರಿಗೆ ಉತ್ತಮ ಬಿತ್ತನೆ ಬೀಜ ವಿತರಿಸಲು ನಮ್ಮ ಸರ್ಕಾರ ಯಶಸ್ವಿ ಪ್ರಯತ್ನಗಳನ್ನು ಮಾಡಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಕಳೆದ 4 ವರ್ಷಗಳಲ್ಲಿ, 1.35 ಕೋಟಿ ರೈತರಿಗೆ 35 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜ ವಿತರಣೆ ಮಾಡಲು ಒಟ್ಟು 586 ಕೋಟಿ ರೂ. ವೆಚ್ಚ ಮಾಡಲಾಗಿದೆ. ಈ 2012-13ನೇ ಸಾಲಿನಲ್ಲಿ 23 ಲಕ್ಷ ರೈತರಿಗೆ 113 ಕೋಟಿ ರೂ. ವೆಚ್ಚದಲ್ಲಿ ಬೀಜ ವಿತರಣೆ ಮಾಡಲಾಗಿದೆ.
- **ಸಾವಯವ ಕೃಷಿ:** ನಮ್ಮ ದೇಶದಲ್ಲಿ ಪ್ರಥಮ ಬಾರಿಗೆ ಸಾವಯವ ಕೃಷಿಯನ್ನು ದೊಡ್ಡ ಪ್ರಮಾಣದಲ್ಲಿ ಉತ್ತೇಜಿಸಿ ಇದನ್ನು ಅನುಷ್ಠಾನಕ್ಕೆ ತಂದ ಕೀರ್ತಿ ನಮ್ಮ ಸರ್ಕಾರಕ್ಕೆ ಸೇರಿದೆ. ರಾಜ್ಯಾದ್ಯಂತ ತಾಲ್ಲೂಕಿಗೆ ಒಂದರಂತೆ ಸಾವಯವ ಕೃಷಿಕರ ಗುಂಪುಗಳನ್ನು ರಚಿಸಿದ್ದು, ಆ ಮೂಲಕ 1,10,000 ರೈತರು 4,46,400 ಎಕರೆ ಪ್ರದೇಶದಲ್ಲಿ ಸಾವಯವ ಕೃಷಿಯನ್ನು ಅಳಪಡಿಸಲು ಸಹಾಯಧನವಾಗಿ 100 ಕೋಟಿ ರೂ. ವೆಚ್ಚ ಮಾಡಲಾಗಿದೆ. 2012-13ನೇ ಸಾಲಿನಲ್ಲಿ 58,571 ರೈತರು ಪ್ರಯೋಜನ ಪಡೆದಿದ್ದು, ಈ ಯೋಜನೆಗೆ "ಅಮೃತ ಭೂಮಿ ಯೋಜನೆ" ಎಂದು ಮರುನಾಮಕರಣ ಮಾಡಿ, ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿದೆ.
- **ರಸಗೊಬ್ಬರ ಸರಬರಾಜು:** 2012-13ನೇ ಸಾಲಿನ ಮುಂಗಾರಿನಲ್ಲಿ 8 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ವಿವಿಧ ಶ್ರೇಣಿಯ ರಸಗೊಬ್ಬರ-ಗಳನ್ನು ಕಾಪು ದಾಸ್ತಾನು ಮಾಡಿದ್ದು, ಇದುವರೆಗೆ 6.37 ಲಕ್ಷ ಮೆಟ್ರಿಕ್ ಟನ್‌ಗಳಷ್ಟು (695 ಕೋಟಿ ರೂ. ಮೌಲ್ಯ) ಸರಬರಾಜು ಮಾಡಲಾಗಿದ್ದು, ರಾಜ್ಯದಲ್ಲಿ ಯಾವುದೇ ತೊಂದರೆ ಇಲ್ಲದೆ ರೈತರಿಗೆ ಸಮರ್ಪಕವಾಗಿ ರಸಗೊಬ್ಬರವು ದೊರೆಯುತ್ತಿದೆ.
- **ಸುವರ್ಣಭೂಮಿ ಯೋಜನೆ:** ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಕೃಷಿ,

ತೋಟಗಾರಿಕೆ, ಸಾವಯವ ಕೃಷಿ, ಜೈವಿಕ ಇಂಧನ, ರೇಷ್ಮೆ ಕೃಷಿ, ಜೇನು ಸಾಕಾಣಿಕೆ, ಮೀನುಗಾರಿಕೆ ಚಟುವಟಿಗಳಿಗೆ 2011–12ನೇ ಸಾಲಿನಲ್ಲಿ 576.94 ಕೋಟಿ ರೂ. ಬಿಡುಗಡೆಯಾಗಿದೆ ಹಾಗೂ 6.90 ಲಕ್ಷ ಫಲಾನುಭವಿಗಳಿಗೆ ಮೊದಲನೇ ಕಂತಿನ ಸಹಾಯಧನವಾಗಿ 286.50 ಕೋಟಿ ರೂ. ವಿತರಣೆ ಮಾಡಲಾ–ಗಿದೆ. ಎರಡನೇ ಕಂತಿನ ಸಹಾಯಧನವಾಗಿ 4.29 ಲಕ್ಷ ಫಲಾನುಭವಿಗಳಿಗೆ 188.35 ಕೋಟಿ ರೂ. ಪಾವತಿಸಲಾಗಿದೆ. 2012–13ನೇ ಸಾಲಿನಲ್ಲಿ ಎಲ್ಲಾ ಚಟುವಟಿಕೆಗಳಡಿ 4.28 ಲಕ್ಷ ಫಲಾನುಭವಿಗಳಿಗೆ 241.50 ಕೋಟಿ ರೂ. ಸಹಾಯಧನವನ್ನು ವಿತರಿಸಲಾಗಿದೆ.

- **ಹನಿ ಮತ್ತು ತುಂತುರು ನೀರಾವರಿ:** ರಾಜ್ಯದ್ಯಂತ ನೀರಿನ ಬಳಕೆಯಲ್ಲಿ ಹೆಚ್ಚಿನ ನೈಪುಣ್ಯತೆ ಸಾಧಿಸುವ ದಿಕ್ಕಿನಲ್ಲಿ ಹನಿ ಮತ್ತು ತುಂತುರು ನೀರಾವರಿಯನ್ನು ಅಳವಡಿಸಲು ಪ್ರೋತ್ಸಾಹಿಸಲಾಗಿದೆ. ಕಳೆದ 4 ವರ್ಷಗಳಲ್ಲಿ 7.44 ಲಕ್ಷ ಎಕರೆ ಪ್ರದೇಶದಲ್ಲಿ ಈ ತಾಂತ್ರಿಕತೆಯನ್ನು ಅಳವಡಿಸಲು 382 ಕೋಟಿ ರೂ. ವ್ಯಯಿಸಲಾಗಿದೆ. ಈ 2012–13ರ ಸಾಲಿನಲ್ಲಿ 95,877 ಎಕರೆ ಪ್ರದೇಶಕ್ಕೆ ಲಘು ನೀರಾವರಿ ಘಟಕಗಳ ವಿತರಣೆಗೆ 75.72 ಕೋಟಿ ರೂ. ವೆಚ್ಚವಾಗಿದೆ.

- **ಬೆಳೆ ವಿಮೆ:** ನಮ್ಮ ರಾಜ್ಯದಲ್ಲಿ ಮೂರು ರೀತಿಯ ಬೆಳೆ ವಿಮಾ ಯೋಜನೆಗಳನ್ನು (ಕೃಷಿ ವಿಮೆ, ಪ್ರಾಯೋಗಿಕ ಹವಾಮಾನ ಆಧಾರಿತ, ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮೆ) ಕಳೆದ 4 ವರ್ಷಗಳಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಇದರಲ್ಲಿ 50.65 ಲಕ್ಷ ರೈತರು ಪಾಲ್ಗೊಂಡಿದ್ದು, ಬೆಳೆ ವಿಮಾ ನಷ್ಟ ಪರಿಹಾರವಾಗಿ 406 ಕೋಟಿ ರೂ. ಪಾವತಿಸಲಾಗಿದೆ.

- **ಕೃಷಿ ಯಂತ್ರೋಪಕರಣಗಳು:** ನಮ್ಮ ಸರ್ಕಾರ ರಾಜ್ಯಾದ್ಯಂತ ರೈತರಿಗೆ ಸಹಾಯ ಮಾಡಲು ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಕಳೆದ 4 ವರ್ಷಗಳಲ್ಲಿ 3.85 ಲಕ್ಷ ರೈತರಿಗೆ

ವಿವಿಧ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲು 573 ಕೋಟಿ ರೂ. ಒದಗಿಸಲಾಗಿದೆ. ಈ 2012–13ರ ಸಾಲಿನಲ್ಲಿ ಒಟ್ಟು 17,538 ಫಲಾನುಭವಿಗಳಿಗೆ 79.57 ಕೋಟಿ ರೂ. ವೆಚ್ಚವಾಗಿದೆ. ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆಯಡಿ ಇದುವರೆಗೆ 269 ಒಕ್ಕಣೆ ಕಣ ನಿರ್ಮಾಣ, 1,385 ಸಂಸ್ಕರಣಾ ಘಟಕಗಳ ವಿತರಣೆ ಹಾಗೂ 2.16 ಲಕ್ಷ ಟಾರ್ಪಾಲಿನ್‌ಗಳ ವಿತರಣೆಗೆ ಒಟ್ಟು 32.75 ಕೋಟಿ ರೂ. ನೀಡಲಗಿದೆ.

- **ಯಂತ್ರೋಪಕರಣಗಳ–ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಸ್ಥಾಪನೆ:** 2011–12ನೇ ಸಾಲಿನಲ್ಲಿ ಸೇವಾ ಕೇಂದ್ರಗಳ ಸ್ಥಾಪನೆಯ ಯಶಸ್ಸನ್ನು ಗಮನಿಸಿ 2012–13ರ ಸಾಲಿನಲ್ಲಿ ಒಟ್ಟು 1,000 ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಸ್ಥಾಪನೆಗೆ 100 ಕೋಟಿ ರೂ. ಅನುದಾನ ನೀಡಿದೆ.
- **ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಬಂಡವಾಳ:** ಕೃಷಿ ಮತ್ತು ಸಂಬಂಧಿತ ವಲಯಗಳ ಸಮಗ್ರ ಅಭಿವೃದ್ಧಿಗಾಗಿ ದೇಶದಲ್ಲೇ ಪ್ರಪ್ರಥಮವಾಗಿ "ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ" ಹೊರತಂದ ಖ್ಯಾತಿ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ರಾಜ್ಯ ಸರ್ಕಾರವು ಕೃಷಿ ಮತ್ತು ಕೃಷಿಯೇತರ ಸಂಬಂಧಿತ ವಲಯಗಳಲ್ಲಿ ಬಂಡವಾಳ ಆಕರ್ಷಿಸಲು ಡಿಸೆಂಬರ್ 2011ರಂದು ಜಾಗತಿಕ ಕೃಷಿ ಬಂಡವಾಳ ಹಾಗೂ ಆಹಾರ ಸಂಸ್ಕರಣಾ ಸಮಾವೇಶವನ್ನು ಆಯೋಜಿಸಿತು. ಇದರ ಮೂಲಕ ಸಹಿ ಹಾಕಿದ 64 ಒಡಂಬಡಿಕೆಗಳ ಒಟ್ಟು ಮೊತ್ತ 60,925 ಕೋಟಿ ರೂ.
- ಡಿಸೆಂಬರ್ 2012ರ ಅಂತ್ಯಕ್ಕೆ 33 ಯೋಜನೆಗಳಿಗೆ ಎಲ್ಲಾ ರೀತಿಯ ಮಂಜೂರಾತಿ ದೊರೆತಿದ್ದು, ಅದರಲ್ಲಿ ಹಲವು ಯೋಜನೆಗಳು ಈಗಾಗಲೇ ವಿವಿಧ ಹಂತಗಳಲ್ಲಿ ಅನುಷ್ಠಾನ–ಗೊಳ್ಳುತ್ತಿವೆ. ಫೆಬ್ರವರಿ 2013ರ ಅಂತ್ಯಕ್ಕೆ ಒಟ್ಟು 43 ಯೋಜನೆಗಳು ಅನುಷ್ಠಾನಗೊಳ್ಳುವ ಸಾಧ್ಯತೆ ಇದ್ದು, ಇದರಿಂದ ಒಟ್ಟು 43 ಸಾವಿರ ಕೋಟಿ ರೂ. ಹೆಚ್ಚಿನ ಬಂಡವಾಳ ಕೃಷಿ

ಕ್ಷೇತ್ರಕ್ಕೆ ಬರಲಿದೆ. ಇದರಿಂದ ಕೃಷಿ ಹಾಗೂ ಇತರೆ ವಲಯಗಳಲ್ಲಿ ಸರ್ವತೋಮುಖ ಅಭಿವೃದ್ಧಿಯಾಗಿ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಉದ್ಯೋಗಗಳು ಸೃಷ್ಟಿಯಾಗಲಿವೆ.

- 2011–12ನೇ ಸಾಲಿನಲ್ಲಿ ವಾಣಿಜ್ಯ ಬ್ಯಾಂಕುಗಳಿಂದ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ ಪಡೆದ ಬೆಳೆ ಸಾಲ/ಅಲ್ಪಾವಧಿ ಸಾಲವನ್ನು 2.30 ಲಕ್ಷ ರೈತರು 777 ಕೋಟಿ ರೂ. ಮರುಪಾವತಿಸಿದ್ದು, ಶೇ.3ರ ದರದಲ್ಲಿ 13,23 ಕೋಟಿ ರೂ. ಬಡ್ಡಿ ರಿಯಾಯಿತಿ ನೀಡಲಾಗಿದೆ.
- 2012–13ನೇ ಸಾಲಿನಲ್ಲಿ ರೈತರ ಸಹಾಯಧನದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ವಿಲೇವಾರಿ ಮಾಡಲು ಹಾಗೂ ಸಹಾಯಧನ ಪಾವತಿಯಲ್ಲಿ ವಿಳಂಬವಾಗದಿರಲು ಅನುಕೂಲ-ವಾಗುವಂತೆ ವೆಬ್-ಪೋರ್ಟಲ್ ಅನ್ನು ಚಾಲನೆ ಮಾಡಲಾಗಿದ್ದು, ಇದುವರೆವಿಗೂ ಒಟ್ಟು 11,820 ಅರ್ಜಿಗಳು ಸ್ವೀಕೃತವಾಗಿವೆ.
- ರೈತರ ಹೋರಾಟಕ್ಕೆ ಹೊಸ ಚೈತನ್ಯವನ್ನು ತುಂಬಿದ ಪ್ರೊ: ನಂಜುಂಡಸ್ವಾಮಿಯವರಿಗೆ "ಕೃಷಿ ರತ್ನ ಪ್ರಶಸ್ತಿ" ಯನ್ನು ನೀಡಿ ಅವರ ಪ್ರತಿಷ್ಠಾನಕ್ಕೆ 10 ಲಕ್ಷ ರೂ. ನೀಡಲಾಗಿದೆ.
- ಕೃಷಿ ವಿದ್ಯಾರ್ಥಿಗಳ ನಿಯೋಜನೆ: 2012–13ನೇ ಸಾಲಿನಲ್ಲಿ, ರೈತ ಸಂಪರ್ಕ ಕೇಂದ್ರಗಳಿಗೆ 991 ವಿದ್ಯಾರ್ಥಿಗಳನ್ನು ಕೃಷಿ ವಿಶ್ವವಿದ್ಯಾ-ಲಯಗಳಿಂದ ನಿಯೋಜನೆ ಮಾಡಲಾಗಿದೆ.

ತೋಟಗಾರಿಕೆ

- ಕರ್ನಾಟಕ ರಾಜ್ಯದಲ್ಲಿ ವೇಗದಿಂದ ಬೆಳೆಯುತ್ತಿರುವ ಕ್ಷೇತ್ರಗಳಲ್ಲಿ ತೋಟಗಾರಿಕೆ ಕ್ಷೇತ್ರ ಮುಂಚೂಣಿಯಲ್ಲಿದೆ. 1960ರ ದಶಕದಲ್ಲಿ ಕೇವಲ 10.8 ಲಕ್ಷ ಎಕರೆ ಪ್ರದೇಶದಿಂದ, 2012ನೇ ಸಾಲಿನಲ್ಲಿ 47.59 ಲಕ್ಷ ಎಕರೆಗೆ ಹೆಚ್ಚಿದ್ದು, ಉತ್ಪಾದನೆ (1960ರಲ್ಲಿ 25 ಲಕ್ಷ ಟನ್), 152,13 ಲಕ್ಷ ಟನ್‌ಗಳಿಗೆ ಏರಿದೆ.

- ರಾಜ್ಯದಲ್ಲಿ ತೋಟಗಾರಿಕಾ ಕ್ಷೇತ್ರದ ಆದಾಯ 23 ಸಾವಿರ ಕೋಟಿ ರೂ. ಮುಟ್ಟಿದ್ದು, ಕ್ಷೇತ್ರ ವಿಸ್ತೀರ್ಣದಲ್ಲಿ 5% ಮತ್ತು ಉತ್ಪಾದನೆಯಲ್ಲಿ 6% ಬೆಳವಣಿಗೆ ಆಗಿದ್ದು, ರಾಜ್ಯದ ಒಟ್ಟಾರೆ ಕೃಷಿ ಆದಾಯದಲ್ಲಿ 40% ಪಾಲು ತೋಟಗಾರಿಕಾ ಕ್ಷೇತ್ರ ನೀಡಿರುವುದು, ಅದರ ಸಕ್ರಿಯತೆಗೆ ಸಾಕ್ಷಿಯಾಗಿದೆ.
- ನಮ್ಮ ರಾಜ್ಯದ ರಫ್ತು ಹೆಚ್ಚಳದಲ್ಲಿ ತೋಟಗಾರಿಕಾ ಉತ್ಪನ್ನಗಳು ಕೂಡ ಪ್ರಮುಖವಾಗಿವೆ. ಪುಷ್ಪ ಕ್ಷೇತ್ರದಿಂದ 50 ಕೋಟಿ ರೂ. ಮತ್ತು ಗರ್ಕಿನ್ಸ್‌ನಿಂದ 450 ಕೋಟಿ ರೂ. ಸೇರಿದಂತೆ ರಫ್ತಿನಿಂದ ರಾಜ್ಯದ ರೈತರಿಗೆ 5,159 ಕೋಟಿ ರೂ.ಆದಾಯ ದೊರೆತಿದೆ.

ಪಶುಸಂಗೋಪನೆ

- ಶಿವಮೊಗ್ಗ, ಹಾಸನ, ಅಥಣಿ, ಗದಗ್ ಮತ್ತು ಪುತ್ತೂರಿನಲ್ಲಿ ಪಶುವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳಿಗೆ ಈ ತನಕ ಒಟ್ಟು 41,75 ಕೋಟಿ ರೂ. ವೆಚ್ಚ ಮಾಡಲಾಗಿದೆ.
- ತುಮಕೂರು ಜಿಲ್ಲೆ ಕೊನೇಹಳ್ಳಿಯಲ್ಲಿ ಪಶುಸಂಗೋಪನೆ ಪಾಲಿಟೆಕ್ನಿಕ್ ಪ್ರಾರಂಭಿಸಲಾಗಿದೆ.
- ಕರ್ನಾಟಕ ಗೋ ಸಂರಕ್ಷಣೆ ಯೋಜನೆ ಅಡಿಯಲ್ಲಿ ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನವಾಗಿ ಈ ತನಕ 20 ಲಕ್ಷ ರೂ. ಸಹಾಯಧನ ನೀಡಲಗಿದೆ.
- ವಿಪತ್ತು ನಿರ್ವಹಣೆ ಬರ ಪರಿಹಾರ ನಿಧಿಯಡಿ ಇಲಾಖೆಯ ಕ್ಷೇತ್ರಗಳಲ್ಲಿ ಮೇವು ಬೆಳೆಯಲು ಹಾಗೂ ಬರಪೀಡಿತ ತಾಲ್ಲೂಕುಗಳಲ್ಲಿ 1,10 ಲಕ್ಷ ರೈತರಿಗೆ ಮೇವಿನ ಬೀಜದ ಕಿರು ಪೊಟ್ಟಣಕ್ಕಾಗಿ 220 ಲಕ್ಷ ರೂ. ,ಜಿಲ್ಲಾವಾರು ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 284 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ.

- ಆಂಧ್ರ ಪ್ರದೇಶದ ವಿಜಯವಾಡದಿಂದ 97.49 ಲಕ್ಷ ರೂ. ವೆಚ್ಚದಲ್ಲಿ 887 ಮೆಟ್ರಿಕ್ ಟನ್ ಭತ್ತದ ಹುಲ್ಲನ್ನು ಖರೀದಿಸಿ ಬರಪೀಡಿತ ಜಿಲ್ಲೆಗಳಲ್ಲಿ ತೆರೆದಿದ್ದ 244 ಗೋಶಾಲೆಗಳಿಗೆ ಸರಬರಾಜು ಮಾಡಲಾಗಿದೆ.
- ನವೆಂಬರ್ 2012 ಅಂತ್ಯಕ್ಕೆ 83 ಲಕ್ಷ ದನ ಮತ್ತು ಎಮ್ಮೆಗಳಿಗೆ ಕಾಲುಬಾಯಿ ಜ್ವರ ಲಸಿಕೆ ಹಾಕಲಾಗಿದೆ.
- ಜಾನುವಾರುಗಳಿಗೆ ತುರ್ತು ಚಿಕಿತ್ಸೆ ಒದಗಿಸಲು (108 ಮಾದರಿಯಲ್ಲಿ) ಆರಂಭಿಸಿದ ಧನ್ವಂತರಿ ಯೋಜನೆ, ಪ್ರಾರಂಭಿಕವಾಗಿ 5 ಜಿಲ್ಲೆಗಳ 26 ತಾಲ್ಲೂಕುಗಳಲ್ಲಿ ಅನುಷ್ಠಾನದಲ್ಲಿದೆ.
- ಈ ಸಾಲಿನಲ್ಲಿ 391 ಪಶುವೈದ್ಯರ ಹಾಗೂ 642 ಪಶುವೈದ್ಯಕೀಯ ಸಹಾಯಕರ ಹುದ್ದೆಗಳ ಭರ್ತಿಗೆ ಸೂಕ್ತ ಕ್ರಮ ಆರಂಭಿಸಿದೆ.

ಮೀನುಗಾರಿಕೆ

- ಮೀನುಗಾರಿಕೆಯು ಪೌಷ್ಟಿಕ ಆಹಾರ, ಆದಾಯ, ಉದ್ಯೋಗ ನೀಡುವುದರ ಜೊತೆಗೆ ದೇಶಕ್ಕೆ ವಿದೇಶಿ ವಿನಿಮಯವನ್ನು ಒದಗಿಸುತ್ತಿದೆ. ಒಟ್ಟು 3,339 ಕೆರೆಗಳಲ್ಲಿ 9.56 ಕೋಟಿ ಮೀನು ಮರಿಗಳನ್ನು ದಾಸ್ತಾನು ಮಾಡಿ ಮೀನುಗಾರಿಕೆ ಅಭಿವೃದ್ಧಿ ಪಡಿಸಲಾಗಿದೆ. ಮೀನುಮರಿ ಉತ್ಪಾದನಾ ಕೇಂದ್ರಗಳಲ್ಲಿ 40 ಕೋಟಿ ಫ್ರೈ ಮೀನು ಮರಿಗಳನ್ನು ಉತ್ಪಾದಿಸಲಾಗಿದೆ.
- ಯಾಂತ್ರೀಕೃತ ಮೀನುಗಾರಿಕೆಗೆ ರಾಜ್ಯ ಮಾರಾಟ ಕರರಹಿತ ಡೀಸಲ್ ಪೂರೈಸುವ ಯೋಜನೆಯಡಿ 1,14,600 ಕಿಲೋ ಲೀಟರ್ ನೀಡಲಾಗಿದೆ. ಈ ವರೆಗೆ ಒಳನಾಡು ಹಾಗೂ ಕರಾವಳಿ ಮೀನುಗಾರಿಕೆಯಿಂದ 5.46 ಲಕ್ಷ ಟನ್ ಮೀನು ಉತ್ಪಾದನೆಯಾಗಿದೆ.

- ಮಂಜುಗಡ್ಡೆ ಮತ್ತು ಶೈತ್ಯಾಗಾರ ಘಟಕಗಳ ಪುನಃಶ್ಚೇತನಕ್ಕಾಗಿ ವಿದ್ಯುತ್ ಸಹಾಯಧನವಾಗಿ 173 ಮಂಜುಗೆಡ್ಡೆ ಕಾರ್ಖಾನೆಗಳಿಗೆ 2.10 ಕೋಟಿ ರೂ. ನೀಡಲಾಗಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಮಗ್ರ ಮೀನುಗಾರಿಕೆ ಅಭಿವೃದ್ಧಿಗೆ 10 ಕೋಟಿ ರೂ. ಖರ್ಚು ಮಾಡಲಾಗಿದೆ.
- ಕೇಂದ್ರದ ಭಾಗಶಃ ನೆರವು ಸೇರಿದಂತೆ ಒಟ್ಟು 159 ಕೋಟಿ ರೂ. ಖರ್ಚಿನಲ್ಲಿ ಮಂಗಳೂರು, ಹೊನ್ನಾವರ, ಮಲ್ಪೆ ಮತ್ತು ಕೊಡೇರಿಯಲ್ಲಿ ಮೀನುಗಾರಿಕೆ ಬಂದರುಗಳ ನಿರ್ಮಾಣ ಪ್ರಗತಿಯಲ್ಲಿವೆ.
- ಮೀನುಗಾರರ ಸುರಕ್ಷತೆಗಾಗಿ 4,141 ಲೈಫ್ ಬಾಯ್ಸ್, 5,346 ಲೈಫ್ ಜಾಕೆಟ್‌ಗಳು ಮತ್ತು 241 ಉಪಕರಣ ಚೀಲಗಳನ್ನು ವಿತರಿಸಲಾಗಿದೆ. ಉಳಿತಾಯ ಮತ್ತು ಪರಿಹಾರ ಯೋಜನೆಯಡಿ 30,836 ಮೀನುಗಾರರಿಗೆ ಪರಿಹಾರವಾಗಿ 3.71 ಕೋಟಿ ರೂ. ನೀಡಲಾಗಿದೆ.
- ಕೇಂದ್ರ ಸರ್ಕಾರದ "ಅಂತರವರ್ತಿ ಮೀನುಗಾರಿಕೆ ದೋಣಿಗಳ ಅಳವಡಿಕೆ" ಯೋಜನೆಯಡಿ 198 ಫಲಾನುಭವಿಗಳಿಗೆ ಮತ್ತು "ನಾಡದೋಣಿಗಳ ಯಾಂತ್ರೀಕರಣ" ಯೋಜನೆಯಡಿ 287 ಫಲಾನುಭವಿಗಳಿಗೆ ಸಹಾಯಧನ ಕಲ್ಪಿಸಲಾಗಿದೆ.
- ಮತ್ಸ್ಯಾಶ್ರಯ ಯೋಜನೆಯ ಅನುಷ್ಠಾನಕ್ಕಾಗಿ 4,000 ಮನೆಗಳನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗಿದೆ.
- 6,000 ಮಹಿಳಾ ಮೀನುಗಾರರಿಗೆ ಮೀನು ಮಾರಾಟ ಮಾಡಲು ಶಾಖ ನಿರೋಧಕ ಪೆಟ್ಟಿಗೆಗಳನ್ನು ಉಚಿತವಾಗಿ ವಿತರಿಸಲಾಗಿದೆ.

ರೇಷ್ಮೆ

- ರಾಜ್ಯದಲ್ಲಿ ಸುಮಾರು 1.32 ಲಕ್ಷ ಕುಟುಂಬಗಳು 1,80,000 ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದು, ವಾರ್ಷಿಕ ರೇಷ್ಮೆ ಉತ್ಪಾದನೆ 8,000 ಮೆಟ್ರಿಕ್ ಟನ್‌ಗೆ ಮುಟ್ಟಿದೆ.
- 2012-13ನೇ ಸಾಲಿನಲ್ಲಿ ಹೆಚ್ಚುವರಿಯಾಗಿ 19,924 ಎಕರೆ ಪ್ರದೇಶದಲ್ಲಿ ಹಿಪ್ಪ ನೇರಳೆ ಕ್ಷೇತ್ರ ವಿಸ್ತೀರ್ಣ ಆಗಿದ್ದು, ರೇಷ್ಮೆ ಉತ್ಪಾದನೆ (ಡಿಸೆಂಬರ್ 2012ಅಂತ್ಯಕ್ಕೆ) 5,096 ಮೆಟ್ರಿಕ್ ಟನ್ ಆಗಿದೆ.

ಸಹಕಾರ

- ರಾಜ್ಯದ ರೈತರಿಗೆ ಕೃಷಿ ಉತ್ತೇಜನಕ್ಕಾಗಿ, ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಮತ್ತು ಸಕಾಲದಲ್ಲಿ ಸಾಲ ದೊರೆಯುವ ಉದ್ದೇಶದಿಂದ ರಿಯಾಯತಿ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ಸಹಕಾರಿ ಸಂಸ್ಥೆಗಳ ಮೂಲಕ ವಿತರಿಸಲಾಗುತ್ತಿದ್ದು, ಕಳೆದ ನಾಲ್ಕು ವರ್ಷಗಳಿಂದ ಈ ಯೋಜನೆಯಡಿಯಲ್ಲಿ ಒಟ್ಟು 18,176 ಕೋಟಿ ರೂ. ವಿತರಿಸಲಾಗಿದೆ. ಇದರಿಂದ 53.37 ಲಕ್ಷ ಫಲಾನುಭವಿಗಳಿಗೆ ಸಾಲ ದೊರಕಿದ್ದು ಸರ್ಕಾರದಿಂದ ಸಹಕಾರಿ ಸಂಸ್ಥೆಗಳಿಗೆ ಬಡ್ಡಿ ರಿಯಾಯಿತಿಯಾಗಿ ಒಟ್ಟು 939 ಕೋಟಿ ರೂ. ಪಾವತಿಸಲಾಗಿದೆ.
- ಕೃಷಿ ಸಾಲಕ್ಕಾಗಿ ಡಿಸೆಂಬರ್ 2012ರ ಅಂತ್ಯಕ್ಕೆ ಸಹಕಾರಿ ಸಂಸ್ಥೆಗಳ ಮೂಲಕ 9.75 ಲಕ್ಷ ರೈತರಿಗೆ 4,025 ಕೋಟಿ ರೂ. ಅಲ್ಪಾವಧಿ ಕೃಷಿ ಸಾಲಗಳನ್ನು ವಿತರಿಸಲಾಗಿದ್ದು, ಈ ಪೈಕಿ 8.72 ಲಕ್ಷ ರೈತರಿಗೆ 2,703 ಕೋಟಿ ರೂ. ಬೆಳೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸಲಾಗಿದೆ.
- ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳಿಗೆ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ಶೇಕಡ 4ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯನ್ನು ಜಾರಿಗೊಳಿಸಿದ್ದು,

ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 1.26 ಲಕ್ಷ ಸ್ವಸಹಾಯ ಗುಂಪುಗಳಿಗೆ ಒಟ್ಟು 1,322 ಕೋಟಿ ರೂ. ಸಾಲವನ್ನು ವಿತರಿಸಿದೆ. ಇದಕ್ಕಾಗಿ ಸರ್ಕಾರದಿಂದ ಬಡ್ಡಿ ಸಹಾಯಧನವಾಗಿ ಒಟ್ಟು 62.37 ಕೋಟಿ ರೂ. ಪಾವತಿಸಿದೆ.

- 2012–13ನೇ ಸಾಲಿನಲ್ಲಿ ಸದರಿ ಯೋಜನೆಯಡಿಯಲ್ಲಿ ಡಿಸೆಂಬರ್ ಅಂತ್ಯದವರೆಗೆ ಒಟ್ಟು 18,669 ಸ್ವಸಹಾಯ ಗುಂಪುಗಳಿಗೆ ಒಟ್ಟು 262 ಕೋಟಿ ರೂ. ಸಾಲದ ವಿತರಣೆಗೆ ಬಡ್ಡಿ ಸಹಾಯಧನವಾಗಿ 10 ಕೋಟಿ ರೂ. ನೀಡಲಾಗಿದೆ.
- ಸರ್ಕಾರದ ಸಾಲ ಮನ್ನಾ ಯೋಜನೆಯಡಿ 15.24 ಲಕ್ಷ ರೈತರ 3,284 ಕೋಟಿ ರೂ. ಅಸಲು ಹಾಗೂ 346 ಕೋಟಿ ರೂ. ಬಡ್ಡಿ ಸೇರಿದಂತೆ ಒಟ್ಟು 3,630 ಕೋಟಿ ರೂ. ಮನ್ನಾ ಮಾಡಲಾಗಿದೆ.
- 2012–13ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿ 29.46 ಲಕ್ಷ ಸದಸ್ಯರನ್ನು ನೋಂದಾಯಿಸಲಾಗಿದ್ದು, ಡಿಸೆಂಬರ್‌ವರೆಗೆ 52,166 ಸದಸ್ಯರು ಶಸ್ತ್ರ ಚಿಕಿತ್ಸೆ ಪಡೆದಿದ್ದು, ಇದಕ್ಕಾಗಿ 49 ಕೋಟಿ ರೂ. ವೆಚ್ಚ ಭರಿಸಲಗಿದೆ.
- ನವೆಂಬರ್ 2012ರ ಅಂತ್ಯಕ್ಕೆ ಹೊಸದಾಗಿ 10,062 ಸ್ವ-ಸಹಾಯ ಗುಂಪುಗಳು ರಚನೆಯಾಗಿದ್ದು, ಸಹಕಾರಿ ಸಂಸ್ಥೆಗಳ ಮೂಲಕ 20,789 ಸ್ವ–ಸಹಾಯ ಗುಂಪುಗಳಿಗೆ 292 ಕೋಟಿ ರೂ. ಸಾಲ ವಿತರಿಸಲಗಿದೆ.

ಕೃಷಿ ಮಾರುಕಟ್ಟೆ

- ಆವರ್ತ ನಿಧಿಯ ಗಾತ್ರವನ್ನು 650 ಕೋಟಿರೂ.ಗಳಿಂದ 725 ಕೋಟಿ ರೂಗಳಿಗೆ ಹೆಚ್ಚಿಸಲಾಗಿದೆ.
- ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಧಿ ಯೋಜನೆಯಡಿ 7 ಕೋಟಿ ರೂ. ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ–ಯಡಿ 5 ಕೋಟಿ ರೂ. ಖರ್ಚು ಮಾಡಿ, ಗ್ರಾಮೀಣ

ಮಾರುಕಟ್ಟೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

- ಹಿಂದುಳಿದ ಪ್ರದೇಶಗಳಲ್ಲಿ 12 ಮಾರುಕಟ್ಟೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು 1.12 ಕೋಟಿ ರೂ. ವೆಚ್ಚ ಮಾಡಲಾಗಿದೆ.
- ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ತೆಂಗು ತಾಂತ್ರಿಕ ಉದ್ಯಾನ ನಿರ್ಮಿಸಲು ಪರಿಣತರಿಂದ ಕಾರ್ಯಯೋಜನೆ ಸಿದ್ಧಪಡಿಸಿದ್ದು, ಅನುಷ್ಟಾನಗೊಳ್ಳುತ್ತಿದೆ.
- ಗಂಗಾವತಿ ತಾಲ್ಲೂಕಿನ ಕಾರಟಗಿಯಲ್ಲಿ ಭತ್ತದ ತಾಂತ್ರಿಕ ಉದ್ಯಾನ ನಿರ್ಮಿಸಲು ಈಗಾಗಲೇ 90 ಎಕರೆಗಳನ್ನು ವಶಪಡಿಸಿಕೊಂಡು ಅಭಿವೃದ್ಧಿಪಡಿಸಲಗುತ್ತಿದೆ.
- ರಾಷ್ಟ್ರೀಯ ಸರಕು ಉತ್ಪನ್ನಗಳ ವಿನಿಮಯ ಕೇಂದ್ರದ (NCDEX) ಮೂಲಕ ಡಿಸೆಂಬರ್ 2012 ಅಂತ್ಯದವರೆಗೆ 8 ಕೃಷಿ ಉತ್ಪನ್ನಗಳಿಗೆ 15 ಮಾರುಕಟ್ಟೆಗಳಲ್ಲಿ ಇ–ವ್ಯಾಪಾರ ವ್ಯವಸ್ಥೆಗೆ ಸಜ್ಜುಗೊಳಿಸಲಾಗಿದೆ. ಉಳಿದ 35 ಮಾರುಕಟ್ಟೆಗಳಲ್ಲಿ ಈ ವ್ಯವಸ್ಥೆ ಅನುಷ್ಠಾನದಲ್ಲಿದ್ದು, ಮಾರ್ಚ್ 2013 ಅಂತ್ಯದವರೆಗೆ ಪೂರ್ಣಗೊಳಿಸಲಾಗುವುದು.
- ಕೊಬ್ಬರಿ, ಅರಿಶಿಣ, ತೊಗರಿ, ತೆಂಗಿನಕಾಯಿ ಹಾಗೂ ಈರುಳ್ಳಿ ಉತ್ಪನ್ನಗಳ ಖರೀದಿಗಾಗಿ ಆವರ್ತ ನಿಧಿಯಿಂದ 52.32 ಕೋಟಿ ರೂ. ಬಿಡುಗಡೆ ಮಾಡಿದೆ.
- ಕೃಷಿ ಮಾರಾಟ ವಾಹಿನಿ ಅಂತರ್ಜಾಲಕ್ಕೆ ಭಾರತ ಸರ್ಕಾರದ "ವೆಬ್‌ರತ್ನ" ಪ್ರಶಸ್ತಿ ದೊರೆತಿದೆ.
- ರಾಜ್ಯದಲ್ಲಿ 25 ಮಾರುಕಟ್ಟೆಗಳ ಶ್ರೇಣೀಕರಣ ಕಾರ್ಯ ಪೂರ್ಣಗೊಂಡಿದೆ.

- ಬೆಂಗಳೂರಿನ ದಾಸನಪುರದಲ್ಲಿ ಈರುಳ್ಳಿ ಮತ್ತು ಆಲೂಗಡ್ಡೆ ಮಾರುಕಟ್ಟೆಯನ್ನು 104 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸ-ಲಾಗಿದೆ.
- ಮೈಸೂರಿನ ಬಂಡೀಪಾಳ್ಯದಲ್ಲಿ 22 ಕೋಟಿ ರೂ. ವೆಚ್ಚದಲ್ಲಿ ತರಕಾರಿ ಮಾರುಕಟ್ಟೆ ಹಾಗೂ 4.50 ಕೋಟಿ ರೂ. ವೆಚ್ಚದಲ್ಲಿ ಹೂವಿನ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಿದೆ.
- ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಅಸ್ಸೈಡ್ ಯೋಜನೆಯಡಿ 7 ಕೋಟಿ ರೂ.ವೆಚ್ಚದಲ್ಲಿ ಮಾರುಕಟ್ಟೆ ಅಭಿವೃದ್ಧಿಪಡಿಸಿದೆ.
- ಗುಲ್ಬರ್ಗಾದಲ್ಲಿ 20 ಕೋಟಿ ರೂ. ವೆಚ್ಚದಲ್ಲಿ ಹಣ್ಣು ತರಕಾರಿ ಮಾರುಕಟ್ಟೆ ನಿರ್ಮಿಸಲಾಗಿದೆ.

ಜಲ ಸಂಪನ್ಮೂಲ

- **ನೀರಾವರಿ ಪ್ರದೇಶದಲ್ಲಿ ಗಮನಾರ್ಹ ಹೆಚ್ಚಳ:** ಮೊದಲ ಕೃಷಿ ಆಯವ್ಯಯದಲ್ಲಿ 2011–2020ರ ದಶಕವನ್ನು ನೀರಾವರಿ ದಶಕವೆಂದು ಪರಿಗಣಿಸಿ, ಕಳೆದ ನಾಲ್ಕೂವರೆ ವರ್ಷಗಳಲ್ಲಿ 25 ಯೋಜನೆಗಳನ್ನು ಪೂರ್ಣಗೊಳಿಸಲಾಗಿದ್ದು, ಒಟ್ಟು ಏಳು ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ ಮತ್ತು 4.86 ಲಕ್ಷ ಎಕರೆ ಕ್ಷೇತ್ರಕ್ಕೆ ಹೊಲಗಾಲುವೆ ನಿರ್ಮಿಸಲಾಗಿದೆ. 2.56 ಲಕ್ಷ ಎಕರೆ ಸವಳು ಜವಳು ಭಾದಿತ ಅಚ್ಚುಕಟ್ಟು ಪ್ರದೇಶವನ್ನು ಪುನರುತ್ಥಾನಗೊಳಿಸಲಾಗಿದೆ ಹಾಗೂ 8.35 ಲಕ್ಷ ಎಕರೆ ಕ್ಷೇತ್ರಕ್ಕೆ ಬಸಿಗಾಲುವೆ ನಿರ್ಮಿಸಲಗಿದೆ. 2969 ಕಿ. ಮೀ. ಆಯಕಟ್ಟು ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದೆ.
- **ಪುನರ್ ವಸತಿ ಹಾಗೂ ಪುನರ್ ನಿರ್ಮಾಣ:** ಕಳೆದ ನಾಲ್ಕೂವರೆ ವರ್ಷಗಳಲ್ಲಿ ಪುನರ್ ವಸತಿ ಹಾಗೂ ಪುನರ್ ನಿರ್ಮಾಣ ಮತ್ತು ಬಾಗಲಕೋಟೆ ಅಭಿವೃದ್ಧಿಗಾಗಿ ಸುಮಾರು 750 ಕೋಟಿ ರೂ. ಖರ್ಚು ಮಾಡಿದೆ.

- **ಕುಡಿಯುವ ನೀರಿನ ಯೋಜನೆ:** ನಮ್ಮ ಸರ್ಕಾರ ಕುಡಿಯುವ ನೀರು ಯೋಜನೆಗೆ ಆದ್ಯತೆ ಕೊಟ್ಟಿದ್ದು, ಕಳೆದ ನಾಲ್ಕೂವರೆ ವರ್ಷದಲ್ಲಿ ಹಲವಾರು ಕೆರೆಗಳನ್ನು ಪುನಃಶ್ಚೇತನಗೊಳಿಸಿ, ಜಲ ಮೂಲವನ್ನು ಕಲ್ಪಿಸಿಕೊಟ್ಟು, ಈ ಕೆಳಕಂಡ ಯೋಜನೆಗಳ ಮೂಲಕ ಸ್ಥಳೀಯ ಹಳ್ಳಿಗಳಿಗೆ ಶುದ್ಧ ಮತ್ತು ಸುರಕ್ಷಿತ ನೀರನ್ನು ಒದಗಿಸಲಾಗಿದೆ: ಗೂಳೂರು–ಹೆಬ್ಬೂರು, ಹೊನ್ನವಳ್ಳಿ, ವಜ್ರನ ಕಟ್ಟೆ, ಸಿ. ಕಟ್ಟಿಗೇನಹಳ್ಳಿ ಹಾಗೂ ಕೊಪ್ಪ ಕೆರೆಗಳು; ಬೆಳ್ಳಾವಿ ಹಾಗೂ ಸುತ್ತಮುತ್ತಲ ಗ್ರಾಮಗಳ ಕೆರೆಗಳು; ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 26 ಕೆರೆಗಳು; ಬೇಲೂರು ತಾಲ್ಲೂಕಿನ ಹಳೇಬೀಡು ಹೋಬಳಿಯ 24 ಕೆರೆಗಳು ಮತ್ತು ಮಾದಿಹಳ್ಳಿ ಹೋಬಳಿಯ 15 ಕೆರೆಗಳು; ಚಾಮರಾಜನಗರ, ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ 20 ಕೆರೆಗಳು; ರಾಜನಹಳ್ಳಿ ಏತ ನೀರಾವರಿ ಮೂಲಕ ದಾವಣಗೆರೆಯ 22 ಕೆರೆಗಳು; ಬಿಜಾಪುರ ಜಿಲ್ಲೆಯ 16 ಕೆರೆಗಳು, 5 ಬಾಂದಾರಗಳು ಹಾಗೂ ಬಾಗಲಕೋಟೆ ಜಿಲ್ಲೆಯ 7 ಕೆರೆಗಳು ತುಂಬಿಸುವ ಯೋಜನೆ.
- **ಸಂಪರ್ಕ ರಸ್ತೆಗಳು:** ರೈತರ ಹೊಲಗಳಿಂದ ಮುಖ್ಯ ರಸ್ತೆಗಳಿಗೆ ಸಂಪರ್ಕ ಏರ್ಪಡಿಸಲು ಅಚ್ಚುಕಟ್ಟು ರಸ್ತೆ ನಿರ್ಮಾಣ ಕಾರ್ಯಕ್ರಮಗಳ ಅಡಿಯಲ್ಲಿ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಸುಮಾರು 1,932 ಕಿ.ಮೀ. ರಸ್ತೆ ನಿರ್ಮಾಣವಾಗಿದೆ.
- **ಎತ್ತಿನ ಹೊಳೆ ಯೋಜನೆ ಪ್ರಗತಿ:** ರಾಜ್ಯದ ಪೂರ್ವಭಾಗದ ಕೋಲಾರ, ಚಿಕ್ಕಬಳ್ಳಾಪುರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಬೆಂಗಳೂರು (ನಗರ), ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು, ಮತ್ತಿತರ ಜಿಲ್ಲೆಗಳಲ್ಲಿ ಸುರಕ್ಷಿತ ಕುಡಿಯುವ ನೀರು ಒದಗಿಸುವ ಎತ್ತಿನಹೊಳೆ ಯೋಜನೆಗೆ 8,323 ಕೋಟಿ ರೂ. ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ.

- ಶ್ರೀ ಪರಮಶಿವಯ್ಯನವರ ವರದಿ ಆಧಾರಿತ ವಿವರವಾದ ಕಾರ್ಯಯೋಜನೆ ಸಿದ್ಧತೆ ನಡೆಯುತ್ತಿದೆ.
- ಸೌಪರ್ಣಿಕ ಏತ ನೀರಾವರಿ ಯೋಜನೆಗಳು ಮುಕ್ತಾಯ ಹಂತದಲ್ಲಿದೆ ಹಾಗೂ ಬೆಣ್ಣೆಹಳ್ಳ-ಕೊಣ್ಣೂರು-ಕೊಳಚ್ಚಿ ಏತ ನೀರಾವರಿ ಯೋಜನೆ, ಅಮರ್ಜಾ ಯೋಜನೆ, ಭದ್ರಾ ಕಾಲುವೆಗಳ ಆಧುನೀಕರಣ ಕಾಮಗಾರಿಗಳು ಪ್ರಗತಿಯಲ್ಲಿದೆ.
- ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ-3 ರಲ್ಲಿ ಗುತ್ತಿ ಬಸವಣ್ಣ ಯೋಜನೆ ಮತ್ತು ಚಿಮ್ಮಲಗಿ, ಮಲ್ಲಬಾದ್ ಏತ ನೀರಾವರಿ ಯೋಜನೆಗಳ ಪ್ರಮುಖ ಕಾಮಗಾರಿಗಳು ಮತ್ತು ಮುಳವಾಡ್ ಏತ ನೀರಾವರಿ ಯೋಜನೆ ಪ್ರಗತಿಯಲ್ಲಿವೆ.
- ಕಬಿನಿ ಜಲದಂಡೆ ನಾಲೆ ಮತ್ತು ಕಟ್ಟೇಪುರ (ಕೃಷ್ಣರಾಜ) ಅಣೆಕಟ್ಟೆ ನಾಲೆಗಳ ಆಧಿನೀಕರಣ: ಈ ಎರಡೂ ನಾಲೆಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮಾರ್ಚ್ 2013ಕ್ಕೆ ಪೂರ್ಣಗೊಳಿಸಲಾಗುವುದು.
- ಕೃಷ್ಣರಾಜಸಾಗರದ ಗೇಟುಗಳ ಬದಲಾವಣೆ: ಕೃಷ್ಣರಾಜಸಾಗ-ರದ 16 ಗೇಟುಗಳ ಬದಲಾವಣೆ ಪೂರ್ಣಗೊಂಡಿದ್ದು, ಉಳಿದ 6 ಗೇಟುಗಳ ಕಾಮಗಾರಿಯನ್ನು ಮಾರ್ಚ್ 2013ಕ್ಕೆ ಮುಗಿಸಲಾಗುವುದು.
- ಆಧುನೀಕರಣ ಹಾಗೂ ನೀರಿನ ಬಳಕೆಯಲ್ಲಿ ದಕ್ಷತೆ: ಕಾವೇರಿ ನೀರಾವರಿ ನಿಗಮವು ದೊಡ್ಡ ಮಟ್ಟದಲ್ಲಿ ಹಳೇ ಕಾಲುವೆಗಳ ಹಾಗೂ ಅಣೆಕಟ್ಟು ನಾಲೆಗಳ ಆಧುನೀಕರಣ ಕಾರ್ಯ ಕೈಗೊಂಡಿದೆ. ಈ ತನಕ ಶ್ರೀರಾಮದೇವರ (ಉತ್ತರ ಹಾಗೂ ದಕ್ಷಿಣ), ಶಿಂಷಾ (ಎಡದಂಡೆ ಕಾಲುವೆ), ಹೇಮಗಿರಿ, ಮಂದಗೆರೆ ಮತ್ತು ಕಟ್ಟೇಪುರ ಅಣೆಕಟ್ಟು ನಾಲೆಗಳ ಕಾಮಗಾರಿ ಪೂರ್ಣವಾಗಿದೆ.
- ಅದೇ ರೀತಿ ಚಾಮರಾಜ, ಮಿರ್ಲೆ ಹಾಗೂ ರಾಮಸಮುದ್ರ, ಮಾಧವಮಂತ್ರಿ, ದೇವರಾಯ, ಸಿ.ಡಿ.ಎಸ್. ವಿಸ್ತರಣೆ ಹಾಗೂ

ಕೂಡ್ಲೂರು ಅಣೆಕಟ್ಟೆ ನಾಲೆಗಳ ಆಧುನೀಕರಣಕ್ಕೆ ಸಿದ್ಧತೆಗಳಾಗಿದ್ದು, ಕಾಲುವೆಯಲ್ಲಿ ನೀರು ನಿಲ್ಲಿಸಿದ ನಂತರ ಜನವರಿ–ಜೂನ್ 2013ರ ಅವಧಿಯಲ್ಲಿ ಕಾಮಗಾರಿ ನಡೆಸಲಾಗುವುದು. ಜೊತೆಗೆ, ವಿಶ್ವೇಶ್ವರಯ್ಯ ನಾಲಾ ಜಾಲದ 465 ಕಿ.ಮೀ. ಉದ್ದದ ಆಧುನೀಕರಣ ಕಾರ್ಯ ಕೂಡ ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

- **ಅರ್ಕಾವತಿ ನದಿಯ ಪುನಃಶ್ಚೇತನ** : ಅರ್ಕಾವತಿ ನದಿಯ ಪ್ರಾರಂಭದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗಿನ ಪುನಃಶ್ಚೇತನ ಕಾಮಗಾರಿ ಮೂಲಕ 103 ಕೆರೆಗಳ ಪುನಃಶ್ಚೇತನ ಕಾರ್ಯ ಪ್ರಗತಿಯಲ್ಲಿದೆ.
- **ನೀರು ಬಳಕೆದಾರರ ಸಂಘ** : ಕಬಿನಿ, ಹಾರಂಗಿ, ಹೇಮಾವತಿ ಹಾಗೂ ಕೃಷ್ಣರಾಜಸಾಗರ ಯೋಜನೆಯಲ್ಲಿರುವ 669 ನೀರು ಬಳಕೆದಾರರ ಸಂಘಗಳ ಪೈಕಿ 245 ಸಂಘಗಳೊಂದಿಗೆ ಒಡಂಬಡಿಕೆಯಾಗಿದ್ದು, ಈ ಸಂಘಗಳಿಗೆ ನೀರಿನ ಕರ ವಿಧಿಸುವ ಅಧಿಕಾರ ನೀಡಲಾಗಿದೆ. ಈಗಾಗಲೇ ಹಲವು ರಾಜ್ಯಗಳಲ್ಲಿ ಇಂತಹ ನಿಯಮ ಚಾಲನೆಯಲ್ಲಿದೆ.
- **ಶಿಗ್ಗಾಂವ್‌ನಲ್ಲಿ 24,000 ಎಕರೆ ತುಂತುರು ನೀರಾವರಿ ಯೋಜನೆ ಪೂರ್ಣ** : ನೀರಿನ ಬಳಕೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ದೇಶದಲ್ಲೇ ಪ್ರಥಮ ಬಾರಿಗೆ 24 ಸಾವಿರ ಎಕರೆ ಪ್ರದೇಶದಲ್ಲಿ ತುಂತುರು ನೀರಾವರಿ ಯೋಜನೆಯು ಪರಿಣಿತ ಸಂಸ್ಥೆಗಳ ಸಹಯೋಗದೊಂದಿಗೆ ಪೂರ್ಣಗೊಂಡಿದೆ.

ಸಣ್ಣ ನೀರಾವರಿ

- ಕಳೆದ ನಾಲ್ಕೂವರೆ ವರ್ಷಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಒಟ್ಟು 3,084 ಕೋಟಿ ರೂ. ವೆಚ್ಚದಲ್ಲಿ 1,89,000 ಎಕರೆ ಪ್ರದೇಶದಲ್ಲಿ ಹೊಸ ನೀರಾವರಿ ಪ್ರದೇಶವನ್ನು ಸೃಜಿಸಲಾಗಿದೆ

ಹಾಗೂ ಅಸ್ತಿತ್ವದಲ್ಲಿರುವ ಯೋಜನೆಗಳಲ್ಲಿ 4,34,652 ಎಕರೆ ಪ್ರದೇಶದಲ್ಲಿ ನೀರಾವರಿ ಪ್ರದೇಶವನ್ನು ಸ್ಥಿರೀಕರಿಸಲಾಗಿದೆ.

- ಕೇಂದ್ರ ಸರ್ಕಾರದ ಕೆರೆಗಳ ದುರಸ್ತಿ, ಜೀರ್ಣೋದ್ಧಾರ ಹಾಗೂ ಪುನರುಜ್ಜೀವನಗೊಳಿಸುವ ಕಾರ್ಯಕ್ರಮದಡಿ ಕಳೆದ 3 ವರ್ಷದಲ್ಲಿ 417 ಕೆರೆಗಳು ಪೂರ್ಣಗೊಂಡಿವೆ.
- ತ್ವರಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮದಡಿ, 2009–10ನೇ ಸಾಲಿನಿಂದ ಇಲ್ಲಿಯವರೆಗೆ 685.39 ಕೋಟಿ ರೂ. ಅಂದಾಜು ಮೊತ್ತದ 493 ಹೊಸ ಅಚ್ಚುಕಟ್ಟು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
- ಜಲಸಂವರ್ಧನೆ ಯೋಜನಾ ಸಂಘವು ಯಶಸ್ವಿಯಾಗಿ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯಡಿ 3,126 ಸುಸ್ಥಿರ ಕೆರೆ ನಿರ್ವಹಣಾ ಸಂಸ್ಥೆಗಳನ್ನು 11.6 ಲಕ್ಷ ಸದಸ್ಯರೊಂದಿಗೆ ರೂಪಿಸಿ 4,891 ಎಕರೆ ಪ್ರದೇಶದ ಕೆರೆ ಅಂಗಳದಲ್ಲಿ ಒತ್ತುವರಿಯನ್ನು ತೆರವುಗೊಳಿಸಿದೆ. ಬಡತನ ರೇಖೆಯಿಂದ ಕೆಳಗಿರುವ ದುರ್ಬಲ ವರ್ಗಗಳ 99,453 ಫಲಾನುಭವಿಗಳಿಗೆ 61 ಕೋಟಿ ರೂ. ಸೇರಿದಂತೆ, ಈ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ 496.56 ಕೋಟಿ ರೂ. ವೆಚ್ಚ ಮಾಡಲಾಗಿದೆ.
- ಕಳೆದ 5 ವರ್ಷಗಳಲ್ಲಿ ವಿಶೇಷ ಘಟಕ ಯೋಜನೆಯಡಿ 22,988 ಎಕರೆ ಪ್ರದೇಶದಲ್ಲಿ ಹೊಸ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿಪಡಿಸಿ, ಜೊತೆಗೆ 5,522 ಎಕರೆ ಅಚ್ಚುಕಟ್ಟು ಪ್ರದೇಶವನ್ನು ಸ್ಥಿರೀಕರಿಸಲು ಒಟ್ಟು 8.8 ಕೋಟಿ ರೂ. ಖರ್ಚು ಮಾಡಿದ್ದು, ಒಟ್ಟು 20,747 ಫಲಾನುಭವಿಗಳು ಲಾಭ ಪಡೆದಿರುತ್ತಾರೆ.
- 2012–13ರ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ್‌ಗಳ 702 ಕೆರೆಗಳ ದುರಸ್ತಿ ಮತ್ತು ಪುನಶ್ಚೇತನ ಕಾಮಗಾರಿಗಳು ಪ್ರಗತಿಯಲ್ಲಿವೆ.

- ಕರಾವಳಿ ಜಿಲ್ಲೆಗಳಲ್ಲಿ ಕಿಂಡಿ ಅಣೆಕಟ್ಟು ಮತ್ತು ಬಂದರುಗಳ ನಿರ್ಮಾಣದ ಕಾರ್ಯಕ್ರಮದಡಿ 117.60 ಕೋಟಿ ರೂ. ಅಂದಾಜು ಮೊತ್ತದಲ್ಲಿ 221 ಕಾಮಗಾರಿಗಳು ಅನುಷ್ಠಾನ-ದಲ್ಲಿವೆ.
- ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯಡಿ ಬಾಕಿ ಉಳಿದ ಕಾಮಗಾರಿಗಳು 60 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳ್ಳುತ್ತಿದೆ.

10. ನಮ್ಮ ರಾಜ್ಯವು ಭೀಕರವಾದ ಬರಗಾಲವನ್ನು ಎದುರಿಸಿದರೂ ಸಹ ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಸಾಕಷ್ಟು ಸಾಧನೆಗಳನ್ನು ಮಾಡಿದೆ. ಈ ಹಿನ್ನೆಲೆಯಲ್ಲಿ 2012–13ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ 136.55 ಲಕ್ಷ ಟನ್ ಆಹಾರ ಧಾನ್ಯಗಳ ಗುರಿಗೆ ಪ್ರತಿಯಾಗಿ 125 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನೆಯಾಗುವ ಅಂದಾಜಿಸಲಾಗಿದೆ. ಇದು ಹಿಂದಿನ ವರ್ಷ (2011–12) ಉತ್ಪಾದಿಸಿದ 118.83 ಲಕ್ಷ ಟನ್‌ಗಿಂತ ಹೆಚ್ಚಾಗಿ ದ್ದು, ಈ ಬರಗಾಲ ಪರಿಸ್ಥಿತಿಯಲ್ಲೂ ಕೂಡ ಮಾಡಿದ ಸಾಧನೆ ನಮ್ಮ ರೈತರ ಮತ್ತು ಸರ್ಕಾರದ ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ಈ ಸತತ ಪ್ರಯತ್ನದಿಂದ, ನಮ್ಮ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ 2012–13ನೇ ಸಾಲಿನಲ್ಲಿ ಕೃಷಿ ಕ್ಷೇತ್ರದ ಕೊಡುಗೆ ಶೇ. 15.3 ಆಗಿದ್ದು,(44,042 ಕೋಟಿ ರೂ.) ಕೃಷಿ ಕ್ಷೇತ್ರದ ವೃದ್ಧಿಯ ದರವು 2011–12ರಲ್ಲಿ – ಶೇ.2.2 ರಷ್ಟು ಇದ್ದರೆ, 2012–13 ರಲ್ಲಿ ಶೇ.1.8ಕ್ಕೆ ಏರಿದ್ದು, ಬರಗಾಲದ ಪರಿಸ್ಥಿತಿಯಲ್ಲೂ ಕೂಡ ವರ್ಷದಿಂದ ವರ್ಷಕ್ಕೆ ಪರಿಗಣಿಸಿದಲ್ಲಿ ಒಟ್ಟಾರೆ ಶೇ.4 ರಷ್ಟು ವೃದ್ಧಿಯನ್ನು ತೋರಿಸಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಭವಿಷ್ಯದ ಸವಾಲುಗಳು

11. ನಮ್ಮ ಸರ್ಕಾರ ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ್ದರೂ ಸಹ ನಾವು ಸಾಧಿಸಬೇಕಾಗಿದ್ದು ಇನ್ನೂ ಬಹಳಷ್ಟಿದೆ. ಈ ಹಾದಿಯಲ್ಲಿ ಹಲವಾರು ಸವಾಲುಗಳನ್ನು ಈ ಕೆಳಕಂಡಂತೆ ಗುರುತಿಸಿದ್ದೇನೆ.

- **ಹಿಡುವಳಿಗಳ ಗಾತ್ರ :** ರಾಜ್ಯದಲ್ಲಿ ಕೃಷಿ ಹಿಡುವಳಿಗಾರರ ಸಂಖ್ಯೆ ಕಳೆದ 30 ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿ-ದ್ದರೆ, ಮತ್ತೊಂದು ಕಡೆ, ಹಿಡುವಳಿ ಗಾತ್ರ ಕ್ಷೀಣಿಸುತ್ತಿರುವುದು ಚಿಂತೆಯ ವಿಷಯ. 1970–71ರಲ್ಲಿ ಒಟ್ಟು 35.5 ಲಕ್ಷ ಹಿಡುವಳಿಗಾರರಿದ್ದರೆ, 2005–06ಕ್ಕೆ ಇದು 75.8 ಲಕ್ಷಕ್ಕೆ ಏರಿದೆ. ಇದರಲ್ಲಿ ಅತಿ ಸಣ್ಣ ಮತ್ತು ಸಣ್ಣ ರೈತರ ಪಾಲು ಶೇ.75 ಹಿಡುವಳಿಗಳು. ಆದರೆ, ಅವರ ಕ್ಷೇತ್ರ ವಿಸ್ತೀರ್ಣ ಕೇವಲ ಶೇ.36.5 ಮಾತ್ರ. ಸರಾಸರಿ ಹಿಡುವಳಿ ಗಾತ್ರ ಸತತವಾಗಿ ಕುಗ್ಗುತ್ತಿದ್ದು, ಈ ಹಿಂದಿನ 6.1 ಎಕರೆ ಗಾತ್ರದಿಂದ, ಈಗ (2005–06 ಕೃಷಿ ಸಮೀಕ್ಷೆ) ಕೇವಲ 3.9 ಎಕರೆಗೆ ಇಳಿದಿದೆ.
- **ಬೆಳೆ ಉತ್ಪಾದಕತೆ :** ರಾಜ್ಯದಲ್ಲಿ ಶೇ.70 ಖುಷ್ಕಿ ಪ್ರದೇಶವಿದ್ದು, ಈ ಪ್ರದೇಶಗಳಲ್ಲಿ ಹವಾಮಾನ ವೈಪರೀತ್ಯಗಳಿಂದಾಗಿ ನಿರೀಕ್ಷಿತ ಇಳುವರಿ ಪಡೆಯಲಾಗುತ್ತಿಲ್ಲ. ಇನ್ನೊಂದೆಡೆ, ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆಯಿಂದಾಗಿ ಸಹ ಫಲವತ್ತತೆ ಕಡಿಮೆಯಾಗುತ್ತಿದೆ. ಬೆಳೆ ಉತ್ಪಾದಕತೆಯನ್ನು ಎರಡು ದಿಕ್ಕುಗಳಿಂದ ಗಮನಿಸಬೇಕಾಗಿದೆ. ಒಂದು, ಆಹಾರ ಧಾನ್ಯಗಳು ಮತ್ತು ಹಣ್ಣು ಮತ್ತು ತರಕಾರಿ ಬೆಳೆಗಳು; ಮತ್ತೊಂದು ಖುಷ್ಕಿ ಪ್ರದೇಶ ಮತ್ತು ನೀರಾವರಿ ಪ್ರದೇಶದ ಬೆಳೆಗಳು. ಇದರ ಜೊತೆಗೆ ಹೆಚ್ಚುತ್ತಿರುವ ಸಣ್ಣ ಮತ್ತು ಅತಿಸಣ್ಣ ಹಿಡುವಳಿಗಳಲ್ಲಿ ಉತ್ಪಾದಕತೆ ಸಮಸ್ಯೆ. ಇವೆಲ್ಲವನ್ನೂ ಒಳಗೊಂಡು ರಾಜ್ಯದ ಕೃಷಿ ವಲಯ ಬೆಳವಣಿಗೆಯನ್ನು ಶೇ.4.5 ರಷ್ಟು ಸಾಧಿಸಲು ವಿಶೇಷ ಯೋಜನೆ ರೂಪಿಸ-ಬೇಕಾಗಿದೆ.
- **ಜಲ ಸಂಪನ್ಮೂಲಗಳ ನಿರ್ವಹಣೆ ಮತ್ತು ನೀರಿನ ಉತ್ಪಾದಕತೆ:** ರಾಜ್ಯದಲ್ಲಿ ಕಳೆದ 6 ದಶಕಗಳಲ್ಲಿ ನೀರಾವರಿಗೆ ಸಂಬಂಧ-ಪಟ್ಟಂತೆ ಹೊಸ ಯೋಜನೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ನಿರ್ವಹಣೆಗೆ ಪ್ರಾಮುಖ್ಯತೆ ಕಡಿಮೆಯಾಗಿದೆ. ಜೊತೆಗೆ, ಇತ್ತೀಚಿನ ವರ್ಷಗಳಲ್ಲಿ ಜನ ಜೀವನ, ಕೃಷಿ, ಕೈಗಾರಿಕೆ

ಮತ್ತು ಪರಿಸರ ಕ್ಷೇತ್ರಗಳ ನಡುವೆ ನೀರಿನ ಬೇಡಿಕೆಗಾಗಿ ಸ್ಪರ್ಧೆ ಹೆಚ್ಚಾಗಿದ್ದು, ಘರ್ಷಣೆಯ ಹಂತಕ್ಕೆ ಮುಟ್ಟುತ್ತಿದೆ. ಇದಲ್ಲದೆ ಅಕಾಲಿಕ ಮಳೆಯಿಂದಾಗಿ ಜಲಾಶಯಗಳು / ಕೆರೆಗಳು ಸಾಕಷ್ಟು ಭರ್ತಿಯಾಗದೆ ಮತ್ತು ಬಹಳಷ್ಟು ಕಡೆ ನಾಲೆಗಳ ದುರವಸ್ಥೆಯಿಂದ ಅಗತ್ಯ ಪ್ರಮಾಣದ ನೀರು ಸಮರ್ಪಕವಾಗಿ ಬಿಡಲಾಗದೆ ರೈತರಿಗೆ ಸಾಕಷ್ಟು ಅಡಚಣೆಗಳನ್ನು ಉಂಟುಮಾಡಿದೆ. ಅಂತರ್ಜಲ ಮಟ್ಟ ಸಹ ಸತತವಾಗಿ ಕುಸಿಯುತ್ತಿರುವುದರಿಂದ ಬೆಳೆ ಉತ್ಪಾದನೆಗೆ ನೀರಿನ ಲಭ್ಯತೆ ಕಡಿಮೆಯಾಗುತ್ತಿದೆ. ಆದ್ದರಿಂದ ನೀರಿನ ಬಳಕೆಯ ಉತ್ಪಾದಕತೆ, ನವೀನ ತಾಂತ್ರಿಕತೆಯ ಬಳಕೆ ಮತ್ತು ಜಲ ಸಂಪನ್ಮೂಲಗಳ ನಿರ್ವಹಣೆ ಬಗ್ಗೆ ಹೆಚ್ಚಿನ ಗಮನ ಅಗತ್ಯವಿದೆ.

- **ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಸೂಕ್ತ ಮಾರುಕಟ್ಟೆ :** ಇತ್ತೀಚಿನ ವರ್ಷಗಳಲ್ಲಿ ಉತ್ತಮ ತಳಿ ಮತ್ತು ತಾಂತ್ರಿಕತೆಯಿಂದ ನಮ್ಮ ರಾಜ್ಯವು ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳಲ್ಲಿ ಬಹಳಷ್ಟು ಹೆಚ್ಚಳ ಕಂಡಿದೆ. ಆದರೆ ಈ ಉತ್ಪನ್ನಗಳಿಗೆ ಅಗತ್ಯವಾದ ಶೇಖರಣಾ ಸೌಲಭ್ಯ, ಶೀತಲ ಕೇಂದ್ರಗಳು ಹಾಗೂ ಶ್ರೇಣೀಕರಣ ಸೌಲಭ್ಯಗಳ ಕೊರತೆ ಮತ್ತು ಉತ್ತಮ ಬೆಲೆ ದೊರೆಯದೆ, ನಮ್ಮ ರೈತರು ಸಮಸ್ಯೆಗಳನ್ನು ಎದುರಿಸುವಂ–ತಾಗಿದೆ. ಇದರ ಜೊತೆಗೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ದಿಕ್ಕಿನಲ್ಲಿ ಒಳ್ಳೆಯ ತಾಂತ್ರಿಕತೆ ಮತ್ತು ತಜ್ಞರ ಸೌಲಭ್ಯಗಳಿದ್ದರೂ ನಮ್ಮ ರಾಜ್ಯದಲ್ಲಿ ಇದರ ಅಳವಡಿಕೆ ಮತ್ತು ಅನುಷ್ಠಾನ ಸಾಕಷ್ಟು ಮಟ್ಟದಲ್ಲಿ ಇಲ್ಲದಿರುವುದು ಸಮಸ್ಯೆಯನ್ನು ಜಟಿಲಗೊಳಿಸಿದೆ.

- **ಪರಿಣಾಮಕಾರಿ ವಿಸ್ತರಣಾ ಕಾರ್ಯ ಮತ್ತು ಪರಿಣಿತ ಸಂಸ್ಥೆಗಳೊಡನೆ ಸಹಭಾಗಿತ್ವ:** ಇತ್ತೀಚಿನ ದಶಕಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿಸ್ತರಣಾ ಅಧಿಕಾರಿಗಳ ಹೆಚ್ಚಿನ ಸಮಯ ಮತ್ತು ಅವರ ಸಾಮರ್ಥ್ಯ ಹಲವಾರು ಹೊಸ ಯೋಜನೆಗಳು ಮತ್ತು ಸಭೆಗಳಿಗೆ ಹಾಜರಾಗುವುದಕ್ಕೆ ಮೀಸಲಾಗಿದೆ. ಹಾಗಾಗಿ ಅವರಿಗೆ ಅಗತ್ಯವಾದ ತರಬೇತಿ ಮತ್ತು

ರೈತರೊಂದಿಗೆ ನಿರಂತರ ಸಂಪರ್ಕದ ಕೊರತೆಯಿಂದ ಅವಶ್ಯಕವಾಗಿರುವ ವಿಸ್ತರಣಾ ಕಾರ್ಯಕ್ಕೆ ಭಾರಿ ಪೆಟ್ಟು ಬಿದ್ದಿದೆ. ಇದರಿಂದ ರೈತರಿಗೆ ಅಗತ್ಯವಾದ ನವೀನ ತಾಂತ್ರಿಕತೆಯ ಸೌಲಭ್ಯಗಳು ಮತ್ತು ಸಂಬಂಧಪಟ್ಟ ತರಬೇತಿ ಮತ್ತು ತಿಳುವಳಿಕೆ ಪಡೆಯುವಲ್ಲಿ ಹಿನ್ನಡೆಯಾಗಿದೆ. ಈ ದೃಷ್ಟಿಯಿಂದ ಪರಿಣಾಮ-ಕಾರಿ ವಿಸ್ತರಣಾ ಕಾರ್ಯ ನೀಡುವ ವ್ಯವಸ್ಥೆ ಮತ್ತು ಅವಶ್ಯಕವಿರುವ ಪರಿಣಿತ ಸಂಸ್ಥೆಗಳೊಡನೆ ಸಹಭಾಗಿತ್ವ ಏರ್ಪಡಿಸಬೇಕಾಗಿದೆ.

ಸನ್ಮಾನ್ಯ ಸಭಾಧ್ಯಕ್ಷರೆ,

12. ಈ ಮೇಲೆ ಸೂಚಿಸಿರುವ ಭವಿಷ್ಯತ್ತಿನ ಸವಾಲುಗಳನ್ನು ಎದುರಿಸಲು ಅಗತ್ಯವಿರುವ ಕಾರ್ಯವೈಖರಿಗಳ ಬಗ್ಗೆ ಹಲವಾರು ಪ್ರಯತ್ನಗಳನ್ನು ಮಾಡಿದ್ದೇನೆ. ಈ ದಿಕ್ಕಿನಲ್ಲಿ ತಜ್ಞರ ಸಲಹೆಗಳು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಪರಿಣಿತರ ಸಲಹೆಗಳು, ಕೃಷಿ ಮತ್ತು ಕೃಷಿಯೇತರ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಅಭಿಪ್ರಾಯಗಳು, ವಿವಿಧ ರೈತ ಸಂಘಗಳು ನೀಡಿದ ಸಲಹೆಗಳು, ಹಲವು ಸಂಸ್ಥೆಗಳು ನೀಡಿದ ವರದಿಗಳು ಮತ್ತು ಪ್ರಸ್ತಾವನೆಗಳು, ಇವುಗಳೆಲ್ಲದರ ಜೊತೆಗೆ ವಿವಿಧ ಮಾಧ್ಯಮಗಳಲ್ಲಿ ಬಿತ್ತರಿಸಿದ ವರದಿಗಳನ್ನು ಪರಿಗಣಿಸಲಾಗಿದೆ.

13. ಈ ದಿಕ್ಕಿನಲ್ಲಿ ನಮ್ಮ ಸರ್ಕಾರ ಕೆಲವು ದಿಟ್ಟ ಹೆಜ್ಜೆಗಳನ್ನು ಇಟ್ಟಿದೆ. ಹಂತ ಹಂತವಾಗಿ ಅನುಷ್ಠಾನಗೊಳ್ಳಲು ವಿನ್ಯಾಸಗೊಳಿಸಿ-ರುವ ಈ ಕಾರ್ಯತಂತ್ರಗಳು ಮುಂದಿನ ವರ್ಷಗಳಲ್ಲಿ ನಮ್ಮ ರೈತರಿಗೆ ವರದಾನ ಆಗುವುದರಲ್ಲಿ ಸಂಶಯವಿಲ್ಲ. ನಮ್ಮ ರಾಜ್ಯದ ರೈತರ ಸಮಗ್ರ ಹಿತದೃಷ್ಟಿಯಿಂದ ಈ ಬಗ್ಗೆ ಒಂದು ಉತ್ತಮ ಚರ್ಚೆ ನಡೆಸಿ, ಸೂಕ್ತ ಪರಿಹಾರಗಳನ್ನು ರೂಪಿಸಲು ಈ 2013–14ನೇ ಕೃಷಿ ಆಯವ್ಯಯ ಒಳ್ಳೆಯ ಪ್ರೇರಣೆ ಆಗುವುದೆಂದು ನಾನು ಭಾವಿಸಿದ್ದೇನೆ.

ಹೊಸ ಕಾರ್ಯತಂತ್ರಗಳು

ಕೃಷಿ

14. ರೈತರ ಮೂಲ ಮಾಹಿತಿ ಸೃಜನೆ ಹಾಗೂ ಪಾಸ್‌ಬುಕ್ ವಿತರಣೆ: ರಾಜ್ಯದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಆಧಾರ್ ಮಾಹಿತಿಯನ್ನು "ಭೂಮಿ" ಯೋಜನೆಯೊಂದಿಗೆ ಒಗ್ಗೂಡಿಸಿ, ರೈತರ ಸಮಗ್ರ ಮಾಹಿತಿಗಳನ್ನೊಳಗೊಂಡ (ಭೂಹಿಡುವಳಿ, ವರ್ಗ, ವಿಳಾಸ, ದೊರೆತ ಸವಲತ್ತುಗಳು, ಇತ್ಯಾದಿ) ಮಾಹಿತಿಯನ್ನು ಸೃಷ್ಟಿಸಿದಲ್ಲಿ, ಇನ್ನು ಮುಂದೆ ಕಡಿಮೆ ಪ್ರಾಶಸ್ತ್ಯ ಪಡೆದಿರುವ ವರ್ಗ ಹಾಗೂ ಪ್ರದೇಶಗಳಿಗೆ ಹೆಚ್ಚಿನ ಗಮನ ನೀಡಲು ಹಾಗೂ ಕೃಷಿ ಸಂಬಂಧಿತ ನೀತಿ ರೂಪಿಸುವಲ್ಲಿ ಈ ಮಾಹಿತಿಯು ಪೂರಕವಾಗಿರುತ್ತದೆ. ಈ ಎಲ್ಲಾ ಮಾಹಿತಿಗಳನ್ನು ಒಳಗೊಂಡ ಪಾಸ್‌ಬುಕ್ ಅನ್ನು ರೈತರಿಗೆ ನೀಡಲಾಗುವುದು. ಈ ಯೋಜನೆಯನ್ನು ಸಂಪೂರ್ಣವಾಗಿ ಕಂಪ್ಯೂಟರೀಕರಣ ಮತ್ತು ಅಂತರ್ಜಾಲಕ್ಕೆ ಅಳವಡಿಸಿ, ಪ್ರಾಯೋಗಿಕವಾಗಿ ಆಧಾರ್ (ಯು.ಐ.ಡಿ.) ಯೋಜನೆ ಪೂರ್ಣಗೊಂಡ ಮೈಸೂರು, ತುಮಕೂರು, ಧಾರವಾಡ ಜಿಲ್ಲೆಗಳಲ್ಲಿ ಇ-ಆಡಳಿತ ಇಲಾಖೆಯ ಸಮನ್ವಯದೊಂದಿಗೆ ಅನುಷ್ಠಾನಗೊಳಿಸಲು 15 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು. ಹಂತಹಂತವಾಗಿ ಇದನ್ನು ಇತರೆ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು.

15. **ವಿಸ್ತರಣಾ ಕಾರ್ಯಕ್ರಮಗಳಿಗೆ ಪರಿಷ್ಕೃತ ವಿನ್ಯಾಸ ಮತ್ತು ಅನುಷ್ಠಾನ:** ಕೃಷಿ ಇಲಾಖೆಯಲ್ಲಿ ತಾಂತ್ರಿಕ ಸಿಬ್ಬಂದಿಗಳ ಕೊರತೆಯಿಂದಾಗಿ ವಿಸ್ತರಣಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ರೈತರಿಗೆ ಹೊಸ ತಾಂತ್ರಿಕತೆಗಳ ಸೌಲಭ್ಯ ಮತ್ತು ಅಗತ್ಯವಾದ ತರಬೇತಿ ಮತ್ತು ತಿಳುವಳಿಕೆ ಸಕಾಲದಲ್ಲಿ ಲಭ್ಯವಾಗುತ್ತಿಲ್ಲ. ಇದನ್ನು ನಿವಾರಿಸಲು, ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಏಕಗವಾಕ್ಷಿ ಮೂಲಕ ನಿಖರವಾಗಿ ವೃತ್ತಿಪರ ಮಾದರಿಯಲ್ಲಿ ರೈತನಿಗೆ ಬೇಕಾಗುವ ಕೃಷಿ, ತೋಟಗಾರಿಕೆ, ಹೈನುಗಾರಿಕೆ, ಪಶುಸಂಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಮಾರುಕಟ್ಟೆ ಮುಂತಾದ ಎಲ್ಲ ವಿಭಾಗಗಳ ಮಾಹಿತಿಯನ್ನು ಒದಗಿಸಲು ಯೋಜಿಸಲಾಗಿದೆ.

16. ಈ ಯೋಜನೆಯನ್ನು ಮುಂಗಾರು–2013ರಲ್ಲಿ ಪ್ರಾಯೋಗಿಕವಾಗಿ (ತುಮಕೂರು, ಚಿಕ್ಕಮಗಳೂರು, ಬಿಜಾಪುರ ಹಾಗೂ ರಾಯಚೂರು) 4 ಜಿಲ್ಲೆಗಳಲ್ಲಿ, ನಂತರ ಹಿಂಗಾರು/ಬೇಸಿಗೆ 2013–14ರಲ್ಲಿ 12 ಜಿಲ್ಲೆಗಳು ಮತ್ತು 2014–15ರಲ್ಲಿ ಉಳಿದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗು–ವುದು. ಇದಕ್ಕೆ ಬೇಕಾದ ಪರಿಣಿತ ಸಂಸ್ಥೆಗಳ ಆಯ್ಕೆ ಹಾಗೂ ಯೋಜನೆಯ ಅನುಷ್ಠಾನದ ಮಾರ್ಗಸೂಚಿಗಳನ್ನು ತಜ್ಞರ ಸಹಾಯದಿಂದ ಪ್ರತ್ಯೇಕವಾಗಿ ಸಿದ್ಧಪಡಿಸಲಾಗುವುದು. ಇದನ್ನು ಸಮಂಜಸವಾದ ದರದಲ್ಲಿ ಸಕಾಲದಲ್ಲಿ ಸೂಕ್ತ ತಾಂತ್ರಿಕ ಮಾಹಿತಿಯೊಂದಿಗೆ ರಾಜ್ಯಾದ್ಯಂತ ರೈತರಿಗೆ ಒದಗಿಸಲು ವೆಚ್ಚವಾಗಿ 75 ಕೋಟಿ ರೂ. ನೀಡಲಾಗುವುದು.

17. **ರೈತರ ಜೀವನಮಟ್ಟ ಸುಧಾರಿಸಲು ಹೊಸ ಒಡಂಬಡಿಕೆ:** ಕೃಷಿ ಸಮೃದ್ಧಿ ಜೊತೆಗೆ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವ ಹಿನ್ನೆಲೆಯಲ್ಲಿ ಡಾ॥ ಸ್ವಾಮಿನಾಥನ್‌ರವರ ಶಿಫಾರಸ್ಸಿನಂತೆ ರೈತರ ಆದಾಯ ಆಯೋಗ ರಚಿಸಲಾಗುವುದು. ಬಹುಶಃ ಇದು ಇಡೀ ರಾಷ್ಟ್ರದಲ್ಲಿಯೇ ಪ್ರಥಮ. ಕರ್ನಾಟಕ ರಾಜ್ಯದ ರೈತರನ್ನು ಪದೇ–ಪದೇ ಬರಗಾಲಕ್ಕೆ ತುತ್ತಾಗುವ ಪರಿಸ್ಥಿತಿಯಿಂದ ರಕ್ಷಿಸಲು ಕಾರ್ಯಕ್ರಮ ರೂಪಿಸಲು ರಾಜ್ಯ ಸರ್ಕಾರವು 9 ಅಂತರರಾಷ್ಟ್ರೀಯ ಸಿ.ಜಿ.ಐ.ಆರ್.[1] ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದೆ. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ

---

[1]. CGIAR (Consultative Group of International Agriculture Research)

[1]. 1) International Crop Research Institute for Semi Arid Tropics, 2) International Rice Research Institute, 3) International Water Management Institute, 4) International Livestock Research Institute, 5) International Wheat and Maize Research Institute, 6) International Food Policy Research Institute, 7) International Centre for Agricultural Research in Dry Areas, 8) The World Agroforestry Centre (ICRAF), 9) The World Vegetable Centre (AVRDC).

ನಾಲ್ಕು ಕಂದಾಯ ವಿಭಾಗಗಳಿಂದ ಒಂದೊಂದೊ ಜಿಲ್ಲೆಯನ್ನು ಆಯ್ಕೆ ಮಾಡಿ (ತುಮಕೂರು, ಚಿಕ್ಕಮಗಳೂರು, ಬಿಜಾಪುರ ಮತ್ತು ರಾಯಚೂರು) ಮೂಲ ಸ್ಥಿತಿ ಸಮೀಕ್ಷೆ ಮತ್ತು ಕ್ರಿಯಾಯೋಜನೆಯ ಅನ್ವಯ ಚಟುವಟಿಕೆಗಳ ಕಾರ್ಯ ಪ್ರಗತಿಯಲ್ಲಿದೆ. ಹಂತ ಹಂತವಾಗಿ ಮುಂದಿನ ವರ್ಷಗಳಲ್ಲಿ ಎಲ್ಲಾ ಜಿಲ್ಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸಲು ವೆಚ್ಚವಾಗಿ 50 ಕೋಟಿ ರೂ. ನೀಡಲಾಗುವುದು.

18. ಭೂಚೇತನ ಯೋಜನೆಯ 2ನೇ ಹಂತ: ಮಳೆ ಆಶ್ರಿತ ಬೆಳೆಗಳ ಉತ್ಪಾದಕತೆಯನ್ನು ಕನಿಷ್ಠ ಶೇ.20ರಷ್ಟು ಹೆಚ್ಚಿಸುವುದರೊಂದಿಗೆ ರೈತರ ಆರ್ಥಿಕ ಮಟ್ಟ ಉತ್ತಮಗೊಳಿಸಲು ಕರ್ನಾಟಕ ರಾಜ್ಯದಲ್ಲಿ ಇಕ್ರಿಸ್ಯಾಟ್ ಸಂಸ್ಥೆಯ ಸಹಯೋಗದೊಂದಿಗೆ ಭೂಚೇತನ ಎಂಬ ವಿಶಿಷ್ಟ ಯೋಜನೆಯ–ನ್ನು 2009–10ರಿಂದ ಹಮ್ಮಿಕೊಳ್ಳಲಾಗಿದೆ. 2013–14ರ ಸಾಲಿನಲ್ಲಿ ಒಣಪ್ರದೇಶದ 144 ಲಕ್ಷ ಎಕರೆ ಮತ್ತು ನೀರಾವರಿ ಪ್ರದೇಶದ 24 ಲಕ್ಷ ಎಕರೆ ಸೇರಿದಂತೆ ಒಟ್ಟು 168 ಲಕ್ಷ ಎಕರೆ ಪ್ರದೇಶಕ್ಕೆ ಈ ಯೋಜನೆಯನ್ನು ವಿಸ್ತರಿಸಲು ಒಟ್ಟು 75 ಕೋಟಿ ರೂ. ಒದಗಿಸಲಾಗುವುದು.

19. ಸುವರ್ಣ ಭೂಮಿ ಯೋಜನೆ: ರೈತರ ಬೇಡಿಕೆ ಆಧಾರದ ಮೇಲೆ, ಈ ಸಾಲಿನಲ್ಲಿಯೂ ಸುವರ್ಣ ಭೂಮಿ ಯೋಜನೆಯನ್ನು ಮುಂದುವರೆಸಿ, ಖುಷ್ಕಿ ಬೆಳೆಗಳಾದ ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ ಹಾಗೂ ಇತರೆ ತೃಣ ಧಾನ್ಯಗಳನ್ನು ಬೆಳೆಯುವ ರೈತರಿಗೆ ವಿಸ್ತರಿಸಲಾಗುವುದು. ಈ ಸಾಲಿನಲ್ಲಿ ಸುಮಾರು 3 ಲಕ್ಷ ಫಲಾನುಭವಿಗಳಿಗೆ ಈ ಯೋಜನೆಯಡಿ ಸಹಾಯ ಮಾಡಲು 300 ಕೋಟಿ ರೂ. ಒದಗಿಸಲಾ–ಗುವುದು.

20. ಸವಳು ಮತ್ತು ಜವಳು ಭೂಮಿ ಸುಧಾರಣೆ: ನೀರಾವರಿ ಪ್ರದೇಶಗಳಲ್ಲಿ ಇತ್ತೀಚೆಗೆ ಸವಳು ಮತ್ತು ಜವಳು ಸಮಸ್ಯೆಗಳು ಜಟಿಲವಾ–ಗಿದ್ದು, ಆ ಪ್ರದೇಶಗಳಲ್ಲಿ ಉತ್ಪಾದಕತೆ ತೀವ್ರವಾಗಿ ಕಡಿಮೆಯಾಗಿದೆ. ತುಂಗಭದ್ರಾ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗಳಲ್ಲಿನ 7.2 ಲಕ್ಷ ಎಕರೆ ಸವಳು ಮತ್ತು ಜವಳು ಭೂಮಿಯ ಪೈಕಿ 72 ಸಾವಿರ ಎಕರೆ ಪ್ರದೇಶವನ್ನು ವಿಶೇಷ ಯೋಜನೆಯಡಿ ಪ್ರಾಯೋಗಿಕವಾಗಿ ಆಯ್ಕೆ ಮಾಡಿದ್ದು, ಆ ಪ್ರದೇಶದಲ್ಲಿ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಏರ್ಪಡಿಸಿ, ಮಣ್ಣನ್ನು ಸುಧಾರಿಸುವುದರ ಜೊತೆಗೆ ಸವಳು

ನಿರೋಧಕ ತಳಿಗಳು/ಬೆಳೆಗಳನ್ನು ಬೆಳೆಯಬಹುದಾಗಿದೆ. ಇದಕ್ಕಾಗಿ 2013–14ನೇ ಸಾಲಿನಲ್ಲಿ 30 ಕೋಟಿ ರೂ. ನೀಡಲಾಗುವುದು.

21. ಸಾವಯವ ಗೊಬ್ಬರಗಳ ತಯಾರಿಕೆ, ಉತ್ಪನ್ನಗಳ ಪ್ರಮಾಣೀಕರಣ ಮತ್ತು ವಿತರಣೆ: ಕಳೆದ 4 ವರ್ಷಗಳಿಂದ ರಾಜ್ಯದಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗಿದ್ದು, ನಮ್ಮ ಸರ್ಕಾರವು ಸಾವಯವ ಕೃಷಿ ಆಯೋಗ ರಚಿಸಿ ಅಮೃತಭೂಮಿ ಯೋಜನೆಯನ್ನು ಹಮ್ಮಿಕೊಂಡಿದೆ. ಸಾವಯವ ಗ್ರಾಮ ಕಾರ್ಯಕ್ರಮವನ್ನು ವಿಸ್ತರಿಸಿ, ಪ್ರತಿ ಹೋಬಳಿಯಲ್ಲಿ 240 ಎಕರೆ ಪ್ರದೇಶದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಆಯೋಜಿಸಲಾಗುವುದು. ಸಾವಯವ ಗೊಬ್ಬರಕ್ಕೆ ಹೆಚ್ಚಾಗುತ್ತಿರುವ ಬೇಡಿಕೆಯ ದೃಷ್ಟಿಯಿಂದ ಅದರ ಉತ್ಪಾದನೆ, ಅಪೆಡಾ (APEDA) ಗುರುತಿಸಿದ ಸಂಸ್ಥೆಗಳ ಮೂಲಕ ಪ್ರಮಾಣೀಕರಣ ಮತ್ತು ಆಂತರಿಕ ನಿಯಂತ್ರಣ ಹಾಗೂ ವಿತರಣೆ ಕಾರ್ಯಕ್ರಮವನ್ನು ಈ ಕ್ಷೇತ್ರದಲ್ಲಿ ಪರಿಣಿತವಾಗಿರುವ ಸರ್ಕಾರೇತರ ಸಂಸ್ಥೆಗಳಿಗೆ ವಹಿಸಿಕೊಟ್ಟು, ಪ್ರೋತ್ಸಾಹಿಸಲು ಒಟ್ಟು 100 ಕೋಟಿ ರೂ. ಪ್ರಸ್ತಾಪಿಸಲಾಗಿದೆ.

22. ಸ್ವಬೀಜಾಭಿವೃದ್ಧಿ ಯೋಜನೆ: ಉತ್ತಮ ಬಿತ್ತನೆ ಬೀಜಕ್ಕೆ ರೈತರಿಂದ ಹೆಚ್ಚಿನ ಬೇಡಿಕೆ ಬರುತ್ತಿದ್ದು, ಪ್ರಮಾಣಿತ ಬೀಜವನ್ನು ಪೂರೈಸಲು ಬೀಜೋತ್ಪಾದನೆ ಪ್ರೋತ್ಸಾಹಿಸುವ ಅವಶ್ಯಕತೆ ಇದೆ. ಇದಕ್ಕಾಗಿ ಸ್ವಬೀಜಾಭಿವೃದ್ಧಿ ಯೋಜನೆಯನ್ನು ಕೃಷಿ ಇಲಾಖೆಯ ಬೀಜೋತ್ಪಾದನಾ ಕೇಂದ್ರಗಳು ರಾಜ್ಯದಲ್ಲಿನ ವಿವಿಧ ಬೀಜ ಉತ್ಪಾದನಾ ನಿಗಮ/–ಮಂಡಳಿ/ಖಾಸಗಿ ಕ್ಷೇತ್ರಗಳ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗು–ವುದು. ಈ ಯೋಜನೆಯಡಿ ಆಯ್ದ ಗ್ರಾಮಗಳಲ್ಲಿ, ಹೋಬಳಿ ಮಟ್ಟದಲ್ಲಿ ಬೀಜೋತ್ಪಾದನೆ ಪ್ರೋತ್ಸಾಹಿಸಲು ಮೂಲಭೂತ ಸೌಕರ್ಯಗಳಾದ ಬೀಜ ಪ್ರಮಾಣೀಕರಣದ ಶುಲ್ಕದಲ್ಲಿ ರಿಯಾಯಿತಿ, ಬೀಜ ಶೇಖರಣಾ ಗೋದಾಮುಗಳ ನಿರ್ಮಾಣ, ಒಕ್ಕಣೆ ಕಣ ನಿರ್ಮಾಣ, ಬೀಜ ಸಂಸ್ಕರಣೆಗಾಗಿ ಬೇಕಾದ ಉಪಕರಣಗಳನ್ನು ನೀಡಲಾಗುವುದು. ಇದಕ್ಕಾಗಿ ಈ ಸಾಲಿನಲ್ಲಿ 55 ಕೋಟಿ ರೂ. ನೀಡಲಾಗುವುದು.

23. ರೈತರು ಹಾಗೂ ವಿಸ್ತರಣಾ ಕಾರ್ಯಕರ್ತರಿಗೆ ಮೊಬೈಲ್ ಮೂಲಕ ಮಾಹಿತಿ: ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ 100 ನೊಂದಾಯಿತ

ರೈತರು/ ವಿಸ್ತರಣಾ ಕಾರ್ಯಕರ್ತರ ಚಲನವಾಣಿಗೆ (ಮೊಬೈಲ್) ಪ್ರತಿನಿತ್ಯ ಜಿಲ್ಲೆಗಳ ಹವಾಮಾನ ವರದಿ, ಮಾರುಕಟ್ಟೆ ಮಾಹಿತಿ, ತಾಂತ್ರಿಕ ಹಾಗೂ ವಿಸ್ತರಣಾ ಮಾಹಿತಿಗಳನ್ನೊಳಗೊಂಡ 4 ಸಂದೇಶಗಳನ್ನು ರವಾನಿಸಲು ಯೋಜಿಸಲಾಗಿದ್ದು, ಇದರ ಭಾಗಶ: ವೆಚ್ಚವಾಗಿ 10 ಕೋಟಿ ರೂ. ನೀಡಲಾಗುವುದು.

24. ಎಲ್ಲಾ ಬೆಳೆಗಳಿಗೂ ಹವಾಮಾನ ಆಧಾರಿತ ವಿಮಾ ಯೋಜನೆ : ಹವಾಮಾನ ಮುನ್ಸೂಚನೆ, ಹವಾಮಾನ ಆಧಾರಿತ ಬೆಳೆ ವಿಮೆ ಆಧರಿಸಿ ರೈತರಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ವೈಜ್ಞಾನಿಕ ಕ್ರಮ ಅಗತ್ಯವಿದೆ. ಈ ದಿಕ್ಕಿನಲ್ಲಿ 2013–14ನೇ ಸಾಲಿನಲ್ಲಿ ರಾಜ್ಯದ ಸುಮಾರು 3,700 ಗ್ರಾಮ ಪಂಚಾಯತಿಗಳಲ್ಲಿ ದೂರಸ್ಥ ಮಳೆ ಮಾಪನ ಕೇಂದ್ರಗಳನ್ನು ಹಾಗೂ ಸುಮಾರು 550 ಹೋಬಳಿಗಳಲ್ಲಿ ದೂರಸ್ಥ ಹವಾಮಾನ ಮಾಪನ ಕೇಂದ್ರಗ–ಳನ್ನು ಸ್ಥಾಪಿಸಲು 35 ಕೋಟಿ ರೂ. ಒದಗಿಸಲಾಗುವುದು. ಈ ಯೋಜನೆಯನ್ನು ಪೂರ್ಣ ರಾಜ್ಯಕ್ಕೆ ವಿಸ್ತರಿಸಲು 100 ಕೋಟಿ ರೂ. ಭಾಗಶ: ಪ್ರೀಮಿಯಂಗಾಗಿ ಒದಗಿಸಲಾಗುವುದು. ಈ ಯೋಜನೆಯಲ್ಲಿ ಆಹಾರ ಧಾನ್ಯಗಳು, ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳು ಸೇರಿವೆ. ಇದರಿಂದ ಸುಮಾರು 57 ಲಕ್ಷ ರೈತರು ಪ್ರಯೋಜನ ಪಡೆಯಲಿದ್ದಾರೆ.

25. ಸೌರಶಕ್ತಿ ಪಂಪುಗಳು : ರಾಜ್ಯದಲ್ಲಿ 18 ಲಕ್ಷ ನೀರಾವರಿ ಪಂಪುಸೆಟ್ಟುಗಳಿದ್ದು, ಇದರ ವಿದ್ಯುತ್ ಬಳಕೆ ಹೆಚ್ಚುತ್ತಿದೆ. ವಿದ್ಯುತ್ ಕೊರತೆಯನ್ನು ನೀಗಿಸಲು ಮತ್ತು ಇತ್ತೀಚಿನ ಉತ್ತಮ ತಾಂತ್ರಿಕತೆಯನ್ನು ಬಳಸಲು, ಸಾಧ್ಯವಿರುವ ಕಡೆಯೆಲ್ಲಾ ಸೌರಶಕ್ತಿ ಆಧಾರಿತ ಪಂಪುಸೆಟ್ಟುಗಳನ್ನು ಬಳಸಲು ಕರ್ನಾಟಕ ಸೌರಶಕ್ತಿ ಯೋಜನೆಯನ್ನು ರೂಪಿಸಲಾಗುವುದು. ಇದರಡಿಯಲ್ಲಿ ಪ್ರಾರಂಭಿಕವಾಗಿ 4 ಜಿಲ್ಲೆಗಳಲ್ಲಿ (ಪ್ರತಿ ಕಂದಾಯ ವಿಭಾಗಕ್ಕೆ ಒಂದರಂತೆ) ಇದನ್ನು ಅನುಷ್ಠಾನಗೊಳಿಸಿ ಇದರ ಮೌಲ್ಯಮಾಪನದ ಆಧಾರದ ಮೇಲೆ ಇತರೆ ಜಿಲ್ಲೆಗಳಿಗೆ ವಿಸ್ತರಿಸಲು ಮೊದಲ ಹಂತದಲ್ಲಿ 50 ಕೋಟಿ ರೂ. ನೀಡಲಾಗುವುದು.

26. ಕೃಷಿ ಯಂತ್ರೋಪಕರಣಗಳು : ರೈತರು ತಮಗೆ ಬೇಕಾದ ಕೃಷಿ ಯಂತ್ರೋಪಕರಣಗಳನ್ನು (ಟ್ರಾಕ್ಟರ್, ಟಿಲ್ಲರ್, ಭತ್ತ ಕಟಾವು ಯಂತ್ರ, ಕಬ್ಬು ಕಟಾವು ಯಂತ್ರ ಹಾಗೂ ಇತರೆ) ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ

ಮೂಲಕ ಪಡೆಯಲು ಅಥವಾ ನೇರವಾಗಿ ಖರೀದಿಸಲು ಹಾಗೂ ದರವನ್ನು ನಿಷ್ಕರ್ಷೆ ಮಾಡಲು ಅವಕಾಶ ಕಲ್ಪಿಸಲಾಗುವುದು. ರೈತರಿಗೆ ಕೊಡುವ (ರೂ. 100 ಕೋಟಿ) ಸಹಾಯಧನವನ್ನು ಇನ್ನು ಮುಂದೆ ಕೆಳಕಂಡಂತೆ ಪಾವತಿಸಲಾಗುವುದು: (ಅ) ಸವಲತ್ತಿನ ಪೂರ್ಣ ಮೊತ್ತ ಪಾವತಿಸಿದಲ್ಲಿ, ಸಹಾಯಧನವನ್ನು ರೈತರಿಗೆ ನೇರವಾಗಿ ಪಾವತಿಸಲಾಗುವುದು, (ಆ) ಬ್ಯಾಂಕ್ ಸಾಲ ಪಡೆದುಕೊಂಡರೆ, ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಸಹಾಯಧನ-ವನ್ನು ಜಮೆ ಮಾಡಲಾಗುವುದು, (ಇ) ವಂತಿಗೆಯನ್ನು ಪಾವತಿಸಿದಲ್ಲಿ, ಸಹಾಯಧನವನ್ನು ಸಂಬಂಧಪಟ್ಟ ಸಂಸ್ಥೆಗೆ ನೇರವಾಗಿ ನೀಡಲಾಗುವುದು.

27. **ಯೋಜನೆಗಳ ಸಮ್ಮಿಲನ** : ಪ್ರಸ್ತುತ ಸ್ಥಿತಿಯಲ್ಲಿ ಕೃಷಿ ಇಲಾಖೆಯಲ್ಲಿ ಹೆಚ್ಚಿನ ಯೋಜನೆಗಳಿದ್ದು, ವಿವಿಧ ಯೋಜನೆಗಳಡಿ ಒಂದೇ ರೀತಿಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರಿಂದಾಗಿ ಕ್ಷೇತ್ರ ಮಟ್ಟದಲ್ಲಿ ಅಧಿಕಾರಿಗಳಿಗೆ ಗೊಂದಲಗಳುಂಟಾಗಿ ಅನುಷ್ಠಾನದಲ್ಲಿ ವಿಳಂಬ ಉಂಟಾಗುತ್ತಿದೆ. ಇದನ್ನು ನಿವಾರಿಸಲು ಇಲಾಖೆಯ 26 ರಾಜ್ಯ ವಲಯ ಯೋಜನೆಗಳನ್ನು ಅನುಷ್ಠಾನ ಮಾಡುವಾಗ ವಿಲೀನಗೊಳಿಸಿ 7 ಯೋಜನೆಗಳಾಗಿ ಮಾರ್ಪಡಿಸಲಾಗುವುದು. ಕೇಂದ್ರ ಪುರಸ್ಕೃತ 8 ಯೋಜನೆಗಳನ್ನು ಹಾಗೆಯೇ ಮುಂದುವರೆಸಲಾಗುವುದು. ಈ ಯೋಜನೆಗಳ ಸಮ್ಮಿಲನದಿಂದ: (ಅ) ಕ್ಷೇತ್ರ ಹಾಗೂ ಜಿಲ್ಲಾ ಮಟ್ಟದಲ್ಲಿ ಯೋಜನೆಗಳ ಅನುಷ್ಠಾನ ಸಕಾಲದಲ್ಲಿ ಹಾಗೂ ಸುಗಮವಾಗಿ ಆಗುತ್ತದೆ; (ಆ) ಯೋಜನೆಗಳ ಅನುಷ್ಠಾನದಲ್ಲಿ ವಿವಿಧ ಘಟಕಗಳ ಪುನರಾವರ್ತನೆ ಆಗುವುದನ್ನು ತಪ್ಪಿಸಬಹುದು ಮತ್ತು (ಇ) ರಾಜ್ಯ ಮಟ್ಟದಲ್ಲಿ ಅನುದಾನ ಬಿಡುಗಡೆ ಮತ್ತು ವೆಚ್ಚದ ಉಸ್ತುವಾರಿ ಸಮರ್ಪಕವಾಗಿ ನಿರ್ವಹಿಸಬಹುದು.

28. ಅಥಣಿಯಲ್ಲಿ ಕೃಷಿ ಕಾಲೇಜಿನ ಬಗ್ಗೆ ಶಕ್ಯತಾ ವರದಿಯನ್ನು ತಯಾರಿಸಿ ಕಾಲೇಜನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

29. ಆಹಾರ ಉತ್ಪಾದನೆ ಹೆಚ್ಚಳ : ಈ ಮೇಲಿನ ಎಲ್ಲಾ ನೂತನ ಕಾರ್ಯತಂತ್ರಗಳ ಮೂಲಕ 2013–14ನೇ ಸಾಲಿಗೆ 130 ಲಕ್ಷ ಟನ್ ಆಹಾರ ಧಾನ್ಯಗಳ ಗುರಿಯನ್ನು ನಿಗದಿಪಡಿಸಲಾಗಿದೆ.

30. 2013–14ನೇ ಸಾಲಿಗೆ ಕೃಷಿ ಇಲಾಖೆಯ ಕಾರ್ಯಕ್ರಮಗಳಿಗಾಗಿ ಒಟ್ಟು 3,091 ಕೋಟಿ ರೂ. ಗಳನ್ನು ಒದಗಿಸಲಾಗಿದೆ.

ಸಕ್ಕರೆ

31. ಕಬ್ಬು ಬೆಳೆಗೆ ಹನಿ ನೀರಾವರಿ : ಕಬ್ಬು ಬೆಳೆಯ ಉತ್ಪಾದನೆ ಹೆಚ್ಚಿಸಲು ಮತ್ತು ನೀರಾವರಿಯನ್ನು ಅಭಿವೃದ್ಧಿ ಪಡಿಸಲು ಸರ್ಕಾರವು ಕಬ್ಬು ಬೆಳೆಗಾರರಿಗೆ ಹನಿ ನೀರಾವರಿಗಾಗಿ ನೆರವು ನೀಡುವುದು. ಈ ರೈತರಿಗೆ ಕಿರು ನೀರಾವರಿ ಮತ್ತು ಹನಿ ನೀರಾವರಿ ಯೋಜನೆಯಡಿ 25 ಕೋಟಿ ರೂ. ಸಹಾಯ ನೀಡಲಾಗುವುದು.

32. ಸಕ್ಕರೆ ತಾಂತ್ರಿಕ ಕಾಲೇಜು : ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಬ್ಬು ಬೆಳೆಯುವ ಪ್ರದೇಶ ಹೆಚ್ಚಾಗಿದ್ದು, ಜೊತೆಗೆ ಸಕ್ಕರೆ ಕಾರ್ಖಾನೆಗಳು ಕೂಡ ಹೆಚ್ಚಾಗಿದೆ. ಕಬ್ಬಿನ ಬೆಳೆ ಮತ್ತು ಸಕ್ಕರೆ ತಾಂತ್ರಿಕತೆಯಲ್ಲಿ ಪರಿಣಿತಿ ಇರುವ ಅಭ್ಯರ್ಥಿಗಳನ್ನು ಪೂರೈಸಲು ಮುಧೋಳದಲ್ಲಿ ಸಕ್ಕರೆ ತಾಂತ್ರಿಕ ಕಾಲೇಜನ್ನು ಸರ್ಕಾರಿ ಅಥವಾ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಶಕ್ಯತಾ ವರದಿಯನ್ನು ತಯಾರಿಸಿ ಅದರ ಆಧಾರದ ಮೇಲೆ ಕೈಗೊಳ್ಳಲಾಗುವುದು.

ತೋಟಗಾರಿಕೆ

33. ಪೌಷ್ಠಿಕಾಂಶ ಕೊರತೆ ನೀಗಿಸಲು ಶಾಲೆಗಳಲ್ಲಿ ತೋಟಗಳ ಅಭಿವೃದ್ಧಿ : ಪೌಷ್ಠಿಕಾಂಶ ಕೊರತೆಯಿಂದ ಬಳಲುತ್ತಿರುವ ಉತ್ತರ ಕರ್ನಾಟಕದ ಮಕ್ಕಳಲ್ಲಿ (ವಿಶೇಷವಾಗಿ ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬೀದರ್, ಬಳ್ಳಾರಿ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ) ವಿಟಮಿನ್-ಎ ಮತ್ತು ಬಿ ಕೊರತೆಯನ್ನು ನೀಗಿಸಲು ಹಣ್ಣುಗಳು ಮತ್ತು ತರಕಾರಿಗಳನ್ನು ಕೈತೋಟ, ಶಾಲಾ ತೋಟಗಳು, ಸಮುದಾಯ ಉದ್ಯಾನಗಳು ಮುಂತಾದ ಸ್ಥಳಗಳಲ್ಲಿ ಬೆಳೆಸಿ ಮಕ್ಕಳಿಗೆ ಪೂರೈಸಲು 2013-14ನೇ ಸಾಲಿಗೆ 2.5 ಕೋಟಿ ರೂ. ವೆಚ್ಚದಲ್ಲಿ ಸುಮಾರು 50 ಲಕ್ಷ ಮಕ್ಕಳು ಪ್ರಯೋಜನ ಪಡೆಯಲಿದ್ದಾರೆ.

34. ಸುಧಾರಿತ ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆ : ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಬೃಹತ್ ಸಗಟು ಮಾರುಕಟ್ಟೆಗಳು ಹಾಗೂ ಸಂಗ್ರಹಣಾ ಕೇಂದ್ರಗಳ ಸ್ಥಾಪನೆ, ಅವುಗಳನ್ನು ಸುಸಜ್ಜಿತಗೊಳಿಸುವುದು, ಮತ್ತು

ಹಾಪ್‌ಕಾಮ್ಸ್‌ಗಳ ಜಿಲ್ಲಾ ಮಾರಾಟ ಮಳಿಗೆಗಳನ್ನು ಉನ್ನತೀಕರಿಸಲು 50 ಕೋಟಿ ರೂ. ಒದಗಿಸಲಾಗುವುದು.

35. **ಸಮಗ್ರ ಜೇನುಗಾರಿಕೆ ಅಭಿವೃದ್ಧಿ :** ಮಧುವನಗಳನ್ನು ಆಧುನೀಕರಣಗೊಳಿಸಿ ಅಭಿವೃದ್ಧಿಗೊಳಿಸಿ ಸಮುದಾಯಗಳ ಮೂಲಕ ಅಧಿಕ ಜೇನು ಉತ್ಪಾದನೆ ಮತ್ತು ಆ ಮೂಲಕ ಹೆಚ್ಚಿನ ಉದ್ಯೋಗ ಸೃಷ್ಟಿಗೆ ತರಬೇತಿ ಕೇಂದ್ರಗಳ ಪುನರ್ ಚೇತನ ಹಾಗೂ ಕೌಶಲ್ಯ ಆಧಾರಿತ ತರಬೇತಿ ಕಾರ್ಯಕ್ರಗಳನ್ನು ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮಡಿಕೇರಿ ಜಿಲ್ಲೆ ಹಾಗೂ ಇತರೆ ಸ್ಥಳಗಳಲ್ಲಿ ಹಮ್ಮಿಕೊಳ್ಳಲು 10 ಕೋಟಿ ರೂ. ನೀಡಲಾಗುವುದು.

36. **ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಸ್ಥಾಪನೆ :** ಕರ್ನಾಟಕ ರಾಜ್ಯವು ಅನೇಕ ಸಾಂಬಾರು ಬೆಳೆಗಳ ತವರಾಗಿದ್ದು, ಮೆಣಸಿನಕಾಯಿ, ಕರಿಮೆಣಸು,ಏಲಕ್ಕಿ, ಅರಿಶಿಣ, ಶುಂಠಿ, ಕೊತ್ತಂಬರಿ ಮುಂತಾದ ಸಾಂಬಾರು ಪದಾರ್ಥಗಳನ್ನು ಸುಮಾರು 7.2 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆಸಲಾಗುತ್ತಿದೆ. ಈ ಸಾಂಬಾರು ಬೆಳೆಗಳ ಅಭಿವೃದ್ಧಿ, ಸಂಸ್ಕರಣೆ ಮತ್ತು ಮಾರುಕಟ್ಟೆಯ ಅಭಿವೃದ್ಧಿಗಾಗಿ ಕರ್ನಾಟಕ ರಾಜ್ಯ ಸಾಂಬಾರು ಅಭಿವೃದ್ಧಿ ಮಂಡಳಿ ಸ್ಥಾಪಿಸಲಾಗುವುದು. ಇದಕ್ಕಾಗಿ, 2013–14ನೇ ಸಾಲಿನಲ್ಲಿ 10 ಕೋಟಿ ರೂ. ಮಂಡಳಿಯ ಮೂಲಧನವಾಗಿ ಮತ್ತು 5 ಕೋಟಿ ರೂ. ಅಭಿವೃದ್ಧಿ ನಿಧಿಗಾಗಿ ನೀಡಲಾಗುವುದು.

37. **ಭಾರತ ಮತ್ತು ಡಚ್ ಸರ್ಕಾರಗಳ ಸಹಭಾಗಿತ್ವದಲ್ಲಿ ಪರಿಣಿತಿ ಕೇಂದ್ರ ಸ್ಥಾಪನೆ :** ಈ ಕೇಂದ್ರದಲ್ಲಿ ಭಾರತ ಮತ್ತು ಡಚ್ ದೇಶಗಳ ಅತಿ ಉತ್ತಮ ತರಕಾರಿ ಮತ್ತು ಹೂ ಬೆಳೆಗಳ ಉತ್ಪಾದಕತೆ, ನಿರ್ವಹಣೆ, ಹಸಿರು ಮನೆ ತಂತ್ರಜ್ಞಾನ, ಕಾರ್ಮಿಕರ ನಿರ್ವಹಣೆ ಮತ್ತು ಸರಬರಾಜು ಸರಪಳಿ ನಿರ್ವಹಣೆ ಬಗ್ಗೆ ನಿಪುಣತೆ ಹೊಂದಿರುವ ತಜ್ಞರ ಮೂಲಕ ರೈತರಿಗಾಗಿ ಈ ಬೆಳೆಗಳ ಪ್ರಾತ್ಯಕ್ಷತೆಯನ್ನು ಮಾಡಲಾಗುವುದು.

38. **ತೆಂಗು ಉತ್ಪನ್ನಗಳ ಉದ್ಯಾನ ಸ್ಥಾಪನೆ :** ನಮ್ಮ ರಾಜ್ಯದಲ್ಲಿ ತೆಂಗಿನ ಬೆಳೆಯು 11.7 ಲಕ್ಷ ಎಕರೆ ವಿಸ್ತೀರ್ಣದಲ್ಲಿದೆ. ತೆಂಗಿನ ಬೆಳೆಯ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವ ರೈತ ಸಮುದಾಯಕ್ಕೆ ಉತ್ತಮ ಮಾರುಕಟ್ಟೆ ಅವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಪ್ರಾರಂಭಿಕವಾಗಿ ತುಮಕೂರು ಜಿಲ್ಲೆಯ ಕುಣಿಗಲ್ ಮತ್ತು ತಿಪಟೂರು ಹಾಗೂ ಮಂಡ್ಯ ಜಿಲ್ಲೆಯ ಮದ್ದೂರು ಕಡಬಳ್ಳಿ ಮತ್ತು ಕಿಬ್ಬನಹಳ್ಳಿಗಳಲ್ಲಿ ಒಟ್ಟು 25 ಕೋಟಿ

ರೂ. ವಿನಿಯೋಗಿಸಿ, 5 ತೆಂಗು ಉತ್ಪನ್ನಗಳ ಉದ್ಯಾನಗಳನ್ನು ನಿರ್ಮಿಸಲಾಗುವುದು.

39. ರಸಾವರಿಗಾಗಿ ವಿಶೇಷ ಕಾರ್ಯಕ್ರಮ : ತೋಟಗಾರಿಕೆ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ನೀರಿನ ಮಿತ ಬಳಕೆಯ ಜೊತೆಗೆ ಅಗತ್ಯವಿರುವ ರಸಗೊಬ್ಬರಗಳನ್ನು ಸೂಕ್ಷ್ಮ ನೀರಾವರಿ ವ್ಯವಸ್ಥೆ ಮೂಲಕ ಒದಗಿಸಲು ರಸಾವರಿಗಾಗಿ 100 ಕೋಟಿ ರೂ. ವಿಶೇಷ ಯೋಜನೆ ರೂಪಿಸಿ, ಪ್ರಾರಂಭಿಕವಾಗಿ ಈ ಸಾಲಿನಲ್ಲಿ 10 ಕೋಟಿ ರೂ. ನೀಡಲಾಗುವುದು.

40. ಮಾದರಿ ಉದ್ಯಾನವನಗಳು : ರಾಜ್ಯದ 7 ಮಹಾನಗರ ಪಾಲಿಕೆಗಳಲ್ಲಿ ಮಾದರಿ ಉದ್ಯಾನವನಗಳನ್ನು ತಲಾ 2ಕೋಟಿ ರೂ. ಅನುದಾನದಲ್ಲಿ ನಿರ್ಮಿಸಲಾಗುವುದು. ಜೊತೆಗೆ, ತುಮಕೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಲಾಲ್‌ಬಾಗ್ ಮಾದರಿಯ ಗಾಜಿನ ಮನೆಗಳನ್ನು ನಿರ್ಮಿಸಲಾಗುವುದು.

41. ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ದಡಿಯಲ್ಲಿ ತೋಟಗಾರಿಕೆ ಇಂಜಿನಿಯರಿಂಗ್ ಹಾಗೂ ಆಹಾರ ತಂತ್ರಜ್ಞಾನ ಕಾಲೇಜು ಸ್ಥಾಪನೆಗೆ 5 ಕೋಟಿ ರೂ. ಒದಗಿಸಲಾಗುವುದು.

42. 2013–14ನೇ ಸಾಲಿಗೆ ತೋಟಗಾರಿಕೆ ಇಲಾಖೆಯ ಕಾರ್ಯ–ಕ್ರಮಗಳಿಗಾಗಿ ಒಟ್ಟು 1,310 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಪಶುಸಂಗೋಪನೆ

43. ಪಾಲಿ ಕ್ಲಿನಿಕ್‌ಗಳ ಬಲವರ್ಧನೆ ಹಾಗೂ ಬೆಂಗಳೂರಿನ ದಂಡು ಪ್ರದೇಶದ ಪಶು ಆಸ್ಪತ್ರೆಯ ಆಧುನೀಕರಣ : ರಾಜ್ಯದಲ್ಲಿ 10 ಕೋಟಿ ರೂ.ಗಳ ವೆಚ್ಚದಲ್ಲಿ 30 ಪಾಲಿ ಕ್ಲಿನಿಕ್‌ಗಳನ್ನು ಸ್ಥಾಪನೆ ಮಾಡಲು ಉದ್ದೇಶಿಸಿದೆ. ಬೆಂಗಳೂರಿನ ದಂಡು ಪ್ರದೇಶದಲ್ಲಿರುವ ಪಶು ಆಸ್ಪತ್ರೆಯನ್ನು ಆಧುನೀಕರಣ–ಗೊಳಿಸಲಾಗುವುದು.

44. ಹಿಂದುಳಿದ ಪ್ರದೇಶಗಳಲ್ಲಿ ಹೈನುಗಾರಿಕೆಯನ್ನು ಅಭಿವೃದ್ಧಿಪಡಿ–ಸುವ ಸಲುವಾಗಿ ಪಶು ಆಹಾರ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಹಾಲು ಉತ್ಪಾದನೆಗೆ ಸಹಾಯವಾಗುವಂತೆ ಈ ಘಟಕಗಳಿಂದ ಲವಣಾಂಶವುಳ್ಳ ಪಶು ಆಹಾರ ಉತ್ಪಾದಿಸಲಾಗುವುದು. ಜೊತೆಗೆ, ಹೈನುಗಾರಿಕೆಯನ್ನು ಪ್ರೋತ್ಸಾಹಿಸಲು

ಗ್ರಾಮೀಣ ಮಹಿಳೆಯರಿಗೆ ಸಹಾಯಧನವಾಗಿ 10 ಕೋಟಿ ರೂ. ವೆಚ್ಚದಲ್ಲಿ ಅಮೃತ ಯೋಜನೆ ರಚಿಸಲಾಗುವುದು.

45. **ಸರ್ವಾಂಗೀಣ ತಳಿ ಅಭಿವೃದ್ಧಿ** : ರಾಜ್ಯದಲ್ಲಿ ಜಾನುವಾರು, ಎಮ್ಮೆ, ಕುರಿ ಮತ್ತು ಮೇಕೆಗಳ ತಳಿ ಅಭಿವೃದ್ಧಿ ಕಾರ್ಯಕ್ರಮದಡಿ ದ್ರವ ಸಾರಜನಕ ವಿತರಣೆ, ದ್ರವ ಸಾರಜನಕ ಜಾಡಿಗಳು, ಕೃತಕ ಗರ್ಭಧಾರಣೆ ಅಗತ್ಯಗಳ ಖರೀದಿಯೊಂದಿಗೆ ಕೃತಕ ಗರ್ಭಧಾರಣೆ ಕಾರ್ಯಕ್ರಮವನ್ನು ಬಲವರ್ಧನೆ–ಗೊಳಿಸಲು 10 ಕೋಟಿ ರೂ. ಅನುದಾನ ನೀಡಲಾಗುವುದು.

46. ಬೆಳಗಾವಿ ಹಾಗೂ ಗುಲ್ಬರ್ಗದಲ್ಲಿ ಶೀಥಲೀಕರಣ ಘಟಕ, ಉತ್ತರ ಕನ್ನಡದ ಶಿರಸಿಯಲ್ಲಿ ಮತ್ತು ಚಿಕ್ಕಮಗಳೂರಿನಲ್ಲಿ ಡೈರಿ ಘಟಕಗಳು ಮತ್ತು ಬಿಜಾಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಪಶು ಆಹಾರ ಘಟಕ ಸ್ಥಾಪನೆಗೆ ಒಟ್ಟು 20 ಕೋಟಿ ರೂ. ಹಾಗೂ ಹೈನುಗಾರಿಕಾ ಚಟುವಟಿಕೆಗಳನ್ನು ಉತ್ತೇಜಿಸುವ ಸಲುವಾಗಿ ಮೂಲ ಸೌಕರ್ಯಗಳನ್ನು ಒದಗಿಸಲು 25 ಕೋಟಿ ರೂ. ಒದಗಿಸಲಾಗುವುದು. ಜಾನುವಾರುಗಳಲ್ಲಿ ಕಂಡುಬರುವ ವಿವಿಧ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು ಬೇಕಾಗುವ ಲಸಿಕೆಗಳ ಉತ್ಪಾದನೆಗೆ 5 ಕೋಟಿ ರೂ. ಮೀಸಲಿಡಲಾಗುವುದು.

47. ರಾಜ್ಯದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸುವ ಅಗತ್ಯವಿದ್ದು ಈಗಾಗಲೇ ಜಾರಿಯಲ್ಲಿರುವ ಪ್ರೋತ್ಸಾಹಧನವನ್ನು (ಪ್ರತಿ ಲೀಟರ್‌ಗೆ 2 ರೂ. ನಂತೆ) ಮುಂದುವರಿಸಲಾಗುವುದು. ಇದಕ್ಕಾಗಿ ಈ ಸಾಲಿನಲ್ಲಿ 325 ಕೋಟಿ ರೂ. ಒದಗಿಸಲಾಗುವುದು.

48. ಈಗಾಗಲೇ ರಚನೆಯಾಗಿರುವ ಗೋಸೇವಾ ಆಯೋಗದ ನೂತನ ಕಾರ್ಯಕ್ರಮಗಳ ರಚನೆ ಮತ್ತು ರಾಜ್ಯಾದ್ಯಂತ ಅವುಗಳ ಅನುಷ್ಠಾನಕ್ಕೆ ಈ ಸಾಲಿನಲ್ಲಿ 2 ಕೋಟಿ ರೂ. ನೀಡಲಾಗುವುದು.

49. 2013–14ನೇ ಸಾಲಿಗೆ ಪಶುಸಂಗೋಪನೆ ಇಲಾಖೆಯ ಕಾರ್ಯಕ್ರಮಗಳಿಗಾಗಿ ಒಟ್ಟು 1,118 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಮೀನುಗಾರಿಕೆ

50. ಯಾಂತ್ರೀಕೃತ ಮೀನುಗಾರಿಕೆಗೆ ಕರ ರಹಿತ ಡೀಸಲ್ ಪ್ರಮಾಣ ಹೆಚ್ಚಳ : ಯಾಂತ್ರೀಕೃತ ಕರಾವಳಿ ಮೀನುಗಾರಿಕೆಯಲ್ಲಿ ಡೀಸಲ್ ವೆಚ್ಚ ಪ್ರಮುಖ ಭಾಗವಾಗಿದ್ದು, ಕರಮುಕ್ತ ಡೀಸಲ್ ಸೌಲಭ್ಯವನ್ನು ರಾಜ್ಯದ 3,500 ವಿವಿಧ ಯಾಂತ್ರಿಕ ದೋಣಿಗಳು ಪಡೆಯುತ್ತಿವೆ. ಆದ್ದರಿಂದ, ಕರ ರಹಿತ ಡೀಸೆಲ್ ಪ್ರಮಾಣವನ್ನು ಈ2013–14ನೇ ವರ್ಷದಲ್ಲಿ 1,30,000 ಕಿಲೋ ಲೀಟರ್‌ಗೆ ಹೆಚ್ಚಿಸಲಾಗುವುದು.

51. ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ : ರಾಜ್ಯದಲ್ಲಿನ ಒಟ್ಟು 82 ಜಲಾಶಯಗಳ ಒಟ್ಟು ಜಲ ವಿಸ್ತೀರ್ಣ 6.52 ಲಕ್ಷ ಎಕರೆ ಜಲಾಶಯಗಳಲ್ಲಿ ಶೀಘ್ರವಾಗಿ ಬೆಳೆಯುವ ಕಾಟ್ಲಾ, ರೋಹು, ಮೃಗಾಲ ತಳಿಗಳನ್ನು ಅಭಿವೃದ್ಧಿ-ಗೊಳಿಸಿ ಮೀನುಗಾರರ ಆದಾಯವನ್ನು ಹೆಚ್ಚಿಸಲು 2 ಕೋಟಿ ರೂ. ವೆಚ್ಚ ಮಾಡಲಾಗುವುದು.

52. ನೂತನ ಮೀನುಗಾರಿಕೆ ಬಂದರುಗಳ ನಿರ್ಮಾಣ : ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಗಾಬಿತವಾಡ್ ಖೇಣಿ ಮತ್ತು ಕಾರವಾರ ತಾಲ್ಲೂಕಿನ ಮಾಜಾಳಿಗಳಲ್ಲಿ ಹೊಸದಾಗಿ ಎರಡು ಬಂದರುಗಳ ನಿರ್ಮಾಣಕ್ಕೆ ವಿಸ್ತೃತ ವರದಿಗಳನ್ನು ತಯಾರಿಸಲಾಗುವುದು.

53. ಕರಾವಳಿ ಪ್ರದೇಶಗಳಲ್ಲಿ ಒಳಸಮುದ್ರದಲ್ಲಿ ಮೀನು ಹಿಡಿಯಲು ಉಪಯೋಗಿಸುವ ಟ್ರಾಲರ್‌ಗಳಿಗೆ ನೀಡುತ್ತಿರುವ ಸೌಲಭ್ಯವನ್ನು 340 ಅಶ್ವಶಕ್ತಿ ಯಂತ್ರಗಳವರೆಗೆ ವಿಸ್ತರಿಸಲಾಗುವುದು.

54. ಬಲೆ ದುರಸ್ತಿ (ನೆಟ್ ಮೆಂಡಿಂಗ್) ಶೆಡ್‌ಗಳ ನಿರ್ಮಾಣ : ರಾಜ್ಯದ ಕರಾವಳಿ ತೀರದಲ್ಲಿ ಕಡಲ ಮೀನುಗಾರಿಕೆಗೆ ಉಪಯೋಗಿಸುವ ಬಲೆಗಳನ್ನು ದುರಸ್ತಿ ಮಾಡಲು (ನೆಟ್ ಮೆಂಡಿಂಗ್) ಶೆಡ್‌ಗಳನ್ನು ನಿರ್ಮಿಸಲು ಈ ಸಾಲಿನಲ್ಲಿ 2 ಕೋಟಿ ರೂ. ಒದಗಿಸಲಾಗುವುದು.

55. ಸಮುದಾಯ ಭವನಗಳ ನಿರ್ಮಾಣ : ಕರಾವಳಿ ಪ್ರದೇಶದಲ್ಲಿ ಮೀನುಗಾರರ ಸಾಮಾಜಿಕ ಜೀವನ ಉತ್ತಮಗಳಿಸಲು ಎಂಟು ಕಡೆ ಸಮುದಾಯ ಭವನಗಳನ್ನು ನಿರ್ಮಿಸಲು ತಲಾ ರೂ. 25 ಲಕ್ಷದಂತೆ ಈ ಸಾಲಿನಲ್ಲಿ 2 ಕೋಟಿ ರೂ. ನೀಡಲಾಗಿದೆ.

56. ಜಲಾಶಯಗಳಲ್ಲಿ ಮೀನು ಇಳಿದಾಣ ಕೇಂದ್ರಗಳ ನಿರ್ಮಾಣ : ಈ ಸಾಲಿನಲ್ಲಿ ಕೃಷ್ಣರಾಜಸಾಗರ, ಲಿಂಗನಮಕ್ಕಿ ಮತ್ತು ಆಲಮಟ್ಟಿ ಜಲಾಶಯಗಳ–ಲ್ಲಿ ಮೀನು ಇಳಿದಾಣ ಕೇಂದ್ರಗಳನ್ನು ನಿರ್ಮಿಸಲು 2 ಕೋಟಿ ರೂ. ಅನುದಾನ ಒದಗಿಸಲಾಗುವುದು.

57. ಮೀನುಗಾರಿಕೆ ಬಂದರುಗಳ ವಿಸ್ತರಣೆ ಮತ್ತು ತಡೆಗೋಡೆಗಳ ನಿರ್ಮಾಣ : ಮೀನುಗಾರಿಕೆ ಚಟುವಟಿಕೆ ನಡೆಸುವ ಟ್ರಾಲರ್ ಮತ್ತು ಪರ್ಸೀನ್ ಬೋಟುಗಳ ಸಂಖ್ಯೆಯ ಹೆಚ್ಚಳದಿಂದ ಈಗ ಇರುವ ಧಕ್ಕೆಯಲ್ಲಿ ಸಾಂಪ್ರದಾಯಿಕವಾಗಿ ಮೀನುಗಾರಿಕೆ ನಡೆಸುವ ಸಣ್ಣ ಗಾತ್ರದ ದೋಣಿಗಳಿಗೆ ಸ್ಥಳಾವಕಾಶ ಸಿಗುವುದು ಕಷ್ಟವಾಗಿದೆ. ಆದ್ದರಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆರ್ಥಿಕ ನೆರವಿನಿಂದ ತಲಾ 5 ಕೋಟಿ ಖರ್ಚಿನಲ್ಲಿ ಭಟ್ಕಳ ಮತ್ತು ಕಾರವಾರ ಮೀನುಗಾರಿಕೆ ಬಂದರುಗಳನ್ನು ವಿಸ್ತರಿಸಲಾಗುವುದು. ಮೀನುಗಾರಿಕೆ ದೋಣಿಗಳ ಸುಗಮ ಚಾಲನೆಗಾಗಿ, ಪುಣೆಯಲ್ಲಿನ ಕೇಂದ್ರ ಸರ್ಕಾರದ ಕೇಂದ್ರೀಯ ಜಲ ಮತ್ತು ವಿದ್ಯುತ್ ಸಂಶೋಧನಾ ಕೇಂದ್ರದ ವರಿದಿಯ ಆಧಾರದ ಮೇಲೆ 231 ಕೋಟಿ ರೂ. ವೆಚ್ಚದಲ್ಲಿ 7 ಸ್ಥಳಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಲಾಗುವುದು. (ಗಂಗೊಳ್ಳಿ ಅಳಿವೆ, ಭಟ್ಕಳ ಮಾವಿನಕುರ್ವೆ, ಅಳ್ವೆಕೋಡಿ–ತೆಂಗಿನ, ಗುಂಡಿ ಅಳಿವೆ, ಅಂಕೋಲ ತಾಲ್ಲೂಕಿನ ಬೆಳಂಬರ, ಬೇಲಿಕೇರಿ, ಗಂಗಾವಳಿ ಮತ್ತು ಮಂಜುಗುಣಿ ಅಳಿವೆ ಮತ್ತು ಕುಮಟಾ ತಾಲ್ಲೂಕಿನ ವನ್ನಳ್ಳಿ).

58. 2013–14ನೇ ಸಾಲಿಗೆ ಮೀನುಗಾರಿಕೆ ಇಲಾಖೆಯ ಕಾರ್ಯಕ್ರಮಗಳಿಗಾಗಿ ಒಟ್ಟು 238 ಕೋಟಿ ರೂಗಳನ್ನು ಒದಗಿಸಲಾಗಿದೆ.

ರೇಷ್ಮೆ

59. ರೇಷ್ಮ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ತುಂಬಲು, ಗೂಡಿಗೆ ಪ್ರೋತ್ಸಾಹಧನ, ರೀಲರುಗಳಿಗೆ ವಿದ್ಯುತ್ ಸಹಾಯಧನ ನೀಡಿಕೆಗೆ ಹೆಚ್ಚುವರಿಯಾಗಿ 11 ಕೋಟಿ ರೂ. ನೀಡಲಾಗಿದೆ.

60. ಬೆಂಗಳೂರಿನ ಓಕಳೀಪುರಂನಲ್ಲಿರುವ ಇಲಾಖೆಯ ಸ್ವಂತ ಜಮೀನಿನಲ್ಲಿ ರೇಷ್ಮೆ ಸಂಕೀರ್ಣ ನಿರ್ಮಿಸಲು 10 ಕೋಟಿ ರೂ. ಒದಗಿಸ–ಲಾಗಿದೆ.

ಕೃಷಿಗೆ ಉಚಿತ ವಿದ್ಯುತ್

61. 10 ಅಶ್ವಶಕ್ತಿವರೆಗಿನ ನೀರಾವರಿ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸುವ ಕಾರ್ಯಕ್ರಮವನ್ನು ಈ ವರ್ಷವೂ ಮುಂದುವರಿಸಿ, ಇದಕ್ಕಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ 5,250 ಕೋಟಿ ರೂ. ಸಹಾಯಧನವನ್ನು ಒದಗಿಸಲಾಗುವುದು.

62. ಈಗಾಗಲೇ ಅಸ್ತಿತ್ವದಲ್ಲಿದ್ದು ಕಾರ್ಯನಿರ್ವಹಿಸುತ್ತಿರುವ ರೈತರ ಏತ ನೀರಾವರಿ ಸಹಕಾರ ಸಂಘಗಳಲ್ಲಿನ 50 ಅಶ್ವಶಕ್ತಿವರೆಗಿನ ಪಂಪ್‌ಸೆಟ್‌-ಗಳಲ್ಲಿ ಬಳಕೆಯಾಗುವ ವಿದ್ಯುತ್ ವೆಚ್ಚವನ್ನು ಮರುಪಾವತಿಸಲಾಗುವುದು.

ಸಹಕಾರ

63. ಸಾಲ ಮನ್ನಾ ಯೋಜನೆಯಿಂದ ನಮ್ಮ ರಾಜ್ಯದಲ್ಲಿ 15.24 ಲಕ್ಷ ರೈತರಿಗೆ ಪ್ರಯೋಜನವಾಗುವುದರಿಂದ, ಇದಕ್ಕೆ ಅವಶ್ಯಕವಿರುವ 1,521 ಕೋಟಿ ರೂ. ಈ ಸಾಲಿನಲ್ಲಿ ನೀಡಲಾಗುವುದು.

64. 1 ಲಕ್ಷ ರೂ.ವರೆಗಿನ ಶೂನ್ಯ ಬಡ್ಡಿ ದರದ ಸಹಕಾರಿ ಸಂಸ್ಥೆಗಳ ಬೆಳೆಸಾಲ ಮತ್ತು ಶೇಕಡ 3ರ ಬಡ್ಡಿ ದರದ ವಾಣಿಜ್ಯ ಬ್ಯಾಂಕ್‌ಗಳ ಅಲ್ಪಾವಧಿ ಬೆಳೆ ಸಾಲದ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರಿ-ಸಲಾಗುವುದು. ಬೆಳೆ ಸಾಲಕ್ಕಾಗಿ ಕೊಡುವ ಬಡ್ಡಿ ಸಹಾಯಧನಕ್ಕಾಗಿ ಈ ಸಾಲಿನಲ್ಲಿ 300 ಕೋಟಿ ರೂ. ಬಿಡುಗಡೆ ಮಾಡಲಾಗುವುದು. ಇದರಿಂದ 8.72 ಲಕ್ಷ ರೈತರಿಗೆ ಲಾಭವಾಗಲಿದೆ.

65. ನಮ್ಮ ರಾಜ್ಯದಲ್ಲಿ 20,780 ಸ್ವ-ಸಹಾಯ ಗುಂಪುಗಳಿದ್ದು, ಇದರಿಂದ 292 ಕೋಟಿ ರೂ. ಸಾಲವನ್ನು ಒದಗಿಸಲಾಗಿದೆ. ಇವರುಗಳ ಸಾಲದ ಬಡ್ಡಿ ಸಹಾಯ ಧನವಾಗಿ ಈ ವರ್ಷದಲ್ಲಿ 30 ಕೋಟಿ ರೂ. ಪ್ರಸ್ತಾಪಿಸಲಾಗಿದೆ.

66. ಯಶಸ್ವಿನಿ ಯೋಜನೆಯಡಿ ರಾಜ್ಯದ 29.46 ಲಕ್ಷ ಜನ ಸೌಲಭ್ಯ ಪಡೆಯುತ್ತಿದ್ದು, ಅದಕ್ಕಾಗಿ ಈ ಸಾಲಿನಲ್ಲಿ 45 ಕೋಟಿ ರೂ. ನೀಡಲಾಗುವುದು.

67. ಸಂವಿಧಾನದ 97 ನೇ ತಿದ್ದುಪಡಿಗೆ ಅನುಗುಣವಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮಗಳಿಗೆ ತಿದ್ದುಪಡಿ ಮಾಡಿದ್ದು, ಅದರ ಅನ್ವಯ ಸಹಕಾರ ಚುನಾವಣಾ ಆಯೋಗ ಸ್ಥಾಪಿಸಬೇಕಾಗಿದೆ. ಇದಕ್ಕಾಗಿ 10 ಕೋಟಿ ರೂ. ನೀಡಲಾಗುವುದು.

68. ಸಹಕಾರಿ ಸಂಘಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಮತ್ತು ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗಗಳ ಜನರನ್ನು ಸದಸ್ಯರನ್ನಾಗಿ ನೋಂದಾಯಿಸಲು ಅನುವಾಗುವಂತೆ ಸಂಬಂಧಪಟ್ಟ ಸಹಕಾರ ಸಂಘಗಳಿಗೆ ಸಹಾಯಧನ ಒದಗಿಸಲು 1 ಕೋಟಿ ರೂ. ಮೀಸಲಿಡಲಾಗಿದೆ. ಆರ್ಥಿಕವಾಗಿ ದುರ್ಬಲರಾಗಿರುವ ಗ್ರಾಹಕರ, ಮಾರುಕಟ್ಟೆ, ಸಂಸ್ಕರಣ, ಸಾವಯವ ಮತ್ತು ಇತರೆ ಸಹಕಾರ ಸಂಘಗಳಿಗೆ ಬಂಡವಾಳ ಸಹಾಯವಾಗಿ 2 ಕೋಟಿ ರೂ. ಪ್ರಸ್ತಾಪಿಸಲಾಗಿದೆ.

ಕೃಷಿ ಮಾರುಕಟ್ಟೆ

69. **ಸಾಮಾನ್ಯ ಸೇವಾ ಕೇಂದ್ರಗಳು:** ರಾಜ್ಯದ ಬಹಳಷ್ಟು ಮಾರುಕಟ್ಟೆಗಳಲ್ಲಿ ಸಾಮಾನ್ಯ ಸೇವೆಗಳು ಅಗತ್ಯ ಮಟ್ಟದಲ್ಲಿ ಇಲ್ಲದಿರುವುದ-ರಿಂದ ರೈತರು ಮತ್ತು ವ್ಯಾಪಾರಸ್ಥರು ಹಲವು ಅಡಚಣೆಗಳನ್ನು ಎದುರಿಸಬೇಕಾಗಿದೆ. ಈ ದಿಕ್ಕಿನಲ್ಲಿ ಪ್ರಾರಂಭಿಕವಾಗಿ ರಾಜ್ಯದ ಹಲವೆಡೆ ಸಾಮಾನ್ಯ ಸೇವಾ ಕೇಂದ್ರಗಳನ್ನು ಆರಂಭಿಸಿ ಶುಚೀಕರಣ, ವರ್ಗೀಕರಣ, ಉಗ್ರಾಣದ ವ್ಯವಸ್ಥೆ ಆಧಾರಿತ ಇ-ಮಾರಾಟ ಸೌಲಭ್ಯಗಳನ್ನು ಒದಗಿಸಲಾ-ಗುವುದು.

70. ಹುಬ್ಬಳ್ಳಿಯಲ್ಲಿ 25,000 ಟನ್ ಸಾಮರ್ಥ್ಯದ ಉಗ್ರಾಣ ಮತ್ತು ಇರ್ರೇಡಿಯೇಷನ್ ಕೇಂದ್ರವನ್ನು ಸ್ಥಾಪಿಸಲಾಗುವುದು. ಇದರಿಂದಾಗಿ ಈರುಳ್ಳಿ, ಆಲೂಗೆಡ್ಡೆ, ಮಾವು, ಮೆಣಸಿನಕಾಯಿ, ಎಣ್ಣೆಕಾಳುಗಳು ಮತ್ತು ಆಹಾರ ಧಾನ್ಯಗಳ ಮೌಲ್ಯವರ್ಧನೆಗೆ ಅನುಕೂಲವಾಗುವುದು.

71. ಉತ್ತರ ಕರ್ನಾಟಕದಲ್ಲಿ, ಪ್ರಮುಖವಾಗಿ ಬಿಜಾಪುರ ಜಿಲ್ಲೆಯಲ್ಲಿ ಉತ್ಪಾದನೆಯಾಗುತ್ತಿರುವ ಒಣದ್ರಾಕ್ಷಿಗೆ ರಾಜ್ಯದಲ್ಲಿಯೇ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಬಿಜಾಪುರದಲ್ಲಿ ಆಧುನಿಕ ಇ-ಮಾರಾಟ ವ್ಯವಸ್ಥೆ ಕೇಂದ್ರ ಹಾಗೂ

10,000 ಟನ್ ಶೇಖರಣೆ ಮಾಡಲು ಅಗತ್ಯವಾದ ಒಣ ಮತ್ತು ಶೀತಲೀಕರಣ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

72. ರೈತರ ಉತ್ಪನ್ನಗಳಿಗೆ ಅಗತ್ಯವಾದ ಉಗ್ರಾಣಗಳು ಮತ್ತು ಉಗ್ರಾಣ–ಆಧಾರಿತ ಸಾಲ ದೊರಕಿಸಲು ರಾಜ್ಯದ 19 ಸ್ಥಳಗಳಲ್ಲಿ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ಒದಗಿಸಲಾಗುವುದು. (ಹುಬ್ಬಳ್ಳಿ, ಬಿಜಾಪುರ, ರಾಯಚೂರು, ಬೀದರ್, ಗದಗ, ಬಾಗಲಕೋಟೆ, ಸಂಕೇಶ್ವರ, ರಾಣೆಬೆನ್ನೂರು, ಹರಿಹರ, ದಾವಣಗೆರೆ, ಚಳ್ಳಕೆರೆ, ಚಿತ್ರದುರ್ಗ, ಭರಮಸಾಗರ, ಗುಂಡ್ಲುಪೇಟೆ, ಸೊರಬ, ಚಾಮರಾಜನಗರ, ಸಂತೇಮಾರನ–ಹಳ್ಳಿ, ಮೈಸೂರು ಮತ್ತು ಕೊಳ್ಳೇಗಾಲ).

73. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಅವಶ್ಯವಾದ ವರ್ಗೀಕರಣ ಮತ್ತು ಶ್ರೇಣೀಕರಣ ಒದಗಿಸಲು ಅಗತ್ಯವಾದ ಪ್ರಯೋಗ ಕೇಂದ್ರಗಳು ಮತ್ತು ಸಂಬಂಧಿತ ಸೌಲಭ್ಯಗಳನ್ನು ರಾಷ್ಟ್ರೀಯ ಪೂರಕ ನಿರ್ವಹಣಾ ಸೇವಾ ಸಂಸ್ಥೆ (ನ್ಯಾಷನಲ್ ಕೊಲ್ಯಾಟರಲ್ ಮ್ಯಾನೇಜ್‌ಮೆಂಟ್ ಸರ್ವೀಸಸ್) ಮತ್ತು ಇತರೆ ಪರಿಣಿತ ಸಂಸ್ಥೆಗಳ ಮೂಲಕ ಬೆಳಗಾವಿ, ಹುಬ್ಬಳ್ಳಿ, ರಾಯಚೂರು, ಬೆಂಗಳೂರು, ಮೈಸೂರು ಮತ್ತು ಚಾಮರಾಜನಗರಗಳಲ್ಲಿ ಒದಗಿಸಲಾಗುವುದು.

74. ಬೆಂಬಲ ಬೆಲೆ ಕ್ರಮಗಳಿಗಾಗಿ ಆವರ್ತ ನಿಧಿಯಲ್ಲಿ 1,000 ಕೋಟಿ ರೂ. ಗಳವರೆಗಿನ ಸೌಕರ್ಯ ಕಲ್ಪಿಸಲಾಗುವುದು. ಪ್ರಥಮವಾಗಿ ಇಷ್ಟುದೊಡ್ಡ ಅನುದಾನವನ್ನು ಆದರೆ 1,000 ಕೋಟಿಯನ್ನು ಆವರ್ತ–ನಿಧಿಗಾಗಿ ನಾವು ಕೊಡುತ್ತಿದ್ದೇವೆ.

75. **ಇ–ಮಾರಾಟದ ವ್ಯವಸ್ಥೆಯ ವಿಸ್ತರಣೆ ಮತ್ತು ಮಾರುಕಟ್ಟೆಗಳ ನಡುವೆ ಸಮನ್ವಯ:** ರಾಜ್ಯದ ಮಾರುಕಟ್ಟೆ ವ್ಯವಸ್ಥೆಗಳಲ್ಲಿ ಅವಶ್ಯಕವಾಗಿರುವ ಸರಳೀಕರಣ, ಪಾರದರ್ಶಕತೆ, ಇ–ಮಾರಾಟ, ಮತ್ತು ಈ ಎಲ್ಲಾ ಸಂಬಂಧಪಟ್ಟ ದಾಖಲೆಗಳನ್ನು ಅಂತರ್ಜಾಲದ ಮೂಲಕ ಸ್ಥಳದಲ್ಲೇ ಒದಗಿಸಲು ಎನ್.ಸಿ.ಡಿ.ಇ.ಎಕ್ಸ್. ಸ್ಪಾಟ್ ಎಕ್ಸ್‌ಚೇಂಜ್ ಜೊತೆ ಒಡಂಬಡಿಕೆ ಮಾಡಿಕೊಂಡು 2013–14ರ ಸಾಲಿನಲ್ಲಿ ರಾಜ್ಯದ ಹಲವೆಡೆ ಅನುಷ್ಠಾನಕ್ಕೆ ತರಲಾಗುವುದು.

76. ಅರಿಶಿಣ ಮತ್ತು ಒಣದ್ರಾಕ್ಷಿ ಮಾರುಕಟ್ಟೆ ಅಭಿವೃದ್ಧಿ: ಸಧ್ಯದ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ರೈತರು ಅರಿಶಿಣ ಮತ್ತು ಒಣದ್ರಾಕ್ಷಿ ಮಾರುಕಟ್ಟೆಗಾಗಿ ಮಹಾರಾಷ್ಟ್ರದ ಸಾಂಗ್ಲಿ ಮಾರುಕಟ್ಟೆ ಮೇಲೆ ಹೆಚ್ಚು ಆಧಾರಿತವಾಗಿದ್ದಾರೆ. ಆದ್ದರಿಂದ ರಾಜ್ಯದ ಅಥಣಿ ತಾಲ್ಲೂಕಿನ ಕಾಗವಾಡ ಮಾರುಕಟ್ಟೆಯನ್ನು ಪರಿಣಿತ ಸಂಸ್ಥೆಗಳ ಮೂಲಕ ಅಭಿವೃದ್ಧಿಪಡಿಸಲಾ-ಗುವುದು.

77. ತೋಟಗಾರಿಕೆ ಬೆಳೆಗಳಿಗೆ ಉತ್ತಮ ಬೆಲೆ ದೊರಕಿಸಲು ಮಾರುಕಟ್ಟೆಗಳ ಅಭಿವೃದ್ಧಿಗೆ ಪ್ರಾರಂಭಿಕ ಕ್ರಮಗಳು:

- ತೋಟಗಾರಿಕೆ ಬೆಳೆಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಉತ್ಪನ್ನಗಳಿಗೆ ಉತ್ತಮ ಬೆಲೆ, ವರ್ಗೀಕರಣ, ಶ್ರೇಣೀಕರಣ, ಶೀತಲ ಕೇಂದ್ರಗಳು, ಇ-ಮಾರಾಟ ವ್ಯವಸ್ಥೆಯನ್ನು ಪರಿಣಿತ ಸಂಸ್ಥೆಗಳ ಮೂಲಕ ಒದಗಿಸಲು ಚಿಂತಾಮಣಿಯಲ್ಲಿ ಆಧುನಿಕ ಮಾರುಕಟ್ಟೆಯನ್ನು ಸ್ಥಾಪಿಸಲಾಗುವುದು.
- ಬೆಂಗಳೂರಿನ ಹೊರವಲಯದಲ್ಲಿರುವ ಸಿಂಗೇನ ಅಗ್ರಹಾರದ 48 ಎಕರೆ ಪ್ರದೇಶದಲ್ಲಿ ಹಣ್ಣು ಮತ್ತು ತರಕಾರಿ ಉತ್ಪನ್ನಗಳಿಗೆ ಆಧುನಿಕ ಮಾರುಕಟ್ಟೆಯನ್ನು ಪರಿಣಿತ ಸಂಸ್ಥೆಗಳ ಮೂಲಕ ನಿರ್ಮಿಸಲಾಗುವುದು.
- ಹುಬ್ಬಳ್ಳಿ – ಧಾರವಾಡ ಹಾಗೂ ಬೆಳಗಾವಿಯಲ್ಲೂ ಸಹ ಇದೇ ರೀತಿ ಹಣ್ಣು ಮತ್ತು ತರಕಾರಿ ಉತ್ಪನ್ನಗಳಿಗೆ ಮೀಸಲಾಗಿ ಬೃಹತ್ ಗಾತ್ರದ ಆಧುನಿಕ ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸಲಾಗುವುದು.
- ತುಮಕೂರು ಮಾರುಕಟ್ಟೆಯಲ್ಲಿ ಹಣ್ಣು ಮತ್ತು ತರಕಾರಿಗಳನ್ನು ಶೇಖರಿಸಿಡಲು ಅಗತ್ಯವಾದ ಶೀತಲ ಕೇಂದ್ರಗಳನ್ನು ಪರಿಣಿತ ಸಂಸ್ಥೆಗಳ ಮೂಲಕ ನಿರ್ಮಿಸಲಾಗುವುದು.
- ರೈತರಿಗೆ ಸಹಾಯ ಮಾಡಲು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಕೃಷಿ ಮತ್ತು ತೋಟಗಾರಿಕೆ

ಉತ್ಪನ್ನಗಳಿಗೆ ನೇರ ಮಾರುಕಟ್ಟೆ ಒದಗಿಸಲು ಒಂದು ಸಲದ ಅನುದಾನವಾಗಿ ರೂ.3 ಕೋಟಿಗಳನ್ನು ನೀಡಲಾಗುವುದು.

78. ಮಾರುಕಟ್ಟೆಗಳಲ್ಲಿ ತ್ಯಾಜ್ಯ ನಿರ್ವಹಣೆ : ಇತ್ತೀಚಿಗೆ ಆಹಾರ ಧಾನ್ಯ, ಹಣ್ಣು ಮತ್ತು ತರಕಾರಿ ಮಾರುಕಟ್ಟೆಗಳಲ್ಲಿ ತ್ಯಾಜ್ಯ ನಿರ್ವಹಣೆ ದೊಡ್ಡ ಸಮಸ್ಯೆಯಾಗಿದ್ದು, ಈ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ಸಂಗ್ರಹಿಸಿ, ಸೂಕ್ತವಾಗಿ ಸಂಸ್ಕರಿಸಿ ನಿರ್ವಹಿಸಲು ಪರಿಣಿತ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗುವುದು. ಮೊದಲನೇ ಹಂತದಲ್ಲಿ ಈ ವ್ಯವಸ್ಥೆಯನ್ನು ಬೆಂಗಳೂರು, ಬೆಳಗಾವಿ, ಬೀದರ್, ಗುಲ್ಬರ್ಗಾ, ತುಮಕೂರು, ಕೋಲಾರ, ಶ್ರೀನಿವಾಸಪುರ ಮೈಸೂರು, ಸಿಂಗೇನ ಅಗ್ರಹಾರ ಮತ್ತು ಬೆಂಗಳೂರಿನ ದಾಸನಾಪುರ ಮಾರುಕಟ್ಟೆಗಳಲ್ಲಿ ಪ್ರಾರಂಭಿಸಲಾಗುವುದು ಮತ್ತು ಎರಡನೇ ಹಂತದಲ್ಲಿ ರಾಜ್ಯದ ಇತರೆ ಮಾರುಕಟ್ಟೆಗಳಿಗೆ ವಿಸ್ತರಿಸಲಾಗುವುದು.

79. ಸಾಮರ್ಥ್ಯ ಅಭಿವೃದ್ಧಿ : ಈ ಮೇಲಿನ ಎಲ್ಲಾ ಯೋಜನೆಗಳನ್ನು ವಿನ್ಯಾಸಗೊಳಿಸಿ ಕ್ರಮಬದ್ಧವಾಗಿ ಅನುಷ್ಠಾನ ಮಾಡಲು ಅಗತ್ಯವಾದ ಸಾಮರ್ಥ್ಯವನ್ನು ಸಂಬಂಧಪಟ್ಟ ಇಲಾಖೆಗಳ ಸಿಬ್ಬಂದಿಗಳಿಗೆ ಒದಗಿಸಲು ಸೂಕ್ತವಾದ ತರಬೇತಿಯನ್ನು ಆಯೋಜಿಸಲಾಗುವುದು. ಅದೇ ರೀತಿ ರಾಜ್ಯದ ಹಲವೆಡೆ ರೈತರಿಗೆ, ವ್ಯಾಪಾರಸ್ಥರಿಗೆ ಈ ಯೋಜನೆಗಳಲ್ಲಿ ಅನುಷ್ಠಾನವಾ-ಗಲಿರುವ ವಿವಿಧ ತಾಂತ್ರಿಕತೆಗಳು, ಮತ್ತು ನಡೆಸುವ ಪ್ರಕ್ರಿಯೆಗಳ ಬಗ್ಗೆ ಅಗತ್ಯವಾದ ತಿಳುವಳಿಕೆಯನ್ನು ನೀಡಲಾಗುವುದು.

80. 2013–14ನೇ ಸಾಲಿಗೆ ಸಹಕಾರ ಇಲಾಖೆಯ ಕಾಯಕ್ರಮಗಳಿ-ಗಾಗಿ ಒಟ್ಟು 1,428 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಜಲಸಂಪನ್ಮೂಲ

81. ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತ : ಕೃಷ್ಣಾ ಮೇಲ್ದಂಡೆ ಯೊಜನೆಯ ಮೂರನೇ ಹಂತವನ್ನು 17,200 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, 3ನೇ ಹಂತದ 9 ಯೋಜನೆಗಳ ಪೈಕಿ ಮುಳವಾಡ ಏತನೀರಾವರಿ, ಚಿಮ್ಮಲಗಿ ಏತನೀರಾವರಿ, ಗುತ್ತಿಬಸವಣ್ಣ ಏತನೀರಾವರಿ, ಮಲ್ಲಾಬಾದ್ ಏತನೀರಾವರಿ, ಕೊಪ್ಪಳ ಏತನೀರಾವರಿ ಮತ್ತು

ರಾಮಪುರ ಏತನೀರಾವರಿ ಯೋಜನೆಗಳು ಈಗಾಗಲೇ ಪ್ರಾರಂಭವಾಗಿದೆ. ಪ್ರಸಕ್ತ ಸಾಲಿನಲ್ಲಿ ನಾರಾಯಣಪುರ ಬಲದಂಡೆ ಕಾಲುವೆಯ ಉಳಿದ ವಿಸ್ತರಣೆಯ ಕಾಮಗಾರಿ, ಹರ್ಕಲ್ ಏತನೀರಾವರಿಯ ಮತ್ತು ಭೀಮಾ ಪಾರ್ಶ್ವ ಏತನೀರಾವರಿ, ಹಗರಿಬೊಮ್ಮನಹಳ್ಳಿಯ ನಂದಿಪುರ ಮತ್ತು ಮರಬಿಹಾಳು ಏತನೀರಾವರಿ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭಿಸ-ಲಾಗುವುದು.

82. ಮುಳುಗಡೆ ಪ್ರದೇಶದಲ್ಲಿ ಬರುವ ಕುಟುಂಬಗಳ ಹಿತಾಸಕ್ತಿಯನ್ನು ಕಾಪಾಡಿ ಅವರ ಜೀವನ ಮಟ್ಟವನ್ನು ಉತ್ತಮ ಪಡಿಸುವ ಅಂಶಗಳನ್ನೊಳಗೊಂಡ ಹೊಸ ಪುನರ್ವಸತಿ ಹಾಗೂ ಪುನರ್‌ವ್ಯವಸ್ಥೆ ನೀತಿಯನ್ನು ರೂಪಿಸಲಾಗುವುದು. 2013–14ರ ಅಂತ್ಯದವರೆಗೆ ಮೂರನೇ ಹಂತದಲ್ಲಿ 1 ಲಕ್ಷ ಎಕರೆ ಪ್ರದೇಶದಲ್ಲಿ ನೀರಾವರಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲಾಗುವುದು.

83. ಕುಡಿಯುವ ನೀರಿಗಾಗಿ ಎತ್ತಿನ ಹೊಳೆ ಯೋಜನೆ: ಮೊದಲ ಹಂತದಲ್ಲಿ, ಲಿಫ್ಟ್ ಕಾಮಗಾರಿಗಳನ್ನು ಹರವನಹಳ್ಳಿ ವಿತರಣಾ ತೊಟ್ಟಿಯ-ವರೆಗೆ 2,670 ಕೋಟಿ ರೂ. ಖರ್ಚಿನಲ್ಲಿ ಮುಂದಿನ ಕೆಲವು ತಿಂಗಳಲ್ಲಿ ಆರಂಭಿಸಲಾಗುವುದು. ಪ್ರಾರಂಭಿಕವಾಗಿ 2013–14ರ ಸಾಲಿನಲ್ಲಿ 850 ಕೋಟಿ ರೂ. ನೀಡಲಾಗುವುದು. ಇದಲ್ಲದೆ, ಶೀಘ್ರವೇ ಎತ್ತಿನಹೊಳೆ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು ಪೂರ್ಣಗೊಳಿಸಲಾಗುವುದು.

84. ಕೋಲಾರ, ಚಿಕ್ಕಬಳ್ಳಾಪುರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳಲ್ಲಿರುವ ಎಲ್ಲಾ ಪಟ್ಟಣಗಳು ಮತ್ತು ಅಗತ್ಯವಿರುವ ಗ್ರಾಮಗಳಿಗೆ ಎತ್ತಿನ ಹೊಳೆ ಯೋಜನೆಯ ನೀರನ್ನು ಒದಗಿಸಲು ಅವಶ್ಯಕವಾಗಿರುವ ಕೊಳವೆ ಸಂಪರ್ಕ ಜಾಲವನ್ನು ಅಳಪಡಿಸ-ಬೇಕಾಗಿದೆ. ಇದಕ್ಕೆ ಬೇಕಾಗಿರುವ ವಿಸ್ತೃತ ವರದಿಯನ್ನು ತಯಾರಿಸಲು ಈಗಾಗಲೇ ಕ್ರಮ ಕೈಗೊಂಡಿದ್ದು, ಅದನ್ನು ಕೆಲವೇ ತಿಂಗಳಲ್ಲಿ ಪೂರ್ಣಗೊಳಿಸಿ ಇದರ ಅನುಷ್ಠಾನಕ್ಕೆ ಪ್ರಾರಂಭಿಕವಾಗಿ 200 ಕೋಟಿ ರೂ. ನೀಡಲಾಗುವುದು.

85. ಸಮಗ್ರ ಜಲಸಂಪನ್ಮೂಲ ಅಭಿವೃದ್ಧಿ ಪ್ರಾವೀಣ್ಯತಾ ಕೇಂದ್ರಕ್ಕೆ 10 ಕೋಟಿ ರೂ. ಸೇರಿದಂತೆ ಕಾರಂಜಾ, ವಾಣಿ ವಿಲಾಸ ಸಾಗರ, ಜಂಬದಹಳ್ಳ, ಹಿರೇಹಳ್ಳ, ಕಡುವಿನ ಬೈಲು, ಕೆಂಚನಗುಡ್ಡ, ಕಾಗವಾಡ ಭಾಗದ ಕೆಂಪವಾಡ ಏತನೀರಾವರಿ, ವೈ.ಕಗ್ಗಲ್, ತಿಮ್ಮಾಪುರ, ಸಾಸ್ವೆಹಳ್ಳಿ ಹತ್ತಿರದ ತುಂಗಭದ್ರಾ ನದಿಯಿಂದ ಚನ್ನಗಿರಿ ತಾಲ್ಲೂಕಿನ ಸೂಳೆಕೆರೆ (ಶಾಂತಿಸಾಗರ) ಮತ್ತು ಸಂತೆಬೆನ್ನೂರು ಕಸಬಾ ಹೋಬಳಿಯ ಕೆರೆಗಳಿಗೆ ಮತ್ತು ಹರಪನಹಳ್ಳಿಯ 60 ಕೆರೆಗಳಿಗೆ ನೀರು ತುಂಬಿಸುವ ಏತನೀರಾವರಿ ಮತ್ತು ಚಿಕ್ಕೋಡಿಯಲ್ಲಿ ಬಸವೇಶ್ವರಿ ಏತನೀರಾವರಿ ಯೋಜನೆಗಳಿಗೆ ಒಟ್ಟು 650 ಕೋಟಿ ರೂ. ಪ್ರಸ್ತಾಪಿಸಲಾಗಿದೆ.

86. ವಿರಜಾ, ರಾಜಪರಮೇಶ್ವರಿ, ಹಲಸೂರು, ಸಿ.ಡಿ.ಎಸ್., ರಾಮಸ್ವಾಮಿ, ಹುಲ್ಲಹಳ್ಳಿ, ಡಿ.ಜೆ. ಅಣೆಕಟ್ಟು ಕಿತ್ತೂರು ಮತ್ತು ಕಟ್ಟೇಮಲವಾಡಿ ಪ್ರದೇಶಗಳ ಒಟ್ಟಾರೆ ಸುಮಾರು 620 ಕಿ.ಮೀ. ಉದ್ದದ ಅಣೆಕಟ್ಟು ಕಾಲುವೆಗಳನ್ನು ಆಧುನೀಕರಿಸಲು ಪ್ರಸ್ತುತ ಸಾಲಿನಲ್ಲಿ 341 ಕೋಟಿ ರೂ. ನೀಡಲಾಗುವುದು.

87. ತುಂತುರು ನೀರಾವರಿ : ತುರುವೇಕೆರೆ ತಾಲ್ಲೂಕಿನಲ್ಲಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ನೀರಿನಿಂದ 7,200 ಎಕರೆ ಅಚ್ಚುಕಟ್ಟಿಗೆ ತುಂತುರು ನೀರಾವರಿಯನ್ನು ಅಳವಡಿಸಲು 50 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

88. ಜಲಸಂಪನ್ಮೂಲಗಳ ಸಮಗ್ರ ನಿರ್ವಹಣೆಗೆ ಆದ್ಯತೆ : ನಮ್ಮ ದೇಶದಲ್ಲಿ ಪ್ರಪ್ರಥಮ ಬಾರಿಗೆ ಕರ್ನಾಟಕ ರಾಜ್ಯವು ಜಲಸಂಪನ್ಮೂಲಗಳ ಸಮಗ್ರ ನಿರ್ವಹಣೆಗೆ ಆದ್ಯತೆ ನೀಡಲು ಕಳೆದ 2 ವರ್ಷಗಳ ಪರಿಶ್ರಮದಿಂದ ಮಹತ್ತರ ಯೋಜನೆಯನ್ನು ಸಿದ್ಧಪಡಿಸಿದೆ. ಇದರಲ್ಲಿ, ವಿವಿಧ ಜಲಸಂಪ-ನ್ಮೂಲಗಳ ಸಮಗ್ರ ನಿರ್ವಹಣೆ, ಅದರ ಬಳಕೆಯಲ್ಲಿ ನೈಪುಣ್ಯತೆ, ಅಗತ್ಯವಿರುವ ರೀತಿ ನೀತಿಗಳ ರಚನೆ ಬಗ್ಗೆ ಹಾಗೂ ಅವಶ್ಯಕವಿರುವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಡನೆ ಒಡಂಬಡಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಇದಕ್ಕಾಗಿ ನಮ್ಮ ರಾಜ್ಯದ ನೆರವಿನೊಂದಿಗೆ ಈ ಯೋಜನೆ-ಯನ್ನು ಅನುಷ್ಠಾನಗೊಳಿಸಲು ಏಷ್ಯಾ ಅಭಿವೃದ್ಧಿ ಬ್ಯಾಂಕ್ ಸಹಾಯ ನೀಡುತ್ತಿದೆ. ಇದಕ್ಕಾಗಿ ತಜ್ಞರನ್ನು ಒಳಗೊಂಡ ಒಂದು ವಿಶೇಷ ನೈಪುಣ್ಯತಾ

ಕೇಂದ್ರವನ್ನು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಆವರಣದಲ್ಲಿ ಸ್ಥಾಪನೆ ಮಾಡಲಾಗುವುದು. ಪ್ರಾರಂಭಿಕವಾಗಿ, ತುಗಭದ್ರಾ ನದಿ ಪ್ರಾಕಾರದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಎಲ್ಲಾ ಪೂರ್ವಭಾವಿ ವರದಿಗಳನ್ನು ತಯಾರಿಸಲಾಗಿದೆ. ಹಂತ ಹಂತವಾಗಿ ರಾಜ್ಯಾದ್ಯಂತ ಈ ಯೋಜನೆಯನ್ನು ವಿಸ್ತರಿಸಲಾಗುವುದು. ಇದಕ್ಕಾಗಿ 75 ಕೋಟಿ ರೂ. ನೀಡಲಾಗುವುದು.

89. ರಾಮಥಾಳ (ಮರೋಳ) ಏತನೀರಾವರಿ ಯೋಜನೆ : ಕೃಷ್ಣಾ ಭಾಗ್ಯ ಜಲನಿಗಮದ ವತಿಯಿಂದ ಬೃಹತ್ ಪ್ರಮಾಣದ ಹನಿ ನೀರಾವರಿ ಯೋಜನೆಯನ್ನು ಹುನಗುಂದ ತಾಲ್ಲೂಕಿನಲ್ಲಿ 786 ಕೋಟಿ ರೂ.ಮೊತ್ತದಲ್ಲಿ ಅನುಷ್ಠಾನಗೊಳಿಸಲಾಗುವುದು. ಇದರಿಂದ 60,000 ಎಕರೆ ಪ್ರದೇಶವು ನೀರಾವರಿಗೆ ಒಳಪಡಲಿದ್ದು, ಸುಮಾರು 20,000 ರೈತರು ಪ್ರಯೋಜನ ಪಡೆಯಲಿದ್ದಾರೆ. ವಿಶ್ವದಲ್ಲಿರುವ ಬೃಹತ್ ಹನಿ ನೀರಾವರಿ ಯೋಜನೆಗಳಲ್ಲಿ ಇದು ಕೂಡ ಒಂದಾಗಲಿದ್ದು, ಇದರಿಂದ ಸುಮಾರು 1.30 ಟಿಎಂಸಿ ನೀರನ್ನು ಉಳಿಸಬಹುದೆಂದು ಅಂದಾಜಿಸಲಾಗಿದೆ.

90. ನೀರಿನ ಬಳಕೆಯಲ್ಲಿ ಉತ್ಪಾದಕತೆಯ ಹೆಚ್ಚಳ : ನಾರಾಯಣಪುರ ಎಡದಂಡೆ ಕಾಲುವೆ ಮತ್ತು ವಿತರಣಾ ನಾಲೆಗಳ ಆಧುನೀಕರಣ-ಗೊಳಿಸುವುದರ ಮೂಲಕ 11.12 ಲಕ್ಷ ಎಕರೆ ಪ್ರದೇಶಗಳಲ್ಲಿ ನೀರಿನ ಬಳಕೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲಾಗುವುದು. ಇದರಲ್ಲಿ 2.6 ಲಕ್ಷ ಎಕರೆ ಪ್ರದೇಶದಲ್ಲಿ ಕಿರುನೀರಾವರಿ ಯೋಜನೆಯನ್ನು ಅಳವಡಿಸಿ-ಕೊಳ್ಳಲಾಗುವುದು. ಇದಕ್ಕಾಗಿ 4,085 ಕೋಟಿ ರೂ. ಕೇಂದ್ರದ ನೆರವಿಗೆ ಪ್ರಸ್ತಾವಿಸಲಾಗಿದ್ದು, ರಾಷ್ಟ್ರೀಯ ಜಲ ಮಿಷನ್ ಈಗಾಗಲೇ ತಾತ್ವಿಕ ಒಪ್ಪಿಗೆ ನೀಡಿದೆ.

91. ಮಳೆಗಾಲದಲ್ಲಿ ಗದಗ, ಹಾವೇರಿ ಮತ್ತು ಧಾರವಾಡ ಜಿಲ್ಲೆಗಳ ಮೂಲಕ ಹರಿದು ಹೋಗುವ ಬೆಣ್ಣೆಹಳ್ಳ ಮತ್ತು ತೊಪರಿಹಳ್ಳ ಹಾಗೂ ಬಿಜಾಪುರದ ದೋಣಿಹಳ್ಳ ತೊರೆಯ ಮಹಾಪೂರದಿಂದ ಜನರು ಅತಿ ಸಂಕಷ್ಟಕ್ಕೆ ಒಳಗಾಗುವುದನ್ನು ನಿವಾರಿಸಲು ಹೂಳೆತ್ತುವ, ಅತಿಕ್ರಮಣ ತೆರವುಗೊಳಿಸುವ ಮತ್ತು ಮಳೆಕೊಯ್ಲು ರಚನೆ ಕಾಮಗಾರಿಗಳನ್ನು ಕರ್ನಾಟಕ ನೀರಾವರಿ ನಿಗಮದಿಂದ 50 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸಲಾ-ಗುವುದು.

92. 2012–13ನೇ ಸಾಲಿನಲ್ಲಿ ನೀರಾವರಿ ಯೋಜನೆಗಳ ನಿರ್ವಹಣೆಗಾಗಿ 87.6 ಕೋಟಿ ರೂ. ಒದಗಿಸಲಾಗಿದ್ದು, ಈ ಯೋಜನೆಗಳ ಸಮರ್ಪಕ ನಿರ್ವಹಣೆಗಾಗಿ ಹೆಚ್ಚಿನ ಮಹತ್ವವನ್ನು ನೀಡಿ 2013–14ನೇ ಸಾಲಿನಲ್ಲಿ 323 ಕೋಟಿ ರೂ. ಒದಗಿಸಲಾಗಿದೆ.

ಸಣ್ಣ ನೀರಾವರಿ

93. **ಹೊಸ ಯೋಜನೆಗಳು :** ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮದಡಿ ಸೇರಿಲ್ಲದ ತಾಲ್ಲೂಕುಗಳಲ್ಲಿ ಹೊಸ ಸಣ್ಣ ನೀರಾವರಿ ಯೊಜನೆಗಳನ್ನು ಕಾರ್ಯಗತಗೊಳಿಸಲು ಒಟ್ಟು 400 ಕೋಟಿ ರೂ. ಮೊತ್ತದಲ್ಲಿ 300 ಯೋಜನೆಗಳನ್ನು ಹಮ್ಮಿಕೊಂಡು, ಪ್ರಾರಂಭಿಕವಾಗಿ ಈ ಸಾಲಿನಲ್ಲಿ 200 ಕೋಟಿ ರೂ. ಒದಗಿಸಲಾಗುವುದು.

94. ಸಣ್ಣ ನೀರಾವರಿ ಇಲಾಖೆಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಅಂತರ್ಜಲ ಅಭಿವೃದ್ಧಿ ವಿಭಾಗವನ್ನು ಸೇರಿಸಿ ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆಯೆಂದು ನಾಮಾಂಕಿತ–ಗೊಳಿಸಲಾಗುವುದು.

95. 2013–14ನೇ ಸಾಲಿನಲ್ಲಿ ನೀರಾವರಿ ವಲಯಕ್ಕೆ ಒಟ್ಟು 11,500 ಕೋಟಿ ರೂ. ಗಳನ್ನು ಒದಗಿಸಲು ಸಂಪನ್ಮೂಲಗಳನ್ನು ಕ್ರೋಢೀಕರಿಸ–ಲಾಗುವುದು.

ಮಾನ್ಯ ಸಭಾಧ್ಯಕ್ಷರೆ,

96. ರೈತರ ಜನಜೀವನವನ್ನು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಂದ ಉನ್ನತೀಕರಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ದಿಕ್ಕಿನಲ್ಲಿ ಮೇಲೆ ಸೂಚಿಸಿರುವ ಎಲ್ಲಾ ನೂತನ ಕಾರ್ಯತಂತ್ರಗಳು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಪೂರಕವಾಗಿದ್ದು, ಇದರಿಂದ ರಾಜ್ಯದ ಅಭಿವೃದ್ಧಿಗೆ ಸಹಾಯವಾಗುವುದೆಂದು ನಂಬಿದ್ದೇನೆ. ಇದಕ್ಕಾಗಿ 2013–14ನೇ ಸಾಲಿನಲ್ಲಿ ಒಟ್ಟು 22310 ಕೋಟಿ ರೂ. ಒದಗಿಸಲಾಗಿದೆ. ಈ ಮೊತ್ತವು ಕಳೆದ ವರ್ಷಕ್ಕಿಂತ ಶೇ 13.5 ಹೆಚ್ಚಾಗಿದೆ.

97. ನಮ್ಮ ರಾಜ್ಯದಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಆದರಿಸಿ, ಜೀವನ ನಡೆಸುತ್ತಿರುವ ರೈತ ಮತ್ತು ಇತರೆ ಕುಟುಂಬಗಳ ಸಮಗ್ರ

ಅಭಿವೃದ್ಧಿಗಾಗಿ ನಡೆಸಿರುವ ಹೊಸ ಆಯಾಮಗಳ ಚಿಂತನೆ ಈ ಕೃಷಿ ಆಯವ್ಯಯದಲ್ಲಿದೆ. ನಮ್ಮ ದೇಶದಲ್ಲಿಯೇ ವಿನೂತನವಾದ ನಮ್ಮ ಸರ್ಕಾರದ ಈ ಮೂರನೇ ಪ್ರಯತ್ನಕ್ಕೆ ತಮ್ಮೆಲ್ಲರ ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲ ಸಿಗುತ್ತದೆಂದು ಆಶಿಸುತ್ತೇನೆ.

ಹಾಡು ನೇಗಿಲಯೋಗಿ
ಎತ್ತಿಗುಲ್ಲಸವಾಗಿ,
ದುಡಿಮೆ ಇಮ್ಮಡಿಯಾಗಿ,
ಕಣಜ ಕಿಕ್ಕಿರಿಯಾಗಿ,
ನೀನಾಗುವೈ ಭೋಗಿ,
ಹಾಡು ನೇಗಿಲಯೋಗಿ.

–ಕುವೆಂಪು

98. ಸೊಂಪಾದ ಬೆಳೆ ಬಂದು ಸಮೃದ್ಧಿ ನೆಲೆಸಿ ರೈತ–ಕಾರ್ಮಿಕರಿಗೆ ನೆಮ್ಮದಿಯ ಬದುಕು ದೊರೆಯಲೆಂಬ ಹಾರೈಕೆಯುಳ್ಳ ರಾಷ್ಟ್ರಕವಿ ಕುವೆಂಪು ಅವರ ಕಾವ್ಯದ ಸಾಲುಗಳು ನಮ್ಮ ಕೃಷಿ ಮುಂಗಡ ಪತ್ರದ ಆಶಯಗಳಿಗೆ ಪೂರಕವಾಗಿವೆ. ಕೃಷಿಕರ ಹಿತರಕ್ಷಣೆಗಾಗಿ ಮಂಡಿಸಿರುವ ಈ ಕೃಷಿ ಆಯವ್ಯಯದ ಉದ್ದೇಶಗಳನ್ನು ಸಾಕಾರಗೊಳಿಸಲು ಸರ್ವರ ಸಹಕಾರವನ್ನು ಕೋರುತ್ತೇನೆ.

ಈಗ ನಾನು 2013–2014ರ ಸಾಮಾನ್ಯ ಆಯವ್ಯಯವನ್ನು ಮಂಡಿಸುತ್ತಿದ್ದೇನೆ.

ಮಾನ್ಯ ಸಭಾಧ್ಯಕ್ಷರೇ,

ನನ್ನ ಆಯವ್ಯಯ ಭಾಷಣದ ಎರಡನೇ ಭಾಗವಾದ ಸಾಮಾನ್ಯ ಆಯವ್ಯಯವನ್ನು ಮಂಡಿಸುತ್ತಿದ್ದೇನೆ.

ಹುಲ್ಲಾಗು ಬೆಟ್ಟದಡಿ
ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

–ಡಿವಿಜಿ

ಡಿವಿಜಿರವರ ಕವಿ ವಾಣಿಯಂತೆ ನಾಡಿನ ಜನಮಾನಸದಲ್ಲಿ ಹೊಸ ಚೈತನ್ಯ ಮೂಡಿಸುವ ಮೂಲಕ ನಾಡಿನ ಜನರ ಸಮಗ್ರ ಕಲ್ಯಾಣದ ಆಶಯವನ್ನು ಸಾಕಾರಗೊಳಿಸುವ ಪ್ರಯತ್ನವಾಗಿದೆ ಈ ಆಯವ್ಯಯ.

ರಾಷ್ಟ್ರದ ಆರ್ಥಿಕ ಪರಿಸ್ಥಿತಿ.

1. ಇತೀಚಿನ ವರ್ಷಗಳಲ್ಲಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯು ಹಿಂದೆಂದೂ ಕಾಣದ ಕಠಿಣ ಸವಾಲುಗಳನ್ನು ಎದುರಿಸುತ್ತಿದೆ. ಮಾರ್ಚ 2012ರ ಕಳೆದ ವರ್ಷದ ಆಯವ್ಯಯದಿಂದ ಈ ಸವಾಲುಗಳು ಮತ್ತಷ್ಟು ಸ್ಪಷ್ಟವಾಗಿ ಗೋಚರಿಸುತ್ತಿವೆ. ಈಗ ನಾವು ನಿರಂತರವಾಗಿ ಹೆಚ್ಚುತ್ತಿರುವ ಹಣದುಬ್ಬರ, ಬೆಳವಣಿಗೆಯಲ್ಲಿ ಇಳಿತ, ಅನಿಶ್ಚಿತ ಬಂಡವಾಳ ಹೂಡಿಕೆಯ ಮುನ್ನೋಟ ಹಾಗೂ ಪ್ರತಿಕೂಲ ಬಾಹ್ಯ ಆರ್ಥಿಕ ವಾತಾವರಣವನ್ನು ಎದುರಿಸುತ್ತಿದ್ದೇವೆ. ಇತ್ತೀಚಿನ ತಿಂಗಳುಗಳಲ್ಲಿ ಸಗಟುದರ ಸೂಚ್ಯಂಕದಲ್ಲಿ ಸ್ವಲ್ಪಮಟ್ಟಿನ ಸಂಯಮ ಕಂಡುಬಂದಿದ್ದರೂ ಸರಬರಾಜಿನ ಅಡೆತಡೆಗಳಿಂದಾಗಿ ಗ್ರಾಹಕರಿಗೆ ಹಣದುಬ್ಬರವು ಎರಡಂಕಿಯ ಸಮೀಪದಲ್ಲಿಯೇ ಮುಂದುವರಿದಿದೆ. ಸಾಧುವಲ್ಲದ ಹೆಚ್ಚಿನ ಹಣದುಬ್ಬರವನ್ನು ಹತೋಟಿಯಲ್ಲಿಡಲು ತೆಗೆದುಕೊಂಡ ಕಠಿಣ ಹಣಕಾಸಿನ ನೀತಿ, ಮೂಲ ಸೌಕರ್ಯಗಳ ಮಿತಿ ಮತ್ತು ಕಾರ್ಯವಿಧಾನಗಳ ವಿಳಂಬಗಳಿಂದಾಗಿ ಆಂತರಿಕ ಬಂಡವಾಳ ಹೂಡಿಕೆಗಳು ಇನ್ನೂ ಚುರುಗೊಳ್ಳಬೇಕಾಗಿದೆ. ಜಾಗತಿಕ ಆರ್ಥಿಕ ವ್ಯವಸ್ಥೆಯು ಸರಿಹೊಂದುವ ಯಾವುದೇ ಲಕ್ಷಣಗಳು ಕಂಡುಬರುತ್ತಿಲ್ಲವಾದ್ದರಿಂದ ನಮ್ಮ ರಫ್ತುಗಳು ಸಾಧಾರಣ ಮಟ್ಟದಲ್ಲಿಯೇ ಮುಂದುವರಿಯುವ ಲಕ್ಷಣಗಳು ಗೋಚರಿಸುತ್ತಿವೆ. ಇದರಿಂದಾಗಿ ನಾವು ಕೆಳಮಟ್ಟದಿಂದ ಮಧ್ಯಮ ಮಟ್ಟದ ಬೆಳವಣಿಗೆಯಲ್ಲಿಯೇ ನಿಲ್ಲುವ ಲಕ್ಷಣಗಳು ಕಂಡುಬರುತ್ತಿವೆ. ಸರ್ಕಾರಗಳ ಸಂಯೋಜಿತ ಹೆಚ್ಚಿನ ಆರ್ಥಿಕ ಕೊರತೆಯಿಂದಾಗಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಿದರೂ ಕೂಡ ಈ ಸವಾಲುಗಳಿಂದ ಪಾರಾಗುವ ಲಕ್ಷಣಗಳು ಕಂಡುಬರುತ್ತಿಲ್ಲ.

2. ಈ ಎಲ್ಲಾ ಸವಾಲುಗಳ ನಡುವೆಯೂ ದೇಶದ ಆರ್ಥಿಕ ವ್ಯವಸ್ಥೆಯು ಉತ್ತಮಗೊಳ್ಳುವ ಹಾಗೂ ಒಳ್ಳೆಯ ಕಾಲದ ಪ್ರಾರಂಭದ ಹಂತಕ್ಕೆ ಬಂದಿರುವ ಪ್ರಾರಂಭಿಕ ಲಕ್ಷಣಗಳು ಕಂಡುಬರುತ್ತವೆ. ಎಲ್ಲಾ ಭಾಗೀದಾರರು, ಪ್ರಮುಖವಾಗಿ ಸರ್ಕಾರಗಳು, ಸಾರ್ವಜನಿಕ ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳು ಹಾಗೂ ದೊಡ್ಡಪ್ರಮಾಣದ ಖಾಸಗಿ ಉದ್ದಿಮೆಗಳ ಸಂಯೋಜಿತ ಕಾರ್ಯಕ್ರಮಗಳು ತಕ್ಷಣದ ಅವಶ್ಯಕತೆಯಾಗಿವೆ. ಖಾಸಗಿ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ, ವಹಿವಾಟುಗಳ ವೆಚ್ಚವನ್ನು ತಗ್ಗಿಸುವ, ಯೋಜನೆಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದು ಹಾಗೂ ಅಂತರ್ಗತ ಅಭಿವೃದ್ಧಿಯನ್ನು ಬಲಪಡಿಸುವ ನೀತಿಗಳನ್ನು ಪಾಲಿಸುವುದು ಸೂಕ್ತವಾದ ಕಾರ್ಯತಂತ್ರವಾಗಿ ಕಂಡುಬರುತ್ತದೆ.

ರಾಜ್ಯ ಅರ್ಥವ್ಯವಸ್ಥೆ

3. ಕರ್ನಾಟಕದ ಅರ್ಥವ್ಯವಸ್ಥೆಯು ರಾಷ್ಟ್ರಮಟ್ಟದಲ್ಲಿನ ವಿಸ್ತೃತ ಆರ್ಥಿಕ ವ್ಯವಸ್ಥೆಯಿಂದ ಬಾಧಿತವಾಗಿದೆ. 2012–13ನೇ ಸಾಲಿನ ಆರ್ಥಿಕ ವರ್ಷವು ರಾಜ್ಯದ ಆರ್ಥಿಕ ವ್ಯವಸ್ಥೆಗೆ ಒಂದು ಕಠಿಣವಾದ ವರ್ಷವಾಗಿತ್ತು. ರಾಜ್ಯದ ಆರ್ಥಿಕ ಬೆಳವಣಿಗೆಯು ಶೇ.5.9 ರಷ್ಟಾಗುವ ನಿರೀಕ್ಷೆಯಿದೆ. 2012–13ರಲ್ಲಿ ಶೇ.8.9 ರಷ್ಟು ಬೆಳವಣಿಗೆಯಾಗುವ ನಿರೀಕ್ಷೆಯನ್ನು ಹೊಂದಿರುವ ಸೇವಾವಲಯಗಳ ಬಲವಾದ ಪ್ರಾಬಲ್ಯವು ರಾಜ್ಯದ ಆರ್ಥಿಕ ಸಾಧನೆಯನ್ನು ಮುನ್ನಡೆಸುತ್ತಿದೆ. 2012–13ರಲ್ಲಿ ರಾಜ್ಯದ ಬಹಳಷ್ಟು ಭಾಗಗಳಲ್ಲಿ ಬರ ಪರಿಸ್ಥಿತಿಯಿದ್ದರೂ ಸಹ ಕೃಷಿ ಮತ್ತು ಸಂಬಂಧಿತ ವಲಯಗಳು ಶೇ.1.8ರಷ್ಟು ಬೆಳವಣಿಗೆಯನ್ನು ತೋರಿಸಿವೆ. 2012–13ನೇ ಸಾಲಿನಲ್ಲಿ ಕೈಗಾರಿಕಾ ವಲಯದ ಬೆಳವಣಿಗೆಯನ್ನು ಶೇ. 2.4 ರಷ್ಟೆಂದು ಅಂದಾಜಿಸಲಾಗಿದೆ. 2012–13ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಸಂಯೋಜನೆಯು ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ವಲಯದಿಂದ ಶೇ. 15.32, ಕೈಗಾರಿಕಾ ವಲಯದಿಂದ ಶೇ.25.91 ಹಾಗೂ ಸೇವಾ ವಲಯಗಳಿಂದ ಶೇ. 58.76ರಷ್ಟಿದೆ. ಕೃಷಿ ವಲಯದಲ್ಲಿ ತೊಡಗಿಸಿಕೊಂಡಿರುವ ಜನಸಂಖ್ಯೆಯಲ್ಲಿ ಸಮಪ್ರಮಾಣದ ಇಳಿಮುಖವಿಲ್ಲದೇ ಇದ್ದರೂ ರಾಜ್ಯ ಆರ್ಥಿಕ ವ್ಯವಸ್ಥೆಗೆ ಕೃಷಿ ವಲಯದ ಕೊಡುಗೆ ಸತತವಾಗಿ ಇಳಿಮುಖವಾಗುತ್ತಿರುವುದು ಕಳಕಳಿಯ

ಸಂಗತಿಯಾಗಿದೆ. ನಿಗದಿತ ಬೆಳವಣಿಗೆಯ ಗತಿಯನ್ನು ಸಾಧಿಸಲು 12ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ರಾಜ್ಯ ಸರ್ಕಾರವು ಈವರೆಗೆ ಮಾಡಿರುವ ಸಾಧನೆಗಳು ಹಾಗೂ ಕಾರ್ಯತಂತ್ರಗಳನ್ನು ಕ್ರೋಢೀಕರಿಸಲು ಬಯಸುತ್ತದೆ.

ಕಳೆದ 5 ವರ್ಷಗಳ ವಿತ್ತೀಯ ನಿರ್ವಹಣೆ

4. ರಾಜ್ಯದ ಆರ್ಥಿಕ ಪರಿಸ್ಥಿತಿಯು ಉತ್ತಮ ಹಾಗೂ ಸದೃಢವಾಗಿದೆ. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮವು ರಾಜ್ಯಕ್ಕೆ ವಿತ್ತೀಯ ಶಿಸ್ತಿನ ಹಾದಿಯನ್ನು ಒದಗಿಸಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ, ಕಳೆದ 5 ವರ್ಷಗಳಿಂದ ರಾಜ್ಯದ ಆಥಿಕ ಪರಿಸ್ಥಿತಿಯು ಕೆಳಕಂಡಂತೆ ಉತ್ತಮವಾಗಿದೆ.

- 2008–09ರಿಂದ ರಾಜ್ಯಸ್ವ ಹೆಚ್ಚಳವನ್ನು ಕಾಯ್ದುಕೊಂಡು ಬರಲಾಗಿದೆ.
- ವಿತ್ತೀಯ ಕೊರತೆಯನ್ನು ಜಿ.ಎಸ್.ಡಿ.ಪಿ.ಯ ಶೇಕಡ 3ರ ಮಿತಿಯೊಳಗೆ ಅಥವಾ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಮಿತಿಯೊಳಗೆ ಕಾಯ್ದುಕೊಳ್ಳಲಾಗಿದೆ.
- ಬಡ್ಡಿ ಪಾವತಿ: ರಾಜ್ಯಸ್ವ ಸ್ವೀಕೃತಿ ಅನುಪಾತವನ್ನು ಶೇಕಡ 10ರೊಳಗೆ ಕಾಯ್ದುಕೊಂಡಿದ್ದು, ಇದು 13ನೇ ಹಣಕಾಸು ಆಯೋಗದ ಮಿತಿಯಾದ ಶೇಕಡ 15ರ ಮಿತಿಗಿಂತ ಕಡಿಮೆಯಿ–ರುತ್ತದೆ.
- ಋಣ : ಜಿ.ಎಸ್. ಡಿ.ಪಿ. ಅನುಪಾತವು 13ನೇ ಹಣಕಾಸು ಆಯೋಗದ ಶೇಕಡ 25ರ ಮಿತಿಯೊಳಗಿರುತ್ತದೆ.

5. ಕಳೆದ 5 ವರ್ಷಗಳಲ್ಲಿ ಈ ಸರ್ಕಾರವು ತೆರಿಗೆ: ಜಿಎಸ್.ಡಿ.ಪಿ ಅನುಪಾತವನ್ನು ಸುಮಾರು ಶೇಕಡ 10ಕ್ಕೆ ಉತ್ತಮಗೊಳಿಸಿದ್ದು ದೇಶದಲ್ಲಿಯೇ ಅತ್ಯುತ್ತಮವೆನಿಸುವ ರೀತಿಯಲ್ಲಿ ನಿರಂತರವಾದ ಸುಧಾರಣೆಯನ್ನು ತಂದಿದೆ.

6. ತೆರಿಗೆ ಸಂಗ್ರಹಣೆಯಲ್ಲಿನ ಸ್ಥಿರವಾದ ಸುಧಾರಣೆಯಿಂದಾಗಿ, 2007–08ರಲ್ಲಿದ್ದ 17,227 ಕೋಟಿ ರೂ.ಗಳ ರಾಜ್ಯದ ಯೋಜನಾ ಗಾತ್ರವು ಪ್ರಸಕ್ತ ವರ್ಷದಲ್ಲಿ 42.030 ಕೋಟಿ ರೂ.ಗಳಾಗಿದ್ದು ಇದು ಎರಡು ಪಟ್ಟಿಗೂ ಅಧಿಕವಾಗಿದೆ. ಇದರ ಪರಿಣಾಮದಿಂದ ಕರ್ನಾಟಕದ ಪ್ರಸಕ್ತ ವರ್ಷದ ತಲಾವಾರು ಯೋಜನಾ ಗಾತ್ರವು 6,810 ರೂ. ಗಳಷ್ಟಿದ್ದು, ನಮ್ಮ ರಾಜ್ಯವು ದೇಶದಲ್ಲಿಯೇ ಅತಿ ಹೆಚ್ಚಿನ ತಲಾ ಯೋಜನಾ ಗಾತ್ರ ಹೊಂದಿರುವ ರಾಜ್ಯ-ಗಳ ಪೈಕಿ ಒಂದಾಗಿದೆ.

7. ಬೃಹತ್ ಆಯವ್ಯಯ ಗಾತ್ರದಿಂದಾಗಿ, ನಮ್ಮ ಸರ್ಕಾರವು ರಾಜ್ಯದ ಪ್ರಸಕ್ತ ಎಲ್ಲಾ ಅಗತ್ಯ ವೆಚ್ಚಗಳಿಗೆ ಹಣಕಾಸಿನ ಪೂರೈಕೆಯನ್ನು ಖಚಿತಪಡಿಸಿದೆ. ಹಾಗೂ ಹೆಚ್ಚಿದ ಸಂಪನ್ಮೂಲಗಳನ್ನು ತನ್ನ ಬಂಡವಾಳ ಹೂಡಿಕೆಯನ್ನು ಉತ್ತಮ ಪಡಿಸಿಕೊಳ್ಳಲು ಬಳಸಿಕೊಂಡಿದೆ. 2007–08ರಿಂದ ಬಂಡವಾಳ ಹಂಚಿಕೆಯು ಶೇಕಡ 67ರಷ್ಟು ಅಧಿಕವಾಗಿದ್ದು, ಪ್ರಸಕ್ತ ವರ್ಷದಲ್ಲಿ 14,455 ಕೋಟಿ ರೂ.ಗಳಷ್ಟಿದೆ.

8. ರಾಜ್ಯವು ತನ್ನ ನಗದು ಪರಿಸ್ಥಿತಿಯನ್ನು ಜಾಗರೂಕವಾಗಿ ನಿರ್ವಹಿಸಿಕೊಂಡು ಬಂದಿದೆ. ಭಾರತೀಯ ರಿಸರ್ವ್ ಬ್ಯಾಂಕಿನಿಂದ ಕಳೆದ 5 ವರ್ಷದಲ್ಲಿ ಯಾವುದೇ ವಿಶೇಷ ಅಥವಾ ಸಾಧಾರಣ ಅರ್ಥೋಪಾಯ ಅಗ್ರಿಮಧನ ಮುಂಗಡವನ್ನು (Ways & Means) ಪಡೆದಿರುವುದಿಲ್ಲ.

9. ರಾಜ್ಯ ಅರ್ಥ ವ್ಯವಸ್ಥೆಯನ್ನು ಉತ್ತಮವಾಗಿ ನಿರ್ವಹಿಸು-ವುದರೊಂದಿಗೆ ನಮ್ಮ ಸರ್ಕಾರವು ಹಣಕಾಸಿಗೆ ಸಂಬಂಧಿಸಿದಂತೆ ಹಲವಾರು ವ್ಯವಸ್ಥಿತ ಸುಧಾರಣೆಗಳನ್ನು ತಂದಿದೆ.

- ರಾಜ್ಯದ ಆರ್ಥಿಕ ಸ್ಥಿತಿಯ ಬಗೆಗಿನ ಮಾಹಿತಿಯನ್ನು ತ್ರೈಮಾಸಿಕವಾಗಿ ಆರ್ಥಿಕ ಇಲಾಖೆಯ ಅಧಿಕೃತ ವೆಬ್ ಸೈಟಿನಲ್ಲಿ ಪ್ರಕಟಿಸಲಾಗುತ್ತಿದೆ. (www.kar.nic.in/finance).
- ಋಣ ಸಾಮರ್ಥ್ಯದ ಮಾನದಂಡಗಳನ್ನು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ರಂತೆ ಅಳವಡಿಸಲಾಗುತ್ತಿದೆ.

- ವಿತ್ತೀಯ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ ನೀಡಲು ಮುಖ್ಯಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಿತ್ತೀಯ ನಿರ್ವಹಣೆ ಮತ್ತು ಪರಿಶೀಲನೆ ಸಮಿತಿಯನ್ನು ರಚಿಸಿದೆ.
- ಅಧಿಕೃತ ವಿತ್ತೀಯ ಹೇಳಿಕೆಗಳನ್ನು ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಅಳವಡಿಸಲಾಗಿದೆ.

ಆರ್ಥಿಕ ಪರಿಸ್ಥಿತಿ 2012–13

10. ದೇಶದ ಈಗಿನ ಆರ್ಥಿಕ ವಾತಾವರಣದಲ್ಲಿಯೂ ಸಹ ನಮ್ಮ ರಾಜ್ಯದ ಪ್ರಸಕ್ತ ಆರ್ಥಿಕ ಪರಿಸ್ಥಿಯು ಸದೃಢವಾಗಿದೆ ಎಂದು ಈ ಸದನಕ್ಕೆ ತಿಳಿಸಲು ನಾನು ಹರ್ಷಿಸುತ್ತೇನೆ. ರಾಜ್ಯ ಸರ್ಕಾರವು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ತನ್ನ ಪ್ರಯತ್ನವನ್ನು ಚುರುಕುಗೊಳಿಸಿದ್ದು ಈ ವರ್ಷ ಎಲ್ಲಾ ಪ್ರಮುಖ ತೆರಿಗೆಗಳ ಸಂಗ್ರಹಣೆಯಲ್ಲಿ ಆಯವ್ಯಯದ ಅಂದಾಜುಗಳನ್ನು ಮೀರುವ ಸ್ಥಿತಿಯಲ್ಲಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಈ ವರ್ಷದಲ್ಲಿನ ಅಭಿವೃದ್ಧಿ ವೆಚ್ಚವನ್ನು ಸಂಪೂರ್ಣವಾಗಿ ಭರಿಸಲು ಹಾಗೂ ಕೆಲವು ಪ್ರಮುಖ ಆರ್ಥಿಕ ವಲಯಗಳಿಗೆ ಹೆಚ್ಚಿನ ಅನುದಾನ ಒದಗಿಸಲು ಸಾಧ್ಯವಾಗುತ್ತದೆ. ಪ್ರಸಕ್ತ ವರ್ಷದಲ್ಲಿ ಬೃಹತ್ ಅಭಿವೃದ್ಧಿ ಆಕಾಂಕ್ಷೆಗಳನ್ನು ಪೂರೈಸಲು ತೆಗೆದುಕೊಂಡ ಹೆಚ್ಚುವರಿ ವೆಚ್ಚದ ಬದ್ಧತೆಗಳಿಂದಾಗಿ ಯೋಜನಾ ಕಾರ್ಯಕ್ರಮಗಳನ್ನು ಲಭ್ಯವಿರುವ ಆರ್ಥಿಕ ಮಿತಿಯೊಳಗೆ ಮರು ವಿನ್ಯಾಸಗೊಳಿಸುವ ಅವಶ್ಯಕತೆಯನ್ನು ಉಂಟು ಮಾಡಿದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯವು ಒಟ್ಟಾರೆ ವೆಚ್ಚವನ್ನು ಸಮರ್ಪಕವಾಗಿ ನಿರ್ವಹಿಸಿದ್ದು ರಾಜ್ಯದ ಆರ್ಥಿಕ ಕ್ರೋಢೀಕರಣ ಪ್ರಯತ್ನಗಳು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002ರಲ್ಲಿ ನಿಗದಿಪಡಿಸಿದ ಆರ್ಥಿಕ ಸೂಚಿಗಳ ಮಿತಿಯೊಳಗೆ ಇರುವುದನ್ನು ಖಾತ್ರಿಪಡಿಸಿವೆ. 2012–13ರ ಆರ್ಥಿಕ ವರ್ಷದಲ್ಲಿ ರಾಜ್ಯವು 42,030 ಕೋಟಿ ರೂ. ಗಳ ಯೋಜನಾ ಗಾತ್ರವನ್ನು ಸಾಧಿಸುವ ಹಾದಿಯಲ್ಲಿದೆ

ನಮ್ಮ ಮುನ್ನೋಟ

11. ಈ ವರ್ಷವು, ನಮ್ಮ ಪಕ್ಷಕ್ಕೆ ಅಭೂತಪೂರ್ವ ಜನಾದೇಶ ದೊರೆತ ಅವಧಿಯ ಕೊನೆಯ ವರ್ಷವಾಗಿದೆ. ಇಂತಹ ಅವಕಾಶ ಪಡೆದ ನಾವು ನಿಜಕ್ಕೂ ಅದೃಷ್ಟವಂತರು. ಜನರು ನಮ್ಮ ಮೇಲಿಟ್ಟಿದ್ದ ನಂಬಿಕೆಯನ್ನು ಉಳಿಸಿಕೊಳ್ಳಲು ನಾವು ಅವಿರತವಾಗಿ ದುಡಿದಿದ್ದೇವೆ. ಬದಲಾವಣೆ ತರಲು ಮತ್ತು ರಾಜ್ಯವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಲು ಐದು ವರ್ಷಗಳ ಅವಧಿಯು ಸಮಂಜಸ ಕಾಲಾವಧಿಯಾಗಿರುತ್ತದೆ. ನಮ್ಮ ಜನರ ತಲಾದಾ-ಯವು ಶೀಘ್ರವಾಗಿ ದ್ವಿಗುಣಗೊಳ್ಳಬೇಕೆಂಬುದು ನಮ್ಮ ಬಯಕೆ–ಯಾಗಿರುತ್ತದೆ. ಸುಸ್ಥಿರ ಬೆಳವಣಿಗೆಗೆ ಮತ್ತು ಅಭಿವೃದ್ಧಿಗೆ ಸೂಕ್ತ ಪರಿಸರವನ್ನು ರಾಜ್ಯವು ಕಲ್ಪಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ. ನಾವು ಶಿಕ್ಷಣ, ಕೌಶಲ್ಯ ಮತ್ತು ಆರೋಗ್ಯ ವಲಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಮೂಲಕ ಅಭಿವೃದ್ಧಿ ಪ್ರಕ್ರಿಯೆಯನ್ನು ಪುನರ್ ವ್ಯಾಖ್ಯಾನಿಸಲು ಪ್ರಯತ್ನಪಟ್ಟಿದ್ದು, ಇದರಿಂದಾಗಿ ಕಾರ್ಯಸ್ಥಳಗಳಲ್ಲಿ ಆರೋಗ್ಯವಂತ, ವಿದ್ಯಾವಂತ, ಕೌಶಲ್ಯ-ಪೂರ್ಣ ಕನ್ನಡಿಗರನ್ನು ಹೊಂದಿ, ಅವರ ಸೃಜನಾತ್ಮಕ ಸ್ವಾತಂತ್ರ್ಯ ಮತ್ತು ಸಾಮರ್ಥ್ಯಗಳನ್ನು ನಮ್ಮ ಸಾಧನೆಗೆ ಬಳಸಿಕೊಳ್ಳಲು ಸಾಧ್ಯವಾಗುವಂತಹ ಪರಿಸರವನ್ನು ಉಂಟುಮಾಡಲು ಪ್ರಯತ್ನಿಸಿದ್ದೇವೆ. ದೀರ್ಘಾವಧಿ ಬೆಳವಣಿಗೆ ಪ್ರಕ್ರಿಯೆಗೆ ಉತ್ತೇಜನ ನೀಡುವಂತಹ ಅಂಶಗಳು ವಿದ್ಯುತ್, ರಸ್ತೆಗಳು, ರೈಲ್ವೆ, ಸಾರಿಗೆ ಮತ್ತು ಬಂದರು ಸಂಪರ್ಕಗಳಂಥ ಮೂಲಭೂತ ಸೌಕರ್ಯಗಳನ್ನು ಒದಗಿಸುವುದಾಗಿದೆ. ಕೃಷಿ ವಲಯದಲ್ಲಿ ಉದ್ಯೋಗಾವಕಾಶಗಳು ಸ್ಥಗಿತಗೊಂಡಿವೆ. ನಾವು ಕೈಗಾರಿಕಾ ವಲಯ ಮತ್ತು ಮಾಹಿತಿ ತಂತ್ರಜ್ಞಾನ ವಲಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಉದ್ಯೋಗಾವಕಾಶಗಳನ್ನು ಒದಗಿಸುವುದಕ್ಕೆ ಮಹತ್ವದ ಕ್ರಮಗಳನ್ನು ಕೈಗೊಂಡಿದ್ದೇವೆ. ನಾವು ಬೆಳವಣಿಗೆಯಷ್ಟೇ ಅಲ್ಲದೆ ಎಲ್ಲರನ್ನೂ ಒಳಗೊಂಡ ಸಮಗ್ರ ಬೆಳವಣಿಗೆ ಆಗಬೇಕೆಂದು ಬಯಸುತ್ತೇವೆ.

12. ನಾವು ಬೆಳವಣಿಗೆಯ ಮತ್ತು ಅಭಿವೃದ್ಧಿಯ ಪ್ರಕ್ರಿಯೆ ಮತ್ತು ಅದರ ಫಲಗಳನ್ನು ನಮ್ಮ ವಿವಿಧ ವರ್ಗಗಳ ಜನರು ಭಾಗಿದಾರರಾಗಲು ಹಾಗೂ ಅನುಭವಿಸಲು ಸಾಧ್ಯವಾಗುವಂತಹ ಪ್ರಮುಖ ಕ್ರಮಗಳನ್ನು ಕೈಗೊಂಡಿದ್ದೇವೆ. ಈ ಉದ್ದೇಶ ಸಾಧನೆಗಾಗಿ ನಾವು ಪರಿಶಿಷ್ಟ ಜಾತಿ, ಪರಿಶಿಷ್ಟ

ಪಂಗಡ, ದುರ್ಬಲ ವರ್ಗಗಳ ಅಭಿವೃದ್ಧಿ ಅಲ್ಲದೆ ಸಮತೋಲಿತ ಪ್ರಾದೇಶಿಕ ಬೆಳವಣಿಗೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದೇವೆ. ಇಂಥ ಮಹತ್ವದ ಪ್ರಯತ್ನಗಳಿಗೆ ಸಹಜವಾಗಿಯೇ ಹೆಚ್ಚಿನ ಸಂಪನ್ಮೂಲದ ಅವಶ್ಯಕತೆ ಇರುತ್ತದೆ. ನಮ್ಮ ರಾಜ್ಯವು ಹೆಚ್ಚಿನ ಸಂಪನ್ಮೂಲದ ಕ್ರೋಢೀಕರಣ ಮತ್ತು ಅದರ ಸಮರ್ಥ ಬಳಕೆಯಲ್ಲಿ ಮುಂಚೂಣಿಯಲ್ಲಿದೆ. ಸರ್ಕಾರದ ಬಳಿ ಸಾಕಷ್ಟು ಸಮಪನ್ಮೂಲಗಳು ಇರುವುದಿಲ್ಲ. ಹಾಗಾಗಿ, ನಾವು ಖಾಸಗಿ ವಲಯದ ಭಾಗವಹಿಸುವಿಕೆ (ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮೂಲಕ) ಮತ್ತು ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದೇವೆ. ತನ್ನ ವಿವಿಧ ಸೇವೆಗಳನ್ನು ಒದಗಿಸುವಲ್ಲಿ ಸರ್ಕಾರವು ಸಮರ್ಥವಾಗಿದ್ದಲ್ಲಿ ಮಾತ್ರ ಸರ್ಕಾರದ ಎಲ್ಲಾ ಕ್ರಮಗಳು ಬಡವರು ಮತ್ತು ನಿರ್ಗತಿಕರಿಗೆ ತಲುಪಬಲ್ಲವು. ಸದೃಢ ಆಡಳಿತ ವ್ಯವಸ್ಥೆ, ವಿಕೇಂದ್ರೀಕೃತ ಆಡಳಿತ ಮತ್ತು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳನ್ನು ಬಳಕೆಗೆ ತರಲು ನಾವು ಮಹತ್ವದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ,

13. ಬೆಳವಣಿಗೆಯ ಮತ್ತು ಅಭಿವೃದ್ಧಿಯ ಕಾರ್ಯತಂತ್ರಗಳನ್ನು ರೂಪಿಸುವ ಬಗ್ಗೆ ಮೆಚ್ಚಬಹುದಾದ ರೀತಿಯಲ್ಲಿ ಎಲ್ಲ ಪ್ರಮುಖ ಕ್ಷೇತ್ರಗಳಲ್ಲಿ ಕಳೆದ ಐದು ವರ್ಷಗಳ ಪಯಣದ ಬಗ್ಗೆ ನಾನು ಸದನದ ಗಮನ ಸೆಳೆಯಬಯಸುತ್ತೇನೆ.

14. ನಮ್ಮ ಸರ್ಕಾರವು 2008ರಲ್ಲಿ ಅಧಿಕಾರಕ್ಕೆ ಬಂದ ನಂತರ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿ ಹಲವಾರು ವಿನೂತನ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳ ಅನುಷ್ಠಾನ, ಪ್ರಗತಿ, ಅವುಗಳ ಅನುಷ್ಠಾನದ ಫಲ ಮತ್ತು ಪರಿಣಾಮಗಳ ಪೂರ್ಣ ಚಿತ್ರಣವನ್ನು ರಾಜ್ಯದ ಜನತೆಗೆ ನೀಡುವ ಜವಾಬ್ದಾರಿ ನಮ್ಮ ಮೇಲಿದೆ. ಹಾಗೆಯೇ, ಈ ಯೋಜನೆಗಳ ಅನುಷ್ಠಾನದಲ್ಲಿ ದೊರೆತ ಅನುಭವದ ಆಧಾರದ ಮೇಲೆ ಈ ಯೋಜನೆಗಳ ಪುನರಾವಲೋಕನ ಮಾಡಿ ಜನೋಪಯೋಗಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯವಾದ ಕಾರ್ಯತಂತ್ರ ರೂಪಿಸಿ ಮುಂದುವರಿಸುವ ಅವಶ್ಯಕತೆಯಿದೆ. ಅದರಿಂದಾಗಿ ಕಳೆದ 5 ವರ್ಷಗಳಲ್ಲಿ ನಮ್ಮ ಸರ್ಕಾರವು ಹೊಸದಾಗಿ ಪ್ರಾರಂಭಿಸಿದ, ಅನುಷ್ಠಾನ-ಗೊಳಿಸಿದ ಮತ್ತು ಪ್ರಗತಿಯಲ್ಲಿರುವ ಕೆಲವೊಂದು ಕಾರ್ಯಕ್ರಮಗಳ ವಿವರಗಳನ್ನು ಈ ಸದನದ ಮುಂದೆ ಇಡುವ ಪ್ರಯತ್ನ ಮಾಡಿರುತ್ತೇನೆ,

2012–13ನೇ ಸಾಲಿನ ವಾರ್ಷಿಕ ಯೋಜನೆಯ ಸಾಧನೆಗಳು

15. 2012–13 ನೇ ವರ್ಷವು 12ನೇ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷವಾಗಿದೆ. 2012–13ನೇ ಸಾಲಿನ ರಾಜ್ಯ ಯೋಜನಾ ಗಾತ್ರವನ್ನು 42,030 ಕೋಟಿ ರೂ.ಗಳಿಗೆ ನಿಗದಿಪಡಿಸಲಾಗಿತ್ತು. ವರ್ಷಾವಧಿಯಲ್ಲಿ ಕೆಲವು ವಲಯಗಳಲ್ಲಿ ಹೆಚ್ಚುವರಿ ಸಮಪನ್ಮೂಲಗಳಿಗೆ ಬೇಡಿಕೆಗಳಿದ್ದರೆ, ವಿಳಂಬಗತಿಯ ಅನುಷ್ಠಾನದಿಂದಾಗಿ ಇತರೆ ಕೆಲವು ವಲಯಗಳು ಸಂಭಾವ್ಯ ಉಳಿತಾಯಗಳನ್ನು ಹೊಂದಿವೆ. ಘನತೆವೆತ್ತ ಸದನವು, ಮೊದಲ ಎರಡು ಪೂರಕ ಅಂದಾಜುಗಳಲ್ಲಿ 7,437 ಕೋಟಿ ರೂ.ಗಳ ಹೆಚ್ಚುವರಿ ಯೋಜನಾ ವೆಚ್ಚಕ್ಕೆ ಅನುಮೋದನೆ ನೀಡಿದೆ. ಸರ್ಕಾರವು ಯೋಜನಾ ವೆಚ್ಚವನ್ನು ಒಳಗೊಂಡ ಪೂರಕ ಅಂದಾಜುಗಳ ಮೂರನೇ ಮತ್ತು ಅಂತಿಮ ಕಂತಿಗೆ ಅನುಮೋದನೆ ಕೋರಲಿದೆ.. ಈ ಹೆಚ್ಚುವರಿ ವೆಚ್ಚದ ಅಗತ್ಯತೆಗಳನ್ನು ತೆರಿಗೆಗಳ ಉತ್ತಮ ವಸೂಲಾತಿಯ ಪ್ರಯತ್ನಗಳು, ಮತ್ತು ಕೆಲವು ಯೋಜನೆಗಳಡಿ ಲಭ್ಯವಾಗುವ ಉಳಿತಾಯಗಳ ಮೂಲಕ ಕ್ರೋಢೀಕರಿಸಿದ ಹೆಚ್ಚುವರಿ ಸಂಪನ್ಮೂಲಗಳಿಂದ ಭರಿಸಲಾಗುತ್ತಿದೆ.

16. 2013ನೇ ಜನವರಿಯವರೆಗೆ ರಾಜ್ಯ ಆಯವ್ಯಯದ ಯೋಜನಾ ವೆಚ್ಚವು, 2011–12ನೇ ಸಾಲಿನ ಸದರಿ ಅವಧಿಯ ವೆಚ್ಚಕ್ಕಿಂತ ಶೇ. 19 ರಷ್ಟು ಹೆಚ್ಚಿನದಾಗಿದೆ. ಒಟ್ಟಾರೆಯಾಗಿ, ಸರ್ಕರವು ರಾಜ್ಯ ಯೋಜನಾ ಗುರಿಯನ್ನು ಸಮಪೂರ್ಣವಾಗಿ ಸಾಧಿಸುವ ನಿರೀಕ್ಷೆಯನ್ನು ಹೊಂದಿದ್ದು, ಇದು 2011–12ನೆ ಸಾಲಿನ 38,450 ಕೋಟಿ ರೂ.ಗಳ ಸಾಧನೆಗಿಂತ ಶೇ. 9.5ರಷ್ಟು ಹೆಚ್ಚಿನದಾಗಿರುತ್ತದೆ.

12 ನೇ ಪಂಚವಾರ್ಷಿಕ ಯೋಜನೆ

17. ರಾಷ್ಟ್ರದ 12ನೇ ಪಂಚವಾರ್ಷಿಕ ಯೋಜನೆಯನ್ನು ಡಿಸೆಂಬರ್ 2012ರಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಒಪ್ಪಿದೆ. ಕರ್ನಾಟಕಕ್ಕೆ ನಿಗದಿಪಡಿಸಿರುವ 2,55,250 ಕೋಟಿ ರೂ.ಗಳ ಗಾತ್ರವು 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಸಕ್ತ ದರಗಳಂತೆ ನಿಗದಿಪಡಿಸಿದ್ದ 1,36,052 ಕೋಟಿ ರೂ.ಗಳಿಗಿಂತ ಪ್ರಸಕ್ತ ದರದಲ್ಲಿ ಶೇ.87 ರಷ್ಟು ಹೆಚ್ಚಾಗಿರುವುದೆಂದು ಈ ಸದನಕ್ಕೆ ತಿಳಿಸಲು ಹರ್ಷಿಸುತ್ತೇನೆ. ಪಂಚವಾರ್ಷಿಕ

ಯೋಜನೆಗಳಲ್ಲಿ ಯೋಜಿಸಿದ್ದಕ್ಕಿಂತ ಹೆಚ್ಚು ಸಂಪನ್ಮೂಲಗಳನ್ನು ಸತತವಾಗಿ ಕ್ರೋಢೀಕರಿಸಿದ ಕೆಲವೇ ಪ್ರಮುಖ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ 2011–12ನೇ ಸಾಲಿನಲ್ಲಿನ ಕರ್ನಾಟಕದ 6,231 ರೂ.ಗಳ ತಲಾ ಯೋಜನಾ ಗಾತ್ರವು ಪ್ರಮುಖ ರಾಜ್ಯಗಳಿಗೆ ಹೋಲಿಸಿದಲ್ಲಿ ಅತ್ಯಂತ ಹೆಚ್ಚಿನದಾಗಿದೆ. ಇದೇ ಪ್ರವೃತ್ತಿಯು 12ನೇ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಮುಂದು–ವರಿಯುವುದೆಂದು ಭಾವಿಸಿದ್ದೇವೆ.

ಆಯವ್ಯಯ ಗಾತ್ರ ಮತ್ತು ರಾಜ್ಯ ಯೋಜನೆ 2013–14

18. ಈ ಆಯವ್ಯಯದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಮತ್ತು ನಿಯಂತ್ರಕ ಚಟುವಟಿಕೆಗಳಿಗಾಗಿ ಒಟ್ಟಾರೆ 1,17,005 ಕೋಟಿ ರೂ.ಗಳ ವೆಚ್ಚದ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಇದು 2012–13ನೇ ಸಾಲಿನ ಆಯವ್ಯಯದಲ್ಲಿ ಇರುವ 1,02,742 ಕೋಟಿ ರೂ. ಮೇಲೆ ಶೇಕಡ 13.88 ಹೆಚ್ಚು ಹೊಂದಿದೆ. ಅನುಬಂಧ–1ರಲ್ಲಿ ಪ್ರಮುಖ ವಲಯವಾರು ಹಂಚಿಕೆಯನ್ನು ತೋರಿಸಲಾಗಿದೆ.

ಇಂಧನ

19. ರಾಜ್ಯದ ಅಭಿವೃದ್ಧಿಯಲ್ಲಿ ವಿದ್ಯುಚ್ಛಕ್ತಿ ವಲಯದ ಕೊಡುಗೆ ಮಹತ್ವದ್ದು, ಕಲ್ಲಿದ್ದಲು, ನೈಸರ್ಗಿಕ ಅನಿಲ ಮುಂತಾದ ಇಂಧನಗಳ ಪೂರೈಕೆಯ ಜೊತೆಗೆ ವಿದ್ಯುತ್ ಸರಬರಾಜು ಹೆಚ್ಚಳ ಮಾಡದ ಹೊರತು ರಾಜ್ಯದ ಆಂತರಿಕ ಉತ್ಪನ್ನದಲ್ಲಿ ಹೆಚ್ಚಿನ ಬೆಳವಣಿಗೆಯು ಸಾಧ್ಯವಾಗುವುದಿಲ್ಲ.

20. 2008–09ಕ್ಕೂ ಹಿಂದೆ, ಬಹಳಷ್ಟು ಕಾಲ ವಿದ್ಯುತ್ ವಲಯಕ್ಕೆ ಬಂಡವಾಳ ಹೂಡಿಕೆಗೆ ಅನುದಾನವನ್ನು ಒದಗಿಸುತ್ತಿರಲಿಲ್ಲ. ಈಚೆಗೆ ಸರ್ಕಾರವು ಕರ್ನಾಟಕ ವಿದ್ಯುತ್ ನಿಗಮ ಮತ್ತು ವಿತರಣಾ ಕಂಪನಿಗಳಿಗೆ 4,175 ಕೋಟಿ ರೂ. ಗಳ ಬಂಡವಾಳ ಒದಗಿಸಿದೆ. 2008–09ರಲ್ಲಿದ್ದ 8,660 ಮೆ.ವ್ಯಾಟ್ ಘಟಕ ಸಾಮರ್ಥ್ಯವು ನಮ್ಮ ಸರ್ಕಾರದ ಪರಿಶ್ರಮದಿಂದ 13,504 ಮೆ.ವ್ಯಾಟ್ ರಷ್ಟಾಗಿದೆ. ಪೂರ್ಣಗೊಂಡ ವಿದ್ಯುತ್ ಯೋಜನೆಗಳ ವಿವರಗಳು ಕೆಳಕಂಡಂತಿವೆ:

1) ಆರ್.ಟಿ.ಪಿ.ಎಸ್ 8ನೇ ಘಟಕ	250 ಮೆ.ವ್ಯಾ
2) ಬಿಟಿಪಿಎಸ್ 1 ಮತ್ತು 2ನೇ ಘಟಕಗಳು	1000 ಮೆ.ವ್ಯಾ
3) ವರಾಹಿ 5ಮತ್ತು 6ನೇ ಘಟಕಗಳು	230 ಮೆ.ವ್ಯಾ
4) ಯುಪಿಸಿಎಲ್ 1 ಮತ್ತು 2ನೇ ಘಟಕಗಳು	1200ಮೆ.ವ್ಯಾ
5) ಅಸಾಂಪ್ರದಾಯಿಕ ಇಂಧನ ಮೂಲಗಳಿಂದ	1913 ಮೆ.ವ್ಯಾ
6) ಕೇಂದ್ರೀಯ ಉತ್ಪಾದನಾ ಕೇಂದ್ರಗಳಿಂದ (ಸಿಂಹಾದ್ರಿ ಮತ್ತು ಇತರೆ)	251 ಮೆ.ವ್ಯಾ
ಒಟ್ಟು	**4844 ಮೆ. ವ್ಯಾ**

21. ಇದಲ್ಲದೆ 2008–09ರಿಂದ ಈಚಿಗೆ ಪ್ರಾರಂಭವಾದ ಕೆಳಗಿನ ವಿದ್ಯುತ್ ಯೋಜನೆಗಳು ಮುಂದಿನ 3 ವರ್ಷಗಳಲ್ಲಿ ಪೂರ್ಣಗೊಳ್ಳಲಿವೆ.

- 2X800 ಮೆ.ವ್ಯಾ ಸಾಮರ್ಥ್ಯದ ಯರಮರಸ್ ಉಷ್ಣ ವಿದ್ಯುತ್ ಸ್ಥಾವರ.
- 2X800 ಮೆ.ವ್ಯಾ ಸಾಮರ್ಥ್ಯದ ಯಡ್ಲಾಪುರ ಉಷ್ಣ ವಿದ್ಯುತ್ ಸ್ಥಾವರ.
- 2X800 ಮೆ.ವ್ಯಾ ಸಾಮರ್ಥ್ಯದ ಛತ್ತೀಸ್‌ಘಡದ ಗೋಧಾನ ಉಷ್ಣ ವಿದ್ಯುತ್ ಸ್ಥಾವರ.
- 1X700 ಮೆ. ವ್ಯಾ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಯೋಜನೆ, ಬಿಡದಿ.
- 1X700 ಮೆ. ವ್ಯಾ ಸಾಮರ್ಥ್ಯದ ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರದ 3ನೇ ಘಟಕ.
- 4000 ಮೆ.ವ್ಯಾ ಸಾಮರ್ಥ್ಯದ ಬಿಜಾಪುರ ಜಿಲ್ಲೆ ಕೂಡಗಿಯಲ್ಲಿನ ಎನ್.ಟಿ.ಪಿ.ಸಿ ಯೋಜನೆ

22. ಸ್ಥಾವರಗಳಿಗೆ ಅಗತ್ಯವಾದ ಕಲ್ಲಿದ್ದಲು ನಿರಂತರ ಪೂರೈಕೆ ಮತ್ತು ಪರಿಸರ ಇಲಾಖೆಯಿಂದ ಒಪ್ಪಿಗೆ ದೊರೆಯುವಲ್ಲಿ ಕೇಂದ್ರ ಸರ್ಕಾರದಿಂದ ಆಗುತ್ತಿರುವ ವಿಳಂಬದಿಂದಾಗಿ ಯೋಜನೆಗಳು ತೊಡಕನ್ನು

ಎದುರಿಸುತ್ತಿವೆ. 2008-09 ರಲ್ಲಿದ್ದ ಒಂದು ದಿನದ ಅತ್ಯಧಿಕ ವಿದ್ಯುತ್ ಸರಬರಾಜಿನ ಪ್ರಮಾಣ 138 ದಶಲಕ್ಷ ಯುನಿಟ್‌ನಿಂದ ಈಗ 190 ದಶಲಕ್ಷ ಯುನಿಟ್ ಮುಟ್ಟಿದೆ. ನಮ್ಮ ರಾಜ್ಯವು ಕಳೆದ 5 ವರ್ಷಗಳಲ್ಲಿ ಹೊರ ರಾಜ್ಯಗಳಿಂದ ಹಾಗೂ ಖಾಸಗಿ ಉತ್ಪಾದಕರಿಂದ ಒಟ್ಟು 26,236 ದಶಲಕ್ಷ ಯುನಿಟ್ ವಿದ್ಯುತ್‌ನ್ನು ಖರೀದಿಸಿ ವಿವಿಧ ವರ್ಗದ ಗ್ರಾಹಕರ ಬೇಡಿಕೆಗಳನ್ನು ಪೂರೈಸಲು ಶ್ರಮಿಸಿದೆ.

23. ಉತ್ಪಾದನಾ ವಲಯದ ಜೊತೆಗೆ, ಪ್ರಸರಣಾ ಮತ್ತು ವಿತರಣಾ ವ್ಯವಸ್ಥೆಗಳನ್ನು ಬಲಪಡಿಸುವ ಮೂಲಕ ಹಾಗೂ 300 ಉಪ ಕೇಂದ್ರಗಳನ್ನು ಸ್ಥಾಪಿಸುವ ಮತ್ತು 5,196 ಕಿ.ಮೀ ಉದ್ದದ ವಿದ್ಯುತ್ ಪ್ರಸರಣಾ ಮಾರ್ಗ ಕಲ್ಪಿಸಿ ವಿತರಣಾ ನಷ್ಟವನ್ನು ಶೇ. 4 ರಷ್ಟು ಮತ್ತು ಒಟ್ಟು ತಾಂತ್ರಿಕ ಮತ್ತು ವಾಣಿಜ್ಯ ನಷ್ಟವನ್ನು ಶೇ. 23.17ರಿಂದ ಶೇ.20.18ಕ್ಕೆ ಇಳಿಸಿ ಗುಣಮಟ್ಟದ ವಿದ್ಯುತ್ ಸರಬರಾಜಿಗೆ ಕ್ರಮ ಕೈಗೊಂಡಿದ್ದೇವೆ. ಈ ಪ್ರಕ್ರಿಯೆಯ ಬಂಡವಾಳ ಕಾಮಗಾರಿಗಳಿಗಾಗಿ ಕಳೆದ 4 ವರ್ಷಗಳಿಲ್ಲಿ 14.751 ಕೋಟಿ ರೂ.ಗಳನ್ನು ಹೂಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಾವರಿ ಪಂಪ್ ಸೆಟ್ಟುಗಳಿಗೆ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಒದಗಿಸಲು **ನಿರಂತರ ಜ್ಯೋತಿ** ಯೋಜನೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯು ಎರಡು ಹಂತಗಳಲ್ಲಿ 2,123 ಕೋಟಿ ರೂ.ವೆಚ್ಚದಲ್ಲಿ 126 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿವೆ. ಮೊದಲ ಹಂತದ ಕಾಮಗಾರಿಗಳಲ್ಲಿ 384 ಫೀಡರ್‌ಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, ಮಾರ್ಚ್, 2013ರ ವೇಳೆಗೆ ಮೊದಲ ಹಂತರ ಕಾಮಗಾರಿಗಳು ಮುಕ್ತಾಯಗೊಳ್ಳಲಿವೆ. 2ನೇ ಹಂತದ ಕಾಮಗಾರಿಗಳ ಅನುಷ್ಠಾನ ಪ್ರಗತಿಯಲ್ಲಿದೆ.

24. ವಿದ್ಯುತ್ ಸಂರಕ್ಷಣೆಯ ಭಾಗವಾಗಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ 37 ಲಕ್ಷ ಸಿಎಫ್ ಎಲ್ ಬಲ್ಬ್‌ಗಳನ್ನು ವಿತರಿಸಲಾಗಿದೆ. ದೊಡ್ಡಬಳಾಪುರ ತಾಲ್ಲೂಕಿನಲ್ಲಿ ಪ್ರಯೋಗಿಕವಾಗಿ ಹೆಚ್ಚಿನ ಇಂಧನ ಸಕ್ಷಮತೆಯುಳ್ಳ 283 ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದೆ. 2009ರಲ್ಲಿ ನವೀಕರಿಸುವ ಇಂಧನ ನೀತಿಯನ್ನು ಘೋಷಿಸಲಾಯಿತು. 2008-09ರಿಂದ ಇಲ್ಲಿಯವರಿಗೆ 1913 ಮೆ.ವ್ಯಾ ಸಾಮರ್ಥ್ಯದ ನವೀಕರಿಸವ ಇಂಧನ ಯೋಜನೆಗಳು ಕಾರ್ಯಾರಂಭ ಮಾಡಿವೆ. 2011ರಲ್ಲಿ ಸೌರ

ವಿದ್ಯುತ್ ನೀತಿಯನ್ನು ಹೊರತರಲಾಗಿದೆ. ಸೌರ ಶಕ್ತಿಯ ಪರಿಣಾಮಕಾರಿ ಬಳಕೆಗೆ ಖಾಸಗಿ ಉದ್ಯಮದಾರರಿಗೆ 200 ಮೆ.ವ್ಯಾ. ಹಂಚಿಕೆ ಮಾಡಲು ರಾಜ್ಯ ಸರ್ಕಾರವು ಕ್ರಮ ಕೈಗೊಂಡಿದೆ.

25. 2012-13ನೇ ಸಾಲಿನಲ್ಲಿ 8,897 ಕುಡಿಯುವ ನೀರು ಸರಬರಾಜು ಸ್ಥಾವರ ಮತ್ತು 15,000 ಗಂಗಾ ಕಲ್ಯಾಣ ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಯೋಜಿಸಲಾಗಿದೆ. ಕಳೆದ 2 ವರ್ಷಗಳಲ್ಲಿ ರೈತರ 1.2 ಲಕ್ಷ ಅಕ್ರಮ ನೀರಾವರಿ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ.

26. ವಿದ್ಯುತ್ ನಿಗಮಗಳ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಸೂಕ್ತವಾದ ಪರಿಹಾರಿಕ ಕ್ರಮಗಳನ್ನು ಶಿಫಾರಸ್ಸು ಮಾಡಲು ಒಂದು ತಜ್ಞರ ಸಮಿತಿಯನ್ನು ರಚಿಸಲಾಗುವುದು.

27. ರೈತರ ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊ-ಳಿಸುವ ಕಾರ್ಯಕ್ರಮವನ್ನು 2013-14ರಲ್ಲಿಯೂ ಮುಂದುವರಿಸಲಾಗುವುದು.

28. ಸಿಎಫ್‌ಎಲ್ ಬಲ್ಬ್‌ಗಳ ವಿತರಣಾ ಕಾರ್ಯಕ್ರಮವನ್ನು 2013-14ನೇ ಸಾಲಿನಲ್ಲಿಯೂ ಮುಂದುವರೆಸಲಾಗುವುದು.

29. 2013-14ನೇ ಸಾಲಿನಲ್ಲಿ ಕೆಳಗಿನ ಈ ನಾಲ್ಕು ಹೊಸ ಉಪಕ್ರಮಗಳನ್ನು ಉದ್ದೇಶಿಸಲಾಗಿದೆ:

- ವಿತರಣಾ ನಷ್ಟವನ್ನು ಕಡಿಮೆ ಮಾಡುವ ಉದ್ದೇಶದಿಂದ ಪ್ರತಿಯೊಂದು ವಿದ್ಯುತ್ ವಿತರಣಾ ಕಂಪನಿಯ ಒಂದು ವಿಭಾಗದಲ್ಲಿ ಹೆಚ್.ವಿ.ಡಿ.ಎಸ್. (High voltage Distribution System) ಯೋಜನೆಯ ಅನುಷ್ಠಾನ :
- ನೀರಾವರಿ ಕಾಲುವೆ (Irrigation Canal) ಮೇಲ್ಛಾವಣಿ ಸೌರ ಶಕ್ತಿ ಯೋಜನೆ:
- ವಿದ್ಯುತ್ ವಲಯದಲ್ಲಿ ಹೊಸ ತಾಂತ್ರಿಕತೆಯ ಅಳವಡಿಕೆ ಮತ್ತು ವಿದ್ಯುತ್ ಮೀಟರ್‌ಗಳ ಪರೀಕ್ಷೆಗಾಗಿ ಕೇಂದ್ರೀಕೃತ ಸಂಶೋಧನಾ ಕೇಂದ್ರ ಸ್ಥಾಪನೆ;

- ವಿದ್ಯುತ್ ಸಂರಕ್ಷಣೆಯನ್ನು ಪ್ರೋತ್ಸಾಹಿಸಲು ಹಸಿರು ಕಟ್ಟಡಗಳ ನಿರ್ಮಾಣ.

30. 2013–14ನೇ ಸಾಲಿನಲ್ಲಿ ಇಂಧನ ವಲಯಕ್ಕೆ 10,831 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ರಸ್ತೆ ಮತ್ತು ಕಟ್ಟಡಗಳು

31. ರಾಜ್ಯದ ಅಭಿವೃದ್ಧಿಗೆ ರಸ್ತೆಗಳು ಸಂಪರ್ಕ ಜಾಲವು ಮಹತ್ವದ ಕೊಡುಗೆ ನೀಡುತ್ತದೆ. ಗುಣಮಟ್ಟದ ಮತ್ತು ಅಧಿಕ ಸಾಮರ್ಥ್ಯದ ರಸ್ತೆ ಸಂಪರ್ಕ ಜಾಲವನ್ನು ಅಭಿವೃದ್ಧಿಪಡಿಸಲು ಸರ್ಕಾರವು ಬದ್ಧವಾಗಿದೆ.

32. ಕಳೆದ 5 ವರ್ಷಗಳಲ್ಲಿ 8,048 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು, 11,513 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳನ್ನು ಮತ್ತು 8,601 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಹಾಗೂ 659 ಸೇತುವೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ವಿವರಗಳು ಕೆಳಗಿನಂತಿವೆ;

- 2,657 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳ ಅಗಲೀಕರಣ ಮತ್ತು 2,151 ಕಿ.ಮೀ. ರಾಜ್ಯ ಹೆದ್ದಾರಿಗಳ ಬಲಪಡಿಸುವಿಕೆ.
- 324 ಕೋಟಿ ರೂ. ವೆಚ್ಚದಲ್ಲಿ 2505 ಕಿ.ಮೀ. ರಾಜ್ಯ ಹೆದ್ದಾರಿಗಳ ನವೀಕರಣ.
- 3,468 ಕೋಟಿ ರೂ. ವೆಚ್ಚದಲ್ಲಿ 9,780 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ.
- ಸುವರ್ಣವಿಕಾಸ ಯೋಜನೆಯಡಿ 351 ಕೋಟಿ ರೂ. ವೆಚ್ಚದಲ್ಲಿ 1,733 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ.
- ನಬಾರ್ಡ್ ಯೋಜನೆಯಲ್ಲಿ 1,113 ಕೋಟಿ ರೂ. ವೆಚ್ಚದಲ್ಲಿ 5,538 ಕಿ.ಮೀ.ಗಳ ಗ್ರಾಮೀಣ ರಸ್ತೆ ಮತ್ತು 163 ಸೇತುವೆಗಳ ನಿರ್ಮಾಣ; ರಾಯಚೂರು ಮಂತ್ರಾಲಯ ರಾಜ್ಯಹೆದ್ದಾರಿಯಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ 40 ಕೋಟಿ ರೂ. ವೆಚ್ಚದಲ್ಲಿ ಸೇತುವೆಯ ಪುನರ್ ನಿರ್ಮಾಣ.

- **ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದಿಂದ** 1,024 ಕೋಟಿ ರೂ. ವೆಚ್ಚದಲ್ಲಿ 594 ಕಿ.ಮೀ. ಉದ್ದದ 14 ಪ್ರಮುಖ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ; ಮತ್ತು 562 ಕೋಟಿ ರೂ.ಗಳಲ್ಲಿ 495 ಸೇತುವೆಗಳ ನಿರ್ಮಾಣ. ಪ್ರಥಮಬಾರಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ಪಿ.ಪಿ.ಪಿ.–ವಿ.ಜಿ.ಎಫ್ (ಟೋಲ್) ಮಾದರಿಯಲ್ಲಿ 243 ಕೋಟಿ ರೂ. ಮೊತ್ತದಲ್ಲಿ 141 ಕಿ.ಮೀ. ಉದ್ದದ ವಾಗ್ದಾರಿ–ರಿಬ್ಬನ್‌ಪಲ್ಲಿ ರಾಜ್ಯ ಹೆದ್ದಾರಿಯ ಅಭಿವೃದ್ಧಿ.
- ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳಡಿ ಪರಿಶಿಷ್ಠ ಜಾತಿ ಮತ್ತು ಪಂಗಡಗಳು ವಾಸಿಸುವ ಕಾಲೋನಿ/ತಾಂಡಾಗಳಲ್ಲಿ 622 ಕೋಟಿ ರೂ. ವೆಚ್ಚದಲ್ಲಿ 3,063 ಕಿ.ಮೀ. ಕಾಂಕ್ರೀಟ್ ರಸ್ತೆ/ ಕೂಡು ರಸ್ತೆಗಳ ನಿರ್ಮಾಣ.
- ಯೋಜನೆ ಮತ್ತು ರಸ್ತೆ ಆಸ್ತಿ ನಿರ್ವಹಣಾ ಕೇಂದ್ರದ (PRAMC) ಸ್ಥಾಪನೆ.

33. ಕಳೆದ 5 ವರ್ಷಗಳಲ್ಲಿ 662 ಕಿ.ಮೀ. ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಮತ್ತು 769 ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

34. **ಬೆಳಗಾವಿಯಲ್ಲಿ ವಿಧಾನಮಂಡಲದ ಅಧಿವೇಶನಗಳನ್ನು** ನಿರಂತರವಾಗಿ ನಡೆಸಲು ಅನುವಾಗುವಂತೆ ದಾಖಲೆ ಸಮಯದಲ್ಲಿ 391 ಕೋಟಿ ರೂ. ವೆಚ್ಚದಲ್ಲಿ **"ಸುವರ್ಣ ವಿಧಾನ ಸೌಧ"** ನಿರ್ಮಿಸಿ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಅಧಿವೇಶನವನ್ನು ಯಶಸ್ವಿಯಾಗಿ ನಡೆಸಿರುತ್ತೇವೆ.

35. ಕಳೆದ ಐದು ವರ್ಷಗಳಲ್ಲಿ 1,878 ಕೋಟಿ ರೂ. ವೆಚ್ಚದಲ್ಲಿ 1,747 ಕಛೇರಿ ಹಾಗೂ ನ್ಯಾಯಾಲಯ ಕಟ್ಟಡಗಳು ಮತ್ತು ನ್ಯಾಯಾಧೀಶರ ಹಾಗೂ ಇತರೆ ವಸತಿ ಗೃಹಗಳ ನಿರ್ಮಾಣ ಮಾಡಲಾಗಿದೆ.

36. 2013–14ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಿರುವ ಯೋಜನೆಗಳು :

- **ಕೆಶಿಪ್–II** : ಏಷಿಯಾ ಅಭಿವೃದ್ಧಿ ಬ್ಯಾಂಕಿನ ಸಾಲದಿಂದ 1,330 ಕೋಟಿ ರೂ. ಅಂದಾಜು ವೆಚ್ಚದಲ್ಲಿ 616 ಕಿ.ಮೀ. ರಾಜ್ಯ ಹೆದ್ದಾರಿಗಳ ಅಭಿವೃದ್ಧಿ– (i) ಪಾವಗಡ– ಆಂಧ್ರ ಪ್ರದೇಶದ ಗಡಿ ರಾಜ್ಯಹೆದ್ದಾರಿ ಮತ್ತು (ii) ಜಗಳೂರು ರಾಷ್ಟ್ರೀಯ ಹೆದ್ದಾರಿ 13ರಿಂದ ರಾಜ್ಯ ಹೆದ್ದಾರಿ 19ರ ವರೆಗಿನ ಕಾಮಗಾರಿಗಳು;
- **ವಿಶ್ವ ಬ್ಯಾಂಕ್** ಸಹಾಯದೊಂದಿಗೆ 657 ಕೋಟಿ ರೂ. ವೆಚ್ಚದಲ್ಲಿ 269 ಕಿ.ಮೀ. ರಾಜ್ಯ ಹೆದ್ದಾರಿಗಳ ಅಭಿವೃದ್ಧಿ – (i) ಹೊಸಕೋಟೆ–ಚಿಂತಾಮಣಿ, (ii) ಧಾರವಾಡ – ಸೌದತ್ತಿ (iii) ಚೌಡಾಪುರ – ಗುಲ್ಬರ್ಗಾವರೆಗಿನ ಕಾಮಗಾರಿಗಳು;
- **ಕೆ. ಆರ್.ಡಿ.ಸಿ.ಎಲ್**. ನಿಂದ 1,615 ಕೋಟಿ ರೂ. ವೆಚ್ಚದಲ್ಲಿ 612 ಕಿ.ಮೀ. ಉದ್ದದ 14 ರಾಜ್ಯ ಹೆದ್ದಾರಿಗಳ ಅಭಿವೃದ್ಧಿ;
- 110 ಕೋಟಿ ರೂ. ವೆಚ್ಚದಲ್ಲಿ 5 ಸೇತುವೆಗಳ ನಿರ್ಮಾಣ ಪೂರ್ಣ;
- Users Fee-Toll ಆಧಾರದ ಮೇಲೆ 10 ವರ್ಷಗಳವರೆಗೆ ಕಾರ್ಯಾಚರಣೆ, ನಿರ್ವಹಣೆ ಮತ್ತು ಸುಂಕ ಸಂಗ್ರಹಣೆ (OMT) ಆಧಾರದ ಮೇಲೆ ಗುತ್ತಿಗೆಗೆ 9 ರಾಜ್ಯ ಹೆದ್ದಾರಿಗಳು:

  - ಕಲ್ಮಲ ಜಂಕ್ಷನ್‌ನಿಂದ ಸಿಂಧನೂರು
  - ಹತ್ತಿಗೂಡೂರಿನಿಂದ ಬೀದರ್
  - ಬಿಜಾಪುರದ ಹತ್ತಿರ ಕೃಷ್ಣಾಸೇತುವೆಯಿಂದ ಲೋಕಾಪುರ
  - ಸಂಕೇಶ್ವರದಿಂದ ಯಾದವಾಡ
  - ಹುನಗುಂದದಿಂದ ಬೆಳಗಾವಿ

- ಹಿರಿಯೂರಿನಿಂದ ಬಳ್ಳಾರಿ
- ಬಿಳಿಕೆರೆಯಿಂದ ಹಾಸನ ಮಾರ್ಗವಾಗಿ ಬೇಲೂರು
- ಯಾದಗಿರಿಯಿಂದ ಆಂಧ್ರಪ್ರದೇಶದ ಗಡಿ
- ಆಂದ್ರಪ್ರದೇಶದ ಗಡಿಯಿಂದ ಶಹಾಪುರ

- ಸಾರ್ವಜನಿಕ ಖಾಸಗಿ ಸಹಭಾಗಿತ್ವದಡಿಯಲ್ಲಿ ಪಿ.ಪಿ.ಪಿ.–ವಿ.ಜಿ.ಎಫ್ (ಟೋಲ್) ಮಾದರಿ 480 ಕೋಟಿ ರೂ. ವೆಚ್ಚದಲ್ಲಿ (i) ಚಿಕ್ಕನಾಯಕನಹಳ್ಳಿ–ತಿಪಟೂರು–ಹಾಸನ ಹಾಗೂ (ii) ಧಾರವಾಡ –ಅಳ್ನಾವರ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ.

37. **ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP)** 2,797 ಕೋಟಿ ರೂ. ವೆಚ್ಚದಲ್ಲಿ 4,130 ಕಿ.ಮೀ. ರಾಜ್ಯಹೆದ್ದಾರಿಗಳ ಬಲಪಡಿಸುವಿಕೆ ಹಾಗೂ 3122 ಕಿ.ಮೀ ರಾಜ್ಯ ಹೆದ್ದಾರಿಗಳ ನವೀಕರಣ; ಮೊದಲ ಹಂತದಲ್ಲಿ 2013–14ನೇ ಸಾಲಿನಲ್ಲಿ 1,348 ಕೋಟಿ ರೂ.ಗಳಲ್ಲಿ 3,307 ಕಿ.ಮೀ. ರಸ್ತೆಗಳ ನಿರ್ಮಾಣ ಮಾಡಲಾಗುವುದು.

38. SHDP ಎರಡನೇ ಹಂತದಲ್ಲಿ, 1,357.75 ಕೋಟಿ ರೂ.ಗಳಲ್ಲಿ 3,576 ಕಿ.ಮೀ.ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳ ಪ್ರಾರಂಭ ಮಾಡಲಾಗುವುದು.

39. ಸಕಲೇಶಪುರದಿಂದ ಮಂಗಳೂರು ರಸ್ತೆಯಲ್ಲಿರುವ ಶಿರಾಡಿ ಘಾಟ್‌ನಲ್ಲಿ ಸಾಗಣೆ ದಟ್ಟಣೆಯನ್ನು ಸುಲಭಗೊಳಿಸಲು ಉತ್ತಮ ದರ್ಜೆಯ 6 ಪಥದ ಸುರಂಗ ಮಾರ್ಗವನ್ನು ನಿರ್ಮಿಸಲು ಶಖ್ಯತಾ ವರದಿಯನ್ನು (Frasibility Report) ತಯಾರಿಸಲಾಗುವುದು.

40. ಆಗುಂಬೆ ಘಾಟ್ ರಸ್ತೆಯನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

41. ಶಿವಮೊಗ್ಗ ಜಿಲ್ಲೆಯ ಹೊಸನಗರ ಹಾಗೂ ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಸೇತುವೆ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲಾಗುವುದು.

42. ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಪ್ರಸ್ತುತ ಆಯವ್ಯಯದಲ್ಲಿ 1/3 ರಷ್ಟು ಅನುದಾನವನ್ನು ಒದಗಿಸಿ ಅನುಮೋದನೆ

ನೀಡಲಾಗುತ್ತಿದೆ. ಈಗ ಅತ್ಯಾದುನಿಕ ತಂತ್ರಜ್ಞಾನ ಬಳಸಿಕೊಂಡು ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿರುವುದರಿಂದ ಹಾಗೂ ಉತ್ತಮ ಯೋಜನಾ ನಿರ್ವಹಣೆಯಿಂದಾಗಿ ಕಾಮಗಾರಿಗಳು ಒಂದೇ ವರ್ಷದಲ್ಲಿ ಪೂರ್ಣಗೊಳ್ಳುತ್ತಿವೆ. ಆದುದರಿಂದ 2013–14ನೇ ಆರ್ಥಿಕ ವರ್ಷದಿಂದ 5 ಕೋಟಿ ರೂ. ವರೆವಿಗಿನ ಕಾಮಗಾರಿಗಳಿಗೆ ಪೂರ್ತಿ ಅನುದಾನ ಒದಗಿಸಿಕೊಂಡು ಕೆಲಸ ಪ್ರಾರಂಭಿಸುವುದು ಹಾಗೂ 5 ಕೋಟಿ ರೂ. ಮೀರಿದ ಕಾಮಗಾರಿಗಳಿಗೆ ಶೇ. 50 ಅನುದಾನ ನಿಗಧಿಪಡಿಸಿ, ಆಡಳಿತ ಅನುಮೋದನೆ ನೀಡುವುದು ಹಾಗೂ ಉಳಿದ ಶೇ. 50 ಅನುದಾನವನ್ನು ನಂತರದ ಸಾಲಿನಲ್ಲಿ ಒದಗಿಸಿಕೊಂಡು ಕಾಮಗಾರಿ ಪೂರ್ಣಗೊಳಿಸುವ ನಿಯಮವನ್ನು ಜಾರಿಗೊಳಿಸಲಾಗುವುದು.

43. ರಸ್ತೆಗಳ ಉತ್ತಮ ನಿರ್ವಹಣೆಗಾಗಿ ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ 1,000 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇದರ ಜೊತೆಗೆ ಜಿಲ್ಲಾಪಂಚಾಯತ್‌ಗಳು ನಿರ್ವಹಣೆ ಮಾಡುತ್ತಿರುವ ರಸ್ತೆಗಳಿಗೆ 400 ಕೋಟಿ ರೂ. ಗಳನ್ನು ಒದಗಿಸಲಾಗಿದೆ. ಈ ಎರಡೂ ಅನುದಾನಗಳನ್ನು ಒಟ್ಟುಗೂಡಿಸಿದಲ್ಲಿ 2012–13ರ ಆಯವ್ಯಯದಲ್ಲಿ ಒದಗಿಸಿದ್ದಕ್ಕಿಂತ ಶೇ.24 ರಷ್ಟು ಹೆಚ್ಚಾಗಿದೆ.

44. ರಾಜ್ಯದಲ್ಲಿ ಕೈಗೊಳ್ಳಲಾಗುತ್ತಿರುವ ವಿವಿಧ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಕಾರ್ಯನಿರ್ವಹಿಸುತ್ತಿರುವ **ಕಾಮಗಾರಿಗಳ ಗುಣನಿಯಂತ್ರಣ ಕಾರ್ಯಪಡೆಗೆ** ಪೂರಕವಾಗಿ **ಗುಣ ಭರವಸೆಯ ಘಟಕ** (Quality Assurance Unit) ವನ್ನು ಸ್ಥಾಪಿಸಲು ಉದ್ದೇಶಿಸಿದೆ.

45. ಕರಾವಳಿ ರಕ್ಷಣೆ : ಏಷ್ಯಾ ಅಭಿವೃದ್ಧಿ ಬ್ಯಾಂಕಿನ ಸಾಲದ ನೆರವಿನೊಂದಿಗೆ 223 ಕೋಟಿ ರೂ. ವೆಚ್ಚದಲ್ಲಿ ಕರಾವಳಿ ರಕ್ಷಣಾ ಯೋಜನೆಯನ್ನು ಕೈಗೊಳ್ಳಲಾಗುವುದು. ಈ ಕಾಮಗಾರಿಗಳು ಉಳ್ಳಾಲದಲ್ಲಿ 2013–14ನೇ ಸಾಲಿನಲ್ಲಿ ಪ್ರಾರಂಭವಾಗುತ್ತವೆ. ಎರಡನೇ ಹಂತದಲ್ಲಿ, ಎರ್ಮಾಲು, ಟೆಂಕ, ಉಳಿಯಾರುಗೋಳಿ ಮತ್ತು ಉಡುಪಿ ಜಿಲ್ಲೆಯ ಉದ್ಯಾವರ ಪಡುಕೆರೆಯಲ್ಲಿ ಮತ್ತು ಉತ್ತರಕನ್ನಡ ಜಿಲ್ಲೆಯ ಪಾವಿನಕುರ್ವೆ–ಯಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ.

46. 2013–14ನೇ ಸಾಲಿನಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ 5,321 ಕೋಟಿ ರೂ. ಒದಗಿಸಲಾಗಿದೆ.

ಮೂಲಸೌಕರ್ಯ

47. **ರೈಲ್ವೆ ಸೌಕರ್ಯ :** ಕರ್ನಾಟಕವು, ರೈಲ್ವೆ ಯೋಜನೆಗಳಲ್ಲಿ ಶೇ.50ರಷ್ಟು ಪಾಲುದಾರಿಕೆಯ ಮುಖಾಂತರ ರೈಲ್ವೆ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಹೆಜ್ಜೆ ಇಟ್ಟ ಮೊದಲ ರಾಜ್ಯವಾಗಿದೆ. ಇಲ್ಲಿಯವರೆಗೆ ರೈಲ್ವೆ ಯೋಜನೆಗಳಿಗಾಗಿ 1,021 ಕೋಟಿ ರೂ. ಗಳನ್ನು ರಾಜ್ಯ ಸರ್ಕಾರದ. ಭಾಗವಾಗಿ ಬಿಡುಗಡೆ ಮಾಡಲಾಗಿದೆ. ಮುಂದುವರಿದ ಯೋಜನೆಗಳನ್ನು ಪೂರ್ಣಗೊಳಿಸಲು ಹೆಚ್ಚಿನ ಆದ್ಯತೆ ನೀಡಿದ್ದು, ಯೋಜನೆಗಳನ್ನು ತ್ವರಿತಗೊಳಿಸುವಂತೆ ಕೇಂದ್ರ ರೈಲ್ವೆ ಮಂತ್ರಾಲಯವನ್ನು ಒತ್ತಾಯಿಸಿದೆ. ರಾಜ್ಯದ ಬಂಡವಾಳ ಹೂಡಿಕೆಗಾಗಿ 440 ಕೋಟಿ ರೂ.ಗಳನ್ನು 2013–14ರ ಆಯವ್ಯಯದಲ್ಲಿ ಒದಗಿಸಲಾಗಿದೆ.

48. **ರೈಲ್ವೆ ವಲಯದಲ್ಲಿ ಸಾಧನೆ ಕೆಳಕಂಡಂತಿವೆ :**

- ಬೆಂಗಳೂರು – ರಾಮನಗರ ಜೋಡಿ ರೈಲು ಮಾರ್ಗದ ಕಾರ್ಯ ಪೂರ್ಣ;
- ರಾಮನಗರ–ಚನ್ನಪಟ್ಟಣ ಮತ್ತು ಮೈಸೂರು–ನಾಗನಹಳ್ಳಿ ಜೋಡಿ ಮಾರ್ಗದ ಕಾರ್ಯ ಪೂರ್ಣ;
- ಶಿವಮೊಗ್ಗ – ತಾಳಗುಪ್ಪಾ ಮಾರ್ಗ ಮತ್ತು ಗದಗ–ಸೋಲಾಪುರ ಮಾರ್ಗಗಳು ಪೂರ್ಣ;
- ಕಡೂರು–ಚಿಕ್ಕಮಗಳೂರು ಹೊಸ ರೈಲ್ವೆ ಮಾರ್ಗ ಮತ್ತು ಕೋಲಾರ–ಚಿಕ್ಕಬಳ್ಳಾಪುರ ಗೇಜ್ ಪರಿವರ್ತನಾ ಯೋಜನೆಗಳು ಶೀಘ್ರದಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಲಭ್ಯ;
- ಹೊಸದಾಗಿ ಕೊಟ್ಟೂರು–ಹರಿಹರ ಮತ್ತು ಮುನಿರಾಬಾದ್–ಮೆಹಬೂಬ್ ನಗರ ಮಧ್ಯದ ರೈಲು ಮಾರ್ಗಗಳ ನಿರ್ಮಾಣ ಕಾರ್ಯ ಪ್ರಾರಂಭ;
- ಬೀದರ್ – ಗುಲ್ಬರ್ಗಾ ನಡುವಿನ ನೂತನ ರೈಲ್ವೇ ಮಾರ್ಗಕ್ಕಾಗಿ 193 ಕೋಟಿ ರೂ. ಬಿಡುಗಡೆ;

- ಶೆಟ್ಟಿಹಳ್ಳಿ– ನಾಗನಹಳ್ಳಿ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿ;
- ತುಮಕೂರು ಅರಸೀಕೆರೆ ನಡುವೆ ಜೋಡಿ ರೈಲು ಮಾರ್ಗ ನಿರ್ಮಿಸಲು ಸಮೀಕ್ಷೆ ಕಾರ್ಯಗಳನ್ನು ಕೈಗೊಳ್ಳಲಾ–ಗುವುದು.
- ಬೆಂಗಳೂರು – ಕೆಂಗೇರಿ – ಕನಕಪುರ – ಚಾಮರಾಜನಗರದ ಅನುಮೋದಿತ ರೈಲು ಮಾರ್ಗದ ಕಾಮಗಾರಿಗೆ ಅಗತ್ಯ ಅನುದಾನವನ್ನು 2013–14ನೇ ಸಾಲಿನಲ್ಲಿ ಒದಗಿಸಲಾ–ಗುವುದು.
- ಈ ಕೆಳಕಂಡ ಹೊಸ ರೈಲ್ವೆ ಮಾರ್ಗಗಳ ಸರ್ವೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಈ ಯೋಜನೆ ಅನುಷ್ಠಾನಕ್ಕೆ ಭೂಮಿ ಮಂಜೂರಾತಿ ಮತ್ತು ರಾಜ್ಯದ ಪಾಲು ಶೇ.50 ವೆಚ್ಚವನ್ನು ಭರಿಸಲಾಗುವುದು.
  - ಧಾರವಾಡ – ಬೆಳಗಾವಿ ಮಾರ್ಗ
  - ತುಮಕೂರು – ಕುಣಿಗಲ್ – ಮದ್ದೂರು –ಮಳವಳ್ಳಿ – ಚಾಮರಾಜನಗರ ಮಾರ್ಗ
  - ಬೆಂಗಳೂರು – ಕುಣಿಗಲ್ ಮಾರ್ಗ
  - ತಿಪಟೂರು – ದುದ್ದ ಬೈಪಾಸ್ ಮಾರ್ಗ
  - ತುಮಕೂರು – ರಾಯದುರ್ಗ ಮಾರ್ಗ
  - ತುಮಕೂರು – ದಾವಣಗೆರೆ ಮಾರ್ಗ
  - ಆಲಮಟ್ಟಿ – ಕೂಡಲ ಸಂಗಮ – ಕೊಪ್ಪಳ ಮಾರ್ಗ

49. ಇತರೆ ಸೌಕರ್ಯಗಳು : ದಾಬೋಲ್ ಬೆಂಗಳೂರು ಗ್ಯಾಸ್ ಲೈನ್ ಯೋಜನೆಯು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಬೆಂಗಳೂರು ಅಂತರರಾಷ್ಟ್ರೀಯ ಕನ್‌ವೆನ್ಷನ್ ಸೆಂಟರ್ ನಿರ್ಮಾಣ ಕಾರ್ಯವನ್ನು ಬೆಂಗಳೂರು ವಿಮಾನ ನಿಲ್ದಾಣದ ಬಳಿ ಕೈಗೆತ್ತಿಕೊಳ್ಳಲಾಗಿದೆ.

50. **ಕರ್ನಾಟಕ ಆಯಕಟ್ಟಿನಸೌಕರ್ಯದ** ಬೇಡಿಕೆಯ ಅಂದಾಜು ಮಾಡಲು, ಯೋಜನೆಗಳನ್ನು ಗುರುತಿಸಲು ಮತ್ತು ಆದ್ಯತೆ ನೀಡಲು ಕರ್ನಾಟಕ ಆಯಕಟ್ಟಿನ ಮೂಲಭೂತ ಯೋಜನೆಯನ್ನು ತಯಾರಿಸಲಾಗುವುದು. ಚೆನ್ನೈ– ಬೆಂಗಳೂರು – ಮೈಸೂರು ಹೈ ಸ್ಪೀಡ್ ರೈಲು ಯೋಜನೆಯ ಪೂರ್ವ ಸಾಧ್ಯತಾ ಅಧ್ಯಯನು ಮತ್ತು ಕಾಸರಗೋಡು – ಮಂಗಳೂರು –ಉಡುಪಿ ಹೈ ಸ್ಪೀಡ್ ರೈಲು ಮಾರ್ಗದ ಹಾಗೂ ಬೆಂಗಳೂರು– ಹುಬ್ಬಳ್ಳಿ–ಬೆಳಗಾವಿ ಹೈ ಸ್ಪೀಡ್ ರೈಲು ಮಾರ್ಗದ ವಿಸ್ತೃತ ಯೋಜನಾ ವರದಿಯ ತಯಾರಿಕೆಯ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು. ಕನಕಪುರ ತಾಲ್ಲೂಕಿನ ಹಾರೋಹಳ್ಳಿ, ತುಮಕೂರು ತಾಲ್ಲೂಕಿನ ವಸಂತನರಸಾಪುರ, ಹಾಸನ ಮತ್ತು ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಲಾಜಿಸ್ಟಿಕ್ ಪಾರ್ಕ್‌ಗಳನ್ನು ಸ್ಥಾಪಿಸಲಾಗುವುದು,

51. ವಿಮಾನ ನಿಲ್ದಾಣಗಳು : ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರ ಟರ್ಮಿನಲ್‌ನ ವಿಸ್ತರಣಾ ಕಾರ್ಯವು 2013ರಲ್ಲಿ ಪೂರ್ಣಗೊಳ್ಳುವುದರಿಂದ ಪ್ರಚಲಿತ ಸಾಮರ್ಥ್ಯದ ಸಮಸ್ಯೆಯು ನಿವಾರಣೆಗೊಂಡು 17 ದಶಲಕ್ಷ ಪ್ರಯಾಣಿಕರು ಉನ್ನತೀಕರಿಸಿದ ಸೌಲಭ್ಯವನ್ನು ಪಡೆಯಲಿದ್ದಾರೆ. ಭಾರತ ವಿಮಾನ ನಿಲ್ದಾಣ ಪ್ರಾಧಿಕಾರದ ಪಾಲುದಾರಿಕೆಯೊಂದಿಗೆ ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣ ವಿಸ್ತರಣಾ ಕಾರ್ಯವನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲು, ಅನುಕ್ರಮವಾಗಿ 600 ಎಕರೆ ಮತ್ತು 370 ಎಕರೆ ಜಮೀನನ್ನು ಹಸ್ತಾಂತರಿಸಲಾಗಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾದ ಗುಲ್ಬರ್ಗಾ ಮತ್ತು ಶಿವಮೊಗ್ಗ ವಿಮಾನ ನಿಲ್ದಾಣಗಳು ಅನುಕ್ರಮವಾಗಿ ಮೇ ಮತ್ತು ಆಗಸ್ಟ್ 2013ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

52. 2013–14ನೇ ಸಾಲಿನಲ್ಲಿ ಮೂಲ ಸೌಕರ್ಯ ಇಲಾಖೆಗೆ 710 ಕೋಟಿ ರೂ. ಒದಗಿಸಲಾಗಿದೆ.

ನಗರಾಭಿವೃದ್ಧಿ

53. 2011ರ ಜನಗಣತಿಯ ಪ್ರಕಾರ ಕರ್ನಾಟಕದ ನಗರ ಪ್ರದೇಶದ ಜನಸಂಖ್ಯೆಯು ಶೇ. 37.5 ತಲುಪಿದೆ. ಕರ್ನಾಟಕವು ನಗರೀಕರಣದಲ್ಲಿ

ದೇಶದಲ್ಲಿ 5ನೇ ಸ್ಥಾನ ಹೊಂದಿದೆ. ಉತ್ತಮ ಆರ್ಥಿಕ ಅವಕಾಶಗಳನ್ನು ಹೊಂದಿರುವಂಥ ನಗರ ಪ್ರದೇಶಗಳಿಗೆ ಜನರನ್ನು ಸುವ್ಯವಸ್ಥಿತ ರೀತಿಯಲ್ಲಿ ಸ್ಥಳಾಂತರಿಸಲು ಯುಕ್ತವಾಗಿ ಯೋಜಿಸಲಾದ ನಗರಾಭಿವೃದ್ಧಿಯು ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ರೂಪಿಸಿರುವ ಕಾರ್ಯತಂತ್ರದ ಒಂದು ಸಂಯೋಜಿತ ಭಾಗವಾಗಿದೆ. ಮೂರನೇ ಹಂತದ ಆಡಳಿತವನ್ನು ಸಬಲಗೊಳಿಸಲು ಹಲವಾರು ಸುಧಾರಣಾ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿನ ಸಾಧನೆಗಳು ಕೆಳಂಡಂತಿವೆ:

- ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಚುನಾಯಿತ ಪ್ರತಿನಿಧಿಗಳ ಮೀಸಲಾತಿ ಶೇ.33 ರಿಂದ ಶೇ 50ಕ್ಕೆ ಹೆಚ್ಚಳ;
- ಹಣಕಾಸು ಆಯೋಗದ ಶಿಫಾರಸ್ಸಿನಂತೆ 5 ವರ್ಷಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ 12,102 ಕೋಟಿ ರೂ. ಒದಗಿಸಲಾಗಿದೆ.
- ಮೂಲ ಸೌಕರ್ಯ ಅಭಿವೃದ್ಧಿ ಪಡಿಸಲು 2,086 ಕೋಟಿ ರೂ. ಅನುದಾನ ಬಳಸಿ 48,034 ಕಾಮಗಾರಿಗಳು:
- ಮುಖ್ಯ ಮಂತ್ರಿಗಳ ನಗರೋತ್ಥಾನ ಯೋಜನೆಯ ಮೊದಲ ಹಂತದಲ್ಲಿ 1,168 ಕೋಟಿ ರೂ. ವೆಚ್ಚದಲ್ಲಿ 6,966 ಕಾಮಗಾರಿ ಪೂರ್ಣ;
- ಮೊದಲ ಬಾರಿಗೆ ಎಲ್ಲಾ ಮಹಾನಗರ ಪಾಲಿಕೆಗಳಿಗೆ ತಲಾ 200 ಕೋಟಿ ರೂ. ಹಣ ಮಂಜೂರು; ಇಲ್ಲಿಯವರೆಗೆ 754 ಕೋಟಿ ರೂ.ವೆಚ್ಚದಲ್ಲಿ 1,819 ಕಾಮಗಾರಿಗಳು ಪೂರ್ಣ;
- ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ 2,775 ಕೋಟಿ ರೂ. ಬಂಡವಾಳ–ದಲ್ಲಿ 44 ಕುಡಿಯುವ ನೀರಿನ ಯೋಜನೆಗಳು ಮತ್ತು 39 ಒಳಚರಂಡಿ ಯೋಜನೆಗಳ ಅನುಷ್ಠಾನ, 11 ಯೋಜನೆಗಳು ಪೂರ್ಣ, 22 ಕುಡಿಯುವ ನೀರಿನ ಯೋಜನೆಗಳು, 13

ಒಳಚರಂಡಿ ಯೋಜನೆಗಳು ಪ್ರಗತಿಯಲ್ಲಿ ಮತ್ತು ಟೆಂಡರ್ ಪ್ರಕ್ರಿಯೆ ಹಂತದಲ್ಲಿ 37 ಯೋಜನೆಗಳು;

- ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದಿಂದ 1,333 ಕೋಟಿ ರೂ. ವೆಚ್ಚದಲ್ಲಿ 205 ಕಾಮಗಾರಿ ಪೂರ್ಣ, 88 ಕಾಮಗಾರಿಗಳು ಪ್ರಗತಿಯಲ್ಲಿ;
- 206 ನಗರ ಸ್ಥಳೀಯ ಸಂಸ್ಥೆಗಳಲ್ಲಿ ವೈಜ್ಞಾನಿಕ ತಳಹದಿಯಲ್ಲಿ ಘನತ್ಯಾಜ್ಯ ನಿರ್ವಹಣೆ;
- ಕೊಳಚೆ ಪ್ರದೇಶಗಳ ಸಮೀಕ್ಷೆಯಲ್ಲಿ ಗುರುತಿಸಲಾದ 3568 ಕೊಳಚೆ ಪ್ರದೇಶಗಳಲ್ಲಿ 7.88 ಲಕ್ಷ ಕುಟುಂಬಗಳಿಗೆ ವಸತಿ ಒಳಗೊಂಡಂತೆ ಮೂಲ ಸೌಕರ್ಯದ ವಿಸ್ತರಣೆಗೆ ಕ್ರಮ;
- ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿ 3.27 ಲಕ್ಷ ಫಲಾನುಭವಿಗಳಿಗೆ 263 ಕೋಟಿ ರೂ. ಸಾಲ, 75 ಕೋಟಿ ರೂ. ಸಹಾಯಧನ ವಿತರಣೆ, ಈ ಪೈಕಿ 67,235 ಫಲಾನುಭವಿಗಳಿಗೆ ಕೌಶಲ್ಯ ತರಬೇತಿ;
- ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್‌ನಿ–ರ್ಮಾಣ (JnNURM)ಯೋಜನೆಯಡಿ

  ○ ಬೆಂಗಳೂರು ಹಾಗೂ ಮೈಸೂರು ನಗರಗಳಿಗೆ 4,625 ಕೋಟಿ ರೂ. ಬಂಡವಾಳದಲ್ಲಿ 67 ಯೋಜನೆಗಳು ಮಂಜೂರು, 27 ಯೋಜನೆಗಳು ಪೂರ್ಣ;

  ○ ಯೋಜನೆಯ ಅನುಷ್ಠಾನದಲ್ಲಿ ರಾಜ್ಯಕ್ಕೆ ರಾಷ್ಟ್ರದಲ್ಲಿ 2ನೇ ಸ್ಥಾನ;

  ○ ಯೋಜನೆಯ 23 ಸುಧಾರಣೆಗಳ ಪೈಕಿ 19 ಸುಧಾರಣೆಗಳ ಅನುಷ್ಠಾನ;

ನಗರಾಭಿವೃದ್ಧಿ ವಲಯದ ಹೊಸ ಯೋಜನೆಗಳು

54. ಬಿಜಾಪುರ ಜಿಲ್ಲೆಯ ಎಲ್ಲಾ ಗ್ರಾಮಾಂತರ ಮತ್ತು ನಗರ ವಸತಿ ಪ್ರದೇಶಗಳಿಗೆ ನಿರಂತರ ನೀರು ಸರಬರಾಜನ್ನು ಒದಗಿಸುವ ಕನ್ನಡ ಗಂಗಾ ಹಂತ–1 ಯೋಜನೆಯನ್ನು ಕೇಂದ್ರ ಸರ್ಕಾರದ ಭಾಗಶ: ನೆರವಿನೊಂದಿಗೆ 885 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುವುದು. ಇದೇ ಮಾದರಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಗ್ರಾಮಗಳಿಗೆ ಸಹ ನೀರು ಒದಗಿಸಲು ಪರಿಶೀಲಿಸಲಾ–ಗುವುದು. ಹುಬ್ಬಳ್ಳಿ – ಧಾರವಾಡ, ಬೆಳಗಾವಿ, ಗುಲ್ಬರ್ಗಾ, ಮಂಗಳೂರು, ಪುತ್ತೂರು, ಭಟ್ಕಳ, ಉಡುಪಿ, ಕುಂದಾಪುರ, ಕಾರವಾರ ಮತ್ತು ಅಂಕೋಲ ನಗರಗಳಲ್ಲಿ 24x7 ನೀರು ಪೂರೈಕೆ ಮಾಡುವ ಹಂತಕ್ಕೆ ಸುಧಾರಿಸಲಾಗುವುದು.

55. ತುಂಗಭದ್ರಾ ನದಿ ಕೊಳ್ಳದ ನಗರಗಳಾದ ದಾವಣಗೆರೆ, ಹರಿಹರ, ರಾಣಿಬೆನ್ನೂರು ಮತ್ತು ಬ್ಯಾಡಗಿ ನಗರದಲ್ಲಿ ಮೂಲ ಸೌಕರ್ಯವನ್ನು ಆಧುನೀಕರಣಗೊಳಿಸಿ ಒಳಚರಂಡಿ ವ್ಯವಸ್ಥೆ ಮತ್ತು ಸುಧಾರಿತ ನೀರು ಸರಬರಾಜು ಕಲ್ಪಿಸಲು ಏಷ್ಯಾ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಕ್ರಮ ಕೈಗೊಳ್ಳಲಾಗುವುದು.

56. ನಗರೋತ್ಥಾನ 2ನೇ ಹಂತದಲ್ಲಿ ರಾಜ್ಯದ 211 ಪಟ್ಟಣಗಳಲ್ಲಿ 1,810 ಕೋಟಿ ರೂ. ವೆಚ್ಚದಲ್ಲಿ ಅಂದಾಜು 3,000 ಕಿ.ಮೀ. ಉತ್ತಮ ಗುಣಮಟ್ಟದ ರಸ್ತೆಗಳ ಕಾರ್ಯ ಟೆಂಡರ್ ಹಂತದಲ್ಲಿದೆ.

57. ತುಮಕೂರು ಪಟ್ಟಣದಲ್ಲಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

58. ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗಾಗಿ ವಿಶೇಷ ಅನುದಾನದ ಪ್ಯಾಕೇಜ್‌ಗೆ 100 ಕೋಟಿ ರೂ. ಒದಗಿಸಲಾಗುವುದು.

59. ಕೆರೂರು (ಬದಾಮಿ ತಾಲ್ಲೂಕು) ಪಟ್ಟಣದ ಸಮಗ್ರ ಅಭಿವೃದ್ಧಿಗಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

60. 2011ರ ಜನಗಣತಿಯ ಆಧಾರದ ಮೇಲೆ ಪಟ್ಟಣ ಪಂಚಾಯಿತಿಗಳಾಗಲಿರುವ ಗ್ರಾಮ ಪಂಚಾಯಿತಿಗಳಲ್ಲಿ ಹಾಗೂ ಉನ್ನತೀಕರಿ–ಸಲಾಗುವ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ಸೂಕ್ತವಾದ ಹಣವನ್ನು ಒದಗಿಸಲಾಗುವುದು.

61. ರಾಜ್ಯದಾದ್ಯಂತ ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರಸಭಾ ಸುಧಾರಣಾ ಘಟಕದ ಕಾರ್ಯ ನಿರ್ವಹಣೆಯನ್ನು ಸುಧಾರಿಸಲು ಮತ್ತು ಗಣಕೀಕರಣ ಹಾಗೂ ಇ– ಆಡಳಿತಕ್ಕೆ ಸಂಬಂಧಿಸಿದ ಯೋಜನೆಗಳನ್ನು ಕೈಗೆತ್ತಿಕೊಳ್ಳಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

62. ಮೈಸೂರು ನಗರದ ಪೌರ ಕಾರ್ಮಿಕರ ಮಕ್ಕಳಿಗೆ ಒಂದು ವಸತಿ ನಿಲಯವನ್ನು ಪ್ರಾರಂಭಿಸಲಾಗುವುದು.

63. ಮೈಸೂರು ಮತ್ತು ಹುಬ್ಬಳ್ಳಿ – ಧಾರವಾಡ ನಗರಗಳಲ್ಲಿ ತಲಾ 5 ಕೋಟಿ ರೂ. ವೆಚ್ಚದಲ್ಲಿ ಸೌರನಗರ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

64. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಹುಬ್ಬಳ್ಳಿ–ಧಾರವಾಡದಲ್ಲಿ 100 ಕೋಟಿ ರೂ. ಹೂಡಿಕೆಯೊಂದಿಗೆ ಘನತ್ಯಾಜ್ಯ ನಿರ್ವಹಣೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

65. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವತಿಯಿಂದ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಬಹುಮಹಡಿ ವಾಹನ ನಿಲುಗಡೆ ಸಂಕೀರ್ಣವನ್ನು ನಿರ್ಮಿಸಲಾಗುವುದು

66. ನಗರ ಸ್ಥಳೀಯ ಸಂಸ್ಥೆಗಳಿಗೆ ರಿಯಾಯಿತಿ ದರದಲ್ಲಿ ಸಾಲ ಒದಗಿಸಲು ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಧಿಯನ್ನು 2013–14ರಲ್ಲಿ ಆವರ್ತನಿಧಿಯಾಗಿ ಪುನ:ಶ್ಚೇತನಗೊಳಿಸಲಾಗುವುದು.

67. ಬೀದಿ ದೀಪ, ನೀರು ಮತ್ತು ಇತರೆ ವ್ಯವಸ್ಥೆಯನ್ನು ಜಂಟಿ ಅಭಿವೃದ್ಧಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುವುದು.

68. ನಗರ ಯೋಜನಾ ಕಾರ್ಯಕ್ರಮಗಳ (Town Planning Scheme) ಮೂಲಕ ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಬಳ್ಳಾರಿ, ಮಂಗಳೂರು ಮತ್ತು ದಾವಣಗೆರೆ ಮಹಾ ನಗರ ಪ್ರದೇಶಗಳಲ್ಲಿ ವರ್ತುಲ ರಸ್ತೆ ನಿರ್ಮಾಣ ಕೈಗೊಳ್ಳಲಾಗುವುದು.

ಬೆಂಗಳೂರು ಅಭಿವೃದ್ಧಿ

69. ರಾಜ್ಯದ ಒಟ್ಟಾರೆ ಆಂತರಿಕ ಉತ್ಪನ್ನದ ಶೇ. 30 ರಷ್ಟು ಕೊಡುಗೆ ಸಲ್ಲಿಸುವ ಮೂಲಕ ಬೆಂಗಳೂರು ರಾಜ್ಯದ ಆರ್ಥಿಕ ಅಭಿವೃದ್ಧಿಯ ಪ್ರಮುಖ ಚಾಲನಾಶಕ್ತಿಯಾಗಿದೆ. ಬೆಂಗಳೂರು ದೇಶದ ರಫ್ತು ಗಳಿಕೆಗೆ 1.35 ಲಕ್ಷ ಕೋಟಿ ರೂ. ಕೊಡುಗೆ ನೀಡಿದೆ ಮತ್ತು ದೆಹಲಿಯ ನಂತರ ಅತ್ಯಂತ ತ್ವರಿತಗತಿಯಲ್ಲಿ ಬೆಳವಣಿಗೆ ಹೊಂದುತ್ತಿದೆ.

70. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರಸ್ತೆ ಅಗಲೀಕರಣ, ಅಂಡ್‌ರ್‌ಪಾಸ್, ಇತ್ಯಾದಿಗಳ ಕಾಮಾಗಾರಿಗಳನ್ನು ಕೈಗೊಳ್ಳ-ಲಾಗಿದ್ದು, ಕಳೆದ ಐದು ವರ್ಷಗಳಲ್ಲಿ ಪೂರ್ಣಗೊಂಡಿರುವ ಪ್ರಮುಖ ಕಾಮಗಾರಿಗಳು ಈ ಮುಂದಿನಂತಿವೆ:

- ಪ್ರಮುಖ 13 ರಸ್ತೆಗಳ ಅಗಲೀಕರಣ;
- ಪ್ರಮುಖ ಕೂಡು ರಸ್ತೆಗಳಲ್ಲಿ 17 ಅಂಡರ್ ಪಾಸ್/-ಸರ್ಫೇಸ್ ಪಾಸ್/ ಫ್ಲೈಓವರ್‌ಗಳ ನಿರ್ಮಾಣ.
- 45 ರೈಲ್ವೆ ಕ್ರಾಸಿಂಗ್ ಬಳಿ ರಸ್ತೆ ಮೇಲು ಸೇತುವೆ/ ರಸ್ತೆ ಕೆಳ ಸೇತುವೆಗಳ ನಿರ್ಮಾಣ. 9 ಸ್ಥಳಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ.
- 17 ಕೆರೆಗಳ ಅಭಿವೃದ್ಧಿ;
- ಅಂತರ್ಜಲ ಪುನ:ಶ್ಚೇತನ ಹಾಗೂ ಮಳೆ ನೀರು ಕೊಯ್ಲು ವ್ಯವಸ್ಥೆ;
- ಉದ್ಯಾನವನ ಹಾಗೂ ಪರಿಸರ ಅಭಿವೃದ್ಧಿ ಕಾಮಗಾರಿಗಳು;

71. ಸರ್ಕಾರದಿಂದ ಅನುಮೋದನೆಗೊಂಡ ಪ್ರಮುಖ 75 ಮೂಲಭೂತ ಸೌಕರ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 50 ಕೋಟಿ ರೂ. ಹಣಕಾಸು ನೆರವನ್ನು ಒದಗಿಸಲಾಗುವುದು.

72. ಬೆಂಗಳೂರು ಹಾಗೂ ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಸಾರ್ವಜನಿಕ ಖಾಸಗಿ ಸಹಭಾಗಿತ್ವ ಹಾಗೂ ಜಂಟಿ ಅಭಿವೃದ್ಧಿಗೆ ಹೆಚ್ಚಿನ ಪ್ರಾಧಾನ್ಯತೆ. ಈ ಕಾರ್ಯಕ್ಕಾಗಿ ಮೂಲ ಸೌಕರ್ಯ ಹಾಗೂ ಭೂಸ್ವಾಧೀನಕ್ಕೆ ಸರ್ಕಾರವು ಅನುರೂಪದ ಹಣವನ್ನು ಒದಗಿಸುವುದು ;

73. ನ್ಯಾಯಮೂರ್ತಿ ಎನ್.ಕೆ. ಪಾಟೀಲ್‌ರವರ ಅಧ್ಯಕ್ಷತೆಯಲ್ಲಿನ ಸಮಿತಿಯು ಕೆರೆಗಳ ಅಭಿವೃದ್ಧಿ ಬಗ್ಗೆ ವರದಿ ನೀಡಿದ್ದು, ಅದರನ್ವಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

74. ಕಳೆದ 5 ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ-ದಿಂದ ಈ ಕೆಳಕಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ :

- ಮಾಗಡಿ ರಸ್ತೆಯಿಂದ ಮೈಸೂರು ರಸ್ತೆವರೆಗೆ ಆರು ಪಥಗಳ ಹೊರವರ್ತುಲ ರಸ್ತೆ.
- ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಯ ನಡುವೆ ಸಂಪರ್ಕ ರಸ್ತೆ, ಕೆಳಸೇತುವೆಯೊಡನೆ ಹೊರವರ್ತುಲ ರಸ್ತೆ
- ಮಾಗಡಿ ರಸ್ತೆ-ಕಾರ್ಡ್ ರಸ್ತೆ ಕೂಡು ಜಾಗದಲ್ಲಿ ಕಾರ್ಡ್ ರೋಡ್ ಮೂಲಕ ಅಂಡರ್‌ಪಾಸ್ ನಿರ್ಮಾಣ.
- ಹೊರವರ್ತುಲ ರಸ್ತೆಯ ನಾಯಂಡನಹಳ್ಳಿಯಲ್ಲಿ ರೈಲ್ವೆ ಕೆಳಸೇತುವೆ.
- ಅಗರ ಮತ್ತು ಇಬ್ಬಲೂರು ಕೂಡು ರಸ್ತೆಗಳಲ್ಲಿ ಗ್ರೇಡ್ ಸಪರೇ-ಟರ್ ನಿರ್ಮಾಣ.
- ಹೆಚ್.ಎಸ್.ಆರ್. ಲೇಔಟ್‌ನ 14ನೇ ಮುಖ್ಯ ರಸ್ತೆಯಿಂದ ಕಲ್ಯಾಣ ನಗರ ಕೂಡು ರಸ್ತೆವರೆಗಿನ ರಸ್ತೆ
- ವೀರಣ್ಣನಪಾಳ್ಯ ಕೂಡು ರಸ್ತೆ
- ಹೆಣ್ಣೂರು ಕೂಡು ರಸ್ತೆ
- ದೇವರಬೀಸನಹಳ್ಳಿ ಕೂಡು ರಸ್ತೆ
- ಮಹದೇವಪುರ ಕೂಡು ರಸ್ತೆ.

- ಕಾಡಬೀಸನಹಳ್ಳಿ ಕೂಡು ರಸ್ತೆ.
- ಸುಮನಹಳ್ಳಿ ಬಳಿ ಗ್ರೇಡ್ ಸಪರೇಟರ್.

75. ಈ ಕೆಳಕಂಡ ಕಾಮಗಾರಿಗಳು ಪ್ರಗತಿಯಲ್ಲಿವೆ.

- ಬೆಂಗಳೂರು–ಮೈಸೂರು ರಸ್ತೆ ನಾಯಂಡನಹಳ್ಳಿಯಲ್ಲಿ ಹೊರವರ್ತುಲ ರಸ್ತೆ ಸೇರುವ ಜಾಗದಲ್ಲಿ ಎರಡು ಲೆವೆಲ್ ಗ್ರೇಡ್ ಸೆಪರೇಟರ್.
- ಬಿಇಎಲ್ ಹಾಗೂ ಕುವೆಂಪು ವೃತ್ತ ಕೂಡುವ ಹೊರವರ್ತುಲ ರಸ್ತೆಯಲ್ಲಿ ಮೇಲುರಸ್ತೆ ನಿರ್ಮಾಣ.
- ಹೊರವರ್ತುಲ ರಸ್ತೆಯ ನಾಗವಾರ ಜಂಕ್ಷನ್‌ನಲ್ಲಿ ಮೇಲುರಸ್ತೆ ನಿರ್ಮಾಣ.
- ಜಯನಗರ ವಾಣಿಜ್ಯ ಸಂಕೀರ್ಣದ ಪುನರ್ ನಿರ್ಮಾಣ ಕಾರ್ಯ.
- ಬನಶಂಕರಿ 6ನೇ ಹಂತದಲ್ಲಿ 3 ಕೋಟಿ ರೂ. ವೆಚ್ಚದಲ್ಲಿ **"ಶಿಲ್ಪೋದ್ಯಾನ"** ಕಾಮಗಾರಿಯ ಪ್ರಗತಿ;
- ಪ್ರಾಧಿಕಾರದ ಆಸ್ತಿಯಾಗಿದ್ದ 2,291 ಕೋಟಿ ರೂ. ಮೌಲ್ಯದ 296 ಎಕರೆ ಜಮೀನು ಪ್ರಾಧಿಕಾರದ ವಶಕ್ಕೆ;
- 4,036 ಎಕರೆಯಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿರ್ಮಾಣ;

76. ಬಿ.ಬಿ.ಎಂ.ಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಲ್ಲಿ ಈ ಕೆಳಕಂಡ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಕೈಗೊಳ್ಳಲಾಗಿದೆ.

- 11 ಕೆರೆಗಳನ್ನು 104.61 ಕೋಟಿ ರೂ.ಗಳಲ್ಲಿ ಪುನ: ಶ್ಚೇತನ–ಗೊಳಿಸಲಾಗಿದೆ. 2 ಕೆರೆಗಳ ಕಾರ್ಯ ಪೂರ್ಣಗೊಳ್ಳುವ ಹಂತದಲ್ಲಿದೆ.

- ಭೂಮಿಯನ್ನು ಕಳೆದುಕೊಂಡವರಿಗೆ ಪ್ರೋತ್ಸಾಹಕವಾಗಿ 2000 ನಿವೇಶನಗಳನ್ನು ವಿತರಿಸಲಾಗಿದೆ.
- ಆರ್ಥಿಕವಾಗಿ ದುರ್ಬಲ ವರ್ಗಗಳು ಹಾಗೂ ಇತರ ಆರ್ಥಿಕ ವರ್ಗಗಳಿಗಾಗಿ 15 ವಿವಿಧ ಸ್ಥಳಗಳಲ್ಲಿ ಕೈಗೆಟುಕುವ ಬೆಲೆಯ ಸಮೂಹ ವಸತಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. 749 ಮನೆಗಳನ್ನು ಈಗಾಗಲೇ ವಿತರಿಸ-ಲಾಗಿದ್ದು, 6500 ಮನೆಗಳು ಮುಕ್ತಾಯದ ಹಂತದಲ್ಲಿವೆ.
- 15 ಕೋಟಿ ರೂ. ವೆಚ್ಚದ "ರಾಷ್ಟ್ರೀಯ ಮಿಲಿಟರಿ ಸ್ಮಾರಕ" ನಿರ್ಮಾಣದ ಮುಕ್ತಾಯ ಹಂತ.

77. ಬೆಂಗಳೂರು ನಗರಕ್ಕೆ ಹೊಸ ಉಪಕ್ರಮಗಳು :

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ತಲಾ ಒಂದು ಡಯಾಲಿಸಿಸ್ ಮತ್ತು ಮಧುಮೇಹ ಕೇಂದ್ರವನ್ನು ಸ್ಥಾಪಿಸಲಾಗುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಾರ್ಡುಗಳಲ್ಲಿ 25 ಕೋಟಿ ರೂ.ಗಳ ವೆಚ್ಚದಲ್ಲಿ ಸಾರ್ವಜನಿಕ ಶೌಚಾಲಯಗಳನ್ನು (ವಿಶೇಷವಾಗಿ ಮಹಿಳೆಯರಿಗೆ) ನಿರ್ಮಿಸಲಾಗುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುವ ಬಡ ಕುಟುಂಬಗಳಿಗೆ ವಸತಿ ಇಲಾಖೆಯ ರಾಜೀವ್‌ಗಾಂಧಿ ಆವಾಜ್ ಯೋಜನೆ ಅಡಿಯಲ್ಲಿ 300 ಕೋಟಿ ರೂ. ಗಳ ವೆಚ್ಚದಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗು-ವುದು.
- ಘನ ತಾಜ್ಯ ನಿರ್ವಹಣೆ ಘಟಕಕ್ಕೆ ಹೊಸದಾಗಿ ಗುರುತಿಸಿರುವ ಲ್ಯಾಂಡ್ ಫಿಲ್ ಸೈಟ್‌ಗಳಿಗೆ ಹಾಗೂ ಅಕ್ಕ ಪಕ್ಕದ ಹಳ್ಳಿಗಳಿಗೆ

ಮೂಲಭೂತ ನಾಗರೀಕ ಸೌಕರ್ಯಗಳನ್ನು ಒದಗಿಸಲು 200 ಕೋಟಿ ರೂ.ಗಳನ್ನು ಒದಗಿಸಲಾಗುವುದು

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆರ್ಟೀರಿಯಲ್ ಹಾಗೂ ಸಬ್ – ಆರ್ಟೀರಿಯಲ್ ರಸ್ತೆಗಳ ಪೈಕಿ ಪ್ರಮುಖ 100 ಕಿ.ಮೀ. ರಸ್ತೆಗಳನ್ನು 300 ಕೋಟಿ ರೂ. ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿ ಗೊಳಿಸಲಾಗುವುದು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಾಹನ ದಟ್ಟಣೆಯಿರುವ ಪ್ರಮುಖ ಜಂಕ್ಷನ್‌ಗಳಲ್ಲಿ 500 ಕೋಟಿ ರೂ. ವೆಚ್ಚದಲ್ಲಿ ಗ್ರೇಡ್ ಸಪರೇಟರ್ ನಿರ್ಮಿಸಲಾಗು-ವುದು. ಕೆ.ಆರ್. ಪುರಂ ಸೇತುವೆ ಹತ್ತಿರ ಅಂಡರ್‌ಪಾಸ್ ನಿರ್ಮಿಸಲಾಗುವುದು.
- 863 ಕೋಟಿ ರೂ. ವೆಚ್ಚದಲ್ಲಿ ಚಾಲುಕ್ಯ ವೃತ್ತ, ಶಿವಾನಂದ ವೃತ್ತ, ಸಿದ್ಧಲಿಂಗಯ್ಯ ವೃತ್ತ ಹಾಗೂ ವಿಮಾನ ನಿಲ್ದಾಣ ಸಂಪರ್ಕ ರಸ್ತೆಯಲ್ಲಿ ಮೇಲು ಸೇತುವೆ ನಿರ್ಮಾಣ.
- ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ನಡುವೆ ಸಂಪರ್ಕ-ವನ್ನು ಉತ್ತಮ ಪಡಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ತುಮಕೂರು ರಸ್ತೆ ಮತ್ತು ಬಳ್ಳಾರಿ ರಸ್ತೆ ನಡುವೆ 28 ಕಿ.ಮೀ.ಗಳ ಒಂದು ಸಂಪರ್ಕ ರಸ್ತೆಯನ್ನು ನಿರ್ಮಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುವುದು.
- ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿ ಹೆಬ್ಬಾಳ, ಇಬ್ಬಲೂರು, ಕೆ.ಆರ್.ಪುರಂ, ದೊಡ್ಡನೆಕ್ಕುಂದಿ ಮತ್ತು ಕೇಂದ್ರೀಯ ರೇಷ್ಮೆ ಮಂಡಳಿ ಹತ್ತಿರ ಐದು ಫ್ಲೈಓವರ್‌ಗಳನ್ನು ನಿರ್ಮಿಸಲಾಗುವುದು.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರು ಉತ್ತರ ಮತ್ತು ಪೂರ್ವ ಭಾಗದಲ್ಲಿ 2500 ಕೋಟಿ ರೂ. ವೆಚ್ಚದಲ್ಲಿ ಫೆರಿಫರಲ್ ವರ್ತುಲ ರಸ್ತೆ.

- (ಅ) ಹೆಬ್ಬಾಳ-ಬಿಆರ್‌ವಿ ಮೈದಾನ, (ಆ) ಹೆಣ್ಣೂರು-ಬಿಆರ್‌ವಿ ಮೈದಾನ (ಇ) ಕೇಂದ್ರ ರೇಷ್ಮೆ ಮಂಡಳಿ - ಲಾಲ್‌ಬಾಗ್ ಚಿಕ್ಕಪೇಟೆ ಮೈಸೂರು ರಸ್ತೆ ಫ್ಲೈಓವರ್ (ಸಿರಸಿ ವೃತ್ತ)ವರೆಗೆ ಮತ್ತು (ಈ) ಬಿಆರ್‌ವಿ ಮೈದಾನದಿಂದ - ಮೈಸೂರು ರಸ್ತೆ ಫ್ಲೈಓವರ್ (ಸಿರಸಿ ವೃತ್ತ)ವರೆಗೆ 25 ಕಿ.ಮೀ.ಗಳ ಮೇಲ್ದರ್ಜೆಗೇರಿಸಿದ ಸುವರ್ಣ ಚತುಷ್ಪಥ ರಸ್ತೆ.
- ನಗರದ ಹೊರ ವಲಯಗಳಲ್ಲಿನ ಅಗಲ ರಸ್ತೆಗಳಲ್ಲಿ ಹೆಚ್ಚಿನ FAR, ನಕ್ಷೆ ಅನುಮೋದನೆ ಇತ್ಯಾದಿಗಳನ್ನು ತ್ವರಿತಗೊಳಿಸಲು ಸರ್ಕಾರದಿಂದ ಸೂಕ್ತ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು.
- 350 ಕೋಟಿ ರೂ. ವೆಚ್ಚದಲ್ಲಿ ಮೊದಲನೇ ಹಂತದ ಹೊರ ವರ್ತುಲ ರಸ್ತೆಯಲ್ಲಿ, ಎಲಿವೇಟೆಡ್ ಕಾರಿಡಾರ್, ವಿಮಾನ ನಿಲ್ದಾಣ ಸಂಪರ್ಕ ಕಾರಿಡಾರ್, ಆರ್.ಎಂ.ವಿ. ರಸ್ತೆ ಕಾಮಗಾರಿ ಕೆಳ ಸೇತುವೆಗಳ ನಿರ್ಮಾಣ.
- ಓಕಳಿಪುರಂನಿಂದ ಖೋಡೆ ವೃತ್ತದವರೆಗೆ 80 ಕೋಟಿ ರೂ. ವೆಚ್ಚದಲ್ಲಿ 8 ಲೇನ್‌ಗಳ ಗ್ರೇಡ್ ಸೆಪರೇಟರ್ ನಿರ್ಮಾಣ.
- 2408 ಕೋಟಿ ರೂ. ವೆಚ್ಚದಲ್ಲಿ 15,000 ನಿವೇಶನಗಳ ನಾಡಪ್ರಭು ಕೆಂಪೇಗೌಡ ಬಡಾವಣೆಯ ಅಭಿವೃದ್ಧಿ.
- 1,443 ಕೋಟಿ ರೂ. ವೆಚ್ಚದಲ್ಲಿ 8,000 ವಾಸದ ಘಟಕಗಳ ನಿರ್ಮಾಣ.

78. ಬೆಂಗಳೂರಿನ ಆರ್ಥಿಕ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಬೆಂಗಳೂರಿಗೆ ಹತ್ತಿರವಿರುವ ಎರಡು-ಮೂರು ಪ್ರದೇಶಗಳಲ್ಲಿ ಮೂಲ ಸೌಕರ್ಯ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಏಶಿಯನ್ ಅಭಿವೃದ್ಧಿ ಬ್ಯಾಂಕಿನ ಸಾಲದ ನೆರವಿನಿಂದ ಒಟ್ಟು 2,100 ಕೋಟಿ ರೂ.ಗಳ ಸಿಟಿ ಕ್ಲಸ್ಟರ್ ಡೆವಲಪ್‌ಮೆಂಟ್ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ

79. 2009ರಲ್ಲಿ ಪ್ರಾರಂಭಿಸಲಾದ ಜೆಐಸಿಎಯ 1,759 ಕೋಟಿ ರೂ. ಹಣಕಾಸು ನೆರವಿನ, ನಾಲ್ಕನೇ ಹಂತದ ಎರಡನೇ ಘಟ್ಟದ ಕಾವೇರಿ ನೀರು ಸರಬರಾಜು ಯೋಜನೆಗಳನ್ನು ಮೂರು ವರ್ಷಗಳ ದಾಖಲೆ ಸಮಯದಲ್ಲಿ ಪೂರ್ಣಗೊಳಿಸಿ ನಗರಕ್ಕೆ ಸಗಟು ನೀರು ಸರಬರಾಜನ್ನು 500 ಎಂಎಲ್‌ಡಿವರೆಗೆ ಹೆಚ್ಚಿಸಿರುವುದು. ನಮ್ಮ ಸರ್ಕಾರದ ಅಪೂರ್ವ ಸಾಧನೆ.

80. ಮುಕ್ತಾಯಗೊಂಡಿರುವ ಇತರೆ ಕಾಮಗಾರಿಗಳು–

- 383 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಜಾಲದ ಸ್ಥಳಾಂತರ ಮತ್ತು ಪುನರ್ವ್ಯವಸ್ಥೆಯ ಕಾಮಗಾರಿ;
- ಹೆಬ್ಬಾಳ ಮತ್ತು ಚಳ್ಳಘಟ್ಟ ಕಣಿವೆಗಳಲ್ಲಿನ ಕಾಮಗಾರಿಗಳು 2013ರ ಮಾರ್ಚ್‌ನಲ್ಲಿ ಪೂರ್ಣಗೊಳ್ಳುವ ಸಾಧ್ಯತೆ;
- ಬೃಹತ್ ಬೆಂಗಳೂರನ್ನಾಗಿ ವಿಸ್ತರಿಸುವ ಪ್ರದೇಶಗಳಿಗೆ 3,000 ಕಿ.ಮೀ. ವಿತರಣಾ ವ್ಯವಸ್ಥೆ ಮೂಲಕ ನೀರು ಪೂರೈಕೆ;
- ನಗರದ 7 ಲಕ್ಷ ಗ್ರಾಹಕರಿಗೆ ನೀರಿನ ಬಳಕೆಯ ಮೇಲ್ವಿಚಾರಣೆ ಮತ್ತು ಆನ್‌ಲೈನ್‌ನಲ್ಲಿ ನೀರಿನ ಬಿಲ್ಲು ಪಡೆಯುವ–ಪಾವತಿಸುವ ಮಹತ್ವಾಕಾಂಕ್ಷೆಯ ವ್ಯವಸ್ಥೆ;

81. ಮುಂದಿನ ಕಾರ್ಯಕ್ರಮಗಳು

- 3 ವರ್ಷಗಳಲ್ಲಿ 475 ಕೋಟಿ ರೂ. ವೆಚ್ಚದಲ್ಲಿ 130 ಚ.ಕಿ.ಮೀ. ಗಳ ನೀರಿನ ವಿತರಣಾ ವ್ಯವಸ್ಥೆಯ ಸುಧಾರಣೆ ಮತ್ತು ಸೋರಿಕೆ ನಿಯಂತ್ರಣ;
- 3 ವರ್ಷಗಳಲ್ಲಿ ಜೆಐಸಿಎ ಹಣಕಾಸು ನೆರವಿನಿಂದ 11ಹೆಚ್ಚುವರಿ ಕೊಳಚೆ ನೀರು ಸಂಸ್ಕರಣಾ ಸ್ಥಾವರಗಳ ಸ್ಥಾಪನೆ.
- ತ್ಯಾಜ್ಯ ನೀರು ಸಂಸ್ಕರಣಾ ಸಾಮರ್ಥ್ಯ 339 ಎಂ.ಎಲ್.ಡಿ ಇಂದ 1060 ಎಂ.ಎಲ್.ಡಿ.ಗೆ ಹೆಚ್ಚಳ;

- 210 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪರಿಸರ ಕ್ರಿಯಾ ಯೋಜನೆ;
- ವಿಶ್ವ ಬ್ಯಾಂಕ್ ನೆರವಿನೊಂದಿಗೆ 1.192 ಕೋಟಿ ರೂ. ವೆಚ್ಚದಲ್ಲಿ ಬಿಬಿಎಂಪಿಗೆ ವಿಸ್ತರಿಸಲಾದ ನಗರಸಭೆ/ಪುರಸಭೆ ಪ್ರದೇಶಗಳ 2,300 ಕಿಮೀ. ಒಳಚರಂಡಿ ಜಾಲದ ಗುರಿಯಲ್ಲಿ ಡಿಸೆಂಬರ್ 2012ರವರೆಗೆ 1,400 ಕಿಮೀ ಪ್ರಗತಿ ಮತ್ತು ಮಾರ್ಚ 2014ರ ವೇಳೆಗೆ ಪೂರ್ಣ;
- 55 ಕೋಟಿ ರೂ. ವೆಚ್ಚದಲ್ಲಿ ನಗರದ ಕೊಳಗೇರಿಗಳಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯ ಸೌಕರ್ಯಗಳ ಸುಧಾರಣೆ;

82. ಬೆಂಗಳೂರು ನಗರದಲ್ಲಿ ಪರಿಣಾಮಕಾರಿ ಘನತ್ಯಾಜ್ಯ ನಿರ್ವಹಣೆಗಾಗಿ ಒಂದು ಪ್ರತ್ಯೇಕ ಪ್ರಾಧಿಕಾರವನ್ನು ಸ್ಥಾಪಿಸುವ ಸಾಧ್ಯತೆ ಬಗ್ಗೆ ಪರಿಗಣಿಸಲಾಗುವುದು.

83. 2012ರ ಅಕ್ಟೋಬರ್‌ನಲ್ಲಿ ಸಿಂಗಾಪೂರ್ ಕೋಆಪರೇಷನ್ ಎಂಟರ್ ಪ್ರೈಸಸ್‌ನೊಂದಿಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ತೃತೀಯ ಸಂಸ್ಕರಿತ ನೀರಿನ ಪ್ರಚಾರ ಕಾರ್ಯಕ್ಕಾಗಿ ಸಹಭಾಗಿತ್ವವನ್ನು ಮಾಡಿಕೊಂಡಿದೆ. ದೇವನಹಳ್ಳಿ ಪ್ರದೇಶದಲ್ಲಿನ ಕೈಗಾರಿಕೆಗ–ಳಿಗೆ ತೃತೀಯ ಸಂಸ್ಕರಿತ ನೀರನ್ನು ಸರಬರಾಜು ಮಾಡಲು ಸಂಸ್ಕರಣಾ ಸ್ಥಾವರಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಬೆಂಗಳೂರು ಮೆಟ್ರೋ ರೈಲು ಯೋಜನೆ

84. ಈಗಿರುವ ಸಾರಿಗೆ ಸೌಲಭ್ಯಗಳು ಹೆಚ್ಚುತ್ತಿರುವ ನಗರದ ಅಗತ್ಯಗಳಿಗೆ ಸಾಲುತ್ತಿಲ್ಲ. ಭಾರತ ಸರ್ಕಾರದ ಸಹಾಯದೊಡನೆ ಕರ್ನಾಟಕ ಸರ್ಕಾರವು 11,609 ಕೋಟಿ ರೂ.ಗಳ ಅಂದಾಜಿನ ಬೆಂಗಳೂರು ಮೆಟ್ರೋ ರೈಲು ಯೋಜನೆಯನ್ನು ಕೈಗೆತ್ತಿಕೊಂಡಿದೆ. ಬೈಯ್ಯಪ್ಪನಹಳ್ಳಿಯಿಂದ ಎಂ.ಜಿ. ರಸ್ತೆವರೆಗಿನ ಪ್ರಯಾಣದ ಹಿತಾನುಭವವನ್ನು ಬೆಂಗಳೂರಿನ ಜನರು 2011ರ ಅಕ್ಟೋಬರ್‌ನಿಂದ ಪಡೆದಿದ್ದಾರೆ. ಕರ್ನಾಟಕ ಸರ್ಕಾರವು ಇದುವರೆಗೆ 4,153 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಇದುವರೆಗಿನ ಯೋಜನೆಯ

ವೆಚ್ಚವು 8,151 ಕೋಟಿ ರೂ.ಗಳಾಗಿದೆ. ಕಾಮಗಾರಿಯಲ್ಲಿ ಶೇ. 66ರ ಭೌತಿಕ ಪ್ರಗತಿ ಸಾಧಿಸಲಾಗಿದೆ. ಒಂದನೇ ಹಂತದ ಸಂಪೂರ್ಣ ಕಾಮಗಾರಿಗಳನ್ನು ಡಿಸೆಬರ್ 2014ರ ಹೊತ್ತಿಗೆ ಮುಕ್ತಾಯಗೊಳಿಸಲಾಗುವುದು. ರಾಜ್ಯ ಸರ್ಕಾರವು 26,405 ಕೋಟಿ ರೂ. ವೆಚ್ಚದ ಹಾಗೂ 72.09 ಕಿ.ಮೀ. ಒಳಗೊಂಡ ಎರಡನೇ ಹಂತದ ಯೋಜನೆಗೆ ಅನುಮೋದನೆ ನೀಡಿದೆ. ಇದರಲ್ಲಿ ಕರ್ನಾಟಕ ಸರ್ಕಾರದ ಪಾಲು 8,969 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಅಂಗೀಕಾರವನ್ನು ಸಧ್ಯದಲ್ಲೇ ನಿರೀಕ್ಷಿಸಲಾಗಿದೆ. ಎರಡನೇ ಹಂತದ ಪೂರ್ವಭಾವೀ ಸಿದ್ಧತಾ ಕಾರ್ಯಗಳು ಈಗಾಗಲೇ ಪ್ರಾರಂಭವಾಗಿವೆ.

ಮೆಗಾಸಿಟಿ ಆವರ್ತಕ ನಿಧಿ

85. ಮೆಗಾಸಿಟಿ ಆವರ್ತಕ ನಿಧಿಯಿಂದ 1,133 ಕೋಟಿ ರೂ. ಮೊತ್ತವನ್ನು ಬೆಂಗಳೂರಿನ ಅಭಿವೃದ್ಧಿ ಯೋಜನೆಗಳಿಗೆ ಸಾಲದ ರೂಪದಲ್ಲಿ ಅನುಮೋದಿಸಲಾಗಿದೆ. ಈ ಸಾಲವು ರಾಷ್ಟ್ರದ ಯಾವುದೇ ಭಾಗದಲ್ಲಿ ಈ ಆವರ್ತಕ ನಿಧಿಯಿಂದ ನೀಡಿದ ಅತ್ಯಂತ ಹೆಚ್ಚಿನ ಮೊತ್ತವಾಗಿದ್ದು ನಗರ ಮೂಲಭೂತ ಸೌಕರ್ಯಗಳ ಅಗತ್ಯವಾದ ಬಂಡವಾಳದ ಸ್ವಯಂನಿರ್ವಹಣೆ ಮಾಡಲು ಮುಖ್ಯವಾದ ಹೆಜ್ಜೆಯಾಗಿದೆ.

86. 2013–14ನೇ ಸಾಲಿನಲ್ಲಿ ಬೆಂಗಳೂರು ನಗರದ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಸಂಬಂಧಪಟ್ಟ ಸಂಸ್ಥೆಗಳ ವತಿಯಿಂದ 6,203 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ನಗರ ಭೂ ಸಾರಿಗೆ

87. ರಾಜ್ಯದ 6 ಮಹಾನಗರ ಪಾಲಿಕೆಗಳಿಗೆ ಮತ್ತು ಇತರೆ 8 ನಗರಗಳಿಗೆ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ವ್ಯಾಪ್ತಿಯ ಸುತ್ತಮುತ್ತಲಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಸಮಗ್ರ ಸಾರಿಗೆ ಮತ್ತು ಸಂಚಾರ ಯೋಜನಾ ವರದಿಯನ್ನು ಅಂತಿಮಗೊಳಿಸಲಾಗಿದೆ. ಪ್ರಾರಂಭಿಕವಾಗಿ 100 ಕೋಟಿ ರೂ. ಮೂಲನಿಧಿಯೊಂದಿಗೆ ರಾಜ್ಯ ನಗರ ಸಾರಿಗೆ ನಿಧಿಯನ್ನು ಸ್ಥಾಪಿಸಲಾಗಿದೆ. ಇದು ಗುಲ್ಬರ್ಗಾ ಮತ್ತು ಗದಗ್ –

ಬೆಟಗೇರಿ ನಗರ ಸಾರಿಗೆ ಸೇವೆಗೆ ನೆರವನ್ನು ಒದಗಿಸಿದೆ. ನಮ್ಮ ರಾಜ್ಯದ ಎಲ್ಲಾ ಪ್ರಮುಖ ನಗರಗಳಲ್ಲೂ ಪಾದಚಾರಿ ಮತ್ತು ಸೈಕಲ್ ಸವಾರಿ ಪಥಗಳನ್ನು ನಿರ್ಮಿಸುವ ಮೂಲಕ ಉತ್ತಮ ಸಾರಿಗೆ ನಿರ್ವಹಣೆಗಾಗಿ ಒಂದು ಸಮಗ್ರವಾದ ಯೋಜನೆಯನ್ನು ಕೈಗೊಳ್ಳಲಾಗುವುದು.

88. ಹುಬ್ಬಳ್ಳಿ–ಧಾರವಾಡ ತ್ವರಿತ ಬಸ್ ಸಂಚಾರ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಕಂಪನಿಯನ್ನು ಸ್ಥಾಪಿಸಲಾಗಿದೆ. ಈ ಯೋಜನೆಗೆ ವಿಶ್ವ ಬ್ಯಾಂಕಿನಿಂದ 250 ಕೋಟಿ ರೂ. ಸಾಲ ಲಭಿಸುತ್ತಿದ್ದು, ಪ್ರಾರಂಭಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕೆಂಗೇರಿ–ರಾಮನಗರ, ಬೈಯ್ಯಪ್ಪನಹಳ್ಳಿ –ಹೊಸೂರು, ಯಶವಂತಪುರ – ತುಮಕೂರು ಮತ್ತು ಯಲಹಂಕ – ದೊಡ್ಡಬಳ್ಳಾಪುರ ಮಾರ್ಗಗಳಲ್ಲಿ **ಕಮ್ಯೂಟರ್ ರೈಲ್ ಸಿಸ್ಟಂ** ಅನ್ನು ಅಳವಡಿಸುವ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ.

89. 2013–14ನೇ ಸಾಲಿನಲ್ಲಿ ನಗರಾಭಿವೃದ್ಧಿ ಇಲಾಖೆಗೆ 9,654 ಕೋಟಿ ರೂ. ಒದಗಿಸಲಾಗಿದೆ.

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

90. ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣಕ್ಕೆ ನಮ್ಮ ಸರ್ಕಾರವು ಕೈಗೊಂಡ ಕ್ರಮಗಳು ಕೆಳಕಂಡಂತಿವೆ:

- ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮಹಿಳಾ ಚುನಾಯಿತ ಪ್ರತಿನಿಧಿಗಳ ಮೀಸಲಾತಿ ಶೇ.33 ರಿಂದ ಶೇ.50ಕ್ಕೆ ಹೆಚ್ಚಳ;
- ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಗೌರವಧನ ಅನುಕ್ರಮವಾಗಿ ರೂ. 3000, ರೂ. 2250 ಮತ್ತು ರೂ. 1500 ಹಾಗೂ ತಾಲ್ಲೂಕು ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಅನುಕ್ರಮವಾಗಿ ರೂ.–2250, ರೂ. 1500 ಮತ್ತು ರೂ. 750ಗಳಿಗೆ ಹೆಚ್ಚಳ;
- 95,307 ಪಿ.ಆರ್.ಐ ಸದಸ್ಯರ ವೈದ್ಯಕೀಯ ವಿಮೆ ರಕ್ಷಣೆಗಾಗಿ 5 ಕೋಟಿ ರೂ. ಕಾರ್ಪಸ್ ನಿಧಿ;

- 5,627 ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಹಾಗೂ 2,500 ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಸೃಜನೆ, ಒಟ್ಟು 3,566 ಹುದ್ದೆಗಳ ಭರ್ತಿ;

- ಗ್ರಾಮ ಸ್ವರಾಜ್ ಯೋಜನೆಯಡಿಯಲ್ಲಿ ನಿರ್ಮಿಸಲಾದ **ತಾಲ್ಲೂಕು ಸಾಮರ್ಥ್ಯ ಸೌಧಗಳನ್ನು** ಸಾಂಸ್ಥಿಕ ಸಿಬ್ಬಂದಿಗಳ ಮುಖಾಂತರ ಬಲಪಡಿಸುವಿಕೆ;
- ಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಸಂಪನ್ಮೂಲ ಮತ್ತು ಹಣಕಾಸು ನೆರವು ನೀಡಲು ರಾಜ್ಯ ಪಂಚಾಯತಿ ಸಂಪನ್ಮೂಲ ಕೇಂದ್ರದ ಪ್ರಾರಂಭ;
- ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ–ಯಲ್ಲಿ ಶೇ. 100ರಷ್ಟು ಇ–ಪೇಮೆಂಟ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ ಅಳವಡಿಕೆ;
- ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ಧಾರವಾಡ, ಬಳ್ಳಾರಿ, ಹಾಸನ, ತುಮಕೂರು, ಮೈಸೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ವಿದ್ಯುನ್ಮಾನ ಹಣಕಾಸು ನಿರ್ವಹಣಾ ವ್ಯವಸ್ಥೆಯ **(eFMs)** ಮುಖಾಂತರ ಫಲಾನುಭವಿಗಳ ಖಾತೆಗೆ ನೇರ ಹಣ ಸಂದಾಯ ವ್ಯವಸ್ಥೆ.
- ಗುಲ್ಬರ್ಗಾ, ಯಾದಗಿರಿ, ಮಂಡ್ಯ, ಚಿತ್ರದುರ್ಗ, ಧಾರವಾಡ, ಬಳ್ಳಾರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಮೀಪದಲ್ಲಿ ಬ್ಯಾಂಕುಗಳ ಸೌಲಭ್ಯ ಇರದ ಪ್ರದೇಶಗಳಲ್ಲಿ ಎಲೆಕ್ಟ್ರಾನಿಕ್ ಬೆನಿಫಿಟ್ ಟ್ರ್ಯಾನ್ಸಫರ್ ಬಳಸಿ ಫಲಾನುಭವಿಗಳಿಗೆ ಕೂಲಿ ಹಣದ ಪಾವತಿ;

91. ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ಅಭಿವೃದ್ಧಿ ಕಾರ್ಯಗಳು ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2012ನೇ ಸಾಲಿನವರೆಗೆ 55.71 ಲಕ್ಷ ಕುಟುಂಬಗಳಿಗೆ ಉದ್ಯೋಗ ಚೀಟಿ ನೀಡಿಕೆ, 4,090 ಲಕ್ಷ ಮಾನವ ದಿನಗಳ ಸೃಜನೆ, 83.08 ಲಕ್ಷ ಕುಟುಂಬಗಳಿಗೆ

ಉದ್ಯೋಗ, 6,632.39 ಕೋಟಿ ರೂ. ವೆಚ್ಚದಲ್ಲಿ 5.38 ಲಕ್ಷ ಕಾಮಗಾರಿಗಳು ಪೂರ್ಣ;

- 1,927.05 ಕೊಟಿ ರೂ. ಹಣ ವೆಚ್ಚದಲ್ಲಿ 1, 2 ಮತ್ತು 3ನೇ ಹಂತದ ಸುವರ್ಣ ಗ್ರಾಮ ಯೋಜನೆಯಡಿ 3,300 ಗ್ರಾಮಗ–ಳಲ್ಲಿ ರಸ್ತೆ ಹಾಗೂ ಚರಂಡಿ ಕಾಮಗಾರಿ ಪೂರ್ಣ, 4 ಮತ್ತು 5ನೇ ಹಂತದಲ್ಲಿ 2,543 ಗ್ರಾಮಗಳಲ್ಲಿ ಕಾಮಗಾರಿ ಚಾಲನೆ;
- ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ 29 ಸಾವಿರ ಸ್ವ–ಸಹಾಯ ಗುಂಪುಗಳ 3.67 ಲಕ್ಷ ಸದಸ್ಯರಿಗೆ 459 ಕೋಟಿ ರೂ. ನೆರವು;
- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 2580 ಕೋಟಿ ರೂ. ವೆಚ್ಚದಲ್ಲಿ 8,818 ಕಿ.ಮೀ ಉದ್ದದ ರಸ್ತೆ ನಿರ್ಮಾಣ.
- ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 614 ಕೋಟಿ ರೂ. ವೆಚ್ಚದಲ್ಲಿ 40,310 ಕಿ.ಮೀ ರಸ್ತೆ ದುರಸ್ತಿ;
- ಪ್ರತಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ('ನಮ್ಮ ಗ್ರಾಮ ನಮ್ಮ ರಸ್ತೆ') ಯೋಜನೆಯಡಿ 899 ಕೋಟಿ ರೂ. ವೆಚ್ಚದಲ್ಲಿ 2,851 ಕಿ.ಮೀ. ಗ್ರಾಮೀಣ ರಸ್ತೆ ನಿರ್ಮಾಣ;
- ಜಲ ನಿರ್ಮಲ ಯೋಜನೆಯಡಿ 416 ಕೋಟಿ ರೂ. ವೆಚ್ಚದಲ್ಲಿ 1,190 ಕಾಮಗಾರಿ ಪೂರ್ಣ;
- ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿನ ಯೋಜನೆಗಾಗಿ ಕೇಂದ್ರದ ಅನುದಾನ ಸೇರಿದಂತೆ 5,031 ಕೋಟಿ ರೂ. ವಿನಿಯೋಗ, 31,352 ಜನವಸತಿಗಳಿಗೆ ಹಾಗೂ 8,445 ಗ್ರಾಮೀಣ ಶಾಲೆಗಳಿಗೆ ಕುಡಿಯುವ ನೀರು ಪೂರೈಕೆ, ನೀರಿನ ಗುಣಮಟ್ಟದ 4,093 ಸಮಸ್ಯಾತ್ಮಕ ಜನವಸತಿಗಳಿಗೆ ಕುಡಿಯುವ ನೀರು ಪೂರೈಕೆ;

- 4,838 ಸಮಸ್ಯಾತ್ಮಕ ಜನವಸತಿಗಳು ಮತ್ತು 2,868 ನೀರಿನ ಗುಣಮಟ್ಟದ ಸಮಸ್ಯಾತ್ಮಕ ಜನವಸತಿಗಳು ಒಳಗೊಂಡ 2,707.95 ಕೋಟಿ ರೂ. ವೆಚ್ಚದ 310 ಬಹುಗ್ರಾಮ ಯೋಜನೆ; 684 ನೀರಿನ ಗುಣಮಟ್ಟದ ಸಮಸ್ಯಾತ್ಮಕ ಗ್ರಾಮಗಳು ಒಳಗೊಂಡ 91 ಬಹುಗ್ರಾಮ ಯೋಜನೆಗಳು ಪೂರ್ಣ;
- 41.22 ಕೋಟಿ ರೂ. ವೆಚ್ಚದಲ್ಲಿ 687 ಡಿ-ಫ್ಲೋರೈಡೇಷನ್ ಪ್ಲಾಂಟ್‌ಗಳ ಅಳವಡಿಕೆ;

ಗ್ರಾಮೀಣಾಭಿವೃದ್ಧಿ ಇಲಾಖೆಯ ಹೊಸ ಉಪಕ್ರಮಗಳು

92. ಕುಡಿಯುವ ನೀರು ಸರಬರಾಜು ಮತ್ತು ನಿರ್ವಹಣೆಯಲ್ಲಿ ಸಾಕಷ್ಟು ಪ್ರಗತಿ ಅಗತ್ಯವಿದ್ದು ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗುವಂತೆ ರಾಜ್ಯದಲ್ಲಿನ ಗ್ರಾಮೀಣ ಕುಡಿಯುವ ನೀರು ಯೋಜನೆಗ-ಳು, ಪಟ್ಟಣ ಪ್ರದೇಶದ ಕುಡಿಯುವ ನೀರಿನ ಯೋಜನೆಗಳು ಹಾಗೂ ಇತರ ಸಂಬಂಧಿತ ಸಂಸ್ಥೆಗಳನ್ನು ವಿಲೀನಗೊಳಿಸಿ ಕುಡಿಯುವ ನೀರಿಗೆ ಒಂದು ವಿಶೇಷ ಮಂಡಳಿಯನ್ನು (Special Purpose Vehicle) ರಚಿಸಲಾಗುವುದು. ಈ ಮಂಡಳಿಯು ಕುಡಿಯುವ ನೀರಿನ ಯೋಜನೆಗಳ ವಿನ್ಯಾಸ, ಶಕ್ಯತಾ ವರದಿಗಳ ತಯಾರಿಕೆ ಹಾಗೂ ಅನುಷ್ಠಾನದ ಜವಾಬ್ದಾರಿ ತೆಗೆದುಕೊಳ್ಳುವುದು. ಪ್ರಾರಂಭಿಕವಾಗಿ ಈ ಸಂಸ್ಥೆಯ ಪ್ರಾರಂಭಕ್ಕೆ ಈ ವರ್ಷದಲ್ಲಿ 100 ಕೋಟಿ ರೂ. ಒದಗಿಸಲಾಗುವುದು.

93. 2013-14ನೇ ಸಾಲಿನಲ್ಲಿ ಹೊಸ ನೀರು ಸರಬರಾಜು ಯೋಜನೆಗಳ ಚಾಲನೆ ಮತ್ತು ನಿರ್ವಹಣ ನೀತಿಯನ್ನು ಜಾರಿಗೆ ತರಲು ಉದ್ದೇಶಿಸಿದೆ. ನೀರು ಸರಬರಾಜಿಗೆ ಓ & ಎಂ ನಿಧಿಯನ್ನು ನೇರವಾಗಿ ಎಲ್ಲಾ ಗ್ರಾಮ ಪಂಚಾಯ್ತಿಗಳಿಗೆ ಒದಗಿಸಲಾಗುವುದು. ಬೃಹತ್ ನೀರು ಮಾಪನವನ್ನು ವಿವಿಧ ಗ್ರಾಮ ನೀರು ಸರಬರಾಜು ಯೋಜನೆಗಳಿಗೆ ಅಳವಡಿಸಲು ಮತ್ತು ಪ್ರತಿ ಮನೆಗೂ ವೈಯಕ್ತಿಕವಾಗಿ ಮೀಟರ್‌ಗಳನ್ನು ಅಳವಡಿಸಿ ಬಾಧ್ಯತೆಯನ್ನು ಮತ್ತು ಸಮರ್ಪಕವಾಗಿ ನೀರು ಬಳಕೆಯನ್ನು ದೃಢಪಡಿಸಲಾಗುವುದು.

94. **ಗ್ರಾಮೀಣಾಭಿವೃದ್ಧಿ, ಆರೋಗ್ಯ, ಶಿಕ್ಷಣ ಮತ್ತು ಗ್ರಾಮೀಣ ನೈರ್ಮಲ್ಯ:** ಸರ್ಕಾರವು ಜನಸಾಮಾನ್ಯರಿಗೆ ಒದಗಿಸುವ ಸೇವೆಗಳನ್ನು ಉನ್ನತೀಕರಿಸಲು ಹಾಗೂ ಖಾಸಗಿ ಸಹಭಾಗಿತ್ವವನ್ನು ಹೆಚ್ಚಿಸಲು ಅನುವಾಗು-ವಂತೆ ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯ, ಗ್ರಾಮೀಣ ನೈರ್ಮಲ್ಯ ಮುಂತಾದ ಕ್ಷೇತ್ರಗಳಲ್ಲಿ ಖಾಸಗಿಯವರ ಸಹಯೋಗದೊಂದಿಗೆ ಜನಸಾಮಾನ್ಯರಿಗೆ ಸೇವೆ ಹಾಗೂ ಸವಲತ್ತುಗಳನ್ನು ಪರಿಣಾಮಕಾರಿಯಾಗಿ ತಲುಪಿಸಲು ಪ್ರಯತ್ನಿಸಲಾಗುವುದು.

95. **ಕರಾವಳಿ ಪ್ರದೇಶಕ್ಕೆ ಸೌಭಾಗ್ಯ ಸಂಜೀವಿನಿ:** ಕರಾವಳಿ ಪ್ರದೇಶದ 3 ಜಿಲ್ಲೆಗಳಲ್ಲಿ (ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ) ಸಾಕಷ್ಟು ಮಳೆ ಇದ್ದರೂ, ಸ್ಥಳೀಯ ಜನ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಈ ದಿಕ್ಕಿನಲ್ಲಿ, 3ನೇ ರಾಜ್ಯ ಹಣಕಾಸು ಆಯೋಗದ ವರದಿಯ ಸಲಹೆಯ ಮೇರೆಗೆ ಸೌಭಾಗ್ಯ ಸಂಜೀವಿನಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಈ ಯೋಜನೆಗೆ ಸ್ಥಳೀಯ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ಒತ್ತಾಯ ಕೂಡ ಇದ್ದು, ಇದಕ್ಕೆ ಬೇಕಾಗುವ ವಿಸ್ತೃತ ಶಕ್ಯತಾ ವರದಿಯನ್ನು ತಯಾರಿಸಲು 10 ಕೋಟಿ ರೂ. ನೀಡಲಾಗಿದೆ. ಈ ವರದಿಯ ಆಧಾರದ ಮೇಲೆ ಈ ಯೋಜನೆಯನ್ನು ಹಂತಹಂತವಾಗಿ ಅನುಷ್ಠಾನಗೊಳಿಸಲು ಪ್ರಾರಂಭಿಕವಾಗಿ 200 ಕೋಟಿ ರೂ. ನೀಡಲು ಪ್ರಸ್ತಾಪಿಸಲಾಗಿದೆ.

96. ರಾಜ್ಯದಲ್ಲಿ ಸುಮಾರು 9,000 ಫ್ಲೋರೈಡ್‌ಯುಕ್ತ ಗ್ರಾಮಗಳಿದ್ದು ಇವುಗಳಲ್ಲಿ 2,106 ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರು ಒದಗಿಸಲು 1,500 ಕೋಟಿ ರೂ. ಕ್ರಿಯಾ ಯೋಜನೆ ತಯಾರಿಸಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಅನುಷ್ಠಾನ ಮಾಡಲಾಗುವುದು;

97. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 30 ಕಿಲೋ ಮೀಟರ್‌ನಂತೆ 5,728.12 ಕಿಲೋ ಮೀಟರ್‌ಗಳ ಉದ್ದದ ರಸ್ತೆಯನ್ನು 189 ಗ್ರಾಮೀಣ ಕ್ಷೇತ್ರಗಳಲ್ಲಿ ರಸ್ತೆ ಅಭಿವೃದ್ಧಿ ಪಡಿಸಲು 2,413.86 ಕೋಟಿ ರೂ. ಮೀಸಲಿರಿಸಿದೆ.

98. ಕಳೆದ 5–6 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆಯಡಿ ಯಾವುದೇ ಹೊಸ ರಸ್ತೆ ಕಾಮಗಾರಿಗಳು ಮಂಜೂರಾಗಿರುವುದಿಲ್ಲ. 2012–13ನೇ ಸಾಲಿನಲ್ಲಿ 1,052 ಕೋಟಿ ರೂ.ಗಳಲ್ಲಿ 408 ಕಾಮಗಾರಿಗಳ ಅನುಮೋದನೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ ಒಟ್ಟು ಅಂದಾಜಿನ ಶೇ.25ರಷ್ಟನ್ನು ರಾಜ್ಯ ಸರ್ಕಾರವು ಭರಿಸಲು ಬದ್ಧವಾಗಿದೆ.

99. ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿಗಾಗಿ 100. ಕೋಟಿ ರೂ.ಗಳನ್ನು ಒದಗಿಸಲಾಗುವುದು.

100. ಕರಾವಳಿ ಜಿಲ್ಲೆಗಳಲ್ಲಿ 458 ಕೋಟಿ ರೂ. ಅಂದಾಜು ವೆಚ್ಚದಲ್ಲಿ 867 ಕಿಂಡಿ ಅಣೆಕಟ್ಟು/ಉಪ್ಪು ನೀರು ತಡೆ ಅಣೆಕಟ್ಟು ನಿರ್ಮಿಸಲು ಈ ಸಾಲಿನಲ್ಲಿ 50 ಕೋಟಿ ರೂ. ನೀಡಲಾಗುವುದು.

101. ರಾಜ್ಯದಲ್ಲಿನ ಸುಮಾರು 92,000 ಗ್ರಾಮ ಪಂಚಾಯತ್ ಸದಸ್ಯರ ಮಾಸಿಕ ಗೌರವ ಸಂಭಾವನೆಯನ್ನು ರೂ. 250 ರಿಂದ ರೂ.350ಕ್ಕೆ ಹೆಚ್ಚಿಸಲಾಗುವುದು.

102. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಹೆಚ್ಚಿನ ನೆರವು ನೀಡುವ ಸಲುವಾಗಿ ಪ್ರತಿ ಜಿಲ್ಲಾ ಪಂಚಾಯತ್‌ಗೆ 2 ಕೋಟಿ ರೂ. ಮತ್ತು ಪ್ರತಿ ತಾಲ್ಲೂಕು ಪಂಚಾಯತ್‌ಗೆ ಒಂದು ಕೋಟಿ ರೂ. ಅನುದಾನವನ್ನು 2013–14 ರಲ್ಲೂ ಮುಂದುವರಿಸಲಾಗುವುದು.

103. 13ನೇ ಆರ್ಥಿಕ ಆಯೋಗದ ಅನುದಾನವನ್ನು ಬಳಸಿಕೊಂಡು 300 ಗ್ರಾಮ ಪಂಚಾಯತಿಗಳಿಗೆ 49.5 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುವುದು.

104. **ಮನೆಗೊಂದು ಶೌಚಾಲಯ: ನಿರ್ಮಲ ಭಾರತ ಅಭಿಯಾನ ಯೋಜನೆಯನ್ನು** ಹೆಚ್ಚಿನ ಆರ್ಥಿಕ ಅನುದಾನ ಮತ್ತು ವ್ಯಾಪ್ತಿಯನ್ನು ಹೊಂದಿರುವ **ಓಪನ್ ಡಿಫಕೇಷನ್ ಫ್ರೀ** (ಓ.ಡಿ.ಎಫ್) ಯೋಜನೆಯಡಿ ಕೈಗೆತ್ತಿಕೊಳ್ಳಲಾಗುವುದು. ಭಾರತ ಸರ್ಕಾರವು ಒದಗಿಸುವ ಅನುದಾನದ ಜೊತೆಯಲ್ಲಿ ಅವಶ್ಯಕತೆ ಕಂಡುಬಂದಲ್ಲಿ ರಾಜ್ಯ ಸರ್ಕಾರವು ಸಹ ಹೆಚ್ಚುವರಿ ಅನುದಾನವನ್ನು ಒದಗಿಸುವುದು. ಸಂಪೂರ್ಣ ಸ್ವಚ್ಛತಾ ಆಂದೋಲನಾ

ಯೋಜನೆಯಡಿ ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಧನ 3,000 ರೂ.ದಿಂದ 3,700 ರೂ.ಗೆ ಹೆಚ್ಚಿಸಿ, 27 ಲಕ್ಷ ವೈಯಕ್ತಿಕ ಮತ್ತು 13 ಸಾವಿರಕ್ಕೂ ಅಧಿಕ ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳ ನಿರ್ಮಾಣ ಮಾಡಲಾಗುವುದು. ಕಾರ್ಪೊರೇಟ್ ಸಾಮಾಜಿಕ ಬದ್ಧತೆಯಡಿಯಲ್ಲಿ ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ ಮತ್ತು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಈ ಆಂದೋಲನವನ್ನು ಕೈಗೊಳ್ಳಲಾಗುವುದು.

105. ಭಾರತ ಸರ್ಕಾರದ ಸಹಯೋಗದೊಂದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಒಟ್ಟು 7,354 ಕೋಟಿ ರೂ. ಆಯವ್ಯಯದಲ್ಲಿ ಒದಗಿಸಲಾಗಿದೆ.

ಪ್ರದೇಶಾಭಿವೃದ್ಧಿ

106. ಅನುಚ್ಛೇದ 371(ಜೆ) ರಡಿಯಲ್ಲಿ ಸಂವಿಧಾನದ 118ನೇ ತಿದ್ದುಪಡಿಯಲ್ಲಿ ಹೈದರಾಬಾದ್-ಕರ್ನಾಟಕದ ಪ್ರದೇಶಗಳಾದ ಗುಲ್ಬರ್ಗಾ, ಬೀದರ್, ಯಾದಗಿರಿ. ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ವಿಶೇಷ ಸ್ಥಾನಮಾನವನ್ನು ನೀಡಿರುವುದು ನಮಗೆ ಬಹಳ ಸಂತೋಷದ ವಿಷಯವಾಗಿದೆ. ಈ ತಿದ್ದುಪಡಿಯಿಂದಾಗಿ, ಸ್ಥಳೀಯ ಜನರಿಗೆ ಉದ್ಯೋಗಾ-ವಕಾಶಗಳು, ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಅಲ್ಲದೆ ಸದರಿ ಪ್ರದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಾಗಲು ಸಹಾಯವಾಗುತ್ತದೆ. ಈ ಸಂವಿಧಾನಿಕ ತಿದ್ದುಪಡಿಯನ್ನು ಪಾಲಿಸಲು ಮತ್ತು ಇದರ ಚಟುವಟಿಕೆಗಳ ಮೇಲುಸ್ತುವಾರಿಗಾಗಿ ವಿಶೇಷ ಕೋಶ ಸ್ಥಾಪನೆ ಮಾಡಲಾಗುವುದು. ಈ ಪ್ರದೇಶದ ಆರು ಜಿಲ್ಲೆಗಳ ಪಂಚಾಯತಿ ರಾಜ್ ಸಂಸ್ಥೆಗಳಿಗೆ 3,114 ಕೋಟಿ ರೂ.ಗಳನ್ನು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ 583 ಕೋಟಿ ರೂ.ಗಳನ್ನು 2013-14ನೇ ಸಾಲಿನಲ್ಲಿ ಒದಗಿಸಲಾ-ಗುವುದು.

107. ಡಾ॥ ಡಿ.ಎಂ ನಂಜುಂಡಪ್ಪ ಅವರ ವರದಿ ಅನ್ವಯ ಕಳೆದ 5 ವರ್ಷಗಳಲ್ಲಿ ಹಿಂದುಳಿದ ಪ್ರದೇಶಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ-ಯಲ್ಲಿ ಸರ್ಕಾರವು 10,814 ಕೋಟಿ ರೂ. ಒದಗಿಸಿದೆ. ಈ ಯೋಜನೆಗೆ 2,925 ಕೋಟಿ ರೂ.ಗಳನ್ನು 2013-14ನೇ ಸಾಲಿನಲ್ಲಿ ಒದಗಿಸಲಾಗುವುದು.

108. ನಮ್ಮ ಸರ್ಕಾರದ ಅವಧಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 232 ಕೋಟಿ ರೂ., ಮಲೆನಾಡು ಪ್ರದೇಶಾಭಿ–ವೃದ್ಧಿ ಮಂಡಳಿಗೆ 152 ಕೋಟಿ ರೂ, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 75 ಕೋಟಿ ರೂ. ಒಟ್ಟು 459 ಕೋಟಿ ರೂ. ಅನುದಾನ ಒದಗಿಸಲಾಗಿದೆ.

109. ಕರಾವಳಿ ಪ್ರದೇಶಗಳ ಅಭಿವೃದ್ಧಿಗಾಗಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ.

110. ನಕ್ಸಲ್ ಪೀಡಿತ 9 ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ತಲಾ 5 ಕೋಟಿ ರೂ.ಗಳಂತೆ 45 ಕೋಟಿ ರೂ. ಅನುದಾನ ನೀಡಲಾಗಿದೆ.

111. ವಿವಿಧ ಅಭಿವೃದ್ಧಿ ಮಂಡಳಿಗಳಿಗೆ 2013–14ರಲ್ಲಿ ಒಟ್ಟು 125 ಕೋಟಿ ರೂ. ಅನುದಾನ ಒದಗಿಸಲಾಗುವುದು.

112. ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಮಾಹಿತಿ ನಿರ್ವಹಣೆ ವ್ಯವಸ್ಥೆಯನ್ನು ಅಳವಡಿಸಲಾಗಿದೆ. 2013–14ನೇ ಸಾಲಿನಲ್ಲಿ 300 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ

113. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ಅಗತ್ಯ ಮೂಲ ಸೌಕರ್ಯಗಳನ್ನು ಪೂರೈಸಿ ಎಲ್ಲರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶವನ್ನು ನಮ್ಮ ಸರ್ಕಾರ ಹೊಂದಿದೆ. ಈ ದಿಸೆಯಲ್ಲಿ 2012–13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯದಲ್ಲಿ ಶೇ.100 ರಷ್ಟು ಶಾಲಾ ಪ್ರವೇಶಾವಕಾಶ ಒದಗಿಸಲಾಗಿದೆ. ಕಳೆದ 5 ವರ್ಷಗಳಲ್ಲಿ ಈ ಕೆಳಕಂಡ ಸಾಧನೆಗಳನ್ನು ಮಾಡಲಾಗಿದೆ.

- ಪ್ರತಿ ವರ್ಷ 66 ಲಕ್ಷ ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹಕ್ಕಾಗಿ 228.30 ಕೊಟಿ ರೂ, ಪಠ್ಯಪುಸ್ತಕಗಳಿಗಾಗಿ 320 ಕೋಟಿ ರೂ, ಸಮವಸ್ತ್ರಕ್ಕಾಗಿ 367.50 ಕೋಟಿ ರೂ. ವೆಚ್ಚ;
- 8ನೇ ತರಗತಿಯಲ್ಲಿ ಓದುತ್ತಿರುವ 5.50 ಲಕ್ಷ ಮಕ್ಕಳಿಗೆ ಬೈಸಿಕಲ್ ವಿತರಣೆಗೆ ಒಟ್ಟು 740 ಕೋಟಿ ರೂ. ವೆಚ್ಚ;
- ಶಾಲಾ ಕಟ್ಟಡಗಳು, ಪಂಚ ಸೌಲಭ್ಯ, ಇತ್ಯಾದಿಗಳಿಗೆ 551 ಕೋಟಿ ರೂ. ವೆಚ್ಚ;
- 1,147 ಹೊಸ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪ್ರಾರಂಭ;
- 26,873 ಶಾಲಾ ಕೊಠಡಿಗಳ ನಿರ್ಮಾಣ;
- ಈಗ ಪ್ರಾಥಮಿಕ ಶಾಲೆಗಳಿಗೆ ಕೋಣೆಗಳ ಕೊರತೆ ಇರುವುದಿಲ್ಲ.
- ಶಾಲೆಗಳ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯದ ನಿರ್ವಹಣೆಗಾಗಿ 20 ಕೋಟಿ ರೂ;
- ಕೇಂದ್ರೀಯ ವಿದ್ಯಾಲಯ ಮಾದರಿಯಲ್ಲಿ 74 ಮಾದರಿ ಶಾಲೆಗ-ಳು, ಸರ್ವಶಿಕ್ಷಣ ಅಭಿಯಾನದಡಿಯಲ್ಲಿ 71 ಶಾಲೆಗಳು ಮತ್ತು ರಾಜ್ಯದ ಅನುದಾನದಲ್ಲಿ 39 ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು ಹಾಗೂ 20 ವಸತಿ ನಿಲಯಗಳು ಹಿಂದುಳಿದ ಬ್ಲಾಕ್‌ಗಳಲ್ಲಿ ಪ್ರಾರಂಭ;
- ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು 12,079 ಹುದ್ದೆಗಳ-ನ್ನು ಭರ್ತಿ ಮಾಡಲು ಅನುಮೋದನೆ;
- ಖಾಯಂ ಶಿಕ್ಷಕರ ನೇಮಕವಾಗುವವರೆಗೆ ಅತಿಥಿ ಶಿಕ್ಷಕರು/ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅನುಮತಿ;
- 39 ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರಿಗಾಗಿ 213 ವಸತಿ ಗೃಹಗಳ ನಿರ್ಮಾಣ;
- ಪ್ರಾಥಮಿಕ ಶಿಕ್ಷಕರಿಗೆ, ಪ್ರೌಢಶಾಲಾ ಶಿಕ್ಷಕರಿಗೆ ಹಾಗೂ ಪದವಿ ಪೂರ್ವಶಿಕ್ಷಣ ಉಪನ್ಯಾಸಕರಿಗೆ ನೀಡುತ್ತಿರುವ ರೂ.200 ವಿಶೇಷ

ಭತ್ಯೆಯನ್ನು ಕ್ರಮವಾಗಿ ರೂ.300, ರೂ.400 ಹಾಗೂ ರೂ.500ಕ್ಕೆ ಪರಿಷ್ಕರಣೆ;

- ಶಿಕ್ಷಣ ಹಕ್ಕು ಕಾಯ್ದೆ ಅಡಿಯಲ್ಲಿ (RTE) ಈ ವರ್ಷ 50 ಸಾವಿರ ಮಕ್ಕಳಿಗಾಗಿ ಸರ್ಕಾರದಿಂದ 58 ಕೋಟಿ ರೂ. ಶುಲ್ಕ ಪಾವತಿ;
- ಖಾಸಗಿ ಶಾಲೆಗಳಿಗೆ ವೇತನಾನುದಾನ ನೀಡಲು ನಿಗದಿಪಡಿಸಿದ್ದ 1.6.1987ರ ಅರ್ಹತಾ ದಿನಾಂಕ 1994–95ರ ಶೈಕ್ಷಣಿಕ ವರ್ಷಕ್ಕೆ ವಿಸ್ತರಣೆ, 416 ಪ್ರಾಥಮಿಕ ಮತ್ತು 787 ಪ್ರೌಢ ಶಾಲೆಗಳು ಹಾಗೂ 246 ಪದವಿ ಪೂರ್ವ ಕಾಲೇಜುಗಳಲ್ಲಿ 11,176 ಶಿಕ್ಷಕರ ವೇತನಾನುದಾನಕ್ಕೆ 215 ಕೋಟಿ ರೂ. ಹೆಚ್ಚುವರಿ ವೆಚ್ಚ;
- 377 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗ ಹಾಗೂ 210 ಕಾಲೇಜುಗಳಲ್ಲಿ ವಾಣಿಜ್ಯ ವಿಭಾಗದ ಪ್ರಾರಂಭ;
- ರಾಷ್ಟ್ರೀಯ ಪಠ್ಯಕ್ರಮ ಆಧರಿಸಿ 5 ಮತ್ತು 8ನೇ ತರಗತಿಗಳಿಗೆ ಹೊಸ ಪಠ್ಯ ಕ್ರಮ ಜಾರಿ;1, 2, 6 ಮತ್ತು 9ನೇ ತರಗತಿಗಳಿಗೆ 2013–14ನೇ ಸಾಲಿನಲ್ಲಿ ಹೊಸ ಪಠ್ಯ ಕ್ರಮ ಅಳವಡಿಕೆ;
- ಹೊಸ ಪಠ್ಯಕ್ರಮದಿಂದ ಎಸ್.ಎಸ್.ಎಲ್.ಸಿ.ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವಾಗಿ ಕಂಪ್ಯೂಟರ್ ಒದಗಿಸಿದೆ.
- ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಣಕ್ಕಾಗಿ 5 ವರ್ಷಗಳಲ್ಲಿ 71 ಲಕ್ಷ ವಿದ್ಯಾರ್ಥಿಗಳಿಗೆ 213 ಕೋಟಿ ರೂ.ವೆಚ್ಚ;
- ಕರ್ನಾಟಕ ಸ್ಟೇಟ್ ಕ್ವಾಲಿಟಿ ಅಸೆಸ್‌ಮೆಂಟ್ ಅಂಡ್ ಅಕ್ರಿಡೇಷನ್ ಕೌನ್ಸಿಲ್ ಸ್ಥಾಪಿಸಿ, ಶಿಕ್ಷಣ ಗುಣಮಟ್ಟದ ಬಗ್ಗೆ ಮೌಲ್ಯಮಾಪನೆ, ಅಗಸ್ತ್ಯ ಫೌಂಡೇಷನ್ ಸಹಯೋಗದೊಂದಿಗೆ ಪ್ರೌಢ ಶಿಕ್ಷಣ ವಿದ್ಯಾರ್ಥಿಗಳಿಗೆ ವಿಜ್ಞಾನ ಕಲಿಕೆಗೆ ವ್ಯವಸ್ಥೆ;

114. 2013–14ನೇ ಸಾಲಿನ ಆಯವ್ಯಯದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕಾಗಿ ಒಟ್ಟು 15,599 ಕೋಟಿ ರೂ. ಅನುದಾನ ಒದಗಿಸಿದೆ. ಈ

ಮೊತ್ತವು ಸರ್ಕಾರದ ಯಾವುದೇ ಇಲಾಖೆಗೆ ಹಂಚಿಕೆ ಮಾಡಿರುವ ಮೊತ್ತಕ್ಕಿಂತ ಹೆಚ್ಚಿನದಾಗಿರುತ್ತದೆ. ಮುಂಬರುವ ವರ್ಷಗಳಲ್ಲಿ ಬೋಧನೆ ಗುಣಮಟ್ಟ ಮತ್ತು ಫಲಿತಾಂಶ ಹೆಚ್ಚಿಸಲು ಶಿಕ್ಷಣದ ಸಾರ್ವತ್ರೀಕರಣದತ್ತ ಗಮನ ಹರಿಸಬೇಕಾಗಿದೆ. ಈ ಗುರಿ ಸಾಧನೆಗಾಗಿ 2013–14ನೇ ಸಾಲಿನಲ್ಲಿ ಈ ಕೆಳಗಿನ ಮಾನದಂಡಗಳನ್ನು ಪ್ರಸ್ತಾಪಿಸಲಾಗಿದೆ;

- ಶೇ. 60 ಕ್ಕಿಂತ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 1.47 ಲಕ್ಷ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗ–ಳಿಗೆ 93.34 ಕೋಟಿ ರೂ. ಪ್ರೋತ್ಸಾಹಧನ ನೀಡಿಕೆ, ಮುಂದೆ ಪ್ರೋತ್ಸಾಹಧನದ ಬದಲು Akash Tabletಗಳ ನೀಡಿಕೆ;
- ಡಿ.ಎಡ್ ಮತ್ತು ಬಿ.ಎಡ್ ಪದವಿಗಳಿಗಾಗಿ ಪಠ್ಯ ಮತ್ತು ವ್ಯಾಸಂಗ ಕ್ರಮವನ್ನು ಪರಿಷ್ಕರಿಸಬೇಕಾಗಿದೆ.
- ಶಾಲಾ ಅಭಿವೃದ್ಧಿ ಕಾರ್ಯಕ್ರಮವನ್ನು ಬಲಪಡಿಸಲು ಮತ್ತು ಸಾರ್ವಜನಿಕರನ್ನು ಈ ಕಾಯಕದಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಾಗೂ ಶಾಲಾ ಮೂಲಸೌಲಭ್ಯ, ಶಿಕ್ಷಣದ ಗುಣಮಟ್ಟ ಮತ್ತು ಸಮುದಾಯ ಸಹಾಯವನ್ನು ಉತ್ತೇಜಿಸುವುದು.
- ಶಿಕ್ಷಕರ ಬುದ್ಧಿಮತ್ತೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸೇವಾ ತರಬೇತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
- ಎಲ್ಲಾ ಸರ್ಕಾರಿ ಪ್ರೌಢ ಶಾಲಾ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಅಂತರ್ಜಾಲ ಸೌಲಭ್ಯಗಳನ್ನು ಒದಗಿಸುವುದು.
- ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗ ಇಲ್ಲದಂತಹ ತಾಲ್ಲೂಕಿನ ಸರ್ಕಾರ ಪದವಿ ಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗ ಪ್ರಾರಂಭಿಸಲಾಗುವುದು.
- ಅನುಭವಿ ಮತ್ತು ಪ್ರತಿಭಾವಂತ ಸಿಬ್ಬಂದಿಯನ್ನು ಸೆಳೆಯಲು ಡಿಎಸ್ಇಆರ್‌ಟಿ, ಡಿಐಇಟಿಎಸ್ ಮತ್ತು ಸಿಟಿಇಎಸ್ ಗಳಿಗೆ ಸಿಬ್ಬಂದಿಯ ನೇಮಕಾತಿಗಾಗಿ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗುವುದು.

- ಶ್ರೀ ಎಂ. ರಾಜಶೇಖರಮೂರ್ತಿಯವರ ಮಾರ್ಗದರ್ಶನದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾರಂಭಗೊಂಡ ಅಖಿಲ ಭಾರತ ಮಾದರಿ ಶಿಕ್ಷಣ ಕೇಂದ್ರದ ನಿರ್ಮಾಣ ಕಾರ್ಯಕ್ಕೆ 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.

115. ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮವನ್ನು ಪುನರಾವಲೋಕಿಸಲು ಮತ್ತು ಡಿಜಿಟಲ್ ಪಠ್ಯಪುಸ್ತಕಗಳನ್ನು ಅಭಿವೃದ್ಧಿ ಪಡಿಸಲು ಒಂದು ತಜ್ಞ ಸಮಿತಿಯನ್ನು ರಚಿಸಲಾಗುವುದು. ತಾಲ್ಲೂಕು ಗ್ರಂಥಾಲಯಗಳನ್ನು ಮೇಲ್ದರ್ಜೆಗೇರಿಸಲಾಗುವುದಲ್ಲದೆ ಎಲ್ಲಾ ಜಿಲ್ಲಾಕೇಂದ್ರಗ-ಳಲ್ಲಿ ಮಕ್ಕಳ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು.

ಉನ್ನತ ಶಿಕ್ಷಣ

116. ನಮ್ಮ ಯುವಕರು ವಿಶೇಷವಾಗಿ ಗ್ರಾಮೀಣ ಯುವಕರು ರಾಜ್ಯದ ಆರ್ಥಿಕ ಅಭಿವೃದ್ಧಿಯ ಪ್ರಯೋಜನ ಪಡೆಯಲು ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣದ ಅಗತ್ಯತೆಯನ್ನು ಕಡೆಗಾಣಿಸುವಂತಿಲ್ಲ. ಕಳೆದ 5 ವರ್ಷಗಳಲ್ಲಿ ಈ ಕೆಳಕಂಡ ಪ್ರಮುಖ ಸಾಧನೆಗಳನ್ನು ಮಾಡಲಾಗಿದೆ.

- 191 ಹೊಸ ಕಾಲೇಜುಗಳ ಸೇರ್ಪಡೆಯೊಂದಿಗೆ ಕಾಲೇಜುಗಳ ಒಟ್ಟು ಸಂಖ್ಯೆ 356 ಆಗಿದೆ. 186 ಕಾಲೇಜುಗಳು ಸ್ವಂತ ಕಟ್ಟಡ ಹೊಂದಿದ್ದು 110 ಕಾಲೇಜು ಕಟ್ಟಡಗಳ ನಿರ್ಮಾಣ ಪ್ರಗತಿಯ-ಲ್ಲಿವೆ; ಇಲ್ಲಿವರೆಗೆ ಕಟ್ಟಡಗಳ ನಿರ್ಮಾಣಕ್ಕಾಗಿ 243 ಕೋಟಿ ರೂ. ವೆಚ್ಚ;
- 74 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ತರಗತಿಗಳು ಹಾಗೂ ವೃತ್ತಿಪರ ವಿಷಯಗಳ ಪ್ರಾರಂಭ;
- ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬಿ.ಎಸ್ಸಿ. ಕೋರ್ಸಿನ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ವಿದ್ಯಾರ್ಥಿ ವೇತನ;
- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಬೋಧನಾ ಹಾಗೂ ಪ್ರಯೋಗಾಲಯ ಶುಲ್ಕಗಳ ಮನ್ನಾ;

- 3 ವರ್ಷಗಳಲ್ಲಿ 15 ಕೋಟಿ ರೂ. ವೆಚ್ಚದಲ್ಲಿ ಆಂಗ್ಲ, ವಿಕಸನ ಮತ್ತು ಸಹಯೋಗ ಕಾರ್ಯಕ್ರಮಗಳು;
- ಜಾನಪದ ವಿಶ್ವವಿದ್ಯಾಲಯ, ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ಸಂಗೀತ ವಿಶ್ವವಿದ್ಯಾಲಯ, ತೋಟಗಾರಿಕೆ ವಿಶ್ವವಿದ್ಯಾಲಯ, 2 ಕೃಷಿ ವಿದ್ಯಾಲಯಗಳನ್ನು ಒಳಗೊಂಡಂತೆ ಕಳೆದ 5 ವರ್ಷಗಳಲ್ಲಿ 9 ಹೊಸ ವಿಶ್ವವಿದ್ಯಾಲಯಗಳ ಪ್ರಾರಂಭ;
- 15 ಖಾಸಗಿ ವಿಶ್ವವಿದ್ಯಾಲಯಗಳಿಗೆ ಮಾನ್ಯತೆ;
- ಕರ್ನಾಟಕ ಜ್ಞಾನ ಆಯೋಗದ 89 ಶಿಫಾರಸ್ಸುಗಳ ಪೈಕಿ 17 ಶಿಫಾರಸ್ಸುಗಳ ಅನುಷ್ಠಾನ;
- 2008ರಿಂದ ಹೊಸದಾಗಿ ಪ್ರಾರಂಭಿಸಲಾದ 43 ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ 10 ಇಂಜಿನಿಯರಿಂಗ್ ಕಾಲೇಜುಗಳ ಮುಖಾಂತರ 12,710 ಸೀಟುಗಳ ಹೆಚ್ಚಳ;
- ಇಂಜಿನಿಯರಿಂಗ್ ಕಾಲೇಜು ಕಟ್ಟಡಗಳಿಗಾಗಿ 5 ವರ್ಷಗಳಲ್ಲಿ 197 ಕೋಟಿ ರೂ. ಹಾಗೂ ಪಾಲಿಟೆಕ್ನಿಕ್ ಕಾಲೇಜು ಕಟ್ಟಡಗಳಿ–ಗಾಗಿ 138 ಕೋಟಿ ರೂ. ವೆಚ್ಚ;
- 1055 ಉಪನ್ಯಾಸಕರುಗಳ ನೇಮಕಾತಿ ಪ್ರಕ್ರಿಯ ಮುಕ್ತಾಯದ ಹಂತದಲ್ಲಿ'
- 162 ಕೋಟಿ ರೂ. ವೆಚ್ಚದ TEQUIP-11 ಹಂತದ ಯೋಜನೆಯಲ್ಲಿ ಮೂಲ ಸೌಕರ್ಯ, ಸಂಶೋಧನೆ ಮತ್ತು ಅಭಿವೃದ್ಧಿಗಾಗಿ 1 ಸರ್ಕಾರಿ, 10 ಅನುದಾನಿತ ಹಾಗೂ 8 ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಹಾಯ ಧನ;

ಹೊಸ ಯೋಜನೆಗಳು

117. **ಹೊಸ ಹೆಜ್ಜೆ** ಕಾರ್ಯಕ್ರಮವನ್ನು 2013–14ನೇ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಿಗೆ ವಿಸ್ತರಿಸಲಾ–ಗುವುದು.

118. ವ್ಯಾಪಾರ, ಉದ್ದಿಮೆ ಮತ್ತು ವ್ಯವಹಾರದಲ್ಲಿ ಜಾಗತಿಕ ನಾಯಕರುಗಳಾಗುವಂತೆ ಅತ್ಯುನ್ನತ ಮೆಟ್ಟಿಲುಗಳನ್ನು ಏರುವ ಮತ್ತು ಸಮರ್ಥ ಉನ್ನತ ಶಿಕ್ಷಣವನ್ನು ಪಡೆಯುವ ಯುವಕರ ಆಶೋತ್ತರಗಳನ್ನು ಈಡೇರಿಸಲು **ಮುಕ್ತ ಮೂಲ ನಾಯಕತ್ವ** ಕಾರ್ಯಕ್ರಮದ ಅಡಿಯಲ್ಲಿ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಿಂದ 10,000 ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ವಿಶ್ವ ಜಾಗತಿಕ ವೇದಿಕೆಯೊಂದಿಗೆ ಸರ್ಕಾರ ಸಹಭಾಗಿತ್ವ ಮಾಡಿಕೊಳ್ಳಲಿದೆ. ವೇದಿಕೆಯು, 20ರ ಹರೆಯದ ಯುವಜನರಿಗಾಗಿ **ಗ್ಲೋಬಲ್ ಶೇಪರ್ಸ್** ಎಂಬ ನೂತನ ಕಾರ್ಯಕ್ರಮವನ್ನು ಸ್ಥಾಪಿಸಲಿದೆ. ಈ ಯುವ ಕಾರ್ಯಕ್ರಮವು ವ್ಯಕ್ತಿ, ಸಮುದಾಯ ಮತ್ತು ಜಾಗತಿಕ ಆಯಾಮಗಳನ್ನು ಒಟ್ಟುಗೂಳಿಸುವ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಯುವ ಜನರಿಗೆ ಒಂದು ಜಾಗತಿಕ ವೇದಿಕೆಯನ್ನು ಕಲ್ಪಿಸಿಕೊಡಲಿದೆ.

119. ಬೆಂಗಳೂರು ವಿಶ್ವವಿದ್ಯಾಲಯ ಕಾಲೇಜುಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಎರಡು ರೀತಿಯಿಂದಲೂ ಅತ್ಯಂತ ಅಗಾಧವಾಗಿ ಬೆಳೆದಿದೆ. ಪರಿಣಾಮಕಾರಿ ಆಡಳಿತವನ್ನು ತರುವ ಮತ್ತು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ, ನಮ್ಮ ಸರ್ಕಾರವು ಬೆಂಗಳೂರು ವಿಶ್ವವಿದ್ಯಾಲಯವನ್ನು ಬೇರ್ಪಡಿಸಿ ನೂತನ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಉದ್ದೇಶಿಸಿದೆ. ವಿಜ್ಞಾನ ವಿಭಾಗ ಇಲ್ಲದಂತಹ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗ ಪ್ರಾರಂಭಿಸಲು ಹಾಗೂ ಅವಶ್ಯಕತೆಗೆ ಅನುಗುಣವಾಗಿ 10 ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು.

120. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ 10 ಕೋಟಿ ರೂ. ಒದಗಿಸಲಾಗುವುದು. ಬಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾಲಯಕ್ಕೆ 10 ಕೋಟಿ ರೂ. ಒದಗಿಸಲಾಗುವುದು.

121. ಮೈಸೂರು ವಿಶ್ವವಿದ್ಯಾಲಯದಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಅಧ್ಯಯನ ಪೀಠವನ್ನು ಸ್ಥಾಪಿಸಲಾಗುವುದು.

122. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಸಮಸ್ಯೆ ಪರಿಹರಿಸುವ ಸಾಮರ್ಥ್ಯ, ಹೆಚ್ಚಿನ ತಿಳಿವಳಿಕೆ ಮತ್ತು ನೈಪುಣ್ಯತೆಯನ್ನು ಉತ್ತೇಜಿಸುವುದಕ್ಕಾಗಿ ಸರ್ಕಾರಿ ಕಾಲೇಜುಗಳಲ್ಲಿ ಓದುತ್ತಿರುವ ಶೇಕಡ 60 ಮತ್ತು ಅದಕ್ಕಿಂತ ಹೆಚ್ಚು

ಅಂಕಗಳನ್ನು ಪಡೆದ ವೃತ್ತಿಪರ ಇಂಜಿನಿಯರಿಂಗ್ ಮತ್ತು ವಿಜ್ಞಾನ ಕೋರ್ಸುಗಳ ಮೊದಲನೆ ವರ್ಷದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬೆಂಬಲ ಸಾಧನವಾಗಿ ಆಕಾಶ್ ಟ್ಯಾಬ್ಲೆಟ್‌ಗಳನ್ನು ನೀಡಲಾಗುವುದು.

123. ಎಲ್ಲಾ ಸರ್ಕಾರಿ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳಿಗೆ ಮೂರು ವರ್ಷಗಳ ಒಂದು ಅವಧಿಗೆ 22 ಕೋಟಿ ರೂ. ವೆಚ್ಚದಲ್ಲಿ ಬ್ರಾಡ್ ಬ್ಯಾಂಡ್ ಇಂಟರ್‌ನೆಟ್ ಸಂಪರ್ಕಕ್ಕಾಗಿ ಲಾನ್ ಮತ್ತು ಅದಕ್ಕೆ ಸಂಬಂಧಿಸಿದ ಸಾಧನೆ ಸಲಕರಣೆಗಳ ಜೊತೆಗೆ KSWAN ಸಂಪರ್ಕವನ್ನು ಒದಗಿಸಲಾಗುವುದು.

124. 2013–14ನೇ ಸಾಲಿನಲ್ಲಿ ಉನ್ನತ ಶಿಕ್ಷಣಕ್ಕಾಗಿ ಒಟ್ಟು 3067 ಕೋಟಿ ರೂ. ಅನುದಾನವನ್ನು ಒದಗಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

125. ಕಳೆದ 5 ವರ್ಷಗಳಲ್ಲಿ ವಿವಿಧ ಯೋಜನೆಗಳಲ್ಲಿನ ಸಾಧನೆಗಳು ಕೆಳಕಂಡಂತಿವೆ:

- **ಪ್ರಸೂತಿ ಆರೈಕೆ** ಯೋಜನೆಯಡಿ 14.19 ಲಕ್ಷ ಫಲಾನು–ಭವಿಗಳಿಗೆ 147.63 ಕೋಟಿ ರೂ. ವೆಚ್ಚ.
- **ಮಡಿಲು** ಯೋಜನೆಯಡಿ ಸುಮಾರು 13 ಲಕ್ಷ ಫಲಾನುಭವಿಗಳಿಗೆ 162.54 ಕೋಟಿ ರೂ. ವೆಚ್ಚ.
- **ತಾಯಿಭಾಗ್ಯ** ಯೋಜನೆಯಡಿ ತಾಯಂದಿರಿಗೆ ಹೈದರಾಬಾದ್ ಕರ್ನಾಟಕದ 5 ಜಿಲ್ಲೆಗಳು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ 27.43 ಕೋಟಿ ರೂ. ವೆಚ್ಚದಲ್ಲಿ ಸುಮಾರು 1.4 ಲಕ್ಷ ಫಲಾನುಭವಿಗಳಿಗೆ ಪ್ರಯೋಜನ.
- **ಆರೋಗ್ಯ ಕವಚ** ಯೋಜನೆಯಡಿ 274.41 ಕೋಟಿ ರೂ. ವೆಚ್ಚದಲ್ಲಿ 19.84 ಲಕ್ಷ ಫಲಾನುಭವಿಗಳಿಗೆ ಲಾಭ.
- **ವಾಜಪೇಯಿ ಆರೋಗ್ಯ ಶ್ರೀ** ಯೋಜನೆಯಡಿ 173 ಕೋಟಿ ರೂ. ವೆಚ್ಚದಲ್ಲಿ 28.664 ಫಲಾನುಭವಿಗಳಿಗೆ ಚಿಕಿತ್ಸೆ.

126. ದೇಶದಲ್ಲಿ ಪ್ರಪ್ರಥಮವಾಗಿ ರಾಜ್ಯದ ಹುಬ್ಬಳ್ಳಿ ಮತ್ತು ಬಳ್ಳಾರಿ ನಗರಗಳಲ್ಲಿ ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯಗಳನ್ನು 18 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗಿದೆ.

127. **ಕರ್ನಾಟಕ ರಾಜ್ಯ ಔಷಧ** ನೀತಿಯನ್ನು ಘೋಷಿಸಲಾಗಿದೆ.

128. ರಾಜ್ಯದ ಒಟ್ಟು 1,018 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮತ್ತು 192 ಸಮುದಾಯ ಕೇಂದ್ರಗಳನ್ನು ಪ್ರಥಮ ರೆಫೆರಲ್ ಘಟಕಗಳಾಗಿ ಪರಿವರ್ತಿಸಿ, ದಿನದ 24 ಗಂಟೆಗಳೂ ಆರೋಗ್ಯ ಸೇವೆಯನ್ನು ಒದಗಿಸಲಾಗಿದೆ.

129. ಇಲಾಖೆಯ ಈ ಎಲ್ಲಾ ಕ್ರಮಗಳಿಂದಾಗಿ **ಆರೋಗ್ಯ ಸೂಚ್ಯಾಂಕವು** ಕೆಳಕಂಡ ಸುಧಾರಣೆ ಹೊಂದಿರುತ್ತದೆ.

- ಶಿಶು ಮರಣ ಪ್ರಮಾಣವು ಪ್ರತಿ ಸಾವಿರ ಜೀವಂತ ಜನನಗಳಿಗೆ 41ರಿಂದ 35ಕ್ಕೆ ಇಳಿಕೆ;
- ತಾಯಂದಿರ ಮರಣ ಪ್ರಮಾಣವು ಪ್ರತಿ ಒಂದು ಲಕ್ಷ ಜೀವಂತ ಜನನಗಳಿಗೆ 213 ರಿಂದ 178ಕ್ಕೆ ಇಳಿಕೆ;
- ಸಾಂಸ್ಥಿಕ ಹೆರಿಗೆಗಳು ಶೇ.65ರಿಂದ ಶೇ.97ಕ್ಕೆ ಹೆಚ್ಚಳ.

130. ಖಾಸಗಿ ವಲಯದಲ್ಲಿ ಆರೋಗ್ಯ ರಕ್ಷಣೆಯ ಗುಣಮಟ್ಟವನ್ನು ಕಾಪಾಡಲು **ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮವನ್ನು** ಜಾರಿಗೆ ತರಲಾಗಿದೆ.

131. 2013–14ನೇ ಸಾಲಿನಲ್ಲಿ ಈ ಮುಂದಿನ ಪ್ರಮುಖ ಕಾರ್ಯಕ್ರಮಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ.

- ನಗರದ ಬಡವರು, ವಲಸಿಗರು ಮತ್ತು ದುರ್ಬಲ ವರ್ಗದ ಜನರಿಗೆ ಆರೋಗ್ಯ ಸೇವೆಗಳನ್ನು ಕಲ್ಪಿಸಲು ಭಾರತ ಸರ್ಕಾರದ ನೆರವಿನೊಂದಿಗೆ **'ರಾಷ್ಟ್ರೀಯ ನಗರ ಆರೋಗ್ಯ ಮಿಷನ್'** ಪ್ರಾರಂಭ.
- **ಆರೋಗ್ಯ ವಿಮಾ ಯೋಜನೆಯ ಸಮೀಕರಣ:** ಪ್ರಸ್ತುತ ನಮ್ಮ ರಾಜ್ಯದಲ್ಲಿ ಗ್ರಾಮೀಣ ಸಹಕಾರ ಸದಸ್ಯರಿಗೆ ಯಶಸ್ವಿನಿ ಆರೋಗ್ಯ ಯೋಜನೆ, ಬಡ ಕುಟುಂಬಗಳಿಗೆ ವಾಜಪೇಯಿ

ಆರೋಗ್ಯಶ್ರೀ ಯೋಜನೆ ಹಾಗೂ ರಾಷ್ಟ್ರೀಯ ಸ್ವಾಸ್ಥ ಬಿಮಾ ಯೋಜನೆ ಜಾರಿಯಲ್ಲಿವೆ. ಈ ಮೂರು ಆರೋಗ್ಯ ವಿಮೆ ಯೋಜನೆಗಳ ಅನುಭವದ ಆಧಾರದ ಮೇಲೆ ಒಂದುಗೂ–ಡಿಸಿ ಒಂದು ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

- ಕೆ.ಸಿ.ಜನರಲ್ ಆಸ್ಪತ್ರೆ, ಜಯನಗರ ಜನರಲ್ ಆಸ್ಪತ್ರೆ ಮತ್ತು ಸಂಜಯ್ ಗಾಂಧಿ ಅಪಘಾತ ಮತ್ತು ಅಸ್ಥಿ ಚಿಕಿತ್ಸಾ (ಟ್ರಾಮಾ ಮತ್ತು ಅರ್ಥೋಪೆಡಿಕ್ಸ್) ಸಂಸ್ಥೆಗಳಲ್ಲಿ ಇ–ಆಸ್ಪತ್ರೆ ವ್ಯವಸ್ಥೆಯನ್ನು ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಕಾರ್ಯ ನಿರ್ವಹಣೆಯನ್ನು ಇ–ಕಚೇರಿ ಸ್ಥಾಪನೆಯ ಮೂಲಕ ಗಣಕೀಕರಣಗೊಳಿಸಲಾಗುವುದು.
- ಆಯ್ದ ತಾಲ್ಲೂಕು ಆಸ್ಪತ್ರೆಗಳಲ್ಲಿ ಹಂತ ಹಂತವಾಗಿ ಡಯಾಲಿಸಿಸ್ ಘಟಕಗಳನ್ನು ಸ್ಥಾಪಿಸಲಾಗುವುದು. ಸಮುದಾಯ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಮಾನಸಿಕ ಅಸ್ವಸ್ಥ ರೋಗಿಗಳಿಗಾಗಿ ನಿವಾಸಿ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾ–ಗುವುದು.
- ಆರೋಗ್ಯ ಸೇವೆಗಳನ್ನು ಬಲಪಡಿಸಲು ಬೆಂಗಳೂರಿನಲ್ಲಿ ಸಾರ್ವಜನಿಕ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸಲಾಗುವುದು.
- 15 ತಾಲ್ಲೂಕುಗಳ ಜನರಲ್ ಆಸ್ಪತ್ರೆಗಳಲ್ಲಿ ಹೊಸ ಆಯುಷ್ ಘಟಕಗಳನ್ನು ಪ್ರಾರಂಭಿಸಲಾಗಿದೆ. 30 ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಘಟಕಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. 2013–14ನೇ ಸಾಲಿನಲ್ಲಿ 4 ಆಯುಷ್ ಸಂಚಾರಿ ಘಟಕಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 1.10 ಕೋಟಿ ರೂ. ಮೊಬಲಗನ್ನು ಒದಗಿಸಲಾಗುವುದು.

- ಪ್ರಸಿದ್ಧ ಕಣ್ಣಿನ ತಜ್ಞರಾದ ಡಾ॥ ಎಂ.ಎಂ.ಜೋಶಿ ಅವರ ಗುರು ಮಹಾಪತಿರಾಜ ಟ್ರಸ್ಟ್, ಹುಬ್ಬಳ್ಳಿಯಿಂದ ನಿರ್ಮಿತವಾಗುತ್ತಿರುವ ಬಡವರಿಗೆ ಉಚಿತ ಸೇವೆ ಒದಗಿಸುವ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ 2ಕೋಟಿ ರೂ. ಒದಗಿಸಲಾಗುವುದು.
- ಬೆಂಗಳೂರಿನ ಶಂಕರ ಕ್ಯಾನ್ಸರ್ ಆಸ್ಪತ್ರೆಗೆ 10 ಕೋಟಿ ರೂ. ಅನುದಾನ ಒದಗಿಸಲಾಗುವುದು.
- ಶ್ರೀಗಂಧ ಸಂಸ್ಥೆ, ಶಿವಮೊಗ್ಗ ಇವರು ಬಡವರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಡಯಾಲಿಸಿಸ್ ಸೆಂಟರ್ ತೆರೆಯಲು 1 ಕೋಟಿ. ರೂ. ಒದಗಿಸಲಾಗುವುದು.
- ಕರಾವಳಿ ಪ್ರದೇಶದ ಕೆಲವು ಸ್ಥಳಗಳಲ್ಲಿರುವ ಎಂಡೋ–ಸಲ್ಫನ್ ಪೀಡಿತ ವ್ಯಕ್ತಿಗಳ ಜೀವನ ಮಟ್ಟ ಮತ್ತು ಆರೋಗ್ಯ ಸುಧಾರಿಸಲು ಅವರಿಗೆ ಪುನರ್ವಸತಿ ಯೋಜನೆಯನ್ನು ರಚಿಸಿ, ಪರಿಣಿತ ಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಈ ಸಾಲಿನಲ್ಲಿ 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- 75 ವರ್ಷಕ್ಕೂ ಮೇಲ್ಪಟ್ಟ ಹಿರಿಯ ಸ್ವಾತಂತ್ರ ಹೋರಾಟಗಾ–ರರಿಗೆ ಆರೋಗ್ಯ ರಕ್ಷಣೆ ಮತ್ತು ಚಿಕಿತ್ಸೆಗಾಗಿ ಒಂದು ವಿಶೇಷ ಯೋಜನೆಯನ್ನು ರೂಪಿಸಲಾಗುವುದು.

132. 2013–14ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 4,027 ಕೋಟಿ ರೂ. ಒದಗಿಸಲಾಗಿದೆ.

ವೈದ್ಯಕೀಯ ಶಿಕ್ಷಣ

133. ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸರ್ಕಾರದ ಸಾಧನೆ ಕೆಳಕಂಡಂತಿದೆ:

- ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಒಳಗೊಂಡಂತೆ ಎಲ್ಲಾ ವೈದ್ಯಕೀಯ ಕಾಲೇಜುಗಳಲ್ಲಿ ಎಂ.ಬಿ.ಬಿ.ಎಸ್.ನ

ಪ್ರವೇಶಾವಕಾಶದಲ್ಲಿ 3665 ಸೀಟುಗಳಿಂದ 6005 ಸೀಟುಗಳಿಗೆ ಹೆಚ್ಚಳ;

- ಸ್ನಾತಕೋತ್ತರ ಪ್ರವೇಶ ಅವಕಾಶದಲ್ಲಿ 1305 ರಿಂದ 3161 ಸೀಟುಗಳಿಗೆ ಹೆಚ್ಚಳ; ವೈದ್ಯಕೀಯ ಸೀಟುಗಳು ಹಾಗೂ ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಲಭ್ಯತೆ ಪ್ರಮಾಣದಲ್ಲಿ ನಮ್ಮ ರಾಜ್ಯವು ದೇಶದಲ್ಲೇ ಪ್ರಥಮ ಸ್ಥಾನದಲ್ಲಿ;
- **ಕಡ್ಡಾಯ ಸೇವಾ ತರಬೇತಿ ವಿಧೇಯಕ 2012**ರ ಮೂಲಕ ಎಂ.ಬಿ.ಬಿ.ಎಸ್. ಮತ್ತು ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ಗ್ರಾಮೀಣ ವೈದ್ಯಕೀಯ ತರಬೇತಿ ಕಡ್ಡಾಯ; ವಿಧೇಯಕ್ಕೆ ರಾಷ್ಟ್ರಪತಿಗಳ ಅನುಮೋದನೆಯನ್ನು ನಿರೀಕ್ಷಿಸಿದೆ;
- ಪ್ರಸಕ್ತ ಸಾಲಿನಲ್ಲಿ 700 ಎಂ.ಬಿ.ಬಿ.ಎಸ್. ಸೀಟ್‌ಗಳನ್ನು ಹೊಂದಿದ 7 ಹೊಸ ವೈದ್ಯಕೀಯ ಕಾಲೇಜುಗಳನ್ನು ಕೊಪ್ಪಳ, ಗದಗ, ಚಾಮರಾಜನಗರ, ಚಿತ್ರದುರ್ಗ, ಮಡಿಕೇರಿ, ಹಾವೇರಿ ಹಾಗೂ ತುಮಕೂರುಗಳಲ್ಲಿ ಪ್ರಾರಂಭಿಸಲು ಅನುಮತಿ;
- ಎಲ್ಲಾ ಸರ್ಕಾರಿ ಸ್ವಾಯತ್ತ ವೈದ್ಯಕೀಯ ಮಹಾವಿದ್ಯಾಲಯಗಳ ಆಸ್ಪತ್ರೆಗಳಲ್ಲಿ ಜನರಿಕ್ ಔಷಧಿ ಮಳಿಗೆಗಳಲ್ಲಿ ಮಾರುಕಟ್ಟೆ ದರಕ್ಕಿಂತ ಶೇಕಡ 50 ರಿಂದ 60 ರಷ್ಟು ಕಡಿಮೆ ದರದಲ್ಲಿ ಔಷಧಿಗಳು, 1.5 ಲಕ್ಷ ರೋಗಿಗಳಿಗೆ ಪ್ರಯೋಜನ;
- ಶಿವಮೊಗ್ಗ, ಮಂಡ್ಯ, ಬೀದರ್, ರಾಯಚೂರು, ಹಾಸನ ಮತ್ತು ಬೆಳಗಾವಿ ವೈದ್ಯಕೀಯ ಕಾಲೇಜುಗಳಿಗೆ ಮೂಲಭೂತ ಸೌಕರ್ಯ ಒದಗಿಸಲು 407.63 ಕೋಟಿ ರೂ. ಅನುದಾನ;
- ಬೆಂಗಳೂರು, ಮೈಸೂರು ,ಬಳ್ಳಾರಿ ಹಾಗೂ ಹುಬ್ಬಳ್ಳಿ ಕಾಲೇಜುಗಳಿಗೆ 69 ಕೋಟಿ ರೂ. ಅನುದಾನ;
- ಬೆಂಗಳೂರು ವೈದ್ಯಕೀಯ ಕಾಲೇಜಿಗೆ ಹೊಂದಿಕೊಂಡಂತೆ ಅತೀ ವಿಶಿಷ್ಠ ಸೌಲಭ್ಯ ಹೊಂದಿರುವ ಆಸ್ಪತ್ರೆಯನ್ನು (ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ) ಪ್ರಾರಂಭ;

- ಹೃದಯ ಸಂಜೀವಿನಿ ಯೋಜನೆ ಅಡಿಯಲ್ಲಿ 4,094 ಬಡ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ.

134. ಪ್ರಾರಂಭದಲ್ಲೇ ರೋಗ ಪತ್ತೆ ಮತ್ತು ಚಿಕಿತ್ಸೆ ಒದಗಿಸುವ ಸಂಬಂಧದಲ್ಲಿ ಜನರಿಗೆ ನೆರವಾಗಲು, ಆಯ್ದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ತೃತೀಯ ಶ್ರೇಣಿಯ ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳನ್ನು ಹಂತ ಹಂತವಾಗಿ ಸ್ಥಾಪಿಸಲಾಗುವುದು.

135. ಹೊಸದಾಗಿ ಅನುಮೋದನೆ ನೀಡಿರುವ ವೈದ್ಯಕೀಯ ಕಾಲೇಜುಗಳಿಗೆ ಅಗತ್ಯವಿರುವ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಹೆಚ್ಚಿನ ಆದ್ಯತೆ ಮೇಲೆ ಒದಗಿಸಲಾಗುವುದು.

136. ಪದವಿ ಹಂತದ ಪ್ರವೇಶಾತಿ ಸೀಟುಗಳನ್ನು ಬಳ್ಳಾರಿಯ VIMS, ಹುಬ್ಬಳ್ಳಿಯ KIMS, ಮೈಸೂರಿನ MMC ಯಲ್ಲಿ 150 ರಿಂದ 250ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ ಹಾಸನ, ಮಂಡ್ಯ, ಬೀದರ್, ಶಿವಮೊಗ್ಗ, ರಾಯಚೂರು ಮತ್ತು ಬೆಳಗಾವಿಯ ಹೊಸ ವೈದ್ಯಕೀಯ ಕಾಲೇಜುಗಳಲ್ಲಿ ಇನ್‌ಟೇಕ್ ಅನ್ನು 100 ರಿಂದ 150ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

137. ಧಾರವಾಡದ ಮಾನಸಿಕ ಆರೋಗ್ಯ ಆಸ್ಪತ್ರೆಯನ್ನು ಬೆಂಗಳೂರಿನ NIMANS ನ ಮಟ್ಟಕ್ಕೆ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. ಹುಬ್ಬಳ್ಳಿಯ KIMS ಆಸ್ಪತ್ರೆಯ ವೈದ್ಯಕೀಯ ಸೌಲಭ್ಯಗಳನ್ನು ಉತ್ತಮಪಡಿಸಲು 20 ಕೋಟಿ ರೂ. ಆರ್ಥಿಕ ಬೆಂಬಲವನ್ನು ಒದಗಿಸಲಾಗುವುದು.

138. 2013–14ನೇ ಸಾಲಿನಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ 1,266 ಕೋಟಿ ರೂ. ಒದಗಿಸಲಾಗಿದೆ.

ಸಮಾಜ ಕಲ್ಯಾಣ

139. ಕಳೆದ 5 ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣಕ್ಕಾಗಿ ಪರಿಶಿಷ್ಟ ಜಾತಿಗಳ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆಗಳಡಿಯಲ್ಲಿ (SCP/TSP) 23,683 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.

140. ಕಳೆದ 5 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಾಧನೆ ಕೆಳಕಂಡಂತಿದೆ;

- ರೂ. 4569.18 ಕೋಟಿಗಳ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ ಜನರ ಶೈಕ್ಷಣಿಕ ಮಟ್ಟ ಹೆಚ್ಚಿಸಿ ನಿರುದ್ಯೋಗಿ ಯುವಕ/ಯುವತಿಯರಿಗೆ ತರಬೇತಿ ನೀಡಿಕೆ ಮತ್ತು ಬಡವರಿಗೆ ಸಾಲ ಸಹಾಯಧನದ ನೀಡಿಕೆ ಹಾಗೂ ರೈತರಿಗೆ ನೀರಾವರಿ ಸೌಲಭ್ಯದ ವಿಸ್ತರಣೆ.
- 414.50 ಕೋಟಿ ರೂ. ವೆಚ್ಚದಲ್ಲಿ ಪರಿಶಷ್ಟ ಜಾತಿಯವರ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಸಿ.ಸಿ.ರಸ್ತೆ, ಚರಂಡಿ, ಶೌಚಾಲಯ ವ್ಯವಸ್ಥೆ, ಸಮುದಾಯ ಭವನ ನಿರ್ಮಾಣ.
- ಡಾ॥ ಬಿ.ಆರ್. ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಮ್ ಹೆಸರಿನಲ್ಲಿ 181.48 ಕೋಟಿ ರೂ. ವೆಚ್ಚದಲ್ಲಿ ಒಟ್ಟು 1,342 ಭವನಗಳ ನಿರ್ಮಾಣ.
- ಭೋವಿ ಜನಾಂಗದ ಅಭಿವೃದ್ಧಿಗಾಗಿ ಭೋವಿ ಅಭಿವೃದ್ಧಿ ನಿಗಮಕ್ಕೆ 5 ಕೋಟಿ ರೂ. ಅನುದಾನ.
- ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವಿದ್ಯಾಭ್ಯಾಸ ಕಲ್ಪಿಸಲು ನಾಲ್ಕು ವರ್ಷಗಳಲ್ಲಿ 10,601 ವಿದ್ಯಾರ್ಥಿಗಳಿಗೆ 30.21 ಕೋಟಿ ರೂ.ಸುಮಾರು 53 ಲಕ್ಷ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ವೇತನಕ್ಕೆ 70.38 ಕೋಟಿ ರೂ. ಮತ್ತು ಸುಮಾರು 13 ಲಕ್ಷ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ವೇತನಕ್ಕೆ 810.68 ಕೋಟಿ ರೂ. ಹಾಗೂ ಎಸ್.ಎಸ್. ಎಲ್.ಸಿ, ಪಿಯುಸಿ, ಕಾಲೇಜು ಪದವಿ ಮತ್ತು ಸ್ನಾತ್ತಕೋತ್ತರ ಪದವಿಗಳಲ್ಲಿ ರ್‍ಯಾಂಕ್ ಪಡೆದ ಸುಮಾರು 75 ಸಾವಿರ ವಿದ್ಯಾರ್ಥಿಗಳಿಗೆ 324.57 ಕೋಟಿ ರೂ. ವೆಚ್ಚ.

- ಸ್ವಯಂ ಸೇವಾ ಸಂಸ್ಥೆಗಳು ನಡೆಸುತ್ತಿರುವ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿರುವ 64,023 ವಿದ್ಯಾರ್ಥಿಗಳಿಗೆ 27.21 ಕೋಟಿ ರೂ. ವೆಚ್ಚ.
- ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳ 360 ಸ್ವಂತ ಕಟ್ಟಡಗಳಿಗಾಗಿ 332 ಕೋಟಿ ರೂ. ವೆಚ್ಚ.
- ಪರಿಶಿಷ್ಟ ಜಾತಿಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಸುಮಾರು 3 ಲಕ್ಷ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ಸೌಕರ್ಯ ಹಾಗೂ ಪರಿಶಿಷ್ಟ ಜಾತಿಯ 120 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ 22,800 ವಿದ್ಯಾರ್ಥಿಗಳಿಗೆ ಸೌಕರ್ಯ.

ಸಮಾಜ ಕಲ್ಯಾಣ ಇಲಾಖೆಯ ಹೊಸ ಉಪಕ್ರಮಗಳು

- ಪರಿಶಿಷ್ಠ ಜಾತಿಗಳ ಉಪಯೋಜನೆಗಾಗಿ (ಎಸ್‌ಸಿಪಿ) 5850 ಕೋಟಿ ರೂ. ಹಾಗೂ ಗಿರಿಜನ ಉಪಯೋಜನೆಗಾಗಿ (ಟಿಎಸ್‌ಪಿ) 2350 ಕೋಟಿ ರೂ. ಒಟ್ಟು ಅನುದಾನವನ್ನು ಒದಗಿಸಿದೆ. ಈ ಒಟ್ಟಾರೆ ಆಯವ್ಯಯದಲ್ಲಿ 1,500 ಕೋಟಿ ರೂ. ಮೊತ್ತವನ್ನು ಕ್ರೋಢೀಕೃತ ಅನುದಾನವಾಗಿ ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ನೀಡಲಾಗುತ್ತಿದೆ. ಇದರಿಂದಾಗಿ ಕ್ರೋಢೀಕೃತ ಅನುದಾನದ ಗಾತ್ರವನ್ನು ಶೇ. 20ರಷ್ಟು ಹೆಚ್ಚಿಸಲಾಗುತ್ತಿದೆ. ಅಲ್ಲದೆ, ಕೆಳಕಂಡ ಕಾರ್ಯಕ್ರಮಗಳನ್ನು ಉದ್ದೇಶಿಸಲಾಗಿದೆ.
- ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ನೀಡುವ ಮಾಸಿಕ ವೆಚ್ಚ 850 ರೂ. ನಿಂದ 1,000 ರೂ.ಗೆ ಮತ್ತು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ ನೀಡುವ ಮಾಸಿಕ ವೆಚ್ಚ 750 ರೂ. ಗಳಿಂದ 900 ರೂ.ಗಳಿಗೆ ಹೆಚ್ಚಳ.

- ಎಸ್.ಎಸ್.ಎಲ್. ಸಿ. ಪರೀಕ್ಷೆಯಲ್ಲಿ ಸಾಧನೆ ಮಾಡಿದವರಿಗೆ ನೀಡುವ ಬಹುಮಾನ ಮೊತ್ತ ಶೇ.60ಕ್ಕಿಂತ ಹೆಚ್ಚಿನ ಅಂಕ ಗಳಿಸಿದವರಿಗೆ 5,000 ರೂ. ಗಳಿಂದ 7,000 ರೂ.ಗಳಿಗೆ, ಹಾಗೂ ಶೇ.75ಕ್ಕಿಂತ ಹೆಚ್ಚಿನ ಅಂಕ ಗಳಿಸಿದವರಿಗೆ 10,000 ರೂ.ಗಳಿಂದ 15,000 ರೂ.ಗೆ ಹೆಚ್ಚಳ. ಪ್ರಾಥಮಿಕ ವಸತಿ ಶಾಲೆಗಳಲ್ಲಿನ ಮಕ್ಕಳಿಗೆ ಆಹಾರ ಧಾನ್ಯಗಳ ದರವನ್ನು ತಿಂಗಳಿಗೆ 700 ರೂ.ಗೆ ಹೆಚ್ಚಿಸಲಾಗುವುದು.
- ಕೆಲವು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಾಗಿ ಉನ್ನತೀಕರಣ. ಒಟ್ಟಾರೆಯಾಗಿ 10 ಸಾವಿರ ವಿದ್ಯಾರ್ಥಿಗಳ ಸಂಖ್ಯಾ ಬಲವುಳ್ಳ 100 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ಥಾಪನೆ.
- ಪ್ರತಿ ಶಾಲೆಗೆ 10 ಕೋಟಿ ರೂ. ವೆಚ್ಚದಂತೆ 8 ಅಟಲ್ ಬಿಹಾರಿ ವಾಜಪೇಯಿ ಶಾಲೆಗಳ ಪ್ರಾರಂಭ.
- ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ವಿದ್ಯಾರ್ಥಿನಿಲಯದ ಆವರಣದಲ್ಲಿ ಲಭ್ಯವಿರುವ ಖಾಲಿ ಜಾಗದಲ್ಲಿ 25 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಸ್ಫೂರ್ತಿ ಭವನದ ನಿರ್ಮಾಣ
- ಪರಿಶಿಷ್ಟ ಜಾತಿಗಳಲ್ಲಿ ಅತ್ಯಂತ ಹಿಂದುಳಿದ, ಶೈಕ್ಷಣಿಕವಾಗಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿಲ್ಲದ ಜಾತಿಗಳನ್ನು ಗುರುತಿಸಿ 50 ಕೋಟಿ ರೂ. ವೆಚ್ಚದಲ್ಲಿ ಅವರ ಅಭಿವೃದ್ಧಿಗಾಗಿ ವಿಶೇಷ ಅಭಿವೃದ್ಧಿ ಯೋಜನೆ.
- ಪರಿಶಿಷ್ಟ ಪಂಗಡಗಳಲ್ಲಿ ಅತ್ಯಂತ ಹಿಂದುಳಿದ ಅರಣ್ಯ ವಾಸಿಗಳಿಗೆ ಮತ್ತು ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಹಕ್ಕು ಪತ್ರ ಪಡೆದಿರುವವರ ಅಭಿವೃದ್ಧಿಗಾಗಿ 25 ಕೋಟಿ ರೂ. ವಿಶೇಷ ಯೋಜನೆ.

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಘಟಕ ವೆಚ್ಚ 2 ಲಕ್ಷ ರೂ. ಗಳಿಗೆ ಹೆಚ್ಚಳ.
- ಕಿರು ಸಾಲ (Micro Finance) ಯೋಜನೆಯಡಿಯಲ್ಲಿ ಪ್ರತಿ ಫಲಾನುಭವಿಗಳಿಗೆ ನೀಡುತ್ತಿರುವ ಸಹಾಯಧನದ ಮೊತ್ತ 10.000 ರೂ.ಗಳಿಗೆ ಹೆಚ್ಚಳ.
- ಸ್ವಯಂ ಉದ್ಯೋಗ ಯೋಜನೆಯಡಿ 1 ಲಕ್ಷ ರೂ. ಇರುವ ಘಟಕ ವೆಚ್ಚಕ್ಕೆ, ಸಹಾಯಧನದ ಮಿತಿ ಗರಿಷ್ಟ 25,000 ರೂ.ಗಳಿಂದ 35,000 ರೂ.ಗಳಗೆ ಹೆಚ್ಚಳ.
- ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದಿಂದ 5 ವರ್ಷಗಳಿಗಿಂತ ಹಿಂದೆ ಪಡೆದಿರುವ ಸಾಲದ ಬಾಕಿಯನ್ನು ಫಲಾನುಭವಿಗಳು ಪೂರ್ಣವಾಗಿ ಪಾವತಿಸಲು ಮುಂದೆ ಬಂದಲ್ಲಿ ಅವರಿಗೆ ಬಡ್ಡಿ ದರದಲ್ಲಿ ರಿಯಾಯಿತಿಯನ್ನು ಕೊಡಲು ಒಂದಾವರ್ತಿ ಯೋಜನೆಯನ್ನು ಜಾರಿಗೆ ತರಲಾಗುವುದು.
- ಗುಲ್ಬರ್ಗದಲ್ಲಿರುವ ಸಿದ್ಧಾರ್ಥ ವಿಹಾರ ಅಭಿವೃದ್ಧಿಗೆ 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

141. ಬಸವಮೂರ್ತಿ ಮಾದರ ಚನ್ನಯ್ಯ ಮಠ, ಛಲವಾದಿ ಮಠ, ಶ್ರೀ ಮಹಾಶಿವಶರಣ ಹರಳಯ್ಯ ಗುರುಪೀಠ, ಬಂಜಾರ ಸೇವಾ ಸಂಘ, ಮೈಸೂರು, ಕೋಡಿಹಳ್ಳಿ ಆದಿ ಜಾಂಬವ ಮಠ, ದೇಶಿಕೇಂದ್ರ ರುದ್ರಾಕ್ಷಿ ಮುನಿ ಮಠ, ಹೊಸದುರ್ಗ, ಸಿದ್ದರಾಮೇಶ್ವರ ಭೋವಿಮಠ, ಚಿತ್ರದುರ್ಗ, ದಾವಣಗೆರೆ ಸೇವಾಲಾಲ್ ಮಠ, ಶಿವನಾಗಿದೇವೆ ಮಠ, ದಾವಣಗೆರೆ, ಗುರುಲಿಂಗಪೆದ್ದಿ ಮಠ, ಮೈಸೂರು, ಆದಿ ಜಾಂಭವ ಮಠ, ಹರಳಯ್ಯ ಕರುಳುಂಡಿ ಮಠ ಪಿರಿಯಾಪಟ್ಟಣ, ಮೈಸೂರು, ಮಹರ್ಷಿ ವಾಲ್ಮೀಕಿ ಮಠ, ಮುಲ್ಕಿ ಮಂಗಳೂರು ಪರಿಶಿಷ್ಟ (ಮುಂಡಾಲ), ಕೇತೇಶ್ವರ ಮೇದಾರ ಮಠ ಮುಂತಾದ ಪರಿಶಿಷ್ಟ ಜಾತಿಯ ಸಂಘ ಸಂಸ್ಥೆಗಳು, ಹಾಗೂ ಸಮಾಜದ ಮಠಾಧೀಶರು ನಡೆಸುವ ವಿದ್ಯಾರ್ಥಿ ನಿಲಯಗಳು, ಶೈಕ್ಷಣಿಕ

ಸಂಸ್ಥೆಗಳು, ಸಮುದಾಯ ಭವನಗಳು ಇತ್ಯಾದಿಗಳಿಗೆ 50 ಕೋಟಿ ರೂ. ಒದಗಿಸಲಾಗುವುದು.

142. **ವಸತಿ ನಿಲಯಗಳ ಅಭಿವೃದ್ಧಿ;** ರಾಜ್ಯದಲ್ಲಿ 4000 ಕ್ಕೂ ಹೆಚ್ಚು ವಸತಿನಿಲಯಗಳಿದ್ದು, ಈಗಾಗಲೇ ನಡೆಯುತ್ತಿರುವ ವಸತಿ ನಿಲಯಗಳಿಗೆ ಮೂಲಭೂತ ಸೌಕರ್ಯಗಳಾದ ನೀರು ಸರಬರಾಜು, ಉತ್ತಮ ಶೌಚಾಲಯ, ಸ್ನಾನದ ಗೃಹಗಳು ಹಾಗೂ ಲೈಬ್ರರಿ/ ರೀಡಿಂಗ್ ರೂಂಗಳನ್ನು ನಿರ್ಮಿಸುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಸರ್ಕಾರವು ಈ ಸಾಲಿನಲ್ಲಿ ಕನಿಷ್ಠ ರೂ.300 ಕೋಟಿಗಳನ್ನು ಒದಗಿಸಿ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವಸತಿ ನಿಲಯಗಳಲ್ಲಿ ಈ ಸವಲತ್ತುಗಳನ್ನು ಒದಗಿಸಲಾಗುವುದು.

143. ವಸತಿನಿಲಯಗಳ ಉಸ್ತುವಾರಿಯನ್ನು ಸಮರ್ಪಕವಾಗಿ ನಿರ್ವಹಿಸಲು ಅನುವಾಗುವಂತೆ ರಾಜ್ಯಮಟ್ಟದಲ್ಲಿ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಉಸ್ತುವಾರಿ ಸಮಿತಿಗಳನ್ನು ನೇಮಿಸಿ, ವಸತಿನಿಲಯಗಳ ಸೇವೆಯನ್ನು ಉನ್ನತೀಕರಿಸಲಾ-ಗುವುದು,

144. 2013–14ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಗೆ 3080 ಕೋಟಿ ರೂ, ಒದಗಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ

145. ನಮ್ಮ ಸರ್ಕಾರದ ಕಳೆದ 5 ವರ್ಷಗಳ ಅವಧಿಯಲ್ಲಿ ಈ ಕೆಳಕಂಡ ಸಾಧನೆಗಳನ್ನು ಮಾಡಲಾಗಿದೆ.

- 394 ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಹಾಗೂ 20,725 ವಿದ್ಯಾರ್ಥಿಗಳಿಗೆ ಪ್ರಯೋಜನ.
- 93 ಹೊಸ ವಿದ್ಯಾರ್ಥಿನಿಲಯ ಕಟ್ಟಡ ಹಾಗೂ 15 ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು 192 ಹಾಸ್ಟೆಲ್ ಕಟ್ಟಡಗಳ ನಿರ್ಮಾಣ.
- ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿನ ಭೋಜನಾ ವೆಚ್ಚವನ್ನು 2008–09 ರಲ್ಲಿನ ರೂ. 450 ರಿಂದ ರೂ. 750ಕ್ಕೆ

ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿನ ಭೋಜನಾವೆಚ್ಚವನ್ನು 2008–09 ರಲ್ಲಿನ ರೂ. 500 ರಿಂದ ರೂ.850 ಕ್ಕೆ ಹೆಚ್ಚಳ.

- ಶುಲ್ಕಮರುಪಾವತಿಗಾಗಿ ಒಟ್ಟು 301.06 ಕೋಟಿ ರೂ. ಅನುದಾನ ಮತ್ತು ಒಟ್ಟು 17.23 ಲಕ್ಷ ವಿದ್ಯಾರ್ಥಿಗಳಿಗೆ ಪ್ರಯೋಜನ.
- ವಿದ್ಯಾರ್ಥಿ ವೇತನಕ್ಕೆ 103.98 ಕೋಟಿ ರೂ. ವೆಚ್ಚ ಮತ್ತು 31.28 ಲಕ್ಷ ವಿದ್ಯಾರ್ಥಿಗಳಿಗೆ ಪ್ರಯೋಜನ.
- 10 ಅಟಲ್ ಬಿಹಾರಿ ವಾಜಪೇಯಿ, 12 ಕಿತ್ತೂರು ರಾಣಿ ಚೆನ್ನಮ್ಮ ಮತ್ತು 15 ಮುರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭ.
- ಅಲೆಮಾರಿ/ಅರೆ ಅಲೆಮಾರಿ ಜನಾಂಗದವರ ಅಭಿವೃದ್ಧಿಗೆ 65.04 ಕೋಟಿ ರೂ. ವೆಚ್ಚ ಮತ್ತು 42,458 ಫಲಾನುಭವಿಗಳಿಗೆ ಪ್ರಯೋಜನ.
- ವಿವಿಧ ಸಮುದಾಯದ ಅಭಿವೃದ್ಧಿ ಯೋಜನೆ ಅಡಿಯಲ್ಲಿ ರೂ. 86.13 ಕೋಟಿ ರೂಗಳ ವೆಚ್ಚದಲ್ಲಿ 450 ಸಮುದಾಯ ಭವನಗಳ ನಿರ್ಮಾಣ.

146. 2013–14ರಲ್ಲಿ ಈ ಕೆಳಕಂಡ ಪ್ರಮುಖ ಚಟುವಟಿಕೆಗಳನ್ನು ಆಯೋಜಿಸಲಾಗುತ್ತದೆ.

- ಜಿಲ್ಲೆಗೆ ಒಂದರಂತೆ (ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ) ಮಹಿಳೆ, ಪುರುಷ, ನರ್ಸಿಂಗ್ ವಿದ್ಯಾರ್ಥಿಗಳಿಗೆ ತಲಾ 15ರಂತೆ, ಒಟ್ಟು 45 ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ವಾರ್ಷಿಕವಾಗಿ ಪ್ರತಿ ವಿದ್ಯಾರ್ಥಿ ನಿಲಯಕ್ಕೆ 25 ಲಕ್ಷ ರೂ.ಗಳಂತೆ, 11.25 ಕೋಟಿ ರೂ. ಒದಗಿಸಲಾಗುವುದು.
- ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ಮಾಸಿಕ ತಲಾ ರೂ. 600/– ರಿಂದ ರೂ.700, ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ

ರೂ. 750/–ರಿಂದ ರೂ.900 ಕ್ಕೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ.850/–ರಿಂದ ರೂ. 1000ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿದ್ದು ಇದಕ್ಕಾಗಿ ರೂ. 48 ಕೋಟಿಗಳ ಹೆಚ್ಚುವರಿ ಅನುದಾನ ಒದಗಿಸಲಾಗುವುದು.

- ಹಿಂದುಳಿದ ವರ್ಗಗಳ 30 ಮೊರಾರ್ಜಿ ದೇಸಾಯಿ ಹೊಸ ವಸತಿ ಶಾಲೆಗಳನ್ನು ಪ್ರಾರಂಭಿಸಲು ತಲಾ ರೂ. 30 ಲಕ್ಷದಂತೆ ಒಟ್ಟು ರೂ.15 ಕೋಟಿ ಅನುದಾನ ಒದಗಿಸಲಾಗುವುದು.
- ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಗಳ ದುರಸ್ಥಿ ಮತ್ತು ಈ ಶಾಲೆಗಳಲ್ಲಿ ಸಿಬ್ಬಂದಿಗಾಗಿ ವಸತಿ ಗೃಹಗಳನ್ನು ನಿರ್ಮಿಸಲು 25 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಹೊಸದಾಗಿ 100 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಕಟ್ಟಡ ಕಾಮಗಾರಿಗಳನ್ನು ತಲಾ 2 ಕೋಟಿ ರೂ. ಅಂದಾಜಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ. ಇದಕ್ಕಾಗಿ ಮೊದಲನೇ ಕಂತಾಗಿ 75 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಅಖಿಲ ಭಾರತ ವೀರಶೈವ ಮಹಾಸಭಾ, ಮೈಸೂರು ನಗರದಲ್ಲಿ ಬಸವ ಭವನ ನಿರ್ಮಿಸಲು 2 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- **ಕೊರಮ–ಕೊರಚ ಜನಾಂಗ ಅಭಿವೃದ್ಧಿ:** ರಾಜ್ಯದಲ್ಲಿನ ಸುಮಾರು 25 ಲಕ್ಷ ಕೊರಮ–ಕೊರಚ ಜನಾಂಗದ ಅಭಿವೃದ್ಧಿ ಪಡಿಸಲು ಒಂದು ಪ್ರತ್ಯೇಕ ಸಂಸ್ಥೆಯನ್ನು ಸ್ಥಾಪಿಸಲಾಗುವುದು ಮತ್ತು ಇವರ ಕುಲಕಸಬುಗಳಿಗೆ ಅಗತ್ಯವಾದ ಸಾಮಗ್ರಿಗಳ ಸರಬರಾಜು ಹಾಗೂ ಸಮುದಾಯ ಭವನಗಳನ್ನು ಕಟ್ಟಲು 5 ಕೋಟಿ ರೂ.ಗಳನ್ನು ನೀಡಲಾಗುವುದು.
- **ಕಮ್ಮಾರರ ಬದುಕಿಗೆ ನೆರವು:** ಕಮ್ಮಾರರ ಜೀವನ ಮಟ್ಟ ಸುಧಾರಿಸಲು ಸಬ್ಸಿಡಿ ಆಧಾರಿತ ಕುಲುಮೆ ಕಿಟ್ಟುಗಳ ವಿತರಣೆ, ಕುಲುಮೆ ಶೆಡ್ಡುಗಳ ನಿರ್ಮಾಣ, ಯಂತ್ರೋಪಕರಣಗಳ

ಖರೀದಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಇತ್ಯಾದಿಗಳಿಗೆ 3 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

- ಅಲೆಮಾರಿ, ಬುಡಕಟ್ಟು ಜನಾಂಗ ಮತ್ತು ಗೊಲ್ಲರಹಟ್ಟಿಗಳ ಅಭಿವೃದ್ಧಿ: ರಾಜ್ಯದಲ್ಲಿನ ಬುಡಕಟ್ಟು ಮತ್ತು ಅಲೆಮಾರಿ ಜನಾಂಗವನ್ನು ಮುಖ್ಯ ವಾಹಿನಿಗೆ ತರುವ ದಿಕ್ಕಿನಲ್ಲಿ ಅಗತ್ಯ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಲು 2 ಕೋಟಿ ರೂ. ಒದಗಿಸಲಾಗುವುದು.

147. ಈಡಿಗ (ಶ್ರೀ ನಾರಾಯಣಗುರು ಮಠ, ಸೋಲೂರು) ವಿಶ್ವಕರ್ಮ, ಕುರುಬ, ಮಡಿವಾಳ, ತಿಗಳ, ನಾಮದೇವ ಶಿಲ್ಪಿ ಸಮಾಜ, ಯಾದವ, ಉಪ್ಪಾರ, ಕ್ಷತ್ರಿಯ ಮರಾಠ, ಸವಿತಾ ಸಮಾಜ, ಕುರುಹೀನಾ ಶೆಟ್ಟಿ ದೇವಾಂಗ ಸಂಘ, ಮೈಸೂರು ಶಂಭುಕುಲ ಕ್ಷತ್ರಿಯ, ಶ್ರೀ ವಿಜಯನಗರ ಅರಸು ಅಭಿವೃದ್ಧಿ ಸಂಘ, ಸಿದ್ದಾಪುರ ನಾಮಧಾರಿ ಸಮಾಜ, ವಿಶ್ವಾರಾಧ್ಯ ಸಿದ್ಧಸಂಸ್ಥಾನದ ಮಠ, ಅಬ್ಬಾಯಿ, ತುಮಕೂರು, ನಾಲವಾರ ಕೋರಿ ಸಿದ್ದೇಶ್ವರ ಮಠ, ಚಿತ್ತಾಪುರ, ಪದ್ಮಸಾಲಿ, ಗಂಗಮತ, ದೇವಾಂಗ, ತೊಗಟವೀರ, ಹಿಂದೂಸಾದರ, ಕುಂಬಾರ ಭಾವಸಾರ ಕ್ಷತ್ರಿಯ, ಸ್ವಕುಳಸಾಲಿ ಸಮಾಜ, ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸಂಘ, ಗಾಣಿಗ, ಶ್ರೀ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜ, ದೇವಾಡಿಗ, ಹಣಬರು, ಕುಂಚಿಟಿಗ, ವೇಮನರೆಡ್ಡಿ ಸಮಾಜ, ಬಲಿಜ, ಹೆಳವ, ಮುಂತಾದ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳು ಮತ್ತು ಸಮಾಜದ ಮಠಾಧೀಶರು ನಡೆಸುವ ವಿದ್ಯಾರ್ಥಿ ನಿಲಯಗಳು, ಶೈಕ್ಷಣಿಕ ಸಂಸ್ಥೆಗಳು, ಸಮುದಾಯ ಭವನಗಳು ಇತ್ಯಾದಿಗಳಿಗೆ 75 ಕೋಟಿ ರೂ. ಒದಗಿಸಲಾಗುವುದು.

148. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2005–06ನೇ ಸಾಲಿನವರೆಗೆ ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳಿಗೆ ಒದಗಿಸಿರುವ ಹಾಗೂ ಇದುವರೆವಿಗೂ ಮರುಪಾವತಿ–ಯಾಗದೇ ಉಳಿದಿರುವ 25000 ರೂ.ವರೆಗಿನ ಸಾಲ ಹಾಗೂ ಬಡ್ಡಿಯನ್ನು ಮನ್ನಾ ಮಾಡಲಾಗುವುದು. ಕೃಷಿಯೇತರ ಉದ್ದೇಶಗಳಿಗೆ 2005–06ನೇ

ಸಾಲಿನವರೆಗೆ ಒದಗಿಸಲಾದ ಸಾಲದ ಬಾಕಿ ಅಸಲನ್ನು ಒಂದು ವರ್ಷದೊಳಗಾಗಿ ಮರುಪಾವತಿ ಮಾಡಿದಲ್ಲಿ, ಬಡ್ಡಿಯನ್ನು ಮನ್ನಾ ಮಾಡಲಾಗುವುದು.

149. 2013-14ನೇ ಸಾಲಿಗೆ ಹಿಂದುಳಿದ ವರ್ಗಗಳ ಇಲಾಖೆಗೆ 1187 ಕೋಟಿ ರೂ. ಅನುದಾನ ಒದಗಿಸಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ

150. ಕಳೆದ 5 ವರ್ಷದ ಅವಧಿಯಲ್ಲಿ ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ 100 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಮುಸಲ್ಮಾನರಿಗೆ ಹಜ್ ಘರ್ ನಿರ್ಮಾಣವನ್ನು ಕೈಗೊಂಡಿದ್ದು, 25 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ವಕ್ಫ್ ಸಂಸ್ಥೆಗಳ ಮುಸಾಮ್ಸ್ ಮತ್ತು ಪೇಷ್ ಇಮಾಮ್‌ಗಳಿಗೆ 10 ಕೋಟಿ ರೂ.ಗಳ ಗೌರವಧನ ನೀಡಲಾಗುತ್ತಿದೆ ಹಾಗೂ ಕರ್ನಾಟಕದಲ್ಲಿ ವಕ್ಫ್ ಸಂಪತ್ತಿನ ರಕ್ಷಣೆಗೆ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಜೈನ್ ಸಮುದಾಯಕ್ಕೆ ವಿದ್ಯಾರ್ಥಿ ವೇತನಕ್ಕೆ 1.50 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

151. ಅಲ್ಪ ಸಂಖ್ಯಾತರ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚವನ್ನು 650 ರೂ.ನಿಂದ 750 ರೂ.ಗಳಿಗೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳಿಗೆ 750 ರೂ.ನಿಂದ 850 ರೂ.ಗಳಿಗೆ ಹೆಚ್ಚಿಸಲಾಗಿದೆ.

152. 2013-14ರಲ್ಲಿ 415 ಕೋಟಿ ರೂ.ಗಳ ಆಯವ್ಯಯದಲ್ಲಿ ಇಲಾಖೆಯ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

- ಜೈನ ಸಮುದಾಯದ ವಿದ್ಯಾರ್ಥಿಗಳಿಗೆ ಶಿಷ್ಯವೇತನ
- ವಸತಿ ರಹಿತ ಅಲ್ಪ ಸಂಖ್ಯಾತರಿಗೆ ಜಮೀನು ಖರೀದಿ ಹಾಗೂ ಗೃಹ ಸಾಲ/ಗೃಹ ನಿರ್ಮಾಣ/ಗೃಹ ಖರೀದಿ ಯೋಜನೆ
- ಅಲ್ಪ ಸಂಖ್ಯಾತ ವಿದ್ಯಾರ್ಥಿಗಳ ಸಹಾಯಕ್ಕಾಗಿ ವಿದ್ಯಾರ್ಥಿ ಸಹಾಯ ಯೋಜನೆ ಅಲ್ಪ ಸಂಖ್ಯಾತ ನಿರುದ್ಯೋಗಿ ಯುವಕರಿಗೆ ವೃತ್ತಿ ತರಬೇತಿ

- ಮುಸ್ಲಿಂ ಯಾತ್ರಾ ಸ್ಥಳಗಳ ಅಭಿವೃದ್ಧಿಗಾಗಿ ಅನುದಾನ
- ಮೈಸೂರು ನಗರದ ಸೇಂಟ್ ಫಿಲೋಮಿನಾ ಚರ್ಚ್ ಹಾಗೂ ಹುಬ್ಬಳಿ ನಗರದ ಕ್ರಿಶ್ಚಿಯನ್ ಫಲೋಶಿಪ್ ಚರ್ಚ್ ಜೀರ್ಣೋದ್ಧಾರಕ್ಕಾಗಿ ತಲಾ 2ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ

153. ಕಳೆದ 5 ವರ್ಷಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಕೈಗೊಂಡ ವಿವಿಧ ಯೋಜನೆಗಳ ವಿವರಗಳು:

- ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಭದ್ರತೆ ನೀಡಿ ಜೀವನದಲ್ಲಿ ಉತ್ತಮ ಭವಿಷ್ಯ ಕಂಡುಕೊಳ್ಳಲು ಅನುಕೂಲವಾಗುವಂತೆ ನಮ್ಮ ಸರ್ಕಾರವು ವಿಶಿಷ್ಟವಾದ ಭಾಗ್ಯಲಕ್ಷ್ಮಿ ಯೋಜನೆಯನ್ನು ಜಾರಿಗೊಳಿಸಿದೆ. ಕಳೆದ 5 ವರ್ಷಗಳಲ್ಲಿ ಈ ಕಾರ್ಯಕ್ರಮದಡಿ 2580.60 ಕೋಟಿ ರೂ. ಒದಗಿಸಿದ್ದು 16.54 ಲಕ್ಷ ಫಲಾನುಭವಿಗಳಿಗೆ ಪ್ರಯೋಜನವಾಗಿದೆ. ಈ ಯೋಜನೆಯಡಿ ತೊಡಗಿಸುತ್ತಿದ್ದ ಹಣವನ್ನು ತಲಾ 10,000 ರೂ.ನಿಂದ ಪ್ರತಿ ಮೊದಲನೆ ಹೆಣ್ಣು ಮಗುವಿಗೆ 19,300 ರೂ. ಮತ್ತು ಎರಡನೇ ಹೆಣ್ಣುಮಗುವಿಗೆ 18,350 ರೂ.ಗೆ ಹೆಚ್ಚಿಸಲಾಗಿದೆ.
- ಅಂಗನವಾಡಿಗಳ ಮುಖಾಂತರ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಪ್ರತಿ ಮಗುವಿನ ಘಟಕದ 2 ರೂ.ನಿಂದ 4.60 ರೂ.ಗೆ ಹೆಚ್ಚಳ, 44.60 ಲಕ್ಷ ಮಕ್ಕಳಿಗೆ ಪ್ರಯೋಜನ.
- ಅತೀ ಅಪೌಷ್ಠಿಕತೆಯಿಂದ ಬಳಲುತ್ತಿರುವ 2.56 ಲಕ್ಷ ಮಕ್ಕಳ ಪ್ರಯೋಜನಕ್ಕಾಗಿ ಗುಲ್ಬರ್ಗಾ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಪೂರಕ ಪೌಷ್ಠಿಕ ಆಹಾರದ ಜೊತೆಗೆ ಹಾಲು ಮತ್ತು ಮೊಟ್ಟೆಯನ್ನು ಮಕ್ಕಳಿಗೆ ನೀಡಲು 4 ರೂ.ಗಳ ಹೆಚ್ಚುವರಿಯಾಗಿ ಒದಗಿಸಲು 12.78 ಕೋಟಿ ರೂ. ಬಿಡುಗಡೆ.

- ಅತಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಒಂದು ವರ್ಷದ ಒಳಗಿನ ಮಗುವಿಗೆ ವೈದ್ಯಕೀಯ ವೆಚ್ಚಕ್ಕಾಗಿ 50,000 ರೂ. ಮತ್ತು 1 ರಿಂದ 5 ವರ್ಷದ ಮಗುವಿಗೆ 35,000 ರೂ.ಗಳು, ಇದರಿಂದ ಸುಮಾರು 8,000 ಫಲಾನುಭವಿಗಳಿಗೆ ಪ್ರಯೋಜನ.
- 53,000 ಫಲಾನುಭವಿಗಳಿಗೆ ಪ್ರತಿ ಮಾಹೆ ವೈದ್ಯಕೀಯ ವೆಚ್ಚಕ್ಕೆ 750 ರೂ.ಗಳನ್ನು ಒದಗಿಸಲಾಗುತ್ತಿದೆ.
- 1,4.2011 ರಿಂದ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕರ ಗೌರವಧನದಲ್ಲಿ ಅನುಕ್ರಮವಾಗಿ 500 ರೂ. ಮತ್ತು 250 ರೂ. ಹೆಚ್ಚಳ. ಇದರಿಂದಾಗಿ ಕೇಂದ್ರದ ಪಾಲು ಸೇರಿ ಮಾಹೆಯಾನ ಪ್ರತಿ ಅಂಗನವಾಡಿ ಕಾರ್ಯಕರ್ತೆಯರು 4,500 ರೂ. ಮತ್ತು ಸಹಾಯಕಿಯರು 2250 ರೂ.ಗಳನ್ನು ಪಡೆಯುತ್ತಿದ್ದಾರೆ.
- ನಮ್ಮ ಸರ್ಕಾರದ ಅವಧಿಯಲ್ಲಿ 64,518 ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು 61,187 ಅಂಗನವಾಡಿ ಸಹಾಯ-ಕಿಯರಿಗೆ ವಂತಿಗೆ ಆಧಾರಿತ ಪಿಂಚಣಿ ಯೋಜನೆಯನ್ನು (NPS) ಜಾರಿ. 60 ವರ್ಷ ತುಂಬಿದ ಅಂಗನವಾಡಿ ಕಾರ್ತಕರ್ತೆಯರಿಗೆ ಇಡಿಗಂಟಾಗಿ 50,000 ರೂ.ಗಳ ಮತ್ತು ಸಹಾಯಕಿಯರಿಗೆ 30,000 ರೂ.ಗಳ ಸೌಲಭ್ಯ.
- 5608 ಅಂಗನವಾಡಿ ಕಟ್ಟಡಗಳ ನಿರ್ಮಾಣ, ಭಾಲ್ಕಿ, ದೇವದುರ್ಗ, ಯಲಬುರ್ಗಾ ಹಾಗೂ ಪಿರಿಯಾಪಟ್ಟಣಗಳಲ್ಲಿ ಪೈಲಟ್ ಯೋಜನೆಯಡಿ 120 ಅಂಗನವಾಡಿ ಕಟ್ಟಡಗಳನ್ನು 10.95 ಲಕ್ಷ ರೂ.ಗಳ ಘಟಕ ವೆಚ್ಚದಲ್ಲಿ ನಿರ್ಮಾಣಕ್ಕೆ ಕ್ರಮ.
- ಮಾಜಿ ದೇವದಾಸಿ ಮಹಿಳೆಯರಿಗೆ 400 ರೂ.ಗಳಂತೆ 2009-10ನೇ ಸಾಲಿನಿಂದ ಮಾಸಾಶನದ ಸೌಲಭ್ಯ, 25,810 ಫಲಾನುಭವಿಗಳಿಗೆ ಪ್ರಯೋಜನ. ಈ ಕಾರ್ಯಕ್ರಮಕ್ಕೆ ಒಟ್ಟು 25 ಕೋಟಿ ರೂ.ಗಳ ವೆಚ್ಚ ಅಲ್ಲದೆ, 40,000 ರೂ.ಗಳ ಘಟಕ ವೆಚ್ಚದಲ್ಲಿ 4,100 ಮಾಜಿದೇವದಾಸಿಯರಿಗೆ ವಸತಿ ಸೌಲಭ್ಯ.

- ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಉದ್ಯೋಗಿನಿ ಯೋಜನೆಯಡಿ 15,000 ಮಹಿಳೆಯರಿಗೆ ಸಾಲ ಹಾಗೂ ಸಹಾಯಧನದ ಸೌಲಭ್ಯ.

154. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಈ ಕೆಳಕಂಡ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದು.

- ಮಕ್ಕಳ ಪೌಷ್ಟಿಕತೆ ಬಗ್ಗೆ ನ್ಯಾಯಮೂರ್ತಿ ಎನ್.ಕೆ. ಪಾಟೀಲ್‌ರವರ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರವು ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ದಿಕ್ಕಿನಲ್ಲಿ ಅಂಗನವಾಡಿ ಕೇಂದ್ರಗಳಿಗೆ ಬರತಕ್ಕಂತಹ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಆಹಾರ ಯೋಜನೆಯಡಿಯಲ್ಲಿ ಪ್ರತಿ ಮಗುವಿನ ಆಹಾರ ವೆಚ್ಚವನ್ನು 4.60 ರೂ.ಗಳಿಂದ 6 ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ 1000 ಕೋಟಿ ರೂ.ಗಳನ್ನು ಒದಗಿಸಲಾಗಿದೆ.
- ಅಂಗನವಾಡಿ ಮಕ್ಕಳಿಗೆ ಈಗ ನೀಡುತ್ತಿರುವ ಆಹಾರದ ಜೊತೆಗೆ ವಾರದಲ್ಲಿ 2 ದಿನ ಹಾಲನ್ನು ನೀಡಲಾಗುವುದು.
- ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ವೈದ್ಯಕೀಯ ಸವಲತ್ತನ್ನು ಒದಗಿಸಲು ಜಿಲ್ಲಾ ಆಸ್ಪತ್ರೆಗಳಲ್ಲಿ ಪೌಷ್ಟಿಕತಾ ಪುನರ್ ವಸತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲೂ ಸಹ ಪುನರ್ ವಸತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಅತಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಪ್ರಯೋಜನಕ್ಕಾಗಿ ವಿಶೇಷ ಪೂರಕ ಪೌಷ್ಟಿಕ ಆಹಾರ ನೀಡಲಾಗುವುದು.

- 1.4.2013 ರಿಂದ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕರ ಗೌರವಧನದಲ್ಲಿ ಅನುಕ್ರಮವಾಗಿ 500 ರೂ. ಮತ್ತು 250 ರೂ. ಹೆಚ್ಚಿಸಲಾಗುವುದು.
- ಮಕ್ಕಳ ಮನೋರಂಜನೆಗಾಗಿ 30 ಜಿಲ್ಲೆಗಳಲ್ಲಿ ಬಾಲಭವನಗಳ-ನ್ನು ರಚಿಸಿ, 17 ಜಿಲ್ಲೆಗಳಲ್ಲಿ ಕಟ್ಟಡಗಳ ನಿರ್ಮಾಣ, ಉಳಿದ ಜಿಲ್ಲೆಗಳಲ್ಲಿ ನಿರ್ಮಾಣಕ್ಕಾಗಿ ಕ್ರಮ.
- ಅಂಗವಿಕಲರ ಶಿಶು ಕೇಂದ್ರೀಕೃತ ಯೋಜನೆಯಡಿ 32 ವಿಶೇಷ ಶಾಲೆಗಳ ಪ್ರಾರಂಭ, 1913 ಮಕ್ಕಳಿಗೆ ಪ್ರಯೋಜನ.
- ಸಮಗ್ರ ಮಕ್ಕಳ ರಕ್ಷಣೆ ಯೋಜನೆ ಅಡಿ 60 ಕೋಟಿ ರೂ. ಮೀಸಲು.
- ಹೆಚ್.ಐ.ವಿ. ಪೀಡಿತ ಮತ್ತು ಬಾಧಿತ ಮಕ್ಕಳಿಗಾಗಿ ವಿಶೇಷ ಆರೈಕೆ ಕೇಂದ್ರ ಸ್ಥಾಪನಾ ಯೋಜನೆ ಎಲ್ಲಾ 30 ಜಿಲ್ಲೆಗಳಿಗೆ ವಿಸ್ತರಣೆ.
- ಮೈಸೂರು ನಗರದಲ್ಲಿರುವ ಮುಸ್ಲಿಂ ಜನಾಂಗದ ಮಕ್ಕಳ ವಸತಿ ನಿಲಯವು 100 ಸಾರ್ಥಕ ವರ್ಷಗಳನ್ನು ಪೂರೈಸಿರುವ ಹಿನ್ನಲೆಯಲ್ಲಿ ಒಂದು ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಸ್ತ್ರೀಶಕ್ತಿ ಕಾರ್ಯಕ್ರಮದಡಿ ಗ್ರಾಮಾಂತರ ಪ್ರದೇಶಗಳಲ್ಲಿ 10,000 ಹೊಸ ಗುಂಪುಗಳ ರಚನೆ. ಆವರ್ತ ನಿಧಿಯ ಜೊತೆಗೆ ಗರಿಷ್ಠ 1 ಲಕ್ಷ ರೂ.ಗಳ ಸಾಲದ ಬಡ್ಡಿ ದರಕ್ಕೆ ಸಬ್ಸಿಡಿ ಸೌಲಭ್ಯವನ್ನು ಶೇ.6ರಿಂದ 8ಕ್ಕೆ ಹೆಚ್ಚಿಸಲಾಗುವುದು.
- ಜಿಲ್ಲಾ ಮಟ್ಟದಲ್ಲಿ ದುಡಿಯುವ ಮಹಿಳೆಯರಿಗಾಗಿ ವಸತಿ ನಿಲಯದ ನಿರ್ಮಾಣಕ್ಕಾಗಿ ಸರ್ಕಾರೇತರ ಸಂಘ ಸಂಸ್ಥೆಗಳಿಗೆ 4 ಕೋಟಿ ರೂ. ನೆರವು.
- 104 ತಾಲ್ಲೂಕುಗಳಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ಹಾಗೂ 47 ತಾಲ್ಲೂಕುಗಳಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಮಾರಾಟ ಮಳಿಗೆಗಳ

ನಿರ್ಮಾಣ. ಬೆಂಗಳೂರಿನಲ್ಲಿ 2 ಕೋಟಿ ರೂ.ಗಳ ವೆಚ್ಚದಲ್ಲಿ ಹಾಗೂ ಗದಗ, ಗುಲ್ಬರ್ಗಾ ಮತ್ತು ಮೈಸೂರಿನಲ್ಲಿ ತಲಾ 1 ಕೋಟಿ ರೂ. ವೆಚ್ಚದಲ್ಲಿ ಸ್ತ್ರೀ ಭವನ ಮತ್ತು ಮಾರುಕಟ್ಟೆ ಮಳಿಗೆಗಳ ನಿರ್ಮಾಣ. 9 ಜಿಲ್ಲೆಗಳಲ್ಲಿ ವಾಹನದ ಮುಖಾಂತರ ಸ್ತ್ರೀಶಕ್ತಿ ಗುಂಪಿನವರು ಉತ್ಪಾದಿಸಿದ ಉತ್ಪನ್ನಗಳ ಮಾರಾಟದ ವ್ಯವಸ್ಥೆ.

155. ಕರ್ನಾಟಕ ಆರ್ಯ ಈಡಿಗ ಮಹಿಳಾ ಸಂಘ, ಬೆಂಗಳೂರು, ಕಟ್ಟಡ ನಿರ್ಮಾಣಕ್ಕೆ, ವಿಕಲಚೇತನರ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಿರುವ ಸಮರ್ಥನಂ ಅಂಗವಿಕಲ ಸಂಸ್ಥೆಯ ಕಾರ್ಯ-ಚಟುವಟಿಕೆಗಳಿಗೆ, ಅನಾಥ ಶಿಶು ನಿವಾಸ, ಬಸವನಗುಡಿ ರಸ್ತೆ, ಬೆಂಗಳೂರು, ಇವರಿಗೆ ಮತ್ತು ಹುಬ್ಬಳ್ಳಿಯ ಅನಾಥಮಕ್ಕಳ ಸೇವಾ ಭಾರತಿ ಅಭಿವೃದ್ಧಿಗಾಗಿ ಒಟ್ಟಾರೆ 6 ಕೋಟಿ ರೂ.ಗಳನ್ನು ಒದಗಿಸಲಾಗುವುದು.

156. 2013-14ನೇ ಸಾಲಿನಲ್ಲಿ ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 3349 ಕೋಟಿ ರೂ. ಒದಗಿಸಲಾಗಿದೆ.

ವಸತಿ

157. ನಮ್ಮ ಸರ್ಕಾರವು ವಸತಿ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು ಈ ಸರ್ಕಾರದ ಅವಧಿಯಲ್ಲಿನ ಸಾಧನೆ ಕೆಳಕಂಡಂತಿದೆ:

- ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದ ವತಿಯಿಂದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ 1.41 ಲಕ್ಷ ನಿವೇಶನ ಹಾಗೂ 10.11 ಲಕ್ಷ ಮನೆಗಳ ವಿತರಣೆ.
- ಕರ್ನಾಟಕ ಗೃಹ ಮಂಡಳಿಯ ವತಿಯಿಂದ 35,144 ನಿವೇಶನ ಹಾಗೂ 3,736 ಮನೆಗಳ ಹಂಚಿಕೆ.
- ಗ್ರಾಮೀಣ ಪ್ರದೇಶದಲ್ಲಿ ಸಹಾಯಧನ 30,000 ರೂ.ಗಳಿಂದ 75,000 ರೂ.ಗಳಿಗೆ ಹೆಚ್ಚಳ.
- ವಾಜಪೇಯಿ ನಗರ ವಸತಿ ಯೋಜನೆ ಪ್ರಾರಂಭ ಸಹಾಯಧನ 75,000 ರೂ.ಗಳಿಗೆ ಹೆಚ್ಚಳ.

- ವಿವಿಧ ಪಟ್ಟಣಗಳಲ್ಲಿನ ಕೊಳಗೇರಿ ನಿವಾಸಿಗಳಿಗೆ ಬಿಎಸ್‌ಯುಪಿ ಯೋಜನೆಯಲ್ಲಿ 18,694 ಮತ್ತು ಐಹೆಚ್‌ಎಸ್‌ಡಿಪಿ ಯೋಜನೆಯಡಿ 15,384 ಮನೆಗಳ ನಿರ್ಮಾಣ ಆಗಿದೆ.
- ಕೊಳಗೇರಿ ಪ್ರದೇಶಗಳ ಅಭಿವೃದ್ಧಿ ಹಾಗೂ ವಾಸಿಸುತ್ತಿರುವ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ನೀಡಲು ಅನುಕೂಲವಾ-ಗುವ ಕೊಳಚೆ ಅಭಿವೃದ್ಧೀ ನೀತಿ ಜಾರಿ.
- ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಹೊಸ ತಾಂತ್ರಿಕತೆ (Cost Effective Fast Track Technology) ಅಳವಡಿಕೆಗೆ 2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿಗಳ ಪ್ರಶಸ್ತಿ.
- 2010–11ನೇ ಸಾಲಿನಲ್ಲಿ JnNURM-BSUP ಯೋಜನೆಯಡಿ ಬಡಜನತೆಯ ಕಲ್ಯಾಣಕ್ಕಾಗಿ ಇರುವ ಮೂರು ಸುಧಾರಣಾ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಾಗೂ JnNURM-IHSDP ಯೋಜನೆಯಡಿ ಹಾಸನ ನಗರದಲ್ಲಿ ನಿರ್ಮಿಸಿರುವ ಮನೆಗಳ ಕಾಮಗಾರಿಗೆ ಪ್ರಧಾನ ಮಂತ್ರಿಗಳ ಪ್ರಶಸ್ತಿ.
- ಸೆಪ್ಟೆಂಬರ್ 2009ರಲ್ಲಿ ಉಂಟಾದ ಭೀಕರ ಪ್ರವಾಹದಿಂದ ರಾಜ್ಯದ 14 ಜಿಲ್ಲೆಗಳಲ್ಲಿ 289 ಗ್ರಾಮಗಳಲ್ಲಿ ಬಾಧಿತರಾದವರಿಗೆ ಖಾಸಗಿ ಸಂಘ ಸಂಸ್ಥೆಗಳ ಸಹಾಯ ಮತ್ತು ಸರ್ಕಾರದ ಅನುದಾನದಿಂದ 52,000 ಮನೆಗಳ ನಿರ್ಮಾಣ ಪೂರ್ಣ, 149 ಗ್ರಾಮಗಳ ಪೂರ್ಣ ಸ್ಥಳಾಂತರ, 140 ಗ್ರಾಮಗಳ ಭಾಗಶ: ಸ್ಥಳಾಂತರ.
- ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ ಸರ್ಕಾರದಿಂದ ವಸತಿ ಕಾರ್ಯಕ್ರಮಗಳಿಗಾಗಿ ನಗದು ವರ್ಗಾವಣೆ ವ್ಯವಸ್ಥೆಯಲ್ಲಿ ಜಿ.ಪಿ.ಎಸ್. ಆಧಾರಿತ ಪ್ರಗತಿ ಇಂದೀಕರಣದ (ಅಪ್‌ಡೇಷನ್)

ಆಧಾರದ ಮೇಲೆ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮೆ.

158. ರಾಜ್ಯದಲ್ಲಿ ವಸತಿ ಸೌಲಭ್ಯದ ಕೊರತೆ ಇರುವುದರಿಂದ ಆರ್ಥಿಕವಾಗಿ ಹಿಂದುಳಿದ ಹಾಗೂ ಕಡಿಮೆ ಆದಾಯದ ವರ್ಗಗಳಿಗೆ ವಸತಿ ಸೌಲಭ್ಯ ಒದಗಿಸಲು ಖಾಸಗಿ ಸಹಭಾಗಿತ್ವದಲ್ಲಿ ವಸತಿ ವಲಯದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕೈಗೆಟುಕುವ ದರದ ಮನೆಗಳ **(affordable housing)** ನಿರ್ಮಾಣ ಮಾಡುವ ಉದ್ದೇಶದಿಂದ ನಮ್ಮ ಸರ್ಕಾರವು ವಸತಿ ನೀತಿಯನ್ನು ಜಾರಿಗೆ ತರಲು ಉದ್ದೇಶಿಸಿದೆ.

159. ಸರ್ಕಾರವು 2012–13ನೇ ಸಾಲಿನಲ್ಲಿ ಬಡವರಿಗಾಗಿ 2.5 ಲಕ್ಷ ಮನೆಗಳನ್ನು ನಿರ್ಮಿಸಿ ಕೊಡುವ ಗುರಿಯನ್ನು ಇರಿಸಿಕೊಂಡಿದೆ, ಜೊತೆಗೆ, 2.28ಲಕ್ಷ ಮನೆಗಳನ್ನು 2013–14ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಸರ್ಕಾರವು ಮುಂದಿನ 5ವರ್ಷಗಳೊಳಗಾಗಿ ರಾಜ್ಯವನ್ನು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡುವ ಉದ್ದೇಶವನ್ನಿಟ್ಟುಕೊಂಡಿದೆ.

160. 2013–14ನೇ ಸಾಲಿನಲ್ಲಿ ಕರ್ನಾಟಕ ಗೃಹ ಮಂಡಳಿಯ ಮೂಲಕ ಹೆಚ್ಚುವರಿ 50,000 ನಿವೇಶನಗಳನ್ನು ಅಭಿವೃದ್ಧಿ ಪಡಿಸಲು ಹಾಗೂ 5000 ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

161. ಸಹಾಯ ಧನವನ್ನು ನೇರವಾಗಿ ಫಲಾನುಭವಿಯ ಖಾತೆಗಳಿಗೆ ಬಿಡುಗಡೆ ಮಾಡುವ ವ್ಯವಸ್ಥೆಯನ್ನು 2013–14ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಾದ ಐ.ಎ.ವೈ.ಗೆ ಅಳವಡಿಸಿಕೊಳ್ಳಲಾಗುವುದು.

162. "ನನ್ನ ಮನೆ ನನ್ನ ಸ್ವತ್ತು" ಯೋಜನೆಯ ಅಡಿಯಲ್ಲಿ ಸರ್ಕಾರದ ವಿವಿಧ ವಸತಿ ಯೋಜನೆಗಳಲ್ಲಿ ಸರ್ಕಾರದಿಂದ ಪಡೆದ ಸಾಲಕ್ಕೆ ಬಾಕಿ ಅಸಲನ್ನು ಪಾವತಿಸಿದಲ್ಲಿ ಅಂತಹ ಫಲಾನುಭವಿಗಳಿಗೆ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿ ಮನೆಯ ಹಕ್ಕು ಪತ್ರಗಳನ್ನು ವಿತರಿಸಲಾಗುವುದು. ಈ ಯೋಜನೆಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ 10 ಲಕ್ಷ ಕುಟುಂಬಗಳಿಗೆ ಮನೆಯ ಹಕ್ಕು ಪತ್ರ ವಿತರಿಸಲಾಗುವುದು.

163. ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಮೀನುಗಾರಿಕೆ ಇಲಾಖೆಗಳಿಂದ ದುರ್ಬಲ ವರ್ಗದವರಿಗಾಗಿ ನಿರ್ಮಿಸುತ್ತಿರುವ ಮನೆಗಳಿಗೆ ನೀಡುತ್ತಿರುವ ಸಹಾಯಧನದಲ್ಲಿ ಏಕರೂಪತೆ ತರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಇತರ ಇಲಾಖೆಗಳು ಫಲಾನುಭವಿಗಳಿಗಾಗಿ ಕೈಗೊಳ್ಳುವ ವಸತಿ ಯೋಜನೆಗಳಿಗೆ ವಸತಿ ಇಲಾಖೆಯ ಸಮನ್ವಯದೊಂದಿಗೆ ತಾಂತ್ರಿಕ ಮಾರ್ಗದರ್ಶನವನ್ನು ಒದಗಿಸುವ ವ್ಯವಸ್ಥೆಯನ್ನು ರೂಪಿಸಲಾಗುವುದು.

164. ಕೆಜಿಎಫ್‌ನಲ್ಲಿನ ಕೊಳಚೆ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ 5 ಕೋಟಿ ರೂ. ಒದಗಿಸಲಾಗುವುದು.

165. ನಗರ ಪ್ರದೇಶದ ಬಡ ಜನರಿಗೆ ಮೂಲಭೂತ ಸೇವೆಗಳನ್ನು ಒದಗಿಸುವುದಕ್ಕಾಗಿ ಮತ್ತು ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ JnNURM ಮತ್ತು RAY ಯೋಜನೆಗಳಿಗೆ 810 ಕೋಟಿ ರೂ. ಅನುದಾನವನ್ನು ಒದಗಿಸಲಾಗುವುದು.

166. 2013–14ನೇ ಸಾಲಿನಲ್ಲಿ ವಸತಿ ಇಲಾಖೆಗೆ 1200 ಕೋಟಿ ರೂ. ಒದಗಿಸಲಾಗುವುದು.

ಕಾರ್ಮಿಕ, ಉದ್ಯೋಗ ಮತ್ತು ತರಬೇತಿ

167. ಕೈಗಾರಿಕಾ ವಿವಾದ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಮೂಲಕ, ಇಲಾಖೆಯು ಮಾಲೀಕ ಮತ್ತು ಕಾರ್ಮಿಕರ ನಡುವೆ ಸುಮಧುರ ಬಾಂಧವ್ಯವನ್ನು ಏರ್ಪಡಿಸಿ, ಕಾರ್ಖಾನೆಗಳಲ್ಲಿ ಉದ್ಭವಿಸುವ ಮುಷ್ಕರ ಮತ್ತು ಬೀಗ ಮುದ್ರೆಗಳನ್ನು ತಡೆಗಟ್ಟಿರುತ್ತದೆ. ಕಳೆದ 5 ವರ್ಷಗಳಲ್ಲಿ ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಈ ಕೆಳಕಂಡ ಸಾಧನೆಯನ್ನು ಮಾಡಲಾಗಿದೆ.

- ಕಾರ್ಮಿಕ ಪರಿಹಾರ ಕಾಯಿದೆ, 1923ರಡಿ 155 ಕೋಟಿ ರೂ. ಪರಿಹಾರ ವಿತರಣೆ.
- ಡಿಸೆಂಬರ್ 2012ರ ವರೆಗಿನ ಕಳೆದ ಎರಡೂವರೆ ವರ್ಷಗಳಲ್ಲಿ 22.4 ಲಕ್ಷ ಕಟ್ಟಡ ಕಾರ್ಮಿಕರನ್ನು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಫಲಾನುಭವಿಗಳಾಗಿ

ನೋಂದಣಿ ಹಾಗೂ ಅಂದಾಜು 14,000 ಕಾರ್ಮಿಕರಿಗೆ ಸೌಲಭ್ಯದ ವಿಸ್ತರಣೆ.

- 17.4 ಲಕ್ಷ ಅಸಂಘಟಿತ ಕಾರ್ಮಿಕ ಕುಟುಂಬಗಳಿಗೆ ರಾಷ್ಟ್ರೀಯ ಸ್ವಾಸ್ಥ್ಯ ವಿಮಾ ಯೋಜನೆಯಡಿ ಸ್ಮಾರ್ಟ್ ಕಾರ್ಡ್‌ಗಳ ವಿತರಣೆ, 2011–12ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಬೆಸ್ಟ್ ಫೆಸಿಲಿಟೇಟರ್ ಸ್ಟೇಟ್ ಪ್ರಶಸ್ತಿ.
- 1.19 ಲಕ್ಷ ಖಾಸಗೀ ವಾಣಿಜ್ಯ ವಾಹನ ಚಾಲಕರ ಅಪಘಾತ ವಿಮಾಯೋಜನೆಯಡಿ ಸೇರ್ಪಡೆ.
- 47,420 ಬಾಲ ಕಾರ್ಮಿಕರಿಗೆ ಪುನರ್ ವಸತಿ;
- ಕೇಂದ್ರ ಸರ್ಕಾರದ ಸಹಯೋಗದೊಡನೆ 6 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಮತ್ತು ವಿಶ್ವ ಬ್ಯಾಂಕ್ ಸಹಯೋಗದೊಡನೆ 30 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಬಹುಕೌಶಲ್ಯ ಕೇಂದ್ರಗಳಾಗಿ ಉನ್ನತೀಕರಣ.
- ಬೆಂಗಳೂರು ಮತ್ತು ಗುಲ್ಬರ್ಗಗಳಲ್ಲಿ ಜರ್ಮನ್ ಸರ್ಕಾರದ ಸಹಯೋಗದೊಡನೆ ಅತ್ಯಾಧುನಿಕ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಪ್ರಾರಂಭ.
- ಮಂಗಳೂರು, ಬಿಜಾಪುರ, ಕೋಲಾರ, ಚಾಮರಾಜನಗರ, ಹುಬ್ಬಳ್ಳಿ, ಮಂಡ್ಯ, ಬಳ್ಳಾರಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು ಮಾನವ ಸಂಪನ್ಮೂಲ ಕೇಂದ್ರಗಳಾಗಿ ಪರಿವರ್ತನೆ.
- 35 ಬೃಹತ್ ಉದ್ಯೋಗ, 186 ಮಿನಿ ಉದ್ಯೋಗ ಮೇಳಗಳ ಆಯೋಜನೆ – 4,827 ಉದ್ದಿಮೆದಾರರು ಹಾಗೂ 4.97 ಲಕ್ಷ ಉದ್ಯೋಗಾಕಾಂಕ್ಷಿಗಳ ಪಾಲ್ಗೊಳ್ಳುವಿಕೆ
- ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಮುಖಾಂತರ 4.55 ಲಕ್ಷ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ಹಾಗೂ 2.81 ಲಕ್ಷ ಅಭ್ಯರ್ಥಿಗಳಿಗೆ ಉದ್ಯೋಗ ನೆರವು.

- ಪರಿಶಿಷ್ಟ ಜಾತಿ ಮತ್ತು ಅಲ್ಪ ಸಂಖ್ಯಾತ ಸಮುದಾಯದ 30,000 ವಿದ್ಯಾರ್ಥಿಗಳಿಗೆ ಇ-ಲರ್ನಿಂಗ್ ಹಾಗೂ ಕೌಶಲ್ಯ ತರಬೇತಿ.

168. 2013-14ರಲ್ಲಿ ಈ ಮುಂದಿನ ಪ್ರಮುಖ ಚಟುವಟಿಕೆಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ.

- ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಗುಲ್ಬರ್ಗಾ ಮತ್ತು ಹುಬ್ಬಳ್ಳಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಸೌರಶಕ್ತಿ ಮತ್ತು ಪವನ ಶಕ್ತಿ ವೃತ್ತಿ ಅಭ್ಯಾಸ ವಿಷಯವನ್ನು ಪ್ರಾರಂಭಿಸಲು ಮತ್ತು ಚಿಕ್ಕಬಳ್ಳಾಪುರದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ ಮಾಸ್ಟರ್ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಬೆಂಗಳೂರಿನಲ್ಲಿ ಬಾಯ್ಲರ್ ತಂತ್ರಜ್ಞಾನ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.
- ಪರಸ್ಪರ ಸಹಯೋಗ ರೂಪದಲ್ಲಿ ನಮ್ಮ ಕೈಗಾರಿಕಾ ತರಬೇತಿ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಹೊಂದಲು ಮತ್ತು ಪಠ್ಯಕ್ರಮವನ್ನು ಸುಧಾರಿಸಲು ಮತ್ತು ಹೊಸ ಉಪಕರಣಗಳು ಮತ್ತು ಸಾಧನಾ-ಸಾಮಗ್ರಿಗಳನ್ನು ಒದಗಿಸಲು ಉದ್ಯಮಗಳಿಗೆ ಆಹ್ವಾನ ನೀಡಲು ಉದ್ದೇಶಿಸಲಾಗಿದೆ. ಪ್ರತಿಯೊಂದು ಕೈಗಾರಿಕಾ ತರಬೇತಿ ಸಂಸ್ಥೆಗೆ 5 ಕೋಟಿ ರೂ.ಗಳಂತೆ ಒಂದು ಸಲದ ಬಂಡವಾಳ ಬೆಂಬಲವನ್ನು ಒದಗಿಸಿ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆ ಸ್ಥಾಪಿಸಲು ಬೃಹತ್ ಕೈಗಾರಿಕೆಗಳಿಗೆ ಸರ್ಕಾರವು ಬೆಂಬಲ ನೀಡುವುದು.
- ಪಾರಂಪರಿಕ ವೃತ್ತಿಗಳಲ್ಲಿ ತೊಡಗಿರುವ ಯುವಕ ಯುವತಿಯರಿಗೆ ಪರಿಣಿತ ಸಂಸ್ಥೆಗಳ ಮೂಲಕ ಸೂಕ್ತ ಕೌಶಲ್ಯ ತರಬೇತಿಯನ್ನು ನೀಡಿ ಮಾಡ್ಯೂಲರ್ ಕೌಶಲ್ಯ ಉನ್ನತೀಕರಣ ಯೋಜನೆಯಡಿಯಲ್ಲಿ (Modular Skill Upgradation Scheme) ಪ್ರಮಾಣ ಪತ್ರವನ್ನು ನೀಡಲಾಗುವುದು.

"ವಿಶ್ವಕರ್ಮ" ಎಂಬ ಈ ಹೊಸ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ 1 ಲಕ್ಷ ಕಾರ್ಮಿಕರಿಗೆ ಇದರ ಪ್ರಯೋಜನವನ್ನು ಒದಗಿಸಲಾಗುವುದು.

- ನಿರ್ಮಾಣ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಕಾರ್ಮಿಕ ಕಲ್ಯಾಣಕ್ಕಾಗಿ ಒಂದು ಸಮಗ್ರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವು- ದು.
- ಸ್ವಾವಲಂಬನಾ ಕಾರ್ಯಕ್ರಮದಡಿ ಒಳಪಡುವ ಪ್ರತಿ ಫಲಾನುಭವಿಗಳಿಗೆ ವಾರ್ಷಿಕ 1200 ರೂ.ಗಳ ವಂತಿಗೆಯನ್ನು ರಾಜ್ಯ ಸರ್ಕಾರವು ಒದಗಿಸುತ್ತಿದೆ. ಹೆಚ್ಚು ಫಲಾನುಭವಿಗಳನ್ನು ಈ ಯೋಜನೆಗೆ ಒಳಪಡಿಸಲು ಇದರ ವ್ಯಾಪ್ತಿಯನ್ನು ವಿಸ್ತರಿಸಲಾಗುವುದು.
- 4ಲಕ್ಷ ಜನರಿಗೆ ಕೌಶಲ್ಯ ತರಬೇತಿಯನ್ನು ನೀಡಲಾಗುವುದು.
- ಉದ್ಯೋಗಿಗಳ ಸಕ್ರಿಯ ಪಾಲ್ಗೊಳ್ಳುವಿಕೆಯೊಂದಿಗೆ ಕೌಶಲ್ಯ ತರಬೇತಿ ಮತ್ತು ಉದ್ಯೋಗಾವಕಾಶಕ್ಕಾಗಿ ಒಂದು ಪೋರ್ಟಲ್ ಅನ್ನು ಪ್ರಾರಂಭಿಸಲಾಗುವುದು.
- ಪ್ರಶ್ನೆಪತ್ರಿಕೆಗಳ ವಿತರಣಾ ಪ್ರಕ್ರಿಯೆಯನ್ನು ಸುವ್ಯವಸ್ಥಿತಗೊಳಿಸಲು ಮತ್ತು ಪ್ರಶ್ನೆಪತ್ರಿಕೆ ಬಯಲಾಗುವುದನ್ನು ತಡೆಯಲು SCVT ಪರೀಕ್ಷೆಯನ್ನು ನಡೆಸಲು ಆನ್‌ಲೈನ್ ಪರೀಕ್ಷಾ ಪದ್ಧತಿಯನ್ನು ಅಭಿವೃದ್ಧಿಪಡಿಸಲಾಗುವುದು.
- ಅರ್ಹತಾ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕಾಗಿ ಗ್ರಂಥಾಲಯದಿಂದ ಪುಸ್ತಕಗಳನ್ನು ಒದಗಿಸಲು, ಪ್ರತಿಯೊಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸಲಾಗು- ವುದು.
- ಕಾರ್ಮಿಕ ಕಲ್ಯಾಣ ಕ್ಷೇತ್ರದಲ್ಲಿ ಶ್ಲಾಘನೀಯ ಕಾರ್ಯ ಮಾಡಿರುವ ವ್ಯಕ್ತಿಗಳನ್ನು ಪುರಸ್ಕರಿಸಲು ಮುಖ್ಯಮಂತ್ರಿಯವರ ಶ್ರಮಶಕ್ತಿ ಪುರಸ್ಕಾರ ಪ್ರಶಸ್ತಿಯನ್ನು ಸ್ಥಾಪಿಸಲಾಗುವುದು.

- ಅಪಘಾತಕ್ಕೀಡಾದ ಕಾರ್ಮಿಕರಿಗೆ ನೆರವಾಗಲು ಕಾರ್ಮಿಕ ಅಪಘಾತ ನಿಧಿ ಸ್ಥಾಪಿಸಲಾಗುವುದು.
- ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ಎಲ್ಲ ಅಧಿನಿಯಮಗಳು, ನಿಯಮಗಳು, ಸರ್ಕಾರಿ ಆದೇಶಗಳು, ಅಧಿಸೂಚನೆಗಳು ಮತ್ತು ಕಾರ್ಮಿಕ ನ್ಯಾಯಾಲಯದ ಆದೇಶಗಳನ್ನು ಒಳಗೊಂಡಿರುವ ಆನ್‌ಲೈನ್ ಗ್ರಂಥಾಲಯವನ್ನು ಕಾರ್ಮಿಕ ಇಲಾಖೆಯಲ್ಲಿ ಸ್ಥಾಪಿಸಲಾಗುವುದು.
- ಇ.ಎಸ್.ಐ. ಕಾರ್ಪೊರೇಷನ್ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಕರ್ನಾಟಕ ವೃತ್ತಿ ಜನ್ಯ ರೋಗಗಳ ಪತ್ತೆ ಕೇಂದ್ರವನ್ನು ಸ್ಥಾಪಿಸಲಾಗುವುದು.
- **ಬೀದಿ ವ್ಯಾಪಾರಸ್ಥರಿಗೆ ನೆರವು:** ನಗರ ಹಾಗೂ ಪಟ್ಟಣಗಳಲ್ಲಿನ ಬೀದಿ ವ್ಯಾಪಾರಿಗಳ ಜೀವನಮಟ್ಟ ಸುಧಾರಿಸಲು ಅವರಿಗೆ ಸುಲಭದಲ್ಲಿ ಸಾಲ ಮತ್ತು ಕೈಗೆಟುಕುವ ದರದಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗುವುದು.

169. 2013–14ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಗೆ 561 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ

170. ಕನ್ನಡ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮ ಮತ್ತು ಚಟುವಟಿಕೆಗಳಿಗೆ ನಮ್ಮ ಸರ್ಕಾರವು ಹೆಚ್ಚಿನ ಒತ್ತು ನೀಡಿದೆ. 25 ವರ್ಷಗಳ ನಂತರ ಅದ್ದೂರಿಯಾಗಿ ಬೆಳಗಾವಿಯಲ್ಲಿ ವಿಶ್ವಕನ್ನಡ ಸಮ್ಮೇಳನವನ್ನು ನಡೆಸಿರುವುದು ನಮ್ಮ ಈ ಬದ್ಧತೆಗೆ ಪ್ರತೀಕವಾಗಿದೆ. ನಮ್ಮ ಸರ್ಕಾರದ ಅವಧಿಯಲ್ಲಿ ಕನ್ನಡ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ಕೈಗೊಂಡ ಕಾರ್ಯಕ್ರಮಗಳು ಇಂತಿವೆ:

- 10 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಕನ್ನಡ ತಂತ್ರಾಂಶದ ಯೂನಿಕೋಡ್‌ನ ಅನುಷ್ಠಾನ;

- ಹೊರದೇಶದಲ್ಲಿ (ವ್ಯೂಜ್‌ಬರ್ಗ್, ಆಸ್ಟ್ರೀಯ, ವಿಯನ್ನಾ ಮತ್ತು ಹೈಡಲ್ ಬರ್ಗ್ ವಿಶ್ವವಿದ್ಯಾಲಯಗಳಿಗೆ) ಕನ್ನಡ ಅಧ್ಯಯನ ಪೀಠ ಪ್ರಾರಂಭಿಸಲು 2012–13ರಲ್ಲಿ 2 ಕೋಟಿ ರೂ. ಸಹಾಯಧನ;
- ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಿರುವ 3125 ಸಂಸ್ಥೆಗಳಿಗೆ 150 ಕೋಟಿ ರೂ. ಸಹಾಯಧನ;
- ಮೈಸೂರು ಅರಮನೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಪ್ರಥಮ ಬಾರಿಗೆ 25 ಕೋಟಿ ರೂ. ಅನುದಾನ;
- ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್ ಸಹಭಾಗಿತ್ವದೊಂದಿಗೆ 139 ಸ್ಮಾರಕಗಳ ಸಂರಕ್ಷಣೆಗಾಗಿ 16.50 ಕೋಟಿ ರೂ, ಇದರಲ್ಲಿ 105 ಕಾಮಗಾರಿಗಳು ಪೂರ್ಣ.
- ಖ್ಯಾತ ಸಂಗೀತಗಾರರಾದ ಪದ್ಮವಿಭೂಷಣ ಡಾ|| ಗಂಗೂಬಾ-ಯಿ ಹಾನಗಲ್‌ರವರ ವಾಸದ ಮನೆಯನ್ನು ಸಂಗೀತ ಶಾಲೆ ಮತ್ತು ವಸ್ತು ಸಂಗ್ರಹಾಲಯವಾಗಿ ಅಭಿವೃದ್ಧಿ;

171. 2013–14ರ ಹೊಸ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.

- **ಮಹಾತ್ಮ ಗಾಂಧಿ ಮ್ಯೂಸಿಯಂ ಮತ್ತು ಗಾಂಧಿ ಸ್ಮಾರಕ ನಿಧಿಗೆ ನೆರವು:**
- ಬೆಂಗಳೂರಿನ ಗಾಂಧಿ ಭವನದಲ್ಲಿರುವ ಗಾಂಧಿ ಮ್ಯೂಸಿಯಂ ಅನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಉನ್ನತೀಕರಿಸಲು ಹಾಗೂ "ಇ–ಗಾಂಧಿ" ಕಾರ್ಯಕ್ರಮವನ್ನು ಗಣಕೀಕರಿಸಲು ಗಾಂಧಿ ಅಧ್ಯಯನ ಕೇಂದ್ರ ನಿರ್ಮಾಣ, ಗಾಂಧಿ ಸಾಹಿತ್ಯ ಪ್ರಚಾರ ಮತ್ತು ಗಾಂಧಿ ಭವನದ ನಿರ್ವಹಣಾ ವೆಚ್ಚಕ್ಕೆ ಒಟ್ಟು 4 ಕೋಟಿ ರೂ. ಗಳನ್ನು ಒದಗಿಸಲಾಗುವುದು.
- ರಾಮನಗರ, ಚಿಕ್ಕಬಳ್ಳಾಪುರ, ಬಾಗಲಕೋಟೆ, ದಾವಣಗೆರೆ ಮತ್ತು ಯಾದಗಿರ್ ಜಿಲ್ಲೆಗಳ ಗೆಜೆಟಿಯರ್‌ಗಳನ್ನು ಕನ್ನಡ

ಮತ್ತು ಆಂಗ್ಲ ಭಾಷೆಗಳಲ್ಲಿ ಹೊರ ತರಲು 1 ಕೋಟಿ ರೂ.ಗಳ ಅನುದಾನ ನೀಡಲಾಗುವುದು.

- ಕೇಂದ್ರ ಸರ್ಕಾರದ ಸಹಾಯದೊಂದಿಗೆ ಶ್ರೀ ರವೀಂದ್ರನಾಥ ಠಾಗೂರ್‌ರವರಿಗೆ ನೊಬೆಲ್ ಪ್ರಶಸ್ತಿ ಬಂದ ಶತಮಾನೋತ್ಸವ ಅಂಗವಾಗಿ 15 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಸಾಂಸ್ಕೃತಿಕ ಸಮುಚ್ಛಯ ನಿರ್ಮಾಣ.
- ತಾತಗುಣಿಯಲ್ಲಿರುವ ದೇವಿಕಾರಾಣಿ ರೋರಿಕ್ ಎಸ್ಟೇಟ್‌ನಲ್ಲಿ ವಸ್ತು ಸಂಗ್ರಹಾಲಯ ಮತ್ತು ಸಾಂಸ್ಕೃತಿಕ ಸಮುಚ್ಛಯ ನಿರ್ಮಾಣ
- ಸ್ವಾಮಿ ವಿವೇಕಾನಂದರ 150 ನೇ ಜಯಂತಿ ಆಚರಣೆ ಅಂಗವಾಗಿ ನಮ್ಮ ನಾಡು ಧ್ವನಿ ಬೆಳಕು ಕಾರ್ಯಕ್ರಮ ಹಾಗೂ ಇತರೆ ಕಾರ್ಯಕ್ರಮಗಳಿಗೆ 5 ಕೋಟಿ ರೂ.ಗಳು.
- ಮೈಸೂರು ಪಟ್ಟಣದಲ್ಲಿ ಸ್ವಾಮಿ ವಿವೇಕಾನಂದರವರ ಸ್ಮಾರಕವನ್ನು ನಿರ್ಮಿಸಲು ಒಂದು ಬಾರಿಯ ನೆರವಾಗಿ 2 ಕೋಟಿ ರೂ. ಗಳನ್ನು ಒದಗಿಸಲಾಗುವುದು.
- ಉತ್ತರ ಕರ್ನಾಟಕದಲ್ಲಿ ನಶಿಸಿ ಹೋಗುತ್ತಿರುವ ಪ್ರಾಚೀನ ಜಾನಪದ ಕಲೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಪ್ರತಿಬಿಂಬಿಸಲು ಧಾರವಾಡ ಜಿಲ್ಲೆಯಲ್ಲಿ ಕರ್ನಾಟಕ ಜಾನಪದ ಜಗತ್ತು ನಿರ್ಮಾಣಕ್ಕೆ 3 ಕೋಟಿ ರೂ. ಗಳ ಅನುದಾನ.
- ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿಯಲ್ಲಿ ರಂಗಭಾರತಿ ಸಂಸ್ಥೆ ಸ್ಥಾಪಿಸಲಿರುವ ರಂಗಸಮುಚ್ಛಯ ನಿರ್ಮಾಣಕ್ಕಾಗಿ 1 ಕೋಟಿ ರೂ. ಒದಗಿಸಲಾಗುವುದು.
- ಕರ್ನಾಟಕ ಬುಡಕಟ್ಟು ಜಾನಪದದ ಸರ್ವೇಕ್ಷಣೆ ಹಾಗೂ ಬಹುಮುಖಿ ದಾಖಲೀಕರಣ ಕಾರ್ಯಕ್ರಮವನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮುಖಾಂತರ ಕೈಗೊಳ್ಳಲಾಗುವುದು.

- ದಾವಣಗೆರೆ ವಿರಕ್ತಿ ಮಠದ ಜೀರ್ಣೋದ್ಧಾರ ಹಾಗೂ ಬಸವ ಜಯಂತಿ ಶತಮಾನ ಸ್ಮಾರಕ ಭವನ ನಿರ್ಮಾಣಕ್ಕೆ 5 ಕೋಟಿ ರೂ. ಗಳ ಅನುದಾನ.
- ಚಾಮರಾಜನಗರ ತಾಲ್ಲೂಕು ಹರದನಹಳ್ಳಿ ಗ್ರಾಮದ ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ಜನ್ಮಸ್ಥಳ ಅಭಿವೃದ್ಧಿ-ಗಾಗಿ ಒಂದು ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಬೆಳಗಾವಿಯಲ್ಲಿ ವೀರಶೈವ ಸಭಾ ಭವನ ನಿರ್ಮಿಸಲು 1 ಕೋಟಿ ರೂ. ಒದಗಿಸಲಾಗುವುದು.
- ಗದಗ ಜಿಲ್ಲೆಯ ಮುಳಗುಂದ ಗ್ರಾಮದಲ್ಲಿ ಶ್ರೀ ಬಾಲಾಲೀಲ ಮಹಂತ ಶಿವಯೋಗಿ ಗವಿ ಮಠದ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗಾಗಿ 1 ಕೋಟಿ ರೂ. ಗಳ ಅನುದಾನ.
- ಹೊರರಾಜ್ಯ ಹಾಗೂ ಹೊರದೇಶದಲ್ಲಿ ವಾಸಿಸುತ್ತಿರುವ ಕನ್ನಡಿಗರ ಸಾಂಸ್ಕೃತಿಕ ಚಟುವಟಿಕೆಗಳ ಪ್ರೋತ್ಸಾಹಿಸಲು 10 ಕೋಟಿ ರೂ.
- ಹಿರೇಕೆರೂರು ತಾಲ್ಲೂಕಿನ ಸರ್ವಜ್ಞ ಪ್ರಾಧಿಕಾರಕ್ಕೆ 2 ಕೋಟಿ ರೂ. ಅನುದಾನ ಒದಗಿಸಲಾಗುವುದು.
- ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲ್ಲೂಕಿನ ಬಾಡ ಗ್ರಾಮದ ಸಂತ ಕನಕದಾಸರ ಜನ್ಮ ಸ್ಥಳದಲ್ಲಿ ಯಾತ್ರಿಗಳಿಗೆ ಅನುಕೂಲ ಒದಗಿಸಲು 1 ಕೋಟಿ ರೂ. ಒದಗಿಸಲಾಗುವುದು.
- ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಕಳಸ ಪುಣ್ಯಕ್ಷೇತ್ರದ ಅಭಿವೃದ್ಧಿಗಾಗಿ 2 ಕೋಟಿ ರೂ. ಒದಗಿಸಲಾಗುವುದು.
- ಧಾರವಾಡದಲ್ಲಿರುವ ಕಲಾಭವನ ಮತ್ತು ಹುಬ್ಬಳ್ಳಿಯಲ್ಲಿರುವ ಸವಾಯಿ ಗಂಧರ್ವ ಸಭಾಂಗಣವನ್ನು 5 ಕೋಟಿ ರೂ. ವೆಚ್ಚದಲ್ಲಿ ನವೀಕರಿಸಲಾಗುವುದು.

- ಧಾರವಾಡದಲ್ಲಿ 'ಗಾಂಧಿ ಗ್ರಾಮ' ಸ್ಥಾಪನೆಗಾಗಿ ಪ್ರಾರಂಭಿಕ 5 ಕೋಟಿ ರೂ. ಅನುದಾನ.
- ಶ್ರೀ ಬಾಳೆಹೊನ್ನೂರು ಸಂಸ್ಥಾನದ ಸುವರ್ಣ ಭವನದ ಕಟ್ಟಡಕ್ಕೆ 2 ಕೋಟಿ ರೂ. ಒದಗಿಸಲಾಗುವುದು.
- ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಆಶ್ರಯದಲ್ಲಿ ಕುವೆಂಪು ಸ್ಮರಣಾರ್ಥ "ದರ್ಶನ ಭವನ" ನಿರ್ಮಾಣಕ್ಕೆ 5 ಕೋಟಿ ರೂ. ಒದಗಿಸಲಾಗುವುದು.
- ಡಾ. ಮಲ್ಲಿಕಾರ್ಜುನ ಮನ್ಸೂರ ಪ್ರತಿಷ್ಠಾನ ಭವನ ನಿರ್ಮಾಣಕ್ಕೆ 5 ಕೋಟಿ ರೂ. ಒದಗಿಸಲಾಗುವುದು.
- ಬಾಗಲಕೋಟೆಯಲ್ಲಿ, ಭಾರತದ ಮಹಾದಂಡನಾಯಕ ಜನರಲ್ ಜಿ.ಜಿ. ಬೇವೂರ ಇವರ ಸ್ಮಾರಕ ಭವನ ಹಾಗೂ ಮಹಾದ್ವಾರ ನಿರ್ಮಾಣಕ್ಕೆ 2 ಕೋಟಿ ರೂ. ಒದಗಿಸಲಾಗುವುದು.
- ಮಂಗಳೂರು ಕಲಾಂಗಣಿ ಉದ್ದೇಶಿತ ಪಾರಂಪರಿಕ ವಸ್ತು ಸಂಗ್ರಹಾಲಯ ನಿರ್ಮಾಣ 2 ಕೋಟಿ ರೂ ಒದಗಿಸಲಾಗುವುದು ಹುಬ್ಬಳ್ಳಿ ಸಂಗೊಳ್ಳಿ ರಾಯಣ್ಣ ಭವನ ನಿರ್ಮಾಣ 2 ಕೋಟಿ ರೂ. ಒದಗಿಸಲಾಗುವುದು.
- **ಕರ್ನಾಟಕ ರಾಜ್ಯ ವಿಶ್ವ ಪರಂಪರಾ ಆಯೋಗ :** ನಮ್ಮ ರಾಜ್ಯವು ಹಲವಾರು ಪರಂಪರಾ ತಾಣಗಳಿಗೆ ಪ್ರಸಿದ್ಧಿಯಾಗಿದೆ. ಈ ಎಲ್ಲಾ ಪ್ರಾರಂಪರಿಕ ಪ್ರದೇಶಗಳ ಅಭಿವೃದ್ಧಿ, ಸಂರಕ್ಷಣೆ ಮತ್ತು ನಿರ್ವಹಣೆಗಾಗಿ "ಕರ್ನಾಟಕ ರಾಜ್ಯ ವಿಶ್ವ ಪರಂಪರಾ ಆಯೋಗ"ವನ್ನು ರಚಿಸಲಾಗುವುದು. ಇದಕ್ಕಾಗಿ ಆಯವ್ಯಯ-ದಲ್ಲಿ ಈ ವರ್ಷ 2 ಕೋಟಿ ರೂ. ಗಳನ್ನು ಒದಗಿಸಲಾಗುವುದು.

172. ಕೆಳಕಂಡ ಸಾಂಸ್ಕೃತಿಕ ಸಂಸ್ಥೆಗಳಿಗೆ ಸಹಾಯಾನುದಾನ ಒದಗಿಸಲು ಒಟ್ಟು 2.25 ಕೋಟಿ ರೂ. ಒದಗಿಸಲಾಗುವುದು.

-

- ಮೊಗವೀರ ಯುವ ಸಂಘಟನೆ, ಉಡುಪಿ
- ಗುತ್ತಲ, ಕಲ್ಮಠದಲ್ಲಿ ಬಸವೇಶ್ವರ ಪುತ್ಥಳಿ ನಿರ್ಮಾಣ
- ಭಾರತಿ ಸಂಸ್ಕೃತಿ ಪ್ರತಿಷ್ಠಾನ, ಬೆಂಗಳೂರು

173. 2013–14ನೇ ಸಾಲಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 289 ಕೋಟಿ ರೂ. ಒದಗಿಸಲಾಗಿದೆ.

ಕ್ರೀಡೆ ಮತ್ತು ಯುವಜನ ಸೇವೆಗಳು

174. ಕಳೆದ 5 ವರ್ಷಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕ್ರೀಡಾಂಗಣಗಳು, ಈಜುಕೊಳಗಳು, ಸಿಂಥೆಟಿಕ್ ಟ್ರಾಕ್ ಮತ್ತು ಟರ್ಫ್‌ಗಳ ಅಭಿವೃದ್ಧಿಗಾಗಿ 109 ಕೋಟಿ ರೂ.ವೆಚ್ಚ ಮಾಡಲಾಗಿದೆ. 2012–13ನೇ ಸಾಲಿನಲ್ಲಿ ಬಿಜಾಪುರ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲಾ ಕ್ರೀಡಾಂಗಣಗಳನ್ನು ಪೂರ್ಣಗೊಳಿಸಿದೆ. ಇನ್ನೂ 14 ತಾಲ್ಲೂಕು ಸ್ಟೇಡಿಯಂಗಳ ಕೆಲಸ ತೀವ್ರ ಪ್ರಗತಿಯಲ್ಲಿ ಇದೆ. 2012–13ನೇ ಸಾಲಿನಲ್ಲಿ ಸ್ವಾಮಿ ವಿವೇಕಾನಂದರ 150ನೇ ಜನ್ಮ ದಿನಾಚರಣೆ ಆಚರಿಸಲಾಯಿತು.

175. 2012–13ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಯುವ ನೀತಿಯನ್ನು ಅನುಮೋದಿಸಲಾಗಿದೆ. ಯುವ ನೀತಿಗೆ ಸಂಬಂಧಿಸಿದ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಹಾಗೂ ಸ್ವಾಮಿ ವಿವೇಕಾನಂದರ 150ನೇ ಜನ್ಮ ದಿನೋತ್ಸವದ ಅಂಗವಾಗಿ ಒಂದು ವಿಶೇಷ ಯೋಜನೆ ವಿನ್ಯಾಸಗೊಳಿಸಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಮೂಲಕ ಅನುಷ್ಠಾನಗೊಳಿಸಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

176. ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ಪ್ರತಿಭಾವಂತ ಯುವಕರಿಗೆ ತರಬೇತಿ ನೀಡಲು ಗುಣಾತ್ಮಕ ಮೂಲ ಸೌಕರ್ಯ ಮತ್ತು ತರಬೇತಿಗಳ ಅಗತ್ಯವಿರುತ್ತದೆ. ಇದಕ್ಕಾಗಿ ಧಾರವಾಡದಲ್ಲಿ 55 ಎಕರೆ ಜಾಗದಲ್ಲಿ ಒಂದು ಸ್ವಯಂಪರಿಪೂರ್ಣ ಕ್ರೀಡಾ ಸಮುಚ್ಚಯವನ್ನು ಅಭಿವೃದ್ಧಿಪಡಿಸಲಾಗುವುದು.

177. ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಈಗಿರುವ ಈಜುಕೊಳಗಳನ್ನು 7.5 ಕೋಟಿ ರೂ. ವೆಚ್ಚದಲ್ಲಿ ನವೀಕರಿಸಲಾಗುವುದು. ಹುಬ್ಬಳ್ಳಿಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಒಂದು ಒಳಾಂಗಣ ಕ್ರೀಡಾಂಗಣವನ್ನು ನಿರ್ಮಿಸಲಾಗುವುದು.

178. ಶಿವಮೊಗ್ಗ ತಾಲ್ಲೂಕು ಆಯನೂರಿನಲ್ಲಿ ಕ್ರೀಡಾಂಗಣವನ್ನು ನಿರ್ಮಿಸಲಾಗುವುದು.

179. 2013–14ನೇ ಸಾಲಿನಲ್ಲಿ ಯುವಜನ ಸೇವಾ ಇಲಾಖೆಗೆ 140 ಕೋಟಿ ರೂ. ಒದಗಿಸಲಾಗಿದೆ.

ಕೈಗಾರಿಕೆಗಳು

180. ಕೈಗಾರಿಕೆ ಸ್ಥಾಪನೆಗೆ ಅಗತ್ಯವಾದ ಮೂಲಸೌಕರ್ಯ, ನೀರು, ವಿದ್ಯುತ್, ಉತ್ತಮ ಸಂಪರ್ಕ ವ್ಯವಸ್ಥೆ ಹಾಗೂ ತ್ವರಿತ ಅನುಮೋದನೆ ಪ್ರಕ್ರಿಯೆಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ದಿಸೆಯಲ್ಲಿ ವಿವಿಧ ಕ್ಷೇತ್ರಗಳ ಸಮಗ್ರ ಅಭಿವೃದ್ಧಿಗಾಗಿ ಹೊಸ ಕೈಗಾರಿಕಾ ನೀತಿ 2009–14, ನೂತನ ಗಣಿ ನೀತಿ 2008, ಜವಳಿ ನೀತಿ 2008–13, ವಿಶೇಷ ಆರ್ಥಿಕ ವಲಯ ನೀತಿ 2009ನ್ನು ಹೊರತರಲಾಗಿದೆ. ಈ ನೀತಿಗಳಲ್ಲಿ ಪೂರಕ ಮೂಲ ಸೌಲಭ್ಯದ ಅಭಿವೃದ್ಧಿ, 10 ಲಕ್ಷ ಉದ್ಯೋಗ ಸೃಷ್ಟಿ ಹಾಗೂ ಡಾ॥ ಡಿ.ಎಂ.ನಂಜುಂಡಪ್ಪ ವರದಿಯ ಶಿಫಾರಸ್ಸಿನಂತೆ ರಾಜ್ಯದ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗಿರುತ್ತದೆ. ಕೈಗಾರಿಕೋದ್ಯಮಿಗಳ ಅನುಕೂಲಕ್ಕಾಗಿ ಇ–ಉದ್ಯಮಿ ಪೋರ್ಟಲ್‌ನ್ನು ಸಹ ಸ್ಥಾಪಿಸಲಾಗಿರುತ್ತದೆ.

181. ಜೂನ್ 2010ರಲ್ಲಿ ಹಾಗೂ ಜೂನ್ 2012ರಲ್ಲಿ ಎರಡು ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನಗಳಿಂದ ರಾಜ್ಯದಲ್ಲಿ ಒಟ್ಟು 11.13 ಲಕ್ಷ ಕೋಟಿ ರೂ.ಗಳ ಬಂಡವಾಳ ಹೂಡಿಕೆಗೆ ಯೋಜನಾ ಪ್ರವರ್ತಕರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

182. ಜೂನ್ 2010ರಲ್ಲಿ ನಡೆಸಲಾದ ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ ಒಡಂಬಡಿಕೆ ಮಾಡಿಕೊಂಡ ಯೋಜನೆಗಳು:

- 21,190 ಕೋಟಿ ರೂ.ಗಳ ಬಂಡವಾಳ ಹೂಡಿಕೆಯ 43 ಯೋಜನೆಗಳ ಕಾರ್ಯಗತ
- 39 ಯೋಜನೆಗಳು ನಿರ್ಮಾಣದ ಹಂತದಲ್ಲಿ;
- 225 ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿ;

183. 2012ರ ಜೂನ್‌ನಲ್ಲಿ ಆಯೋಜಿಸಿದ್ದ ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನದಲ್ಲಿ ಮಾಡಿಕೊಂಡ ಒಡಂಬಡಿಕೆಗಳಲ್ಲಿ:

- 4351 ಕೋಟಿ ರೂ. ಬಂಡವಾಳ ಹೂಡಿಕೆಯೊಂದಿಗೆ 14.ಯೋಜನೆಗಳು ಕಾರ್ಯಗತ;
- 10,000 ಕೋಟಿ ರೂ. ಬಂಡವಾಳ ಹೂಡಿಕೆಯ 31 ಯೋಜನೆಗಳು ನಿರ್ಮಾಣದ ಹಂತದಲ್ಲಿ;
- 203 ಯೋಜನೆಗಳು ಅನುಷ್ಠಾನದ ವಿವಿಧ ಹಂತದಲ್ಲಿ;

184. 2008–09ರಿಂದ ಇಲ್ಲಿಯವರೆಗೆ 2,800 ಸಣ್ಣ, ಅತೀ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ 191.54 ಕೋಟಿ ರೂ.ಗಳಷ್ಟು ಬಂಡವಾಳ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

185. 10 ಆಹಾರ ಪಾರ್ಕ್‌ಗಳ ಮತ್ತು ಒಂದು ಸ್ಪೈಸ್ ಪಾರ್ಕಿನ ಸ್ಥಾಪನೆಗೆ ಅನುಮೋದನೆ ನೀಡಲಾಗಿದ್ದು ಈ ಪೈಕಿ 2 ಆಹಾರ ಪಾರ್ಕ್‌ಗಳು ಕಾರ್ಯಾರಂಭ ಮಾಡಿರುತ್ತವೆ.

186. 2011–12ರಲ್ಲಿ ರಾಜ್ಯದಿಂದ ಒಟ್ಟು 2.81 ಲಕ್ಷ ಕೋಟಿ ರೂ.ಗಳಷ್ಟು ರಫ್ತು ವ್ಯವಹಾರವಾಗಿದ್ದು, ದೇಶದಲ್ಲಿ 4ನೇ ಸ್ಥಾನದಲ್ಲಿರುತ್ತದೆ. ಕೇಂದ್ರ ಸರ್ಕಾರದಿಂದ 250 ಕೋಟಿ ರೂ.ಗಳಷ್ಟು ಧನ ಸಹಾಯವನ್ನು ASIDE ಯೋಜನೆಯಡಿ ಪಡೆಯಲಾಗಿದ್ದು, ರಫ್ತು ಉದ್ಯಮಗಳ ಪೂರಕ ಸೌಲಭ್ಯಕ್ಕಾಗಿ ಖರ್ಚು ಮಾಡಲಾಗಿರುತ್ತದೆ. 79 ಯೋಜನೆಗಳನ್ನು ಪೂರ್ಣಗೊಳಿಸಲಾಗಿದ್ದು, 29 ಯೋಜನೆಗಳು ಅನುಷ್ಠಾನದ ಹಂತದಲ್ಲಿರುತ್ತವೆ.

187. 2013–14ನೇ ವರ್ಷದಲ್ಲಿ ಈ ಕೆಳಕಂಡ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

- ಮಧ್ಯಮ, ಸಣ್ಣ ಹಾಗೂ ಅತೀ ಸಣ್ಣ ಘಟಕಗಳಿಗೆ 100 ಕೋಟಿ ರೂ.ಗಳ ಬಂಡವಾಳ ಸಹಾಯಧನವನ್ನು ಒದಗಿಸಲಾಗುವುದು.
- ಬೆಂಗಳೂರು ನಗರದಲ್ಲಿರುವ ಸಣ್ಣ ಉದ್ದಿಮೆಗಳು ಮಹಾನಗರ ಪಾಲಿಕೆಯಿಂದ ಪಡೆಯುತ್ತಿರುವ ಟ್ರೇಡ್ ಲೈಸೆನ್ಸ್ ಅವಧಿಯನ್ನು 5 ವರ್ಷಗಳಿಗೆ ಹೆಚ್ಚಿಸಲಾಗುವುದು. ಇನ್ನು ಮುಂದೆ 5 ವರ್ಷದ ಲೈಸೆನ್ಸ್ ಶುಲ್ಕವನ್ನು ಒಂದೇ ಬಾರಿಗೆ ಪಾವತಿಸಬಹುದು. ಈ ವ್ಯವಸ್ಥೆಯನ್ನು ಪ್ರತಿಕ್ರಿಯ ಆಧಾರದ ಮೇಲೆ ರಾಜ್ಯದ ಎಲ್ಲಾ ನಗರಸಭಾ ಕ್ಷೇತ್ರದಲ್ಲಿರುವ ಸಣ್ಣ ಉದ್ದಿಮೆಗಳಿಗೆ ವಿಸ್ತರಿಸಲಾ–ಗುವುದು.
- 2ನೇ ಮತ್ತು 3ನೇ ಸ್ತರದ ಪಟ್ಟಣಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಸ್ಥಾಪಿಸಲು ಹಾಗೂ ಅಭಿವೃದ್ಧಿಪಡಿಸಲು 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.
- ಏರೋಸ್ಪೇಸ್ ಪಾರ್ಕ್‌ನ್ನು ಚಾಲನೆಗೊಳಿಸಲು ಪ್ರಾರಂಭಿಕ ಕೆಲಸಗಳಿಗಾಗಿ 10 ಕೋಟಿ ರೂ. ಗಳನ್ನು ಒದಗಿಸಲಾಗುವುದು.
- ಕೈಗಾರಿಕಾ ನೀತಿ 2009–2014ನ್ನು ಪುನರ್ವಿಮರ್ಶೆ ಮಾಡಿ ಸೂಕ್ತವಾದ ಕೈಗಾರಿಕಾ ನೀತಿಯನ್ನು ರಚಿಸಿ 2014ರಿಂದ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಈ ನೀತಿಯಲ್ಲಿ 2ಮತ್ತು 3ನೇ ಸ್ತರದ ನಗರಗಳು ಹಾಗೂ ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ಹೂಡಿಕೆಗಳು ಕೇಂದ್ರೀಕೃತವಾಗುವಂತೆ ಉತ್ತೇಜಿಸಲಾಗುವುದು.

ಜವಳಿ

188. ಸುವರ್ಣ ವಸ್ತ್ರ ನೀತಿ 2008–13ರಡಿ 31.23 ಕೋಟಿ ರೂ.ಗಳನ್ನು 588 ಕೈಗಾರಿಕೆಗಳಿಗೆ ಪ್ರೋತ್ಸಾಹ ಸಹಾಯಧನ ನೀಡುವುದಕ್ಕಾಗಿ ಒದಗಿಸಲಾಗಿದೆ.

189. ನಮ್ಮ ಸರ್ಕಾರದ ಅವಧಿಯಲ್ಲಿ ಈ ಕೆಳಕಂಡ ಸಾಧನೆಗಳನ್ನು ಮಾಡಲಾಗಿದೆ.

- ರಾಜ್ಯದ ಹಿಂದುಳಿದ ಪ್ರದೇಶಗಳಲ್ಲಿ ಗ್ರಾಮೀಣ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು 142 ಹೊಸ ಕೌಶಲ್ಯಾಭಿವೃದ್ಧಿ ಕೇಂದ್ರಗಳ ಸ್ಥಾಪನೆ;
- ಸುಮಾರು 1 ಲಕ್ಷ ಅಭ್ಯರ್ಥಿಗಳಿಗೆ ರೂ. 2000 ಮಾಸಿಕ ಶಿಷ್ಯವೇತನ ಮತ್ತು ತರಬೇತಿ;
- 3779 ಮನೆಗಳ ನಿರ್ಮಾಣಕ್ಕಾಗಿ 23.88 ಕೋಟಿ ರೂ.ಗಳ ಬಿಡುಗಡೆ;
- ಆರೋಗ್ಯ ವಿಮಾ ಹಾಗೂ ಗುಂಪು ವಿಮಾ ಯೋಜನೆಯಡಿ 89.549 ನೇಕಾರರ ಅಳವಡಿಕೆ;
- ಭಾರತೀಯ ಜೀವ ವಿಮಾ ನಿಗಮದ ಮುಖಾಂತರ 27,959 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿ;
- ನೇಕಾರರ ಸಾಲ ಮನ್ನಾ ಯೋಜನೆಯಡಿ 42.90 ಕೋಟಿ ರೂ.ಗಳ ಬಿಡುಗಡೆ;
- 90,000 ನೇಕಾರರಿಗೆ ವಿಶೇಷ ಪ್ಯಾಕೇಜ್ ಯೋಜನೆಯಲ್ಲಿ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜಿನ ಸಹಾಯ–ಧನವಾಗಿ ವಿದ್ಯುತ್‌ಸರಬರಾಜು ಕಂಪನಿಗಳಿಗೆ 91.39 ಕೋಟಿ ರೂ.ಗಳ ಪಾವತಿ.
- ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗ ಒದಗಿಸುವ ಹೊಸ ಯೋಜನೆಯಡಿ 14 ಕೋಟಿ ರೂ.ಗಳ ಬಿಡುಗಡೆ.

- ನೇಕಾರಿಕೆಯಲ್ಲಿ ತೊಡಗಿರುವ 8438 ಪರಿಶಿಷ್ಟ ಜಾತಿ/– ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ 25.31 ಕೋಟಿ ರೂ.ಗಳ ಅನುದಾನ ನೀಡಿಕೆ.

190. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿದೆ ಇದರಿಂದ 10,000 ನೇಕಾರರು ನೇಕಾರಿಕೆ ಮುಂದುವರಿಸಲು ಸಹಕಾರಿಯಾಗಿದೆ;

- ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ 46.20 ಕೋಟಿ ರೂ.
- ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಗೆ 7.13 ಕೋಟಿ ರೂ.
- ದುರ್ಬಲ ವರ್ಗದವರಿಗೆ ಸೀರೆ ಪಂಚೆ ವಿತರಣೆ ಯೋಜನೆಗೆ 8.63 ಕೋಟಿ ರೂ.
- ನೇಕಾರರ ಭವನ ಸ್ಥಾಪನೆಗಾಗಿ 6.25 ಕೋಟಿ ರೂ.
- ನಿಗಮದ ಬಂಡವಾಳವಾಗಿ 7.50 ಕೋಟಿ ರೂ.

191. ಖಾದಿ ಹಾಗೂ ಗ್ರಾಮೋದ್ಯೋಗ ವಲಯದಲ್ಲಿ ಸುಮಾರು 32.250 ಕುಶಲಕರ್ಮಿಗಳಿದ್ದು, ನಮ್ಮ ಸರ್ಕಾರವು ಪ್ರತಿ ವರ್ಷ ಖಾದಿ ವಸ್ತ್ರಗಳಿಗೆ ರಿಯಾಯಿತಿ ಕೊಡುವುದರ ಮೂಲಕ ಕುಶಲಕರ್ಮಿಗಳನ್ನು ಪ್ರೋತ್ಸಹಿಸುತ್ತಿದೆ. 2012–13ನೇ ಸಾಲಿನಿಂದ ಎಂ.ಡಿ.ಎ. ಯೋಜನೆಯಡಿ ಖಾದಿ ವಲಯಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಒಟ್ಟು 26.5 ಕೋಟಿ ರೂ. ಅನುದಾನವನ್ನು ಒದಗಿಸಲಾಗಿದೆ.

192. 2013–14ನೇ ಸಾಲಿನಲ್ಲಿ ಜವಳಿ ಮತ್ತು ಕೈಮಗ್ಗ ವಲಯಕ್ಕೆ ಸಂಬಂಧಿಸಿದಂತೆ 178 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಈ ಪೈಕಿ ಜವಳಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ನೇಕಾರರ ಪ್ಯಾಕೇಜ್ ಮತ್ತು ಸುವರ್ಣ ವಸ್ತ್ರ ನೀತಿಗಳಿಗೆ ಅನುಕ್ರಮವಾಗಿ 70 ಕೋಟಿ

ರೂ. ಮತ್ತು 50 ಕೋಟಿ ರೂ.ಗಳನ್ನು ಹಂಚಿಕೆ ಮಾಸಡಲಾಗುವುದು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ 20 ಕೋಟಿ ರೂಗಳ ಹಣಕಾಸು ನೆರವನ್ನು ಒದಗಿಸಲಾ–ಗುತ್ತಿದೆ. ನೇಕಾರರಿಗೆ ವಸತಿ – ಕಾರ್ಯಾಗಾರ ಘಟಕ ವೆಚ್ಚವನ್ನು 1 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು.

193. 2013–14ನೇ ಸಾಲಿನಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ 935 ಕೋಟಿ ರೂ. ಒದಗಿಸಲಾಗಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

194. ರಾಜ್ಯದಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಗೆ ಪೂರಕವಾಗಿ ಪರಿಷ್ಕೃತ ಜೈವಿಕ ತಂತ್ರಜ್ಞಾನ ನೀತಿ,ದೇಶದಲ್ಲಿಯೇ ಪ್ರಪ್ರಥಮ–ವಾಗಿ ಹೊಸ ಸೆಮಿಕಂಡಕ್ಟರ್ ನೀತಿ, ಮತ್ತು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ ನೀತಿ (ESDM) ಗಳನ್ನು ರೂಪಿಸಲಾಗಿದೆ.

195. ರಾಜ್ಯದಲ್ಲಿ 262 ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಕಂಪನಿಗಳನ್ನು ಸ್ಥಾಪಿಸಲಾಗಿದೆ ಮಾಹಿತಿ ತಂತ್ರಜ್ಞಾನ ವಲಯವು ರಾಜ್ಯದಲ್ಲಿ ನೇರವಾಗಿ ಸುಮಾರು 8 ಲಕ್ಷ ಜನರಿಗೆ ಮತ್ತು ಪರೋಕ್ಷವಾಗಿ 25 ಲಕ್ಷ ಜನರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಿದೆ. 2011–12ನೇ ಸಾಲಿನಲ್ಲಿ ರಾಜ್ಯದ ಐ.ಟಿ.ರಫ್ತು 1,35,000 ಕೋಟಿ ರೂ.ಗಳನ್ನು ಮುಟ್ಟಿದ್ದು ಬಿ.ಟಿ.ರಫ್ತು ಸುಮಾರು 4,000 ಕೋಟಿ ರೂಗಳ ಗುರಿಯನ್ನು ಸಾಧಿಸಿದೆ. ವಿಶ್ವ ಬಂಡವಾಳ ಹೂಡಿಕೆದಾರರ ಸಮ್ಮೇಳನ – 2010 ಹಾಗೂ 2012ನ್ನು ಜರುಗಿಸಿದ್ದು, ಇದರಿಂದ ರಾಜ್ಯದಲ್ಲಿ 80,162 ಕೋಟಿ ರೂ.ಗಳು ಹೂಡಿಕೆಯಾಗಿದ್ದು, 2,76,294 ಉದ್ಯೋಗ ಸೃಷ್ಟಿಯಾಗಿದೆ.

196. ಈ ಸರ್ಕಾರದ ಅವಧಿಯಲ್ಲಿ ಈ ಕೆಳಕಂಡ ಸಾಧನೆಗಳನ್ನು ಮಾಡಲಾಗಿದೆ.

- ಗ್ರಾಮೀಣ ಪ್ರದೇಶದಲ್ಲಿ ಐಟಿ ಕ್ಷೇತ್ರದಲ್ಲಿ ಗ್ರಾಮೀಣ ಬಿಪಿಓ ಯೋಜನೆಯಲ್ಲಿ 35 ಘಟಕಗಳ ಪ್ರಾರಂಭ, 3500 ಜನರಿಗೆ ಉದ್ಯೋಗ;

- 60,000 ದಿಂದ 70,000 ನಿರುದ್ಯೋಗಿ ಗ್ರಾಮಾಂತರ ಯುವಕರಿಗೆ ಕಂಪ್ಯೂಟರ್ ತರಬೇತಿ;
- ಖ್ಯಾತ ವಿಜ್ಞಾನಿ ಪ್ರೊ: ಸಿ.ಎನ್.ಆರ್.ರಾವ್‌ರವರ ಅಧ್ಯಕ್ಷತೆಯಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ (Vision Group on Science and Technology) ಶಿಫಾರಸ್ಸಿನಂತೆ 51.34 ಕೋಟಿ ರೂ. ವೆಚ್ಚದ ರಾಜ್ಯವ್ಯಾಪ್ತಿ ಕಾರ್ಯಕ್ರಮಗಳ ಅನುಷ್ಠಾನ;

197. ಐಸಿಟಿ ವಲಯದಲ್ಲಿನ ರಫ್ತನ್ನು ಪ್ರಸಕ್ತ ಇರುವ 1.35 ಲಕ್ಷ ಕೋಟಿ ರೂ.ಗಳ ಮಟ್ಟದಿಂದ 2020ರ ಹೊತ್ತಿಗೆ 4 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸಲು, ಮತ್ತು ಅಷ್ಟು ವರ್ಷಗಳಲ್ಲಿ ಸುಮಾರು 8 ಲಕ್ಷದಿಂದ 20 ಲಕ್ಷ ಉದ್ಯೋಗಗಳನ್ನು ಸೃಜಿಸಲು ವಿವಿಧ ಕ್ರಮಗಳ ಬಗ್ಗೆ ಸಲಹೆ ನೀಡುವುದಕ್ಕೆ ಖ್ಯಾತ ಕೈಗಾರಿಕಾ ಪ್ರತಿನಿಧಿಗಳನ್ನೊಳಗೊಂಡ ಸರ್ಕಾರವು ರಚಿಸಿದ್ದ ಐಸಿಟಿ ತಂಡದ ಶಿಫಾರಸ್ಸುಗಳನ್ನು 2013–14ನೇ ಸಾಲಿನ ಹಣಕಾಸು ವರ್ಷದಿಂದ ಪ್ರಾರಂಭಿಸಿ ಹಂತ ಹಂತವಾಗಿ ಜಾರಿಗೊಳಿಸುತ್ತದೆ. ಹೊಸ ESDM ನೀತಿಯನ್ನು ರೂಪಿಸಲಾಗುವುದು. ಈ ನೀತಿಯ ಅನುಷ್ಠಾನಕ್ಕಾಗಿ 100 ಕೋಟಿ ರೂ.ಗಳನ್ನು ಒದಗಿಸಲಾಗುವುದು.

198. ಧಾರವಾಡದಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯನ್ನು (IIIT), ರಾಜ್ಯ, ಕೇಂದ್ರ ಮತ್ತು ಉದ್ಯಮದ ಮೂಲಕ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ 128 ಕೋಟಿ ರೂ.ಗಳ ವೆಚ್ಚದಲ್ಲಿ ಸ್ಥಾಪಿಸಲಾಗುವುದು. ಬೆಳಗಾವಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್‌ನ್ನು ಸ್ಥಾಪಿಸಲಾಗುವುದು.

199. ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತ ಮುನ್ನೋಟ ತಂಡದ (Vision Group) ವಿಜ್ಞಾನ ಸಂಬಂಧಿತ ಕಾರ್ಯಕ್ರಮಗಳನ್ನು ಮುಂದುವರಿ–ಸಲು ಮತ್ತು 20 ಕೋಟಿ ರೂ. ಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದೆ. 10 ಕೋಟಿ ರೂ.ಗಳ ಅನುದಾನದೊಂದಿಗೆ ಕೆ–ಎಫ್‌ಐಎಸ್‌ಟಿ ಕಾರ್ಯಕ್ರಮವನ್ನು ಮುಂದುವರಿಸಲಾಗುತ್ತದೆ.

200. ಮಂಗಳೂರಿನ ಪಿಲಿಕುಳದಲ್ಲಿ, 25 ಕೋಟಿ ರೂ. ವೆಚ್ಚದಲ್ಲಿ 3ಡಿ ಪ್ರೊಜೆಕ್ಷನ್ ಇರುವ ಅತ್ಯಾಧುನಿಕ ಪ್ಲಾನೆಟೋರಿಯಂ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

201. ಐರ್‌ಲೆಂಡ್‌ನ ಸೈನ್ಸ್ ಗ್ಯಾಲರಿ ಇಂಟರ್‌ನ್ಯಾಷನಲ್, ಭಾರತೀಯ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ, ನಿಮ್ಹಾನ್ಸ್ ಮತ್ತು ಸೃಷ್ಟಿ ಕಲಾ, ವಿನ್ಯಾಸ ಮತ್ತು ತಂತ್ರಜ್ಞಾನ ಶಾಲೆ – ಇವುಗಳ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಅಂತರಾಷ್ಟೀಯ ಮಟ್ಟದ ವಿಜ್ಞಾನ ಗ್ಯಾಲರಿಯನ್ನು ಸ್ಥಾಪಿಸಲು 10 ಕೋಟಿ ರೂ.ಗಳನ್ನು ಮೀಸಲಿರಿಸಿದೆ.

202. ವ್ಯಾಪಕ ಕರ್ನಾಟಕ ಜಿಐಎಸ್ ಕಾರ್ಯಕ್ಷೇತ್ರವನ್ನು, ಜಿಐಎಸ್– ದತ್ತಾಂಶ ಆಧಾರಿತ ಆಡಳಿತ, ಸದೃಢ ಅಭಿವೃದ್ಧಿ ಮತ್ತು ನಾಗರಿಕ ಸಶಕ್ತತೆಯ ಉದ್ದೇಶಕ್ಕಾಗಿ ಸಿದ್ಧಪಡಿಸಲಾಗುವುದು.

203. ಕರ್ನಾಟಕ ಬಾಲವಿಕಾಸ ಅಕಾಡೆಮಿ, ಧಾರವಾಡ ಆಶ್ರಯದಲ್ಲಿ ಹುಬ್ಬಳ್ಳಿ ಧಾರವಾಡ ಮಧ್ಯಭಾಗದಲ್ಲಿ ಸೌರವ್ಯೂಹದ ಮಾದರಿ ಕೇಂದ್ರ /ತಾರಾಲಯ (Planetarium) ನಿರ್ಮಾಣಕ್ಕೆ 5 ಕೋಟಿ ರೂ. ಒದಗಿಸಲಾ–ಗುವುದು.

204. ಸುತ್ತೂರು ಕ್ಷೇತ್ರದಲ್ಲಿ ಭಾರತ ಸರ್ಕಾರದ ನೆರವಿನೊಂದಿಗೆ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲು 5 ಕೋಟಿ ರೂ.ಗಳನ್ನು ಒದಗಿಸಲಾಗುವುದು.

205. 2013–14ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ 194 ಕೋಟಿ ರೂ. ಒದಗಿಸಲಾಗಿದೆ.

ವಾರ್ತಾ ಇಲಾಖೆ

206. ಅಂತರರಾಷ್ಟೀಯ ಚಲನಚಿತ್ರೋತ್ಸವವನ್ನು ಈ ವರ್ಷ ಯಶಸ್ವಿಯಾಗಿ ನಡೆಸಲಾಗಿದೆ. ಪ್ರತಿ ವರ್ಷ ಮಕ್ಕಳ ಉತ್ತಮ ಚಲನಚಿತ್ರಗಳನ್ನು ಆಯ್ಕೆಮಾಡಿ ಪ್ರತಿ ಚಲನಚಿತ್ರಕ್ಕೆ 25 ಲಕ್ಷ ರೂ.ದಂತೆ 4 ಚಲನ ಚಿತ್ರಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಕನ್ನಡದ ಮೇರುನಟ ದಿವಂಗತ ಡಾ.ರಾಜ್‌ಕುಮಾರ್ ಸ್ಮಾರಕ ಅಭಿವೃದ್ಧಿಗಾಗಿ ಇಲ್ಲಿಯವರೆಗೆ 8.20 ಕೋಟಿ

ರೂ. ಬಿಡುಗಡೆ ಮಾಡಿದೆ, ಹಾಗೂ ದಿವಂಗತ ವಿಷ್ಣುವರ್ಧನ್ ಸ್ಮಾರಕಕ್ಕಾಗಿ 6.86 ಕೋಟಿ ರೂ. ಬಿಡುಗಡೆ ಮಾಡಿದೆ.

207. ಪತ್ರಕರ್ತರನ್ನು ಯಶಸ್ವಿನಿ ಆರೋಗ್ಯ ಯೋಜನೆ ವ್ಯಾಪ್ತಿಗೆ ಒಳಪಡಿಸಲಾಗುವುದು.

208. 2013–14ನೇ ಸಾಲಿನಲ್ಲಿ ವಾರ್ತಾ ಇಲಾಖೆಗೆ 135 ಕೋಟಿ ರೂ. ಒದಗಿಸಲಾಗಿದೆ.

ಪ್ರವಾಸೋದ್ಯಮ

209. ವಿವಿಧ ಪ್ರವಾಸಿ ಕೇಂದ್ರಗಳಿಗೆ 5 ವರ್ಷಗಳಲ್ಲಿ ಒಟ್ಟು 20.29 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದು ಅದರಲ್ಲಿ 26.72 ಲಕ್ಷ ವಿದೇಶಿ ಸಂದರ್ಶಕರಿದ್ದರು.

210. ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಕಳೆದ 5 ವರ್ಷಗಳಲ್ಲಿ ಈ ಕೆಳಕಂಡ ಸೌಕರ್ಯಗಳನ್ನು ಒದಗಿಸಲಾಗಿದೆ.

- ಪ್ರಮುಖ ಪ್ರವಾಸಿ ಸ್ಥಳಗಳಾದ ಹಂಪಿ, ಬಾದಾಮಿ, ಬೇಲೂರು, ಹಳೇಬೀಡು, ಕೆಮ್ಮಣ್ಣುಗುಂಡಿ ಇತ್ಯಾದಿ ಪ್ರವಾಸಿ ಕೇಂದ್ರಗಳಲ್ಲಿ ಅತಿಥಿ ಗೃಹ, 166 ಯಾತ್ರಿ ನಿವಾಸ, 101 ಡಾರ್ಮಿಟರಿ ಹಾಗೂ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಪಾರ್ಕ್ ಅಭಿವೃದ್ಧಿ, ಹೊನಲು ಬೆಳಕು ವ್ಯವಸ್ಥೆಗಾಗಿ 910 ಕೋಟಿ ರೂ.ವೆಚ್ಚ;
- 129 ಕೋಟಿ ರೂ. ವೆಚ್ಚದಲ್ಲಿ 437 ಕಿ.ಮೀ. ಸಂಪರ್ಕ ರಸ್ತೆ ನಿರ್ಮಾಣ;
- 3984 ಎಸ್.ಸಿ. /ಎಸ್.ಟಿ. ಫಲಾನುಭವಿಗಳಿಗೆ 66 ಕೋಟಿ ರೂ. ವೆಚ್ಚದಲ್ಲಿ ಟೂರಿಸ್ಟ್ ಟ್ಯಾಕ್ಸಿಗಳ ಹಂಚಿಕೆ;
- ಈ ವರ್ಷ 10,000 ವಿದ್ಯಾರ್ಥಿಗಳಿಗೆ ಕೆ.ಎಸ್.ಟಿ.ಡಿ.ಸಿ ಮೂಲಕ ಕರ್ನಾಟಕ ದರ್ಶನ ಪ್ರವಾಸದ ಆಯೋಜನೆ.

- ಮಂಗಳೂರಿನ ತಣ್ಣೀರು ಬಾವಿ ಪ್ರದೇಶದಲ್ಲಿ ಗಾಲ್ಫ್ ಕೋರ್ಸ್ ಅಭಿವೃದ್ಧಿಪಡಿಸಲು ಸಾರ್ವಜನಿಕ–ಖಾಸಗಿ ಸಹಯೋಗದಲ್ಲಿ ಒಪ್ಪಂದ;
- ಗೋಲ್ಡನ್ ಚಾರಿಯಟ್ ಪ್ರವಾಸಕ್ಕೆ The Best Luxury Train 2012 ಪ್ರಶಸ್ತಿ;
- ಹುಬ್ಬಳ್ಳಿ–ಧಾರವಾಡ ಹೊರವಲಯದ ನೀರುಸಾಗರ ಕೆರೆಯ ಸುತ್ತಲಿನ ಪ್ರದೇಶವನ್ನು ಪ್ರವಾಸೋದ್ಯಮ ಸ್ಥಳವಾಗಿ ಅಭಿವೃದ್ಧಿಪಡಿಸಲು 5 ಕೋಟಿ ರೂ. ಒದಗಿಸಲಾಗುವುದು.

211. ರಾಜ್ಯದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಮಾಹಿತಿ ಕೇಂದ್ರ ಸೇರಿದಂತೆ, ಪ್ರವಾಸಿ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಹಂಪಿ ಮತ್ತು ಪಟ್ಟದಕಲ್ಲು ವಿಶ್ವ ಪರಂಪರಾ ತಾಣಗಳಲ್ಲಿ ಏಕ ಟಿಕೆಟ್ (Single ticketing) ನೀಡುವ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು. ಭಾರತ ಸರ್ಕಾರದ ಪುರಾತತ್ವ ಮತ್ತು ಸರ್ವೇಕ್ಷಣ ಇಲಾಖೆಯ ಸಹಭಾಗಿತ್ವ ಮತ್ತು ಮಾರ್ಗದರ್ಶನದಲ್ಲಿ ಐಹೊಳೆ ಗ್ರಾಮವನ್ನು ಪೂರ್ಣವಾಗಿ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗುವುದು.

212. 2013–14ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ 290 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಅರಣ್ಯ, ಪರಿಸರ ಮತ್ತು ಜೀವಿ ಪರಿಸರ

213. ಕಳೆದ 5 ವರ್ಷಗಳ ಅವಧಿಯಲ್ಲಿ 3.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು ಬೆಳೆಸಲಾಗಿದೆ. **ಕೃಷಿ ಅರಣ್ಯ ಪ್ರೋತ್ಸಾಹ** ಮತ್ತು **ಮಗುವಿಗೊಂದು ಮರ ಶಾಲೆಗೊಂದು** ವನ ಯೋಜನೆಗಳಡಿ 94.98 ಲಕ್ಷ ಸಸಿ ವಿತರಿಸಲಾಗಿದೆ, ಮಳೆಗಾಲದಲ್ಲಿ 26.84 ಕೋಟಿ ಸಸಿಗಳನ್ನು ನೆಡಲಾಗಿದೆ ಹಾಗೂ ಸಾರ್ವಜನಿಕರಿಗೆ 666.57 ಲಕ್ಷ ಸಸಿಗಳನ್ನು ಹಂಚಿಕೆ ಮಾಡಲಾಗಿದೆ. ಮುಂದಿನ ಮಳೆಗಾಲದಲ್ಲಿ ರೈತರಿಗೆ ವಿತರಿಸಲು 2 ಕೋಟಿ

ಗಿಡಗಳನ್ನು ಬೆಳೆಸಲಾಗುತ್ತಿದೆ. ನಗರಗಳ ಸಮೀಪದ ಪ್ರದೇಶಗಳಲ್ಲಿ 17 ಟ್ರೀ ಪಾರ್ಕ್‌ಗಳನ್ನು ಮತ್ತು **ದೇವರ ಕಾಡು** ಯೋಜನೆಯಡಿ 24 ದೈವಿವನಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

214. ರಾಮನಗರ ಜಿಲ್ಲೆಯ ರಾಮದೇವರ ಬೆಟ್ಟ ಅರಣ್ಯ ಪ್ರದೇಶವನ್ನು ರಣಹದ್ದು ವನ್ಯಧಾಮವಾಗಿ, ಬಾವಲಿಗಳಿಗಾಗಿ ಬೆಳಗಾವಿ ಜಿಲ್ಲೆಯ ಭೀಮಗಡ ವನ್ಯಧಾಮ, ಕೃಷ್ಣಮೃಗಗಳ ಸಂರಕ್ಷಣೆಗಾಗಿ ಗುಲ್ಬರ್ಗ ಜಿಲ್ಲೆಯ ಚಿಂಚೋಳಿ ವನ್ಯಧಾಮ ಹಾಗೂ ಉತ್ತರ ಕನ್ನಡ ಜಿಲ್ಲೆಯ ಶಾಲ್ಮಲ ರೈಪೇರಿಯನ್ ಎಕೋ ಸಿಸ್ಟಮ್ ಕನ್ಸರ್‌ವೇಷನ್ ರಿಸರ್ವ್‌ವನ್ನಾಗಿ ಘೋಷಿಸಲಾಗಿದೆ. 2010ನೇ ಸಾಲಿನ ಗಣತಿಯ ಪ್ರಕಾರ ರಾಜ್ಯದಲ್ಲಿ 320 ಹುಲಿಗಳಿದ್ದು ದೇಶದಲ್ಲಿ ಮೊದಲನೇ ಸ್ಥಾನದಲ್ಲಿದೆ.

215. ಮಾನವ–ಪ್ರಾಣಿ ಸಂಘರ್ಷದಿಂದ ಪ್ರತಿ ಮಾನವ ಪ್ರಾಣ ಹಾನಿ ಪ್ರಕರಣಕ್ಕೆ ಪರಿಹಾರವನ್ನು 5 ಲಕ್ಷಕ್ಕೆ ಹೆಚ್ಚಿಸಲಾಗಿದೆ.

216. ಬೆಂಗಳೂರಿನ 20 ಕೆರೆಗಳ ಸಂರಕ್ಷಣೆ, ಪುನರ್ ಸ್ಥಾಪನೆ ಮತ್ತು ಜೀರ್ಣೋದ್ಧಾರಕ್ಕಾಗಿ ಕಳೆದ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು.

217. 2013–14 ನೇ ಸಾಲಿಗೆ ಈ ಕೆಳಕಂಡ ಪ್ರಮುಖ ಉಪಕ್ರಮಗಳನ್ನು ಯೋಜಿಸಲಾಗಿದೆ.

- ಗ್ರಾಮ ಅರಣ್ಯ ಸಮಿತಿಗಳ ಮುಖಾಂತರ ಅರಣ್ಯ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು **ಕರ್ನಾಟಕ ಮಿಷನ್** ಕಾರ್ಯಕ್ರಮವನ್ನು ಜಾರಿಗೊಳಿಸಲಾಗುವುದು.
- ಎಸ್ಟೇಟ್‌ಗಳ ಪರಿಕಲ್ಪನೆಯ ಆಧಾರದಲ್ಲಿ, ಗಂಧದ ಮರ ನೆಡುತೋಪುಗಳನ್ನು ಹೆಚ್ಚಿಸುವುದಕ್ಕಾಗಿ ಹಾಗೂ ಸಂರಕ್ಷಿಸುವುದಕ್ಕಾಗಿ ಸಿರಿ **ಚಂದನವನ** ಕಾರ್ಯಕ್ರಮವನ್ನು ಜಾರಿಗೊಳಿಸಲಾಗುವುದು.

- ಧಾರವಾಡ ಸಮೀಪದ ಗುಂಗರಘಟ್ಟಿಯಲ್ಲಿ **ವಲಯ ಅರಣ್ಯ ಅಧಿಕಾರಿಗಳ ತರಬೇತಿ ಸಂಸ್ಥೆಯನ್ನು** ಸ್ಥಾಪಿಸಲಾಗುವುದು.
- ಹುಬ್ಬಳ್ಳಿ ತಾಲ್ಲೂಕಿನ ಬುಡ್ನಾಲ್ ಅರಣ್ಯ ಪ್ರದೇಶದಲ್ಲಿ ಪರಿಸರ ಉದ್ಯಾನವನ ಮತ್ತು ಬಹುಜೀವಿ ವೈವಿಧ್ಯ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವುದು.
- ಕರಾವಳಿ ಮತ್ತು ಜಂಬು ಮಣ್ಣಿನ ಪ್ರದೇಶಗಳ ಜೀವಿ ಪರಿಸರವನ್ನು ಸುಧಾರಿಸುವುದಕ್ಕಾಗಿ **ಹಸಿರು ಕವಚ** ನೆಡುತೋಪುಗಳನ್ನು ಮಾಡಲಾಗುವುದು.
- ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳಲ್ಲಿ ಒತುವರಿಗಳನ್ನು ತಡೆಯುವ ಸಲುವಾಗಿ ಅರಣ್ಯ ಭೂಮಿಯನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ ಕಾರ್ಯಕ್ರ-ಮವೊಂದನ್ನು ಹಮ್ಮಿಕೊಳ್ಳಲಾಗುವುದು.
- ಹುಲಿ ಮೀಸಲು ಅರಣ್ಯಗಳ ಮತ್ತು ರಾಷ್ಟ್ರೀಯ ಉದ್ಯಾನವನಗಳಲ್ಲಿರುವ ಕುಟುಂಬಗಳ ಸ್ವಇಚ್ಛಾ ಪುನರ್ವಸತಿ ಸೂಕ್ತ ಪುನರ್ವಸತಿ ಪ್ಯಾಕೇಜ್ ಕಲ್ಪಿಸುವ ಮುಖಾಂತರ ಪ್ರೋತ್ಸಾಹ ನೀಡಲಾಗುವುದು.
- ಕೊಡಗು, ಹಾಸನ, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮೀಣ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಾನವ–ಪ್ರಾಣಿ ಸಂಘರ್ಷವನ್ನು ತಡೆಯುವುದಕ್ಕೆ ಆನೆ ಕಂದಕಗಳು ಮತ್ತು ಸೌರಬೇಲಿಗಳನ್ನು ನಿರ್ಮಿಸಲಾಗುವುದು.
- "ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ" ಮತ್ತು "ಮಗುವಿಗೊಂದು ಮರ, ಶಾಲೆಗೊಂದು ವನ ಯೋಜನೆ" ಗಳನ್ನು ಮುಂದುವರಿಸಲಾಗುವುದು.

218. 2013–14ನೇ ಸಾಲಿನಲ್ಲಿ ಅರಣ್ಯ, ಪರಿಸರ ಮತ್ತು ಜೀವಿ ಪರಿಸರ ಇಲಾಖೆಗೆ 1175 ಕೋಟಿ ರೂ. ಅನುದಾನವನ್ನು ಒದಗಿಸಲಾಗಿದೆ.

ಆಹಾರ ಮತ್ತು ಗ್ರಾಹಕರ ವ್ಯವಹಾರಗಳು

219. ರಾಜ್ಯ ಸರ್ಕಾರವು ಪ್ರತಿ ತಿಂಗಳು 95.27 ಲಕ್ಷ ಪಡಿತರ ಚೀಟಿದಾರರಿಗೆ 2.16 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳನ್ನು ಒದಗಿಸುತ್ತಿದೆ. ಸಾರ್ವಜನಿಕ ವಿತರಣಾ ಪದ್ಧತಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ವಾಸ್ತವ ಸಮಯ ಆಧಾರದ (Real time basis) ಮೇಲೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.

220. ಈವರೆವಿಗೆ ಬೆಂಗಳೂರು ನಗರದಲ್ಲಿ 9, ಚಿಕ್ಕಮಗಳೂರು ಜಿಲ್ಲೆಯಲ್ಲಿ 100 ಹಾಗೂ ತುಮಕೂರು ಜಿಲ್ಲೆಯಲ್ಲಿ 559 ಪಡಿತರ ಅಂಗಡಿಗಳಲ್ಲಿ ವಿಶೇಷ ಸಾಮರ್ಥ್ಯದ ವಿದ್ಯುನ್ಮಾನ ತೂಕ–ಮಾರಾಟ ಯಂತ್ರಗಳನ್ನು ಅಳವಡಿಸಿ ಆಹಾರಧಾನ್ಯ ಹಂಚಿಕೆಯಲ್ಲಿ ಪಾರದರ್ಶಕತೆ ತರಲಾಗಿದೆ. ಹಂತ ಹಂತವಾಗಿ ಈ ವಿದ್ಯುನ್ಮಾನ ಯಂತ್ರಗಳನ್ನು ಎಲ್ಲ ಪಡಿತರ ಅಂಗಡಿಗಳಲ್ಲಿ ಅಳವಡಿಸಲಾಗುವುದು.

221. **2013–14ನೇ ಸಾಲಿನಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ವಿತರಿಸುವ ಪಡಿತರ ಧಾನ್ಯಗಳಲ್ಲಿ ಅಕ್ಕಿಯನ್ನು ಕಿಲೋಗೆ 2 ರೂ. ದರದಂತೆ ನೀಡಲಾಗುವುದು.** 2013–14ರಲ್ಲಿ ಆಹಾರಧಾನ್ಯ ಸಹಾಯಧನಕ್ಕಾಗಿ 1200 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ.

222. ಕಾನೂನು ಮಾಪನ ಇಲಾಖೆಯಲ್ಲಿನ ಎಲ್ಲಾ 152 ಅಧಿಕಾರಿಗಳಿಗೆ ವಿಶೇಷ ಗುಣಗಳನ್ನು ಹೊಂದಿರುವ ವಿದ್ಯುನ್ಮಾನ ಹಣ ರಸೀದಿ ಯಂತ್ರಗಳನ್ನು ನೀಡಲಾಗಿದ್ದು, ವ್ಯಾಪಾರಿಗಳಿಂದ ಫೀ/ದಂಡ/ಫೈನ್ ರೂಪದಲ್ಲಿ ಪಡೆದ ಹಣಕ್ಕೆ ತಕ್ಷಣವೇ ರಸೀದಿಯನ್ನು ನೀಡಲಾಗುತ್ತಿದೆ.

ಗೃಹ

223. ರಾಜ್ಯದಲ್ಲಿ ಒಟ್ಟಾರೆ ಕಾನೂನು ಸುವ್ಯವಸ್ಥೆ ಸಮರ್ಪಕಗಿದ್ದು, ಯಾವುದೇ ದೊಡ್ಡ ಪ್ರಮಾಣದ ಜಾತಿ ಕಲಹಗಳು, ಕೋಮು ಗಲಭೆಗಳು ನಡೆದಿರುವುದಿಲ್ಲ. ಕರ್ನಾಟಕ ರಾಜ್ಯವು ನಕ್ಸಲ್ ಚಟುವಟಿಕೆಗಳಲ್ಲಿ

ತೊಡಗಿರುವವರನ್ನು ಮುಖ್ಯ ವಾಹಿನಿಗೆ ತರುವ ದಿಸೆಯಿಂದ ಶರಣಾಗತ ಯೋಜನೆಯನ್ನು ಘೋಷಿಸಿದೆ.

224. ನಮ್ಮ ಸರ್ಕಾರದ ಅವಧಿಯಲ್ಲಿ ಬೆಂಗಳೂರು ನಗರದ ಪೊಲೀಸ್ ಕಮೀಷನರೇಟ್ ಘಟಕದಲ್ಲಿ ಈಶಾನ್ಯ ವಿಭಾಗ ಸೃಜನೆ, ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಸೆಕ್ಯೂರಿಟಿ ಫೋರ್ಸ್ 3 ಬೆಟಾಲಿಯನ್ ಒಳಗೊಂಡಂತೆ, ರಾಜ್ಯ ಮಟ್ಟದ ಆಂತರಿಕ ಭದ್ರತಾ ವಿಭಾಗ, ಮಂಗಳೂರಿನಲ್ಲಿ ಪೊಲೀಸ್ ಕಮೀಷನರೇಟ್, ಬಿಜಾಪುರದಲ್ಲಿ ಇಂಡಿಯನ್ ರಿಸರ್ವ್ ಬೆಟಾಲಿಯನ್, ಯಾದಗಿರಿಯಲ್ಲಿ ನೂತನ ಜಿಲ್ಲಾ ಪೊಲೀಸ್ ಕಚೇರಿ, ರಾಜ್ಯದ ವಲಯ ಹಾಗೂ ಕಮೀಷನರೇಟ್ ಕಚೇರಿಗಳಲ್ಲಿ ಬಾಂಬ್ ಮತ್ತು ನಿಷ್ಕ್ರಿಯ ದಳ ರಚನೆ, ಹಂಪಿ ಮತ್ತು ತೀರ್ಥಹಳ್ಳಿಯಲ್ಲಿ ಎರಡು ಉಪವಿಭಾಗಗಳ ಸೃಜನೆ, 12 ಕಾನೂನು ಮತ್ತು ಸುವ್ಯವಸ್ಥೆ ಪೊಲೀಸ್ ಠಾಣೆಗಳು, 10 ನೂತನ ಸಂಚಾರಿ ಪೊಲೀಸ್ ಠಾಣೆಗಳು, 10 ಪೊಲೀಸ್ ಹೊರಠಾಣೆಗಳನ್ನು ಪೂರ್ಣಪ್ರಮಾಣದ ಠಾಣೆಗಳನ್ನಾಗಿ ಮೇಲ್ದರ್ಜೆಗೇರಿಸಿದೆ ಹಾಗೂ 5 ಪೊಲೀಸ್ ಉಪಠಾಣೆಗಳನ್ನು ಸೃಜಿಸಲಾಗಿದೆ.

225. ಕಳೆದ 5 ವರ್ಷದ ಅವಧಿಯಲ್ಲಿ 91 ಹೊಸ ಪೊಲೀಸ್ ಠಾಣೆಗಳ ಕಟ್ಟಡಗಳ ನಿರ್ಮಾಣ ಮಾಡಲಾಗಿರುತ್ತದೆ.

226. ಕಳೆದ 5 ವರ್ಷದ ಅವಧಿಯಲ್ಲಿ 14,481 ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಕಾನ್ಸ್‌ಟೇಬಲ್, ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಮತ್ತು ಅನುಯಾಯಿಗಳು ಕರ್ತವ್ಯದ ಮೇಲಿದ್ದಾಗ ಮೃತಪಟ್ಟಲ್ಲಿ ಮೃತರ ಕುಟುಂಬದವರಿಗೆ ವಿಮಾ ಪರಿಹಾರ ಮೊತ್ತವನ್ನು 3 ಲಕ್ಷ ರೂ.ದಿಂದ 10 ಲಕ್ಷ ರೂ.ಗಳವರೆಗೆ ಹೆಚ್ಚಿಸಿದೆ. 253.10 ಕೋಟಿ ರೂ.ಗಳಲ್ಲಿ 3445 ವಸತಿ ಗೃಹಗಳನ್ನು ನಿರ್ಮಿಸಲಾಗಿದೆ.

227. 2012–13ನೇ ಸಾಲಿನಿಂದ ಪೊಲೀಸ್ ಸಿಬ್ಬಂದಿಗೆ ಒಂದು ಹೆಚ್ಚುವರಿ ಸಮವಸ್ತ್ರವನ್ನು ನೀಡಲಾಗುತ್ತಿದೆ.

228. ಪೊಲೀಸ್ ಆಡಳಿತವನ್ನು ಬಲಪಡಿಸುವ ಸಲುವಾಗಿ 2013–14ನೇ ಸಾಲಿನಲ್ಲಿ ವಿವಿಧ ಹಂತಗಳಲ್ಲಿ ಖಾಲಿಯಿದ್ದ 8000 ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುವುದು. ವಿಸ್ತರಿತ ನಗರದ ಅವಶ್ಯಕತೆಗ–ಳನ್ನು ನಿಭಾಯಿಸಲು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿರುವ ಪೊಲೀಸ್

ಕಮಿಷನರ್‌ರವರ ಕಛೇರಿಯನ್ನು ಪುನರ್ ರಚಿಸಲಾಗುವುದು. ಹುಬ್ಬಳ್ಳಿ-ಧಾರವಾಡ ನಗರ ಕಮಿಷನರ್‌ರವರ ಕಛೇರಿಯನ್ನು ಹೆಚ್ಚುವರಿ ಹುದ್ದೆಗಳು ಮತ್ತು ಉಪಕರಣಗಳ ಮೂಲಕ ಬಲಪಡಿಸಲಾಗುವುದು ಹಾಲಿ ಇರುವ ಹಳೆಯ ವಾಹನಗಳ ಬದಲಾವಣೆಗಾಗಿ 1000 ಹೊಸ ವಾಹನಗಳನ್ನು ಖರೀದಿಸಲು ಪೊಲೀಸ್ ಇಲಾಖೆಗೆ ಅವಕಾಶ ನೀಡಲಾಗುವುದು.

229. ಬೆಳಗಾವಿ ನಗರಕ್ಕೆ ಪೊಲೀಸ್ ಕಮಿಷನರ್ ಕಚೇರಿಯನ್ನು ಸ್ಥಾಪಿಸಲಾಗುವುದು, ಕರ್ನಾಟಕ ರಾಜ್ಯ ಪೊಲೀಸ್ ಇಂಟಲಿಜೆನ್ಸ್ ಅಕಾಡೆಮಿಯನ್ನು ಸ್ಥಾಪಿಸಲಾಗುವುದು. ಗುಪ್ತಚರ ಇಲಾಖೆಯನ್ನು ಬಲಪಡಿ-ಸಲು 2 ಕೋಟಿ ರೂ.ಗಳನ್ನು ಕೊಡಲಾಗುವುದು.

230. ಕೆ.ಎಸ್.ಆರ್.ಪಿ, ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ದಳ (ಕೆ.ಎಸ್.ಐ.ಎಸ್.ಎಫ್) ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿಗಳ ನಿಯೋಜನೆಯನ್ನು ಪಡೆದು ರಾಜ್ಯ ವಿಪತ್ತು ನಿರ್ವಹಣಾ ದಳವನ್ನು ರಚಿಸಲಾಗುವುದು.

231. ಜಿಲ್ಲೆಗಳಲ್ಲಿ ಸಿಸಿಟಿವಿ/ಸಿಸಿಟಿಎನ್‌ಎಸ್ ಹಾಗೂ ಕಣ್ಗಾವಲು ಕ್ಯಾಮೆರಾ ಅಳವಡಿಕೆ ಯೋಜನೆಗಳ ವಿಸ್ತರಣೆ ಮತ್ತು ಐದು ಪ್ರಮುಖ ನಗರಗಳಾದ ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ ಮತ್ತು ಹುಬ್ಬಳ್ಳಿ-ಧಾರವಾಡ ನಗರಗಳಿಗಾಗಿ "ಸುರಕ್ಷಿತ ನಗರ ಭದ್ರತೆ ಮೂಲ ಸೌಕರ್ಯ" ರೂಪಿಸುವ ಕಾರ್ಯಕ್ರಮವನ್ನು, ಭಾರತ ಸರ್ಕಾರದ ಭಾಗಶ: ನೆರವಿನೊಂದಿಗೆ ಒಟ್ಟು ರೂ.150 ಕೋಟಿ ಅಂದಾಜು ವೆಚ್ಚದಲ್ಲಿ 5 ವರ್ಷದ ಅವಧಿಗೆ ಕೈಗೊಳ್ಳಲಾಗುವುದು.

232. ಒಟ್ಟು 120 ಕೋಟಿ ರೂ.ಗಳ ಹಣವನ್ನು ಪೊಲೀಸ್ ಠಾಣೆಗಳ ನಿರ್ಮಾಣ, ಸಿಬ್ಬಂದಿ ವಸತಿ ನಿರ್ಮಾಣ ಮತ್ತು ನಿರ್ವಹಣೆಗಗಿ ಹಾಗೂ ಇನ್ನಿತರ ವೆಚ್ಚಗಳಿಗಾಗಿ ಮೀಸಲಿರಿಸಲಾಗಿದೆ.

233. ಅಗ್ನಿಶಾಮಕ ಇಲಾಖೆಯ K-SAFE ಯೋಜನೆ ಅಡಿಯಲ್ಲಿ 30 ಅಗ್ನಿಶಾಮಕ ಠಾಣೆ, 2 ಆರ್.ಎಫ್.ಓ ಕಛೇರಿಗಳು ಹಾಗೂ 617 ವಸತಿಗೃಹಗಳನ್ನು ಅಂದಾಜು 78.73 ಕೋಟಿ ರೂ.ಗಳಲ್ಲಿ ನಿರ್ಮಿಸಲಾಗಿದೆ.

234. ಗೃಹ ರಕ್ಷಕರಿಗೆ ಕರ್ತವ್ಯ ಭತ್ಯೆಯನ್ನು ಬೆಂಗಳೂರಿನಲ್ಲಿ ಪ್ರತಿ ದಿನಕ್ಕೆ 300 ರೂ. ಗಳಿಗೆ ಮತ್ತು ಇತರೆ ಸ್ಥಳಗಳಲ್ಲಿ ಪ್ರತಿ ದಿನಕ್ಕೆ 250 ರೂ.ಗಳಿಗೆ ಹೆಚ್ಚಿಸಲಾಗುವುದು.

235. ವಿವಿಧ ಪುನರ್‌ಮನನ ಶಿಕ್ಷಣದ ಮೂಲಕ ಕಾರಾಗೃಹ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅತ್ಯುತ್ತಮ ತರಬೇತಿಯನ್ನು ಒದಗಿಸುವುದಕ್ಕಾಗಿ 4 ಕೋಟಿ ರೂ.ಅಂದಾಜು ವೆಚ್ಚದಲ್ಲಿ ಬೆಂಗಳೂರಿನಲ್ಲಿ ಕಾರಾಗೃಹ ಆಡಳಿತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

236. ಕಾರಾಗೃಹದ ಉತ್ತಮ ವ್ಯವಸ್ಥಾಪನೆಗಾಗಿ, ಬಳ್ಳಾರಿ. ಗುಲ್ಬರ್ಗಾ, ಬೆಳಗಾವಿ, ಮೈಸೂರು ಮತ್ತು ಬಿಜಾಪುರ ಕೇಂದ್ರ ಕಾರಾಗೃಹದಲ್ಲಿ ಸಿಸಿಟಿವಿ ಕ್ಯಾಮೆರಾಗಳು, ಮೊಬೈಲ್ ಕ್ಯಾಮರಾಗಳು ಮತ್ತು ಸೌರ ಬೆಳಕಿನ ವ್ಯವಸ್ಥೆಯನ್ನು ಅಳವಡಿಸಲಾಗುವುದು.

237. ಶಿವಮೊಗ್ಗದಲ್ಲಿ ಹೊಸ ಮಾದರಿ ಜಿಲ್ಲಾ ಕಾರಾಗೃಹದ ನಿರ್ಮಾಣ ಕಾರ್ಯಗಳನ್ನು ಕೂಡ 2013ರ ಆಗಸ್ಟ್ ತಿಂಗಳ ಕೊನೆಯ ಹೊತ್ತಿಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. 2013–14ನೇ ಸಾಲಿನಲ್ಲಿ ತುಮಕೂರಿನಲ್ಲಿ ಮಹಿಳಾ ಕೇಂದ್ರ ಕಾರಾಗೃಹವನ್ನು ಮತ್ತು ಕಡೂರು ಮತ್ತು ಮಂಡ್ಯದಲ್ಲಿ ಬಯಲು ಬಂದೀಖಾನೆಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ.

238. 2013–14ನೇ ಸಾಲಿನಲ್ಲಿ ಗೃಹ ಇಲಾಖೆಗೆ 3849 ಕೋಟಿ ರೂ. ಅನುದಾನ ಒದಗಿಸಲಾಗಿದೆ.

ಸಾರಿಗೆ

239. ಕಳೆದ 5 ವರ್ಷದ ಅವಧಿಯಲ್ಲಿ 4 ಸಾರಿಗೆ ಸಂಸ್ಥೆಗಳಲ್ಲಿ ಈ ಕೆಳಕಂಡಂತೆ ಸೌಲಭ್ಯಗಲನ್ನು ವಿಸ್ತರಿಸಲಾಗಿದೆ–

- ಒಟ್ಟು 10,229 ಹೊಸ ವಾಹನಗಳ ಸೇರ್ಪಡೆ;
- 93 ಹೊಸ ಬಸ್ ನಿಲ್ದಾಣಗಳನ್ನು ನಿರ್ಮಾಣ;
- 123 ಬಸ್ ನಿಲ್ದಾಣಗಳ ಉನ್ನತೀಕರಣ;

- ಪ್ರತಿನಿತ್ಯ ಪ್ರಯಾಣಿಕರ ಸಂಖ್ಯೆ 88.23 ಲಕ್ಷ ರಿಂದ 123.25ಕ್ಕೆ ಹೆಚ್ಚಳ, ಸಂಚಾರದ ಒತ್ತಡವನ್ನು ನಿರ್ವಹಿಸಲು 18614 ಇದ್ದ ಷೆಡ್ಯುಲ್ 21230ಕ್ಕೆ ಹೆಚ್ಚಳ;
- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗಳಿಗೆ ಭಾರತ ಸರ್ಕಾರ ಮತ್ತು ಇತರೆ ಸಂಸ್ಥೆಗಳಿಂದ 28 ಪ್ರಶಸ್ತಿಗಳು;
- 1222 ಕೋಟಿ ರೂ. ಗಳ ರಿಯಾಯಿತಿ ಪಾಸ್‌ಗಳ ಸಹಾಯಧನದಿಂದ 23.65 ಕೋಟಿ ಪ್ರಯಾಣಗಳಿಗೆ ಪ್ರಯೋಜನ;
- ಶಿವಮೊಗ್ಗ ತಾಲ್ಲೂಕು ಆಯನೂರಿನಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಿಸಲಾಗುವುದು;

240. ವಾಹನ ನೋಂದಣಿಗೆ ಸಂಬಂಧಿಸಿದಂತೆ ತ್ವರಿತವಾಗಿ ಸೇವೆಗಳನ್ನು ಒದಗಿಸಲು ವಾಹನ ನೋಂದಣಿ ದತ್ತಾಂಶದ ಆನ್-ಲೈನ್ ಸಂಗ್ರಹಣೆಯ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುವುದು. ಮೋಟಾರು ವಾಹನ ತೆರಿಗೆ ಮತ್ತು ಶುಲ್ಕಗಳಿಗೆ ಸಂಬಂಧಿಸಿದಂತೆ ವಿದ್ಯುನ್ಮಾನ ಸಂದಾಯ ವ್ಯವಸ್ಥೆಯನ್ನು ಮುಂದಿನ 3 ತಿಂಗಳಲ್ಲಿ ಅನುಷ್ಠಾನಗೊಳಿಸಲಾಗುವುದು. ಕಳೆದ 4 ವರ್ಷಗಳಲ್ಲಿ 37.39 ಲಕ್ಷ ಸ್ಮಾರ್ಟ್ ಕಾರ್ಡ್ ಡ್ರೈವಿಂಗ್ ಲೈಸೆನ್ಸ್ ಹಾಗೂ 41.16 ಲಕ್ಷ ಸ್ಮಾರ್ಟ್ ಕಾರ್ಡ್ ನೋಂದಣಿ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ. ಸಾರಿಗೆ ಇಲಾಖೆಯ ಆನ್-ಲೈನ್ ಸೇವೆಗಳನ್ನು ಬಲಿಷ್ಟಗೊಳಿಸಲು ಮತ್ತು ಕಾಗದ ರಹಿತ ಸೇವಾ ವ್ಯವಸ್ಥೆಯನ್ನು ಜಾರಿಗೊಳಿಸಲು 15 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಇಆರ್‌ಪಿ ಕಾರ್ಯಕ್ರಮವನ್ನು ಆರಂಭಿಸಲು ಪ್ರಸ್ತಾಪಿಸಲಾಗಿದೆ.

241. ಬೆಳೆಯುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಇಲಾಖೆಯ ರಾಜಸ್ವ ಸಂಗ್ರಹಣೆಯನ್ನು ಉತ್ತಮಗೊಳಿಸಲು ಬೆಂಗಳೂರಿನಲ್ಲಿ ಈಗಿರುವ 10 ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯ ಜೊತೆಗೆ ಬನಶಂಕರಿ, ಚಾಮರಾಜಪೇಟೆ, ಆರ್.ಟಿ.ನಗರ ಮತ್ತು ಮಾರತ್-ಹಳ್ಳಿ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ

ಸೂರತ್‌ಕಲ್‌ಗಳಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿಗಳು ಹಾಗೂ ದಾಂಡೇಲಿ ಮತ್ತು ತರೀಕೆರೆಯಲ್ಲಿ 2 ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿಗಳನ್ನು ಪ್ರಾರಂಭಿಸಲಾಗುವುದು.

242. ಹುಬ್ಬಳ್ಳಿ, ಬಿಜಾಪುರ, ಹಾಸನ, ಚಿಕ್ಕಮಗಳೂರು, ರಾಯಚೂರು, ಗುಲ್ಬರ್ಗಾ, ಬೆಳಗಾವಿ, ಬಳ್ಳಾರಿ, ಕೋಲಾರ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಮಂಗಳೂರು, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಹಾವೇರಿಗಳಲ್ಲಿ ಟ್ರಕ್ ಟರ್ಮಿನಲ್ ನಿರ್ಮಿಸಲು ಶಕ್ಯತಾ ವರದಿ ತಯಾರು ಮಾಡಲಾಗುವುದು.

243. ಬೆಂಗಳೂರಿನ ಯಶವಂತಪುರ, ದಾಸನಾಯಕನಪಾಳ್ಯ, ಕೈಗಾರಿಕಾ ಉಪನಗರ 2ನೇ ಹಂತದಲ್ಲಿ, ಮೈಸೂರು, ಧಾರವಾಡ, ಹೊಸಪೇಟೆಯಲ್ಲಿ ಟ್ರಕ್ ಟರ್ಮಿನಲ್‌ಗಳನ್ನು ನಿರ್ಮಾಣ ಮಾಡಲಾಗಿದೆ.

244. ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥಗಳನ್ನು (Automated Driving Test Tracks) 15 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಮಂಗಳೂರು, ಬೆಳಗಾವಿ ಮತ್ತು ಹೊಸಪೇಟೆಗಳಲ್ಲಿ ಸ್ಥಾಪಿಸಲಾಗುವುದು. ಭಾರೀ ಪ್ರಮಾಣದ ವಾಹನ ಚಾಲನಾ ತರಬೇತಿ ಸಂಸ್ಥೆಗಳನ್ನು 30 ಕೋಟಿ ರೂ.ಗಳ ವೆಚ್ಚದಲ್ಲಿ ಮಂಗಳೂರು ಮತು ಗುಲ್ಬರ್ಗದಲ್ಲಿ ಸ್ಥಾಪಿಸಲಾಗುವುದು.

245. 2013–14ನೇ ಸಾಲಿನಲ್ಲಿ ಸಾರಿಗೆ ಇಲಾಖೆಗೆ 1288 ಕೋಟಿ ರೂ. ಒದಗಿಸಲಾಗಿದೆ.

ಕಂದಾಯ

246. ಕಂದಾಯ ಇಲಾಖೆಯು ಸಾರ್ವಜನಿಕರಿಗೆ ಪ್ರಮುಖ ಸೇವೆಗಳನ್ನು ಒದಗಿಸುವ ಹಾಗೂ ರಾಜ್ಯ ಆಡಳಿತ ವ್ಯವಸ್ಥೆಯ ಒಂದು ಪ್ರಮುಖ ಅಂಗವಾಗಿದೆ. ಕಳೆದ 5 ವರ್ಷಗಳ ಅವಧಿಯಲ್ಲಿ ಈ ಇಲಾಖೆಯ ಬಲವರ್ಧನೆ ಮತ್ತು ಸಾರ್ವಜನಿಕರಿಗೆ, ಪ್ರಮುಖವಾಗಿ ದುರ್ಬಲ ವರ್ಗ, ಹಿರಿಯ ನಾಗರಿಕರು, ಮಹಿಳೆಯರು, ವಿಧವೆಯರು ಹಾಗೂ ಇನ್ನಿತರ ಅಲಕ್ಷಿತ ವರ್ಗದವರ ಸುಗಮ ಜೀವನ ನಿರ್ವಹಣೆಗಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದೆ:

- 2008–09ರಲ್ಲಿ 28.23 ಲಕ್ಷ ಇದ್ದ ಸಾಮಾಜಿಕ ಭದ್ರತಾ ಪಿಂಚಣಿದಾರರ ಸಂಖ್ಯೆ 33.67 ಲಕ್ಷಕ್ಕೆ ಏರಿಕೆ;
- ಈ ಯೋಜನೆಗಳಿಗಾಗಿ ವಾರ್ಷಿಕ 2,300 ಕೋಟಿ ರೂ.ಗಳ ವೆಚ್ಚ;
- ಹೊಸ ಯಾದಗಿರ್ ಜಿಲ್ಲೆಯ ರಚನೆ;
- ಗ್ರಾಮ ಸಹಾಯಕರ ಸಂಭಾವನೆಯನ್ನು ದ್ವಿಗುಣಗೊಳಿಸಿ ಮಾಸಿಕ 7,000 ರೂ.ಗಳಿಗೆ ಹೆಚ್ಚಳ;
- 1800 ಭೂ ಮಾಪಕರ ನೇಮಕ;
- ಬಡವರು ಮತ್ತು ದುರ್ಬಲ ವರ್ಗದವರ ವಸತಿ ಸಕ್ರಮಗೊಳಿ-ಸಲು ಕರ್ನಾಟಕ ಭೂ ಮಂಜೂರಾತಿ ಕಾಯ್ದೆಯ ಕಲಂ 94(ಸಿ)ಗೆ ತಿದ್ದುಪಡಿ;
- ಆಸ್ತಿ ನೋಂದಣಿ ಪ್ರಕ್ರಿಯೆಯನ್ನು ಸುಲಭಗೊಳಿಸಲು ಕಾವೇರಿ-2 ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದೆ.
- ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಪಟ್ಟ ರಿಜಿಸ್ಟ್ರೇಷನ್‌ಗಳನ್ನು ಜಿಲ್ಲೆಯ ಯಾವುದೇ ರಿಜಿಸ್ಟ್ರೇಷನ್ ಕಛೇರಿಯಲ್ಲಾದರೂ ನೋಂದಣಿ ಮಾಡಿಸಲು ಹಾಗೂ Encumbrance ಸರ್ಟಿಫಿಕೇಟ್‌ನ್ನು ಪಡೆಯಲು ಅವಕಾಶ;
- ನಗರ ದಾಖಲೆಗಳ ಗಣಕೀಕರಣ ಯೋಜನೆ ಅಡಿಯಲ್ಲಿ ಮೈಸೂರು, ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ – ಧಾರವಾಡ ಹಾಗೂ ಬಳ್ಳಾರಿಯಲ್ಲಿ ಹಕ್ಕು ದಾಖಲೆಗಳ ನಿರ್ವಹಣಾ ಯೋಜನೆ (UPOR) ಪಿ.ಪಿ.ಪಿ. ಆಧಾರದಲ್ಲಿ ಪ್ರಾರಂಭ; ಬೆಂಗಳೂರು ಮಹಾನಗರ 50 ವಾರ್ಡುಗಳಲ್ಲಿ ಅನುಷ್ಠಾನಕ್ಕೆ ಅನುಮೋದನೆ; ಮುಂದಿನ ಹಂತದಲ್ಲಿ ಇನ್ನೂ 10 ನಗರಗಳಿಗೆ ವಿಸ್ತರಣೆ;
- 100 ಕೋಟಿ ರೂ.ಗಳ ವೆಚ್ಚದಲ್ಲಿ ಕೇಂದ್ರ ಸಹಾಯದೊಡನೆ ರಾಷ್ಟ್ರೀಯ ಭೂದಾಖಲೆ ಆಧುನೀಕರಣ ಕಾರ್ಯಕ್ರಮ

(NLRMP) ಅನುಷ್ಠಾನ; ಇದರಿಂದ ಎಲ್ಲಾ ಭೂದಾಖಲೆಗಳ ಗಣಕೀಕರಣಗೊಳಿಸಿ GIS ಪದ್ಧಿಯಲ್ಲಿ ಅಳವಡಿಕೆ;

- ಹೋಬಳಿ ಮಟ್ಟದಲ್ಲಿ ಸೇವೆಗಳನ್ನು ಒದಗಿಸುತ್ತಿರುವ 900 ಅಟಲ್ ಜನಸ್ನೇಹಿ ಕೇಂದ್ರಗಳು;
- ಈ ವರ್ಷ 272 ಹೊಸ ನಾಡ ಕಚೇರಿಗಳ ಪ್ರಾರಂಭ;
- 36 ಸೇವೆಗಳನ್ನು ಒದಗಿಸುತ್ತಿರುವ ಈ ಕೇಂದ್ರಗಳಿಗಾಗಿ 48 ಕೋಟಿ ರೂ.ಗಳ ಅನುದಾನ;
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದ ಜಾತಿ ಪ್ರಮಾಣಪತ್ರಗಳ ಸಿಂಧುತ್ವ-ವನ್ನು ಅನ್ಯಥಾ ರದ್ದುಪಡಿಸದಿದ್ದಲ್ಲಿ ಜೀವಿತಾವಧಿಯವರೆಗೆ ನೀಡಿಕೆ;
- ತಾಲ್ಲೂಕು ಮತ್ತು ಜಿಲ್ಲಾ ಕಛೇರಿಗಳಲ್ಲಿನ ರೆಕಾರ್ಡ್ ರೂಮ್‌ಗಳ ಆಧುನೀಕರಣ;

247. **ಹೊಸ ತಾಲ್ಲೂಕುಗಳ ರಚನೆ:** ಈಗಾಗಲೇ ನಮ್ಮ ಸರ್ಕಾರವು ಬೆಳಗಾವಿ ಜಿಲ್ಲೆಯಲ್ಲಿನ ಕಿತ್ತೂರನ್ನು ತಾಲ್ಲೂಕು ಎಂದು ಘೋಷಿಸಿದೆ. ಇತ್ತೀಚಿನ ವರ್ಷಗಳಲ್ಲಿ ಸರ್ಕಾರಕ್ಕೆ ಒಪ್ಪಿಸಿದ ವಿವಿಧ ವರದಿಗಳು ಸಾರ್ವಜನಿಕರ ಒತ್ತಾಯ ಭೌಗೋಳಿಕ ಆಧಾರ ಇತ್ಯಾದಿಗಳನ್ನು ಆಧರಿಸಿ ಕೆಳಕಂಡ 43 ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು. ಪ್ರಾರಂಭಿಕವಾಗಿ ಪ್ರತಿ ಹೊಸ ತಾಲ್ಲೂಕಿಗೆ 2 ಕೋಟಿ ರೂ.ಗಳಂತೆ 86 ಕೋಟಿ ರೂ.ಗಳನ್ನು ಒದಗಿಸಲಾಗುವುದು.

- ಬಾಗಲಕೋಟೆ ಜಿಲ್ಲೆಯ – ಗುಳೇದಗುಡ್ಡ, ರಬಕವಿ-ಬನಹಟ್ಟಿ ಮತ್ತು ಇಳಕಲ್
- ಬೆಳಗಾವಿ ಜಿಲ್ಲೆಯ– ನಿಪ್ಪಾಣಿ, ಮೂಡಲಗಿ ಮತ್ತು ಕಾಗವಾಡ
- ಚಾಮರಾಜನಗರ ಜಿಲ್ಲೆಯ – ಹನೂರು
- ದಾವಣಗೆರೆ ಜಿಲ್ಲೆಯ–ನ್ಯಾಮತಿ

- ಬೀದರ್ ಜಿಲ್ಲೆಯ–ಚಿಟಗುಪ್ಪ, ಹುಲಸೂರು ಮತ್ತು ಕಮಲಾನಗರ
- ಬಳ್ಳಾರಿ ಜಿಲ್ಲೆಯ–ಕುರುಗೋಡು, ಕೊಟ್ಟೂರು ಮತ್ತು ಕಂಪ್ಲಿ
- ಧಾರವಡ ಜಿಲ್ಲೆಯ–ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ನಗರ
- ಗದಗ ಜಿಲ್ಲೆಯ– ಗಜೇಂದ್ರಗಡ ಮತ್ತು ಲಕ್ಷ್ಮೇಶ್ವರ
- ಗುಲ್ಬರ್ಗಾ ಮತ್ತು ಯಾದಗಿರ್ ಜಿಲ್ಲೆಗಳ – ಕಾಳಗಿ, ಹುಣಸಗಿ, ಕಮಾಲಪುರ, ಯಡ್ರಾವಿ, ಶಹಾಬಾದ್, ವಡಗೆರ ಮತ್ತು ಗುರುಮಿಟ್ಕಲ್
- ಕೊಪ್ಪಳ ಜಿಲ್ಲೆಯ – ಕುಕನೂರು, ಕನಕಗಿರಿ ಮತ್ತು ಕಾರಟಗಿ
- ರಾಯಚೂರು ಜಿಲ್ಲೆಯ – ಮಸ್ಕಿ ಮತ್ತು ಸಿರವಾರ
- ಉಡುಪಿ ಜಿಲ್ಲೆಯ –ಬ್ರಹ್ಮಾವರ ಮತ್ತು ಬೈಂದೂರು
- ದಕ್ಷಿಣ ಕನ್ನಡ ಜಿಲ್ಲೆಯ –ಮೂಡಬಿದರೆ ಮತ್ತು ಕಡಬ
- ಬೆಂಗಳೂರು ನಗರ ಜಿಲ್ಲೆಯ – ಯಲಹಂಕ
- ಬಿಜಾಪುರ ಜಿಲ್ಲೆಯ–ಬಬಲೇಶ್ವರ, ನಿಡಗುಂದಿ, ತಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಡಚಣ ಮತ್ತು ಕೋಲ್ಹಾರ

248. 2012–13ನೇ ಸಾಲಿನಲ್ಲಿ 65 ವರ್ಷಕ್ಕೂ ಮೇಲ್ಪಟ್ಟ ವಯೋಮಾನದ ಪಿಂಚಣಿದಾರರಿಗೆ ಸಾಮಾಜಿಕ ಭದ್ರತಾ ಪಿಂಚಣಿಯನ್ನು ಮಾಸಿಕ 500 ರೂ.ಗಳಿಗೆ ಹೆಚ್ಚಿಸಲಾಗಿತ್ತು. ಈಗ ಈ ವಯಸ್ಸಿಗಿಂತ ಕಡಿಮೆ ವಯೋಮಾನದ ಪಿಂಚಣಿದಾರರಾದ ನಿರಾಶ್ರಿತ ವಿಧವೆಯರು ಮತ್ತು ಅಂಗವಿಕಲ ವ್ಯಕ್ತಿಗಳಿಗೂ ಸಹ ಪಿಂಚಣಿಯನ್ನು 500 ರೂ.ಗಳಿಗೆ ಹೆಚ್ಚಿಸಲಾಗುವುದು. 80 ವರ್ಷಕ್ಕೂ ಮೇಲ್ಪಟ್ಟ ವಯೋಮಾನದ ಎಲ್ಲಾ ಪಿಂಚಣಿದಾರರಿಗೆ, ಪಿಂಚಣಿಯನ್ನು 500 ರೂ.ಗಳಿಂದ 750 ರೂ.ಗಳಿಗೆ ಹೆಚ್ಚಿಸಲಾಗುವುದು. ಶೇ.75 ಕ್ಕೂ ಹೆಚ್ಚು ವಿಕಲಚೇತನರಾದ ವ್ಯಕ್ತಿಗಳಿಗೆ ಮಾಸಿಕ ಪಿಂಚಣಿಯನ್ನು 1200 ರೂ.ಗೆ ಹೆಚ್ಚಿಸಲಾಗುವುದು.

249. ನಿವೃತ್ತ 643 ಮಾಜಿ ಶಾನುಭೋಗರು ಮತ್ತು 2517 ಮಾಜಿ ಪಟೇಲರುಗಳು ಈಗ ಪಡೆಯುತ್ತಿರುವ ಪಿಂಚಣಿಯನ್ನು ಮಾಸಿಕ 200 ರೂ. ಗಳು ಹೆಚ್ಚಿಸಲಾಗುವುದು.

250. ಶ್ರೀ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿದ್ದು, 2013 14ನೇ ಸಾಲಿನಲ್ಲಿ ಅಸ್ತಿತ್ವಕ್ಕೆ ತರಲಾಗುವುದು.

251. ಬೆಂಗಳೂರಿನ ಬಸವ ಸಮಿತಿಯು ಕೆಂಗೇರಿ ಬಳಿಯಿರುವ "ಬಸವ ಸಂಗಮ"ದಲ್ಲಿ "ಆಧ್ಯಾತ್ಮ ಸಂಸತ್ ಭವನ" ಕಟ್ಟಡ ನಿರ್ಮಾಣಕ್ಕಾಗಿ 5 ಕೋಟಿ ರೂ. ಒದಗಿಸಲಾಗುವುದು.

252. ಶ್ರೀ ಸಿದ್ಧಗಂಗಾ ಮಠ, ತುಮಕೂರು ಇಲ್ಲಿಗೆ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ 5 ಕೋಟಿ ರೂ. ಒದಗಿಸಲಾಗುವುದು.

253. ಶ್ರೀ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ, ಹರಿಹರ, ಇದರ ಅಭಿವೃದ್ಧಿಗಾಗಿ 5 ಕೋಟಿ ರೂ. ಒದಗಿಸಲಾಗುವುದು.

254. ಶ್ರೀ ಜಗದ್ಗುರು ಮೂರು ಸಾವಿರ ಮಠ, ಹುಬ್ಬಳ್ಳಿ, ಯಾತ್ರಿ ನಿವಾಸ ನಿರ್ಮಾಣಕ್ಕಾಗಿ 2 ಕೋಟಿ ರೂ. ಒದಗಿಸಲಾಗುವುದು.

255. ಚಿತ್ರದುರ್ಗ ಶ್ರೀ ಮುರುಘಾ ಮಠದಲ್ಲಿ "ದಾಸೋಹ ಭವನ" ಕಟ್ಟಡ ನಿರ್ಮಾಣಕ್ಕಾಗಿ 2ಕೋಟಿ ರೂ. ಒದಗಿಸಲಾಗುವುದು.

256. ಜಗದ್ಗುರು ಮುನೀಶ್ವರ ತಿಂತಿಣಿ ಕ್ಷೇತ್ರ ಅಭಿವೃದ್ಧಿಗಾಗಿ 1 ಕೋಟಿ ರೂ. ಒದಗಿಸಲಾಗುವುದು.

257. ಕೂಡಲಸಂಗಮದ ಪಂಚಮಪೀಠದ ಅಭಿವೃದ್ಧಿ ಕಾಮಗಾರಿ–ಗಳಿಗಾಗಿ 2 ಕೋಟಿ ರೂ. ಒದಗಿಸಲಾಗುವುದು.

258. ಧಾರವಾಡದ ಶ್ರೀ ಮುರುಘಾ ಮಠದ ಅಭಿವೃದ್ಧಿ ಕಟ್ಟಡ ನಿರ್ಮಾಣ ಕಾಮಗಾರಿಗೆ 2.5 ಕೋಟಿ ರೂ.ಒದಗಿಸಲಾಗುವುದು.

259. ಕರ್ನಾಟಕ ರಾಜ್ಯ ಮಡಿವಾಳ ಸಂಘ, ಮಡಿವಾಳ ಮಾಚೀದೇವರ ಜನ್ಮಸ್ಥಳ, ಹಿಪ್ಪರಿಗೆ ಅಭಿವೃದ್ಧಿಗಾಗಿ 5 ಕೋಟಿ ರೂ. ಒದಗಿಸಲಾಗುವುದು.

260. ಸ್ವರ್ಣವಲ್ಲಿ ಮಠ, ಸಿರ್ಸಿ, ಉತ್ತರ ಕನ್ನಡ ಜಿಲ್ಲೆ ಇವರಿಗೆ 2 ಕೋಟಿ ರೂ. ಒದಗಿಸಲಾಗುವುದು.

261. ಕೊಪ್ಪ ತಾಲ್ಲೂಕಿನ ಹರಿಹರಪುರದ ಶ್ರೀ ಮಠದ ಜೀರ್ಣೋದ್ಧಾರಕ್ಕಾಗಿ 1 ಕೋಟಿ ರೂ.ಗಳನ್ನು ಒದಗಿಸಲಾಗುವುದು.

262. ವಿವಿಧ ವರ್ಗದ ಧಾರ್ಮಿಕ ಸಂಸ್ಥೆಗಳಿಗೆ ಕಟ್ಟಡಗಳು, ಅಭಿವೃದ್ಧಿ ಕಾರ್ಯಗಳು, ಜೀರ್ಣೋದ್ಧಾರ ಹಾಗೂ ಇನ್ನಿತರ ಕಾರ್ಯಕ್ರಮ-ಗಳಿಗಾಗಿ 100 ಕೋಟಿ ರೂ. ಒದಗಿಸಲಾಗುವುದು.

263. 2013-14ನೇ ಸಾಲಿನಲ್ಲಿ ಕಂದಾಯ ಇಲಾಖೆಗೆ 3440 ಕೋಟಿ ರೂ. ಒದಗಿಸಲಾಗಿದೆ.

ನ್ಯಾಯಾಲಯಗಳು

264. ನ್ಯಾಯಾಡಳಿತವನ್ನು ಬಲಪಡಿಸಲು ಅಗತ್ಯವಿರುವ ಬೆಂಬಲವನ್ನು ಒದಗಿಸಲು ಸರ್ಕಾರವು ಬದ್ಧವಾಗಿದೆ. ರಾಷ್ಟ್ರದ ದೊಡ್ಡ ರಾಜ್ಯಗಳ ಪೈಕಿ ನ್ಯಾಯಾಂಗದ ತಲಾವಾರು ವೆಚ್ಚದಲ್ಲಿ ಕರ್ನಾಟಕ ರಾಜ್ಯವು 2ನೇ ಸ್ಥಾನದಲ್ಲಿ ಇರುತ್ತದೆ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ 715 ಕೋಟಿ ರೂ. ಗಳ ಒಟ್ಟು ವೆಚ್ಚದೊಂದಿಗೆ ನ್ಯಾಯಾಂಗ ಮೂಲ ಸೌಕರ್ಯಕ್ಕಾಗಿ ಪಂಚವಾರ್ಷಿಕ ಯೋಜನೆಯನ್ನು ಅನುಷ್ಠಾನಗೊಳಿ-ಸಲಾಗುತ್ತಿದೆ. ಹೊಸದಾಗಿ 125 ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಲು ಅನುಮೋದಿಸಲಾಗಿದೆ.

265. ನ್ಯಾಯಾಂಗ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರವು ಪ್ರಸಕ್ತ ಸಾಲಿನಲ್ಲಿ 285 ಕೋಟಿ ರೂ.ಗಳನ್ನು ಒದಗಿಸಿದೆ. ಈ ಉದ್ದೇಶಕ್ಕಾಗಿ 2013-14ನೇ ಸಾಲಿನಲ್ಲಿ 300 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಹುಬ್ಬಳ್ಳಿಯಲ್ಲಿ ಹೊಸ ನ್ಯಾಯಾಲಯ ಸಂಕೀರ್ಣ ನಿರ್ಮಿಸಲಾಗುವುದು.

266. ರಾಜ್ಯದ ವಿವಿಧ ಕಾನೂನುಗಳ ಪರಿಷ್ಕರಣೆಗಾಗಿ ನ್ಯಾಯಮೂರ್ತಿ ವಿ.ಎಸ್.ಮಳಿಮಠ್ ನೇತೃತ್ವದ ಕಾನೂನು ಆಯೋಗದಿಂದ ಈವರೆವಿಗೆ 22 ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಇವುಗಳಲ್ಲಿ 3 ವರದಿಗಳ ಅನುಷ್ಠಾನಕ್ಕೆ ಸರ್ಕಾರ ಒಪ್ಪಿಗೆ ಸೂಚಿಸಿರುತ್ತದೆ. ಇನ್ನುಳಿದ 19 ವರದಿಗಳು ಪರಿಶೀಲನೆಯಲ್ಲಿರುತ್ತವೆ.

267. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವನ್ನು 2009ರಲ್ಲಿ ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿದೆ. ಹೊಸದಾಗಿ ವಕೀಲಿ ವೃತ್ತಿ

ಪ್ರಾರಂಭಿಸಿರುವ ವಕೀಲರುಗಳಿಗೆ ನೀಡಬೇಕಾಗಿರುವ ಶಿಶ್ಯವೇತನ ಬಾಕಿಯನ್ನು 2013–14ರಲ್ಲಿ ಪಾವತಿ ಮಾಡಲಾಗುವುದು. ಬೆಂಗಳೂರು ನಗರದ ಸಿವಿಲ್ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಭವನಕ್ಕೆ 1 ಕೋಟಿ ರೂ.ಗಳನ್ನು ಒದಗಿಸಲಾಗುವುದು.

268. 1999ರಲ್ಲಿ ಖಾಸಗಿ ಕಾನೂನು ಕಾಲೇಜುಗಳ ವೇತನಾನುದಾನ ಹಿಂಪಡೆದ ಆದೇಶವನ್ನು ಪುನಃಶ್ಚೇತನಗೊಳಿಸಿ 19 ಖಾಸಗಿ ಕಾನೂನು ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ. ಇತರ ಕಾನೂನು ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಅಧ್ಯಯನ ಮಾಡಲು ಒಂದು ತಜ್ಞರ ಸಮಿತಿಯನ್ನು ರಚಿಸಲಾಗುತ್ತದೆ.

269. 2013–14ನೇ ಸಾಲಿನಲ್ಲಿ ಕಾನೂನು ಇಲಾಖೆಗೆ ಆಯವ್ಯಯದಲ್ಲಿ 574 ಕೋಟಿ ರೂ. ಒದಗಿಸಲಾಗಿದೆ.

ಇ–ಆಡಳಿತ

270. ರಾಜ್ಯ ಸರ್ಕಾರವು ತನ್ನ ಎಲ್ಲಾ ಸಂಗ್ರಹಣೆಗಳನ್ನು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಅತ್ಯಂತ ಪಾರದರ್ಶಕವಾಗಿ ನಡೆಸಲು ಇ–ಸಂಗ್ರಹಣ ವೇದಿಕೆಯ ಮುಖಾಂತರ 1,61,249 ಕೋಟಿ ರೂ. ಮೌಲ್ಯದ ಸಂಗ್ರಹಣೆ ಆಗಿರುತ್ತದೆ. ಈ ಯೋಜನೆಯ ಯಶಸ್ಸನ್ನು ಮೆಚ್ಚಿ CSI Nihilent e-Governance Award-2009, National e-Governance Award 2010, Futuregov Award 2010 for Best Practices in Asia's Public Sector ಪುರಸ್ಕಾರಗಳನ್ನು ನೀಡಿವೆ.

271. 250 ಕೋಟಿ ರೂಪಾಯಿಗಳಿಗೂ ಮೀರಿದ ವೆಚ್ಚದಲ್ಲಿ 95 ಇಲಾಖೆಗಳ 2800 ಸರ್ಕಾರಿ ಕಚೇರಿಗಳಿಗೆ ಕರ್ನಾಟಕ ರಾಜ್ಯ ವಿಸ್ತೃತ ಜಾಲದ ಸಂಪರ್ಕವನ್ನು (KSWAN) ಸೃಷ್ಟಿಸಿ ಎಲ್ಲಾ ಜಿಲ್ಲಾ ತಾಲ್ಲೂಕು ಕೇಂದ್ರಗಳ ನಡುವೆ ದೃಶ್ಯ ಸೇವೆಗಳ (Video Services) ಸಂಪರ್ಕವನ್ನು ಕಲ್ಪಿಸಿದೆ.

272. ರಾಜ್ಯದ ನಿವಾಸಿಗಳಿಗೆ ವಿಶಿಷ್ಟ ಗುರುತು ನೀಡುವ ಆಧಾರ್ ಯೋಜನೆಯನ್ನು ರಾಜ್ಯವು ಅತ್ಯಂತ ಯಶಸ್ವಿಯಾಗಿ ನಡೆಸುತ್ತಿದೆ. ತುಮಕೂರು ಮತ್ತು ಮೈಸೂರಿನಲ್ಲಿ ಮೊದಲ ಹಂತದ ಯೋಜನೆ

ಜಾರಿಗೊಂಡಿದ್ದು 53.3 ಲಕ್ಷ ನಿವಾಸಿಗಳ ನೋಂದಣಿ. 50 ಲಕ್ಷ ಆಧಾರ್ ಕಾರ್ಡುಗಳನ್ನು ನೀಡಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ UIDAI ಸಂಸ್ಥೆಯಿಂದ Aadhar Excellence Award for Innovative Data and Document Management System 2010-11 ಪುರಸ್ಕಾರ ದೊರೆತಿದೆ. ಈ ಮಾಹಿತಿಯನ್ನು ಆಧರಿಸಿ ಸಾಮಾಜಿಕ ಪಿಂಚಣಿ, ನರೇಗಾ ಹಣ ಪಾವತಿಯಂತಹ ಫಲಾನುಭವಿಗಳಿಗೆ ಪ್ರಾಯೋಗಿಕವಾಗಿ ಮೈಸೂರು, ತುಮಕೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ನೇರವಾಗಿ ಫಲಾನುಭವಿಗಳ ಖಾತೆಗೆ ಜಮಾ ಮಾಡಲು ಕ್ರಮವಹಿಸಲಾಗುತ್ತಿದೆ.

273. ಬೆಂಗಳೂರು ಮಹಾನಗರದಲ್ಲಿ **ಬೆಂಗಳೂರು-ಒನ್** ಕೇಂದ್ರಗಳ ಸಂಖ್ಯೆಯನ್ನು ನಮ್ಮ ಸರ್ಕಾರದ ಅವಧಿಯಲ್ಲಿ 87 ಕೇಂದ್ರಗಳಿಗೆ ಹೆಚ್ಚಿಸಿದೆ. ನಾಗರೀಕರಿಗೆ 54 ಸೇವೆಗಳ ಲಭ್ಯವಾಗಿದ್ದು 5.24 ಕೋಟಿಗಳಷ್ಟು ವಹಿವಾಟುಗಳು (Transaction) **4430** ಕೋಟಿ ರೂಪಾಯಿಗಳ ವ್ಯವಹಾರ ನಿರ್ವಹಿಸಲಾಗಿದೆ. ಶಿವಮೊಗ್ಗ ಹಾಗೂ ತುಮಕೂರು ಸೇರಿ ರಾಜ್ಯದ 7 ಮಹಾನಗರಗಳಲ್ಲಿ 38 ಕರ್ನಾಟಕ-ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇಲ್ಲಿ 26 ಸೇವೆಗಳು ನೀಡಿ 74.27 ಲಕ್ಷಗಳಷ್ಟು ವಹಿವಾಟುಗಳು (Transaction) ಹಾಗೂ 567 ಕೋಟಿ ರೂಪಾಯಿಗಳ ವ್ಯವಹಾರ ನಡೆದಿದೆ.

274. ಆಡಳಿತ ಮತ್ತು ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ತಂತ್ರಜ್ಞಾನದ ಬಳಕೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ಸರ್ಕಾರವು, ಸಮಗ್ರ ಹಣಕಾಸು ನಿರ್ವಹಣ ವ್ಯವಸ್ಥೆಯ ಮೂರು ಪ್ರಮುಖ ಉಪಕ್ರಮಗಳಾದ ಸಮಗ್ರ ಆರ್ಥಿಕ ನಿರ್ವಹಣ ವ್ಯವಸ್ಥೆ ಖಜಾನೆ-II, ಹೆಚ್ಚಿನ ಕಾರ್ಯ ವ್ಯವಸ್ಥೆ ಹೊಂದಿದ ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ ಮತ್ತು ನಾಗರೀಕರ ಅನುಕೂಲಕ್ಕೆ ಒತ್ತು ನೀಡುವ ಸ್ವತ್ತು ನೋಂದಣಿ ಪದ್ಧತಿಯನ್ನು ಸಂಪೂರ್ಣವಾಗಿ ಮುಂಬರುವ ವರ್ಷಗಳಲ್ಲಿ ಅನುಷ್ಠಾನಗೊ-ಳಿಸಲಾಗುವುದು.

275. "ಪ್ರತಿ ಹಳ್ಳಿಗೊಂದು ಸೈಬರ್ ಕೆಫೆ"- ವಿಶ್ವವು ನಿರಂತರವಾಗಿ ಜ್ಞಾನಾರ್ಜನೆಯೆಡೆಗೆ ಸಾಗುತ್ತಿರುವ ಹಿನ್ನಲೆಯಲ್ಲಿ, ನಮ್ಮ ದೇಶದ ಮಕ್ಕಳು ಹಾಗೂ ಯುವಜನತೆ ವಿಶ್ವದ ಜ್ಞಾನಾರ್ಜನೆಯತ್ತ ಸಂಪರ್ಕ ಹೊಂದುವುದು

ಅವಶ್ಯಕ. ಈ ದಿಕ್ಕಿನಲ್ಲಿ ಜ್ಞಾನಾರ್ಜನೆಯ ಹಂಚಿಕೆಗೆ ಒತ್ತು ನೀಡಲು ರಾಜ್ಯ ಎಲ್ಲಾ ಹಳ್ಳಿಗಳಲ್ಲೂ ಈ ವ್ಯವಸ್ಥೆಯನ್ನು ಹಂತಹಂತವಾಗಿ ಅಳವಡಿಸಲಾಗು–ವುದು. ಮೊದಲನೇ ಹಂತದಲ್ಲಿ, ರಾಜ್ಯದ ಎಲ್ಲಾ 5627 ಪಂಚಾಯತ್ ಕೇಂದ್ರ ಸ್ಥಾನಗಳಲ್ಲಿ ಸೈಬರ್ ಕೆಫೆ ಸ್ಥಾಪಿಸಲು, ಈ ಸಾಲಿನಲ್ಲಿ 50 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗುವುದು.

276. ವಿವಿಧ ಸರ್ಕಾರಿ ಇಲಾಖೆಗಳ ಹಿನ್ನಲೆ ಕಾರ್ಯ ಪ್ರಕ್ರಿಯೆಗಳನ್ನು ಸ್ವಯಂ ಚಲನಗೊಳಿಸಲು ಇ–ಜಿಲ್ಲಾ ಪ್ರಾಜೆಕ್ಟ್‌ನ್ನ ಪ್ರಾರಂಭಗೊಳಿಸಲಾಗುವುದು. ನಿವಾಸಿಗಳಿಗೆ ಸಂಚಾರಿ ವೇದಿಕೆಯ ಮೂಲಕ ಸಾರ್ವಜನಿಕ ಸೇವೆಯನ್ನು ಒದಗಿಸಲು ಸಂಚಾರಿ ಆಡಳಿತ ವೇದಿಕೆಯನ್ನು ಸ್ಥಾಪಿಸಲಾಗುವುದು. ಇಲಾಖೆಯ ವಿವಿಧ ಸರ್ಕಾರಿ ಸೇವೆಗಳಿಗೆ ಅನುಕೂಲಗೊಳಿಸಲು ನಿವಾಸಿಗಳಿಗೆ ಮತ್ತು ವ್ಯಾಪಾರಿ ಸಮುದಾಯಕ್ಕಾಗಿ ಒಂದು ಏಕಗವಾಕ್ಷಿ ಪದ್ಧತಿಯನ್ನು ಕಲ್ಪಿಸಲು ರಾಜ್ಯ ಪೋರ್ಟ್‌ಲ್ ಅನ್ನು ಅನುಷ್ಠಾನಗೊಳಿಸುವುದು.

277. 2013–14ನೇ ಹಣಕಾಸು ವರ್ಷದ ಅವಧಿಯಲ್ಲಿ ಇ–ಆಡಳಿತದ ಉಪಕ್ರಮಗಳಿಗಾಗಿ 131 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಆಡಳಿತ ಸುಧಾರಣೆಗಳು

278. ಕರ್ನಾಟಕ ರಾಜ್ಯದ್ಯಂತ ನಾಗರಿಕರಿಗೆ 'ಸಕಾಲ'ದಡಿ ಇದುವರೆಗೆ 30 ಇಲಾಖೆ/ಸಂಸ್ಥೆಗಳ 265 ಸೇವೆಗಳನ್ನು ನಿಗದಿತ ಕಾಲಮಿತಿಯಲ್ಲಿ ಸಾರ್ವಜನಿಕರಿಗೆ ಒದಗಿಸಲಾಗಿತ್ತಿದೆ. "ಸಕಾಲ" ಅನುಷ್ಠಾನಗೊಂಡ ದಿನದಿಂದ ಜನವರಿ 2013 ರವರೆಗೆ ಸುಮಾರು 1.63 ಕೋಟಿ ಅರ್ಜಿಗಳನ್ನು ಸ್ವೀಕರಿಸಿದ್ದು, ಶೇ. 98 ರಷ್ಟು ಅರ್ಜಿಗಳನ್ನು ನಿಗದಿತ ಕಾಲಮಿತಿಯಲ್ಲಿ ವಿಲೇವಾರಿ ಮಾಡಲಾಗಿದೆ. ದೇಶದಲ್ಲೇ ಕರ್ನಾಟಕವು ಅತೀ ಹೆಚ್ಚು (265) ಸರಕಾರಿ ಸೇವೆಗಳನ್ನು ನಿಗದಿತ ಸಮಯದಲ್ಲಿ ಸಾರ್ವಜನಿಕರಿಗೆ ಒದಗಿಸುವ ನಿಟ್ಟಿನಲ್ಲಿ ಅಗ್ರ ಸ್ಥಾನದಲ್ಲಿ ಗುರುತಿಸಲ್ಪಟ್ಟಿದೆ. ಕೇಂದ್ರ ಸರ್ಕಾರವು "ಸಕಾಲ"ಧರಿಸಿ ಸಾರ್ವಜನಿಕ ಕುಂದುಕೊರತೆಗೆ ಸಂಬಂಧಿಸಿದ ಕಾಯ್ದೆಯಲ್ಲಿ ಬದಲಾವಣೆಗಳನ್ನು ತರಲು ಉದ್ದೇಶಿಸಿದೆ. ವಿಶ್ವಬ್ಯಾಂಕ್, ಬಾಂಗ್ಲಾದೇಶ ಪ್ರತಿನಿಧಿಗಳು, ಚಿಕಾಗೋ, ಕಾಲಿಫೋರ್ನಿಯಾ

ವಿಶ್ವವಿದ್ಯಾಲಯಗಳು ನಮ್ಮ "ಸಕಾಲ' ಯೋಜನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿವೆ.

ನೌಕರರ ಕಲ್ಯಾಣ

279. ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಸಂಸ್ಥೆಗಳಲ್ಲಿನ ಸುಮಾರು 6.45 ಲಕ್ಷ ನೌಕರರಿಗಾಗಿ ಏಪ್ರಲ್-1, 2012ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆಯನ್ನು ಜಾರಿಗೆ ತರಲಾಗಿದೆ. ಮನೆ ಬಾಡಿಗೆ ಭತ್ಯೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ 2001ರ ಜನಗಣತಿಯ ಆಧಾರದ ಮೇಲೆ ನಗರ ಪ್ರದೇಶಗಳ ಮರು ವರ್ಗೀಕರಣ ಆದೇಶಗಳನ್ನು ಹೊರಡಿಸಲಾಗಿದೆ. ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರ ಮನೆ ಬಾಡಿಗೆ ಭತ್ಯೆಯನ್ನು ಅವರ ಮೂಲವೇತನದ ಶೇ. 30ಕ್ಕೆ ಹೆಚ್ಚಿಸಲಾಗುವುದು.

ತೆರಿಗೆ ಪ್ರಸ್ತಾವನೆಗಳು

280. **ಸರಕು ಮತ್ತು ಸೇವಾ ತೆರಿಗೆ (GST):** ಸರಕು ಮತ್ತು ಸೇವಾ ತೆರಿಗೆ ಜಾರಿಗೆ ತರುವುದನ್ನು ರಾಜ್ಯ ಸರ್ಕಾರವು ಬೆಂಬಲಿಸುತ್ತದೆ. ಇದನ್ನು ಜಾರಿಗೆ ತರುವುದರಿಂದ ಸರಕುಗಳು ಮತ್ತು ಅದರ ಸೇವೆಗಳ ಪ್ರಸ್ತುತ ಕ್ಲಿಷ್ಟ ತೆರಿಗೆ ವ್ಯವಸ್ಥೆಯನ್ನು ಸುಧಾರಿಸಲು ಹಾಗೂ ತೆರಿಗೆ ದರದಲ್ಲಿ ಉಂಟಾಗುವ ಬದಲಾವಣೆಯ ಪರಿಣಾಮವನ್ನು ತೆಗೆದುಹಾಕಿ ಕಡಿಮೆ ಬೆಲೆ ಮತ್ತು ಉತ್ತಮ ಅನುಸರಣೆ ಕ್ರಮವನ್ನು ಪಾಲಿಸಲು ಸಾಧ್ಯವಾಗುತ್ತದೆ. ಆದರೆ, ಸರಕು ಮತ್ತು ಸೇವಾ ತೆರಿಗೆ ಜಾರಿಯ ಪರಿಣಾಮವಾಗಿ ಸಮಪನ್ಮೂಲಗಳ ಮೇಲೆ ಉದ್ಭವಿಸುವ ಕೆಲವು ಅನಿಶ್ಚಿತತೆಗಳ ಮೇಲೆ ನಮಗೆ ಆತಂಕವಿದೆ. ಆದುದರಿಂದ, ರಾಜ್ಯಕ್ಕೆ ಒದಗಿಸಲಾದ ಪರಿಹಾರ ಪ್ಯಾಕೇಜ್ ಹಾಗೂ ನಿಗದಿಗೊಳಿಸಲಾದ ಅಂತಿಮ ರಾಜಸ್ವ ಸ್ಥಿರ ದರವು ನಮ್ಮಹೆಚ್ಚಿನ ತೆರಿಗೆ ಪ್ರಯತ್ನಕ್ಕೆ ಹೊಂದಾಣಿಕೆಯಾಗುವಂತೆ ಖಚಿತಪಡಿಸಿಕೊಳ್ಳಲು ಭಾರತ ಸರ್ಕಾರಕ್ಕೆ ನಾನು ವಿನಂತಿಸುತ್ತೇನೆ. ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ನಿಗದಿಪಡಿಸಿದ ಪರಿಧಿಯೊಳಗೆ ರಾಜ್ಯಗಳಿಗೆ ಕೆಲವು ವಿತ್ತೀಯ ಸ್ವಾಯತ್ತತೆಯ ಅಧಿಕಾರವನ್ನು ಹಾಗೂ ಸರಕು ಮತ್ತು ಸೇವಾ

ತೆರಿಗೆಯ ದರಗಳನ್ನು ಶಿಫಾರಸ್ಸು ಮಾಡಲು ಸರಕು ಮತ್ತು ಸೇವಾ ತೆರಿಗೆ ಪರಿಷತ್ತಿಗೆ ಅಧಿಕಾರವನ್ನು ನೀಡಬೇಕು.

ವಾಣಿಜ್ಯ ತೆರಿಗೆಗಳು

281. 2012–13ನೇ ಆಯವ್ಯಯದ ಅಂದಾಜಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಗೆ 31,100 ಕೋಟಿ ರೂ.ಗಳ ತೆರಿಗೆ ಸಂಗ್ರಹಣೆ ಗುರಿಯನ್ನು ನಿಗದಿಪಡಿಸಲಾಗಿತ್ತು. ತದನಂತರ, ಅದನ್ನು 32,000 ಕೋಟಿ ರೂ.ಗಳಿಗೆ ಪರಿಷ್ಕರಿಸಲಾಗಿದ್ದು, ಹಿಂದಿನ ಸಾಲುಗಳಂತೆ ಪ್ರಸಕ್ತ ವರ್ಷದಲ್ಲೂ ಕೂಡ ವಾಣಿಜ್ಯ ತೆರಿಗೆ ಇಲಾಖೆ ಅದನ್ನು ಮೀರುವ ಸಾಧ್ಯತೆ ಇರುತ್ತದೆ. ಈ ಬರಪೀಡಿತ ವರ್ಷದಲ್ಲೂ ಕೂಡ ಹೆಚ್ಚಿನ ತೆರಿಗೆ ಸಂಗ್ರಹಣೆಯಾಗುವಲ್ಲಿ ತಮ್ಮ ತುಂಬು ಹೃದಯದ ಸಹಕಾರವನ್ನು ನೀಡಿದ ಕರ್ನಾಟಕದ ತೆರಿಗೆದಾರರಿಗೆ ನನ್ನ ಧನ್ಯವಾದಗಳು. ಇತ್ತೀಚಿನ ವರ್ಷಗಳಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಹಲವಾರು ಇ–ಆಡಳಿತ ಕ್ರಮಗಳನ್ನು ಸಫಲವಾಗಿ ಜಾರಿಗೆ ತಂದಿದ್ದು, ಪ್ರಸ್ತುತ ಸಾಲಿನಲ್ಲಿ ತೆರಿಗೆದಾರರಿಗೆ ಇನ್ನಷ್ಟು ಹೊಸ ಸೇವೆಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಒದಗಿಸುವ ಮತ್ತು ಈಗಾಗಲೇ ನೀಡುತ್ತಿರುವ ಸೇವೆಗಳ ಪೂರೈಕೆಯನ್ನು ಮತ್ತಷ್ಟು ಸರಳೀಕರಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಿರುತ್ತದೆ. ಎಲ್ಲಾ ವಾಣಿಜ್ಯ ತೆರಿಗೆ ಕಾಯ್ದೆಗಳಡಿಯ ತೆರಿಗೆ ಮೊತ್ತಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಪಾವತಿ ಮಾಡುವ ಮತ್ತು ನಿಗದಿತ ವಿವರ ಪಟ್ಟಿಗಳನ್ನು ಕೂಡ ವಿದ್ಯುನ್ಮಾನ ವಿಧಾನದಲ್ಲಿ ಸಲ್ಲಿಸುವ ವ್ಯವಸ್ಥೆ ತರಲಾಗುತ್ತಿದೆ. ಇದಲ್ಲದೆ, ಇಲಾಖೆಯ ಇತರೆ ಎಲ್ಲಾ ಪ್ರಮುಖ ಕಾರ್ಯಗಳನ್ನು ವಿದ್ಯುನ್ಮಾನ ಮಾರ್ಪಡಿಸುವ ಮೂಲಕ ಆಂತರಿಕ ದಕ್ಷತೆಯಲ್ಲಿ ಸುಧಾರಣೆಯನ್ನು ತರಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

282. ಯಾವುದೇ ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳನ್ನು ತರದೆ 2013–14ನೇ ಸಾಲಿಗೆ ವಾಣಿಜ್ಯ ತೆರಿಗೆ ಇಲಾಖೆಗೆ 37,000 ಕೋಟಿ ರೂ.ಗಳ ತೆರಿಗೆ ಸಂಗ್ರಹಣೆ ಗುರಿಯನ್ನು ನಿಗದಿಪಡಿಸಲಾಗಿದ್ದು, ದಕ್ಷ ಮತ್ತು ಪರಿಣಾಮಕಾರಿ ಆಡಳಿತದ ಮೂಲಕ ಇದನ್ನು ಸಾಧಿಸಲಾಗುತ್ತದೆ ಎಂದು ಆಶಿಸಲಾಗಿದೆ

ಮೌಲ್ಯವರ್ಧಿತ ತೆರಿಗೆ

283. ಪ್ರಸಕ್ತ ಸಾಲಿನಲ್ಲಿ ರಾಜ್ಯ ಎದುರಿಸಿದ ಗಂಭೀರ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರೈತರು ಸಹಕಾರಿ ಸಂಸ್ಥೆಗಳಿಂದ ತೆಗೆದುಕೊಂಡ ಬೆಳೆಸಾಲದ ಮನ್ನಾವನ್ನು ಸರ್ಕಾರ ಘೋಷಿಸಬೇಕಾಯಿತು. ಇದಕ್ಕೆ ಅಗತ್ಯವಾದ ಅಧಿಕ ಸಂಪನ್ಮೂಲ ಕ್ರೋಢೀಕರಿಸುವ ದೃಷ್ಟಿಯಿಂದ 2012ರ ಆಗಸ್ಟ್‌ನಿಂದ ಒಂದು ವರ್ಷದವರೆಗೆ ಮೌಲ್ಯವರ್ಧಿತ ತೆರಿಗೆ ದರಗಳನ್ನು ಶೇ.5 ರಿಂದ ಶೇ.5.5 ಕ್ಕೆ ಮತ್ತು ಶೇ.14 ರಿಂದ ಶೇ.14.5 ಕ್ಕೆ ಏರಿಸಲಾಗಿರುತ್ತದೆ. 2013ರ ಅಗಸ್ಟ್‌ನಿಂದ ಈ ದರಗಳನ್ನು ಹಿಂದಿನ ಮಟ್ಟಕ್ಕೆ ಇಳಿಸುವ ಅಧಿಸೂಚನೆಯನ್ನು ಸರ್ಕಾರ ಈಗಾಗಲೇ ಹೊರಡಿಸಿರುತ್ತದೆ.

284. ವಾಡಿಕೆಯಂತೆ ಪ್ರಸ್ತುತ ಸಾಲಿನ ಆಯವ್ಯಯ ಮಂಡನೆಯ ಪೂರ್ವದಲ್ಲಿ ತೆರಿಗೆ ಅನುಸರಣೆಯಲ್ಲಿ ತೆರಿಗೆದಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಕೇಳಲು ಮತ್ತು ಅವುಗಳ ಪರಿಹಾರಕ್ಕೆ ಸೂಕ್ತ ಸಲಹೆಗಳನ್ನು ಪಡೆಯುವ ಸಲುವಾಗಿ ವಾಣಿಜ್ಯೋದ್ಯಮಗಳೊಂದಿಗೆ ನಾನು ಚರ್ಚೆ ನಡೆಸಿರುತ್ತೇನೆ. ತೆರಿಗೆ ದರಗಳಲ್ಲಿ ಕಡಿತ ಹಾಗೂ ಕಾಯ್ದೆ ಮತ್ತು ನಿಯಮಗಳನ್ನು ಸರಳವಾಗಿಸುವಂತೆ ಮಾರ್ಪಾಡು ಮಾಡಲು ಅವರು ನೀಡಿದ ಕೋರಿಕೆ ಮತ್ತು ಸಲಹೆಗಳನ್ನು ನಾನು ಗಂಭೀರವಾಗಿ ಪರಿಗಣಿಸಿರುತ್ತೇನೆ. ಹಿಂದಿನ ಸಾಲುಗಳಂತೆ ಜನಸಾಮಾನ್ಯರಿಗೆ ಮತ್ತು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಹಾಗೂ ವ್ಯಾಪಾರ ಪಲ್ಲಟವನ್ನು ತಡೆಯಲು ಮಾಡಿರುವ ಕೋರಿಕೆಗಳನ್ನು ಆದಷ್ಟು ಈಡೇರಿಸಲು ಪ್ರಯತ್ನಿಸಿರುತ್ತೇನೆ

285. ಪರಿಹಾರಗಳು: ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ನಾನು ಮುಂದಿನ ಪರಿಹಾರಗಳನ್ನು ನೀಡಲು ಪ್ರಸ್ತಾವಿಸುತ್ತೇನೆ.

i. ಭತ್ತ, ಅಕ್ಕಿ, ಗೋಧಿ, ಬೇಳೆ ಕಾಳುಗಳು ಹಾಗೂ ಅಕ್ಕಿ ಮತ್ತು ಗೋಧಿ ಪದಾರ್ಥಗಳ ಮೇಲಿನ ತೆರಿಗೆ ವಿನಾಯಿತಿಯನ್ನು 2013ರ ಏಪ್ರಿಲ್‌ನಿಂದ ಮತ್ತೊಂದು ವರ್ಷದವರಿಗೆ ಮುಂದುವರೆಸಲಾಗುವುದು.

ii. ಅಡಿಕೆ ಸುಲಿಯುವ ಯಂತ್ರದ ಮೇಲಿನ ತೆರಿಗೆಯನ್ನು ಶೇ. 14.5 ರಿಂದ ಶೇ. 5.5ಕ್ಕೆ ಇಳಿಸಲಾಗುವುದು.

iii. ಕೋಕೋ ಸಿಪ್ಪೆ ಮೇಲಿನ ತೆರಿಗೆಯನ್ನು ಶೇ.14.5ರಿಂದ ಶೇ.5.5ಕ್ಕೆ ಇಳಿಸಲಾಗುವುದು.

iv. ರಿಫ್ರ್ಯಾಕ್ಟರಿ ಮೊನೊಲಿಥಿಕ್ ಪೌಡರ್ ಮೇಲಿನ ತೆರಿಗೆಯನ್ನು ಶೇ. 14.5ರಿಂದ ಶೇ.5.5ಕ್ಕೆ ಇಳಿಸಲಾಗುವುದು.

v. ಸೋಯಾ ಬೀನ್ ಖಾದ್ಯ ತೈಲ ತಯಾರಿಕಾ ಘಟಕಗಳ ಮೇಲಿರುವ ರಾಜ್ಯದಲ್ಲಿನ ಪ್ರಸ್ತುತ ತೆರಿಗೆ ವ್ಯವಸ್ಥೆಯಿಂದಾಗಿ ನೆರೆರಾಜ್ಯಗಳಿಗೆ ರಾಜ್ಯದ ರೈತರು ತಮ್ಮ ಸೋಯಾಬೀನ್ ಬೆಳೆಯನ್ನು ಸಾಗಿಸಿ ಮಾರಾಟ ಮಾಡಬೇಕಾದ ತೊಂದರೆಯನ್ನು ಪರಿಹರಿಸಲು ತೆರಿಗೆ ವ್ಯವಸ್ಥೆಯನ್ನು ಸೂಕ್ತವಾಗಿ ಮಾರ್ಪಾಡು ಮಾಡಲಾಗುವುದು.

vi. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಮಕ್ಕಳು, ಗರ್ಭಿಣಿಯರು/ ಬಾಣಂತಿಯರು ಮತ್ತು ಕಿಶೋರಿಯರಿಗೆ ಸರಬರಾಜು ಮಾಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನಡೆಸುವ ಅಂಗನವಾಡಿ ಕೇಂದ್ರಗಳು ಖರೀದಿಸುವ ಪೂರಕ ಪೌಷ್ಠಿಕ ಆಹಾರದ ಮೇಲಿನ ತೆರಿಗೆಯನ್ನು ಶೇ.14.5ರಿಂದ ಶೇ. 5.5ಕ್ಕೆ ಇಳಿಸಲಾಗುವುದು.

vii. ಗೃಹ ಬಳಕೆಯ ಡಬ್ಬಗಳ ಮೇಲಿನ ತೆರಿಗೆಯನ್ನು ಶೇ. 14.5ರಿಂದ ಶೇ.5.5ಕ್ಕೆ ಇಳಸಲಾಗುವುದು.

viii. ಎರಡು ನೂರು ರೂಪಾಯಿಗಳ ಬೆಲೆವರೆಗಿನ ಪಾದರಕ್ಷೆಗಳ ಮೇಲೆ ತೆರಿಗೆ ವಿನಾಯಿತಿ ನೀಡಲಾಗುವುದು. ಪ್ಲಾಸ್ಟಿಕ್ ತ್ಯಾಜ್ಯದಿಂದ ತಯಾರಿಸಿದ ಕಿಟಕಿ ಮತ್ತು ಬಾಗಿಲುಗಳು ಹಾಗೂ ಚೌಕಟ್ಟುಗಳ ಮೇಲಿನ ತೆರಿಗೆಯನ್ನು ಶೇ.14.5 ರಿಂದ ಶೇ.5.5 ಕ್ಕೆ ಇಳಿಸಲಾಗುವುದು.

ix. ಏರ್ ಕಂಪ್ರೆಸ್ಸರುಗಳು ಮತ್ತು ಇಂಜಿನ್‌ಗಳನ್ನು ಸೇರಿದಂತೆ ಅವುಗಳ ಬಿಡಿಭಾಗಗಳನ್ನು ಶೇ.5.5ರ ತೆರಿಗೆ ಇರುವ ಘೋಷಿತ ಬಂಡವಾಳ ಸರಕುಗಳ ಪಟ್ಟಿಗೆ ಸೇರಿಸಲಾಗುವುದು.

x. ಪ್ರಸ್ತುತ ವ್ಯಾಪಾರಿಗಳು ತಾವು ಘೋಷಿಸಿದ ತೆರಿಗೆ ಮೊತ್ತಕ್ಕಿಂತ ಹೆಚ್ಚಿನ ತೆರಿಗೆ ವಿಧಿಸಿದ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಲು ಮತ್ತು ಅಂತಹ ಮೊತ್ತಗಳ ವಸೂಲಿ ಕ್ರಮಕ್ಕೆ ತಡೆ ಪಡೆಯಲು ಪ್ರಸ್ತುತ ವಿವಾದಿತ ಮೊತ್ತದ ಶೇ.50 ರಷ್ಟನ್ನು ಪಾವತಿಸಬೇಕಾಗಿದ್ದು, ಅದನ್ನು ಶೇ.30 ರಷ್ಟಕ್ಕೆ ಇಳಿಸಲಾಗುವುದು.

xi. ಪ್ರಸ್ತುತ ವ್ಯಾಪಾರಿಗಳು ಕರನಿರ್ಧರಣೆ ಮತ್ತು ಮರು ಕರನಿರ್ಧರಣೆ ಆದೇಶಗಳಂತೆ ತಗಾದೆ ಮಾಡಿದ ಹೆಚ್ಚಿನ ತೆರಿಗೆ ಮೊತ್ತಗಳನ್ನು ಪಾವತಿಸಲು ಹತ್ತು ದಿನಗಳ ಅವಕಾಶವಿದ್ದು, ಅದನ್ನು ಮೂವತ್ತು ದಿನಗಳಿಗೆ ಏರಿಸಲಾಗುವುದು.

ಸುಧಾರಣಾ ಕ್ರಮ

286. ತಪ್ಪಾಗಿ ಮಾಡಲಾದ ಕರನಿರ್ಧರಣೆ ಮತ್ತು ಮರುಕರನಿರ್ಧ-ರಣೆ ಪ್ರಕರಭಣಗಳಲ್ಲಿ ಮತ್ತೊಮ್ಮೆ ಮರು ಕರನಿರ್ಧರಣೆ ಕೈಗೊಳ್ಳಲು ಅನುವಾಗುವಂತೆ ಸಂಬಂಧಿತ ಉಪಬಂಧಕ್ಕೆ ತಿದ್ದುಪಡಿ ಮಾಡಲು ನಾನು ಪ್ರಸ್ತಾವಿಸುತ್ತೇನೆ

ಪ್ರವೇಶ ತೆರಿಗೆ : ಪರಿಹಾರ

287. ಪ್ರವೇಶತೆರಿಗೆ ಕಾಯ್ದೆಯಡಿಯಲ್ಲಿ ಪ್ರಸ್ತುತ ನೊಂದಣಿಗೆ ಇರುವ ಕನಿಷ್ಠ ವಾರ್ಷಿಕ ವಹಿವಾಟು ಎರಡು ಲಕ್ಷ ರೂ. ಗಳ ಮಿತಿಯನ್ನು ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯ ಮಿತಿಗೆ ಸಮವಾಗಿ ಐದು ಲಕ್ಷ ರೂಗಳಿಗೆ ಏರಿಸಲು ನಾನು ಪ್ರಸ್ತಾವಿಸುತ್ತೇನೆ.

ವೃತ್ತಿ ತೆರಿಗೆ :ಸುಧಾರಣಾ ಕ್ರಮ

288. ಅತ್ಯುತ್ತಮ ವಿವೇಚನೆಯಂತೆ ಮಾಡಲಾದ ತೆರಿಗೆ ನಿರ್ಧರಣೆ ವಿರುದ್ಧ ಕೂಡ ಮೇಲ್ಮನವಿ ಮಾಡುವ ಅವಕಾಶವನ್ನು ಕಲ್ಪಿಸಲು ನಾನು ಪ್ರಸ್ತಾವಿಸುತ್ತೇನೆ.

ಅಬಕಾರಿ

289. 2012–13ನೇ ಸಾಲಿಗೆ ಅಬಕಾರಿ ಇಲಾಖೆಗೆ 10,775 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ನಿಗದಿಪಡಿಸಲಾಗಿದ್ದು, ತದನಂತರ ಇಲಾಖೆಗೆ 11,200 ಕೋಟಿ ರೂ.ಗಳ ಹೆಚ್ಚುವರಿ ಗುರಿಯನ್ನು ನೀಡಲಾಗಿತ್ತು. ಪ್ರಸ್ತುತ 2012–13ನೇ ಸಾಲಿಗೆ ನೀಡಲಾಗಿರುವ ಗುರಿಯನ್ನು ಪೂರ್ಣವಾಗಿ ಸಾಧಿಸುವ ಬಗ್ಗೆ ಇಲಾಖೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಅದು ನಿಗಧಿತ ಗುರಿಯನ್ನು ಮುಟ್ಟುವುದರಲ್ಲಿ ನಮಗೆ ನಂಬಿಕೆ ಇರುತ್ತದೆ. ಪರಿಣಾಮಕಾರಿಯಾದ ಜಾರಿ ಮತ್ತು ತನಿಖಾ ಕ್ರಮಗಳ ಮೂಲಕ 2013–14ನೇ ಸಾಲಿನಲ್ಲಿ 12,400 ಕೋಟಿ ರೂ.ಗಳ ರಾಜಸ್ವ ಸಂಗ್ರಹಣೆ ಗುರಿಯನ್ನು ಇಲಾಖೆ ಹೊಂದಿದೆ.

290. 2013–14ನೇ ಸಾಲಿಗೆ ಭಾರತೀಯ ತಯಾರಿಕಾ ಮದ್ಯಗಳಿಗೆ ಸಂಬಂಧಿಸಿದಂತೆ 17 ಸ್ಲಾಬ್‌ಗಳ ಘೋಷಿತ ಬೆಲೆಯನ್ನು ತಲಾ 40 ರೂ.ಗಳಂತೆ ಹೆಚ್ಚಿಸಿ ಮರು ವಿನ್ಯಾಸಗೊಳಿಸಲು ಉದ್ದೇಶಿಸಲಾಗಿದೆ. ವಿವರಗಳು ಅನುಬಂಧ–2 ರಲ್ಲಿ ಇರುತ್ತವೆ.

291. ಚಿಲ್ಲರೆ ಮದ್ಯದ ಸನ್ನದು (ಸಿಎಲ್–2) ಮತ್ತು ಬಾರ್ ಅಂಡ್ ರೆಸ್ಟೋರೆಂಟ್ (ಸಿಎಲ್–9) ಸನ್ನದುಗಳನ್ನು ಕಾರಣಾಂತರಗಳಿಂದ ಒಬ್ಬರಿಂದ ಮತ್ತೊಬ್ಬರಿಗೆ ವರ್ಗಾವಣೆಯಾಗುವ ಪ್ರಸ್ತಾವನೆಗಳು ಇಲಾಖೆಗೆ ಬರುತ್ತಿದ್ದು, ಇಂತಹ ವರ್ಗಾವಣೆ ಸಮಯದಲ್ಲಿ ವಿಧಿಸುವ ಸನ್ನದು ಶುಲ್ಕವನ್ನು ದುಪ್ಪಟ್ಟುಗೊಳಿಸಲು ಉದ್ದೇಶಿಸಲಾಗಿದೆ.

292. ಡಿಸ್ಟಿಲರಿ ಮತ್ತು ಬ್ರಿವೆರಿಗಳು ಅಬಕಾರಿ ಸುಂಕ ಮತ್ತಿತರೆ ಮೊತ್ತಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಪಾವತಿ ಮಾಡುವ ಸೌಲಭ್ಯ ತರಲು ಉದ್ದೇಶಿಸಲಾಗಿದೆ.

293. ಆನ್‌ಲೈನ್ ಮೂಲಕ ಮದ್ಯಸಾರವನ್ನು ವಿತರಣೆ ಮಾಡುವ ಬೇಡಿಕೆ ಬಹುಕಾಲದಿಂದಿದ್ದು, ಡಿಸ್ಟಿಲರಿಗಳಿಗೆ ಅಗತ್ಯವಾದ ಮದ್ಯಸಾರವನ್ನು ಅಗತ್ಯತೆಗನುಸಾರವಾಗಿ, ನಿಯಮಾನುಸಾರವಾಗಿ ಹಂಚಿಕೆ ಮಾಡಲು ಆನ್‌ಲೈನ್ (online) ಮೂಲಕ ನಿರಾಕ್ಷೇಪಣಾ ಪತ್ರ ನೀಡುವ ಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ. ಇದಲ್ಲದೆ, ಇಲಾಖಾ ಅಧಿಕಾರಿಗಳಿಗೆ

ಕಾರ್ಯಾಚರಣೆಗೆ ಅಗತ್ಯವಾದ ಶಸ್ತ್ರಾಸ್ತ್ರಗಳನ್ನು ಮತ್ತು ಅಗತ್ಯವಾದ ವಾಹನಗಳನ್ನು ಒದಗಿಸುವ ಹಾಗೂ ಇಲಾಖೆಯನ್ನು ಗಣಕೀಕರಣಗೊಳಿಸುವ ಮೂಲಕ ಇಲಾಖೆಯಲ್ಲಿ ಆಧುನಿಕ ವಿನೂತನ ಕ್ರಮಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ.

294. ರಾಜ್ಯದಲ್ಲಿ ಮದ್ಯ ಮಾರಾಟ ವಿತರಣೆಗೋಸ್ಕರ ಕರ್ನಾಟಕ ರಾಜ್ಯ ಪಾನೀಯ ನಿಗಮವನ್ನು ಸ್ಥಾಪಿಸಲಾಯಿತು. ಸರ್ಕಾರದಿಂದ ನಿಗಮಕ್ಕೆ ಪರವಾನಗಿಯನ್ನು ನೀಡಲಾಗುವುದರಿಂದ, ಸರ್ಕಾರವು ನಿಗಮದಿಂದ ಪ್ರಿವಿಲೇಜ್ ಶುಲ್ಕವನ್ನು ವಸೂಲು ಮಾಡುತ್ತದೆ. ಪ್ರಿವಿಲೇಜ್ ಶುಲ್ಕವನ್ನು ವಸೂಲು ಮಾಡುವ ವಿಧಾನದ ಬಗ್ಗೆ ತಪ್ಪು ವ್ಯಾಖ್ಯಾನಗಳು ಆಗುತ್ತಿರುವುದರಿಂದ ವಸೂಲು ಮಾಡಲಾದ ಪ್ರಿವಿಲೇಜ್ ಶುಲ್ಕವು ಅಂದಿನಿಂದಲೂ ರಾಜ್ಯ ಸರ್ಕಾರದ ಆದಾಯದ ಭಾಗವಾಗಿರುವಂತೆಯೇ ಪರಿಗಣಿಸಲು ಸಂಬಂಧಿಸಿದ ನಿಯಮಗಳಿಗೆ ಪೂರ್ವಾನ್ವಯದಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ನೋಂದಣಿ ಮತ್ತು ಮುದ್ರಾಂಕ

295. 2012–13ನೇ ಸಾಲಿಗೆ 5200 ಕೋಟಿ ರೂ.ಗಳ ಗುರಿಯನ್ನು ನಿಗದಿಪಡಿಸಲಾಗಿತ್ತು. ಕಳೆದ ಆಯವ್ಯಯದಲ್ಲಿ ಮುದ್ರಾಂಕ ಶುಲ್ಕವನ್ನು ಶೇಕಡ 6ರಿಂದ ಶೇಕಡ 5ಕ್ಕೆ ಇಳಿಸಲಾಗಿದ್ದರೂ ಕೂಡ ಇಲಾಖೆ ಈ ಗುರಿಯನ್ನು ಮೀರಿ ತೆರಿಗೆ ಸಂಗ್ರಹಣೆಯನ್ನು ಮಾಡವ ಸಾಧ್ಯತೆ ಇರುತ್ತದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ.

296. 2013–14ನೇ ಸಾಲಿಗೆ ಇಲಾಖೆಗೆ 6,100 ಕೋಟಿ ರೂ.ಗಳ ತೆರಿಗೆ ಸಂಗ್ರಹಣೆಯ ಗುರಿಯನ್ನು ನಿಗದಿಪಡಿಸಲಾಗಿದೆ. ಈ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಇಲಾಖೆಯನ್ನು ಪುನರ್‌ರಚನೆ ಮಾಡಲು ಹಾಗೂ ಆಧುನಿಕರಣಗೊಳಿಸಲು ಉದ್ದೇಶಿಸಲಾಗಿದೆ.

297. ಪ್ರಸ್ತುತ ಜಂಟಿ ಅಭಿವೃದ್ಧಿ ಕರಾರು ಮತ್ತು ತತ್ಸಂಬಂಧ ಅಧಿಕಾರ ಪತ್ರಗಳ ಮೇಲೆ ಶೇಕಡ 1ರ ನೋಂದಣಿ ಶುಲ್ಕವಿದ್ದು ಇದನ್ನು ಗರಿಷ್ಠ 1.5 ಲಕ್ಷ ರೂಗಳಿಗೆ ಮಿತಿಗೊಳಿಸಲು ಉದ್ದೇಶಿಸಲಾಗಿದೆ.

ಮೋಟಾರು ವಾಹನ ತೆರಿಗೆಗಳು

298. 2012–13ನೇ ಸಾಲಿಗೆ ಮೋಟಾರು ವಾಹನಗಳ ತೆರಿಗೆಯಿಂದ 3350 ಕೋಟಿ ರೂಗಳ ಆದಾಯ ನಿರೀಕ್ಷಿಸಲಾಗಿತ್ತು. ಇದನ್ನು ಮೀರಿ ತೆರಿಗೆ ಸಂಗ್ರಹಣೆಯನ್ನು ಸಾಧಿಸುವ ಸಾಧ್ಯತೆ ಇರುತ್ತದೆ. 2013–14ನೇ ಸಾಲಿಗೆ 4,008 ಕೋಟಿ ರೂ.ಗಳ ತೆರಿಗೆ ಸಂಗ್ರಹಣೆ ಗುರಿಯನ್ನು ನಿಗದಿ ಮಾಡಲಾಗಿದೆ.

299. ಕಟ್ಟಡ ನಿರ್ಮಾಣ ಉಪಕರಣವಿರುವ ವಾಹನಗಳಿಗೆ (Construction equipment vehicles) ಜೀವಾವಧಿ ತೆರಿಗೆಯನ್ನು ಎರಡು ಕಂತುಗಳಲ್ಲಿ ವಿಧಿಸಿ ವಸೂಲಿ ಮಾಡಲಾಗುತ್ತಿರುವ ಬದಲಾಗಿ ಒಂದೇ ಕಂತಿನಲ್ಲಿ ವಿಧಿಸಿ ವಸೂಲಿ ಮಾಡಲು ಉದ್ದೇಶಿಸಲಾಗಿದೆ.

300. ಸಾರ್ವಜನಿಕರು ವಾಹನಗಳಿಗೆ ಸಂಬಂಧಿಸಿದ ತೆರಿಗೆ ಮತ್ತು ಶುಲ್ಕಗಳನ್ನು ಪಾವತಿಸುವ ಸಲುವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಿಗೆ ಬರುವುದನ್ನು ತಪ್ಪಿಸಲು ವಿದ್ಯುನ್ಮಾನ ಪಾವತಿ ಸೌಲಭ್ಯವನ್ನು ತರಲು ಉದ್ದೇಶಿಸಿದೆ.

ತತ್ಸಂಬಂಧ ತಿದ್ದುಪಡಿಗಳು

301. ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ತಿದ್ದುಪಡಿಗಳ ಜೊತೆ ಇತರೆ ಪರಿಷ್ಕರಣಾ ತಿದ್ದುಪಡಿಗಳೊಂದಿಗೆ ಸೂಕ್ತ ವಿದೇಯಕಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು. ಅಬಕಾರಿ ಸಂಬಂಧಿಸಿದ ಮಾರ್ಪಾಡುಗಳನ್ನು ಈ ಮಾರ್ಚ್ 1ರಿಂದ ಅನುಷ್ಠಾನಕ್ಕೆ ತರಲು ಉದ್ದೇಶಿಸಲಾಗಿದ್ದು, ಉಳಿದ ತೆರಿಗೆ ಪ್ರಸ್ತಾವನೆಗಳನ್ನು 2013ರ ಏಪ್ರಿಲ್ 1ರಿಂದ ಜಾರಿಗೆ ತರಲಾಗುವುದು.

ಪರಿಷ್ಕೃತ ಅಂದಾಜುಗಳು 2012–13

302. ಪರಿಷ್ಕೃತ ಅಂದಾಜಿನ ಪ್ರಕಾರ ಆಯವ್ಯಯದ ಅಂದಾಜು ಜಮೆಗಳು 99,786 ಕೋಟಿ ರೂ.ಗಳು ಆಗಿದೆ. ರಾಜ್ಯದ ರಾಜಸ್ವ

ಕ್ರೋಢೀಕರಣಗಳ ಪ್ರಯತ್ನಗಳು ಆಯವ್ಯಯದಲ್ಲಿ ಅಂದಾಜು ಮಾಡಲಾದ 81,461 ಕೋಟಿ ರೂ.ಗಳಿಗಿಂತ ಅಧಿಕವಾಗಿದ್ದು, 84,884 ಕೋಟಿ ರೂ.ಗಳಷ್ಟಾಗಿದೆ. ಸಮರ್ಥ ಮತ್ತು ಪರಿಣಾಮಕಾರಿ ಕ್ರಮಗಳ ಮೂಲಕ ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯು 53,493 ಕೋಟಿ ರೂ.ಗಳಾಗಿದ್ದು ಇದು 2011–12 ಅವಧಿಯಲ್ಲಿನ ವಾಸ್ತವಿಕ ಸಂಗ್ರಹಣೆಗಿಂತ ಶೇ. 15ರಷ್ಟು ಹೆಚ್ಚಾಗಿದ್ದು, ಆಯವ್ಯಯ ಅಂದಾಜಿಗಿಂತ 1,672 ಕೋಟಿ ರೂ.ಗಳಷ್ಟು ಅಧಿಕವಾಗಿದೆ. ರಾಜಸ್ವ ಸಂಗ್ರಹಣೆ ಆಯವ್ಯಯದ ಅಂದಾಜಿಗಿಂತ ಉತ್ತಮ–ವಾಗಿದ್ದು, ಆಯವ್ಯಯ ಅಂದಾಜುಗಳಿಗಿಂತ ಸುಮಾರು 6,000 ಕೋಟಿ ರೂ.ಗಳಷ್ಟು ಕಡಿಮೆ ಸಾಲವನ್ನು ಪಡೆಯಲು ರಾಜ್ಯ ಸರ್ಕಾರವು ಉದ್ದೇಶಿಸಿದೆ.

303. ಪರಿಷ್ಕೃತ ಅಂದಾಜಿನ ಪ್ರಕಾರ ಆಯವ್ಯಯ ಅಂದಾಜುಗಳಾದ 1,02,742 ಕೋಟಿ ರೂ.ಗಳಿಗೆ ಪ್ರತಿಯಾಗಿ ಒಟ್ಟು ವೆಚ್ಚವು 1,04,023 ಕೋಟಿ ರೂ.ಗಳಾಗಿದೆ. ಇದರಿಂದ 2012–13ನೇ ಸಾಲಿಗೆ ಘೋಷಿಸಲಾದ ಒಂದು ಲಕ್ಷ ಕೋಟಿ ರೂ.ಗಳ ಆಯವ್ಯಯ ಗಾತ್ರವನ್ನು ಸಾಧಿಸಲಾಗುವುದು ಎಂದು ತಿಳಿಸಲು ಹರ್ಷಿಸುತ್ತೇನೆ.

304. ರಾಜಸ್ವ ಹೆಚ್ಚುವರಿಗಳು 943 ಕೋಟಿ ರೂ.ಗಳಾಗುತ್ತದೆಂದು ನಿರೀಕ್ಷಿಸಲಾಗಿದೆ. ವಿತ್ತೀಯ ಕೊರತೆಯು ರಾಜ್ಯದ ಆಂತರಿಕ ಉತ್ಪನ್ನದ ಶೇ.2.93 ರಷ್ಟಾಗುವುದೆಂದು ಅಂದಾಜಿಸಲಾಗಿದೆ. 1,17,650 ಕೋಟಿ ರೂ.ಗಳ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ.22.59ರಷ್ಟಿದ್ದು, ಇದು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಮೂಲಕ 2012–13 ವರ್ಷಕ್ಕೆ ಆದೇಶಿಲಾದ ಶೇ.25.7ರ ಮಿತಿಯೊಳಗಿರುತ್ತೆ. ರಾಜ್ಯ ಸರ್ಕಾರವು 42,30 ಕೋಟಿ ರೂ.ಗಳ ರಾಜ್ಯ ಯೋಜನಾ ಗುರಿಯನ್ನು ಸಂಪೂರ್ಣವಾಗಿ ಸಾಧಿಸಲು ಸಿದ್ಧವಾಗಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ. 2011–12ರ ಸಾಧನೆಯಾದ 38,450 ಕೋಟಿ ರೂ.ಗಳಿಗೆ ಹೋಲಿಸಿದಲ್ಲಿ 2012–13ನೇ ಸಾಲಿನ ಸಾಧನೆಯು ಸುಮಾರು ಶೇ.9.5ರಷ್ಟು ಹೆಚ್ಚಾಗಲಿದೆ.

ಆಯವ್ಯಯ ಅಂದಾಜುಗಳು 2013–2014

ಸನ್ಮಾನ್ಯ ಸಭಾಧ್ಯಕ್ಷರೇ,

305. 2013–14ನೇ ಸಾಲಿನಲ್ಲಿ ಒಟ್ಟು ಜಮೆಗಳು 1,15,983 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 94,216 ಕೋಟಿ ರೂ.ಗಳ ರಾಜ್ಯಸ್ವ ಜಮೆಗಳು ಹಾಗೂ 21,767 ಕೋಟಿ ರೂ.ಗಳ ಸಾಲಗಳೂ ಸೇರಿದಂತೆ ಬಂಡವಾಳ ಜಮೆಗಳು ಒಳಗೊಂಡಿರುತ್ತದೆ. ಒಟ್ಟು 93,631 ಕೋಟಿ ರೂ.ಗಳ ರಾಜಸ್ವ ವೆಚ್ಚ ಮತ್ತು 23,374 ಕೋಟಿ ರೂ.ಗಳ ಬಂಡವಾಳ ವೆಚ್ಚವನ್ನು ಒಳಗೊಂಡು ಒಟ್ಟು ವೆಚ್ಚವು 1,17,005 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ ಮತ್ತು ಸಾಲದ ಮರುಪಾವತಿ ವೆಚ್ಚ 5,840 ಕೋಟಿ ರೂ.ಗಳು.

306. ರಾಜಸ್ವ ಹೆಚ್ಚುವರಿಯನ್ನು 585 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ವಿತ್ತೀಯ ಕೊರತೆಯು 16,714 ಕೋಟಿ ರೂ.ಗಳಾಗುತ್ತದೆಂದು ನಿರೀಕ್ಷಿಸಲಾಗಿದ್ದು, ಅದು ರಾಜ್ಯದ ಆಂತರಿಕ ಉತ್ಪನ್ನದ ಶೇ.2.78ರಷ್ಟಾಗಿರುತ್ತದೆ. 2013–14ರ ಕೊನೆಯಲ್ಲಿ 1,34,472 ಕೋಟಿ ರೂ.ಗಳ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ ಶೇ.22.35 ರಷ್ಟಾಗುತ್ತದೆಂದು, ಅಂದಾಜು ಮಾಡಲಾಗಿದೆ. ಇದು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಮೂಲಕ 2013–14ನೇ ವರ್ಷಕ್ಕೆ ಆದೇಶಿಲಾದ ಶೇ.25.2 ರ ಮಿತಿಯೊಳಗಿರುತ್ತದೆ.

307. ಆದ್ದರಿಂದ ಎಲ್ಲಾ ಮೂರು ವಿತ್ತೀಯ ಪರಿಣಾಮಗಳು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮವು ನಿಗದಿಪಡಿಸಿರುವ ಮಿತಿಯೊಳಗಿರುತ್ತದೆ. ಇದು ರಾಜ್ಯದ ವಿತ್ತೀಯ ಶಿಸ್ತನ್ನು ಪ್ರತಿಬಿಂಬಿಸುತ್ತದೆ.

ಸಂಪನ್ಮೂಲಗಳ ಕ್ರೋಢೀಕರಣ

308. 2013–14ನೇ ಸಾಲಿನ ರಾಜ್ಯದ ಒಟ್ಟು ತೆರಿಗೆ ರಾಜಸ್ವವು, 2012–13ನೇ ಸಾಲಿನ ಆಯವ್ಯಯ ಅಂದಾಜನ್ನು ಮೀರಿ ಶೇ.18ರ ಹೆಚ್ಚಳದೊಂದಿಗೆ 61,012 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ.

309. ತೆರಿಗೆಯೇತರ ರಾಜಸ್ವಗಳಿಂದ 3,838 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ. ಕೇಂದ್ರ ತೆರಿಗೆಯ ಪಾಲಿನ ರೂಪದಲ್ಲಿ 14,375 ಕೋಟಿ ರೂ.ಗಳನ್ನು ಹಾಗೂ 14,991 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಸಹಾಯಧನ ರೂಪದಲ್ಲಿ ರಾಜ್ಯ

ಸರ್ಕಾರವು ನಿರೀಕ್ಷಿಸಿದೆ. ಈ ರಾಜಸ್ವ ಜಮೆಗಳಿಗೆ ಪೂರಕವಾಗಿ 21,532 ಕೋಟಿ ರೂ.ಗಳ ಒಟ್ಟು ಸಾಲಗಳು, 100 ಕೋಟಿ ರೂ.ಗಳ ಋಣೇತರ ಸ್ವೀಕೃತಿಗಳು ಮತ್ತು 135 ಕೋಟಿ ರೂ.ಗಳ ಸಾಲಗಳ ವಸೂಲಿ ಮೊತ್ತವನ್ನು ಅಂದಾಜಿಸಲಾಗಿದೆ.

310. ರಾಜ್ಯ ಒಡೆತನದ ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳು ಆಂತರಿಕ ಸಂಪನ್ಮೂಲ ಸೃಜನೆಯ ಮೂಲಕ ಹಾಗೂ ತಮ್ಮ ಸ್ವಂತ ಹಣಕಾಸು ಸಾಮರ್ಥ್ಯ ಮತ್ತು ಸ್ವಂತ ರಾಜಸ್ವಗಳ ಆಧಾರದ ಮೇಲೆ ಮಾಡಿದ ಸಾಲಗಳ ಮೂಲಕ 6,751 ಕೋಟಿ ರೂ. ಗಳನ್ನು ಕ್ರೋಢೀಕರಿಸಲಾಗುತ್ತದೆಂದು ನಿರೀಕ್ಷಿಸಲಾಗಿದೆ.

ಲೇಖಾನುದಾನ

311. ಈಗ ಪ್ರಸಕ್ತ ಸಾಲಿನ ಆಯವ್ಯಯವನ್ನು ಗೌರವಾನ್ವಿತ ಸದನದ ಪರಿಶೀಲನೆಗಾಗಿ ಮಂಡಿಸುತ್ತಾ, ಆಯವ್ಯಯ ಅಂದಾಜುಗಳ ಪ್ರಕಾರ ಜುಲೈ 31, 2013ರ ವರೆಗೆ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಕೋರುತ್ತಿದ್ದೇನೆ.

ಜೈ ಹಿಂದ್
ಜೈ ಕರ್ನಾಟಕ

ಬಜೆಟ್ ವಿಹಂಗಮ ನೋಟ

(ಕೋಟಿ ರೂ.ಗಳಲ್ಲಿ)

ಕ್ರ ಸಂ	ಬಾಬ್ತು	ಬಜೆಟ್ ಅಂದಾಜು 2012–13	ಪರಿಷ್ಕೃತ ಅಂದಾಜು 2013–14	ಬಜೆಟ್ ಅಂದಾಜು 2012–13	ಕ್ರ ಸಂ	ಬಾಬ್ತು	ಬಜೆಟ್ ಅಂದಾಜು 2012–13	ಪರಿಷ್ಕೃತ ಅಂದಾಜು 2012–13	ಬಜೆಟ್ ಅಂದಾಜು 2013–14
	ಪ್ರಾರಂಭ ಶಿಲ್ಕು ರಾಜಸ್ವ ಲೆಕ್ಕ ಜಮೆ :	–167.03	3.01	–13.88	ಬಿ.	ಬಂಡವಾಳ ಲೆಕ್ಕ ಜಮೆ : ಭಾರತ ಸರ್ಕಾರದಿಂದ ಸಾಲ	2389.24	1968.53	2231.00
						ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	13837.89	10309.89	13956.39
	ರಾಜ್ಯ ತೆರಿಗೆ	51820.70	53492.50	61012.00		ಎಲ್ಐಸಿ, ಆರ್‌ಬಿಐ, ಎನ್.ಎಸ್.ಎಸ್.ಎಫ್ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	1765.00	750.00	1750.00
	ಕೇಂದ್ರ ತೆರಿಗೆಯಲ್ಲಿ ಪಾಲು	13093.70	12500.00	14374.99		ಸಾಲಗಳು ಮತ್ತು ಮುಂಗಡಗಳ			
	ಕೇಂದ್ರ ಸರ್ಕಾರದ ಅನುದಾನಗಳು	13353.53	15094.84	14990.69		ವಸೂಲಿ	173.79	156.51	134.59
	ತೆರಿಗೆಯೇತರ ರಾಜಸ್ವ	3192.82	3796.33	3838.28		ವಸೂಲಿ ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ	–507.00	4220.51	1022.97
	ಒಟ್ಟು–ಎ (೧)	**81460.75**	**84883.67**	**94215.96**		ಒಟ್ಟು–ಬಿ (೧)	**17658.92**	**17405.44**	**19094.95**

ಕ್ರ ಸಂ	ಬಾಬ್ತು	ಬಜೆಟ್ ಅಂದಾಜು 2012–13	ಪರಿಷ್ಕೃತ ಅಂದಾಜು 2013–14	ಬಜೆಟ್ ಅಂದಾಜು 2012–13	ಕ್ರ ಸಂ	ಬಾಬ್ತು	ಬಜೆಟ್ ಅಂದಾಜು 2012–13	ಪರಿಷ್ಕೃತ ಅಂದಾಜು 2012–13	ಬಜೆಟ್ ಅಂದಾಜು 2013–14
	ವೆಚ್ಚ :					ಬಟವಾಡೆ :			
	ಸಾಮಾಜಿಕ ಸೇವೆ	30268.28	32762.11	36430.96		ಬಂಡವಾಳ ವೆಚ್ಚ (ನಿವ್ವಳ)	14330.48	14777.13	16273.63
	ಆರ್ಥಿಕ ಸೇವೆ	20984.08	325040.78	23998.06		ಕೇಂದ್ರ ಸಾಲಗಳ ಮರುಸಂದಾಯ	640.85	604.03	713.36
	ಸಾಮಾನ್ಯ ಸೇವೆ	24040.92	21127.31	27016.83		ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ	1412.12	1422.48	1532.46
	ಸಹಾಯಾನುದಾನ ಮತ್ತು ಅಂಶದಾನ	5236.70	5010.61	6184.99		ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ ಸಾಲಗಳ ಮತ್ತು ಮುಂಗಡಗಳ ಬಟವಾಡೆ	2086.39	1561.55	1159.92
	ಒಟ್ಟು–ಎ (೨)	**80529.98**	**83940.81**	**93630.84**		ಒಟ್ಟು–ಬಿ (೨)	**18469.84**	**18365.19**	**19679.37**
ಎ.	ಎ. ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	**930.77**	**942.86**	**585.12**		ಬಿ. ಬಂಡವಾಳ ಲೆಕ್ಕ ಹೆಚ್ಚಳ /ಕೊರತೆ	–810.92	–959.75	–584.42
						ಸಿ. ವರ್ಷದ ಒಟ್ಟು ಹೆಚ್ಚಳ / ಕೊರತೆ	119.85	–16.89	0.70
						ಡಿ. ಮುಕ್ತಾಯ ಶಿಲ್ಕು	–47.18	–13.88	–13.18
	ವಾರ್ಷಿಕ ವಿತ್ತ ನಿರೂಪಣೆಯ ಅನುಸಾರ					ಸಂಚಿತ ನಿಧಿ			
	ಜಮೆಗಳು	103368.77	99875.60	115982.54		ವೆಚ್ಚ	**102741.92**	**104023.10**	**117004.82**

2. ಅನುಬಂಧ –1

(ಕಂಡಿಕೆ 18)

2013–2014ನೇ ಸಾಲಿನ ವಲಯವಾರು ಹಂಚಿಕೆ *

	ವಲಯ	ರೂ. ಕೋಟಿಗಳಲ್ಲಿ
1.	ಕೃಷಿ ಮತ್ತು ತೋಟಗಾರಿಕೆ	4402
2.	ಪಶುಸಂಗೋಪನೆ ಮತ್ತು ಮೀನುಗಾರಿಕೆ	1357
3.	ಒಳಾಡಳಿತ ಮತ್ತು ಸಾರಿಗೆ	5138
4.	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	7354
5.	ಸಮಾಜ ಕಲ್ಯಾಣ	4698
6.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	3350
7.	ಕಂದಾಯ	3440
8.	ವಸತಿ	1130
9.	ಶಿಕ್ಷಣ	18666
10.	ವಾಣಿಜ್ಯ ಮತ್ತು ಕೈಗಾರಿಕೆ	936
11.	ನಗರಾಭಿವೃದ್ಧಿ	9654
12.	ಲೋಕೋಪಯೋಗಿ	5321
13.	ಜಲಸಂಪನ್ಮೂಲ	9084
14.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	5293
15.	ಇಂಧನ	10831

* ಈ ಹಂಚಿಕೆಯು ಐ.ಇ.ಬಿ.ಆರ್.ನ್ನು ಸಹ ಒಳಗೊಂಡಿದೆ.

ಅನುಬಂಧ-2

ಪ್ರಸ್ತುತ ಮತ್ತು ಪ್ರಸ್ತಾವಿತ ಘೋಷಿತ ಬೆಲೆ ಸ್ಲ್ಯಾಬ್‌ಗಳು (ಕಂಡಿಕೆ 290)

		(ರೂಪಾಯಿಗಳಲ್ಲಿ)
ಕ್ರಮ ಸಂಖ್ಯೆ	ಪ್ರಸ್ತುತ ಘೋಷಿತ ಬೆಲೆ	ಪ್ರಸ್ತಾವಿತ ಘೋಷಿತ ಬೆಲೆ
1	0–374	0–414
2	375–424	415–464
3	425–474	465–514
4	475–524	515–564
5	525–624	565–664
6	625–724	665–764
7	725–824	765–864
8	825–924	865–964
9	925–1024	965–1064
10	1025–1124	1065–1164
11	1125–1224	1165–1264
12	1225–1324	1265–1364
13	1325–1724	1365–1764
14	1725–2124	1765–2164
15	2125–4849	2165–4889
16	4850–7575	4890–7615
17	**7576 ಮತ್ತು ಅದಕ್ಕಿಂತ ಹೆಚ್ಚು**	**7616 ಮತ್ತು ಅದಕ್ಕಿಂತ ಹೆಚ್ಚು**

ಜಮೆ – ರೂಪಾಯಿ ಎಷ್ಟು ಭಾಗ ಯಾವುದರಿಂದ



ವೆಚ್ಚ (ಯೋಜನೆ ಮತ್ತು ಯೋಜನೇತರ) - ರೂಪಾಯಿ ಯಾವ ಭಾಗ ಎಷ್ಟೆಷ್ಟು?



ರಾಜ್ಯದ ಸ್ವಂತ ತೆರಿಗೆಗಳ ವಿವರಗಳು 2013–14

(ಆಯವ್ಯಯ ಅಂದಾಜುಗಳು) (ಉಪಕರ ಹೊರತುಪಡಿಸಿ)

(ಕೋಟಿ ರೂ.ಗಳಲ್ಲಿ ಮತ್ತು ಶೇಕಡಾವಾರು)





ಅಧ್ಯಕ್ಷರು : ಈಗ ಸಭೆಯು ಮುಕ್ತಾಯವಾಗಿ ಸೋಮವಾರ ಬೆಳಗ್ಗೆ 11–00 ಗಂಟೆಗೆ ಸೇರುವುದು.

(ಸದನವು ಸಂಜೆ 4 ಗಂಟೆ 15 ನಿಮಿಷಕ್ಕೆ ಮುಕ್ತಾಗೊಂಡು ಪುನಃ ದಿನಾಂಕ : 13–02–2013 ರ ಸೋಮವಾರದಂದು ಬೆಳಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು)